ಶುಕ್ರವಾರ, ಮಾರ್ಚ್ 29, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 89 | ಪುಟ 14

● www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

DH ಎಡ್ಯುವರ್ಸ್ ಪ್ರೀಮಿಯರ್ ಎಜುಕೇಶನ್ ಎಕ್ಸ್‌ಪೋ ಪ್ರಜಾವಾಣಿ

ಸಿಇಟಿ ಮತ್ತು ನೀಟ್ ಮಾದರಿ ಪರೀಕ್ಷೆಗಳಿಗೆ ಈಗಲೇ ನೋಂದಣಿ ಮಾಡಿಕೊಳ್ಳಿ ಮತ್ತು ಟಾಪರ್‌ಗಳು ಬಹುಮಾನ ಗೆಲ್ಲಿರಿ!

ಕೋಡ್ ಸ್ಕ್ಯಾನ್ ಮಾಡಿ

ಬೆಂಗಳೂರು: 06-07 ಏಪ್ರಿಲ್, 2024 | ತ್ರಿಪುರವಾಸಿನಿ, ಅರಮನೆ ಮೈದಾನ

ಆಳ-ಅಗಲ ಭಾರತೀಯ ವಿದ್ಯಾರ್ಥಿಗಳೇ ಏಕೆ ಗುರಿ?

ದಕ್ಷಿಣದ 'ತೆರಿಗೆ ದಂಗೆ': ಬಿಜೆಪಿಗೆ ಬಿಸಿ ತುಪ್ಪ 11

ಡಿ.ಕೆ. ಸುರೇಶ್ ₹593 ಕೋಟಿ ಒಡೆಯ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
73,651 ▲	22,326 ▲	₹69,120 (ಬೆಂಗಳೂರು) ▲	₹76,400 (ಬೆಂಗಳೂರು) ▲	83.39 ▼

ಸಂಧಾನದ ಬಳಿಕ ತಣ್ಣಗಾದ ಸಚಿವ, ಶಾಸಕರ ಬಣ • ಪಟ್ಟು ಬಿಡದ ಸಚಿವ ಮುನಿಯಪ್ಪ

ಎಡಗೈಗೆ ಕೋಲಾರ: ಯಾರಿಗೆ ಹಾರ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಲಾರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಆಯ್ಕೆ ವಿಷಯದಲ್ಲಿ ರಾಜೀನಾಮೆಯ ಬೆದರಿಕೆ ಹಾಕಿದ್ದ ಸಚಿವ ಹಾಗೂ ಶಾಸಕರು, ಸಚಿವ ಕೆ.ಎಚ್. ಮುನಿಯಪ್ಪ ಕುಟುಂಬದ ಹೊರತಾಗಿ ಎಡಗೈ ಸಮುದಾಯದ ಯಾರಿಗಾದರೂ ಟಿಕೆಟ್ ನೀಡಲು ಒಪ್ಪಿಕೊಂಡಿದ್ದಾರೆ. ಇದರಿಂದಾಗಿ ಪಕ್ಷದೊಳಗಿನ ಸಂಘರ್ಷ ತಿಳಿಯಾಗಿದ್ದು, ಯಾರಿಗೆ ಟಿಕೆಟ್ ಎಂಬುದು ಇನ್ನೂ ಅಖೈರಾಗಿಲ್ಲ.

ಈ ಬೆಳವಣಿಗೆಯ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾದ ಸಚಿವ ಮುನಿಯಪ್ಪ, ತಮ್ಮ ಅಳಿಯ ಚಿಕ್ಕಪೆದ್ದಣ್ಣ ಅವರಿಗೆ ಟಿಕೆಟ್ ನೀಡಲೇಬೇಕು ಎಂದು ಬೇಡಿಕೆ ಮಂಡಿಸಿದ್ದಾರೆ. ಹೀಗಾಗಿ, ಅಭ್ಯರ್ಥಿ ಆಯ್ಕೆ ವಿಷಯ ಇತ್ಯರ್ಥವಾಗದೇ ಉಳಿದಿದೆ. ರಾಜ್ಯಸಭೆಯ ಮಾಜಿ ಸದಸ್ಯ ಎಲ್. ಹನುಮಂತಯ್ಯ, ಬೆಂಗಳೂರು ಕೇಂದ್ರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಕೆ.ವಿ. ಗೌತಮ್ ಅವರಲ್ಲಿ ಒಬ್ಬರನ್ನು ಹೈಕಮಾಂಡ್ ಆಯ್ಕೆ ಮಾಡುವ ಸಾಧ್ಯತೆ ಇದೆ ಎಂದೂ ಹೇಳಲಾಗುತ್ತಿದೆ.

ಬುಧವಾರ ಇಡೀ ದಿನ ರಾಜಕೀಯ ಪ್ರಹಸನವನ್ನೇ ನಡೆಸಿದ್ದ ಶಾಸಕರು, ವಿಧಾನಪರಿಷತ್ತಿನ ಸದಸ್ಯರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲು ಮುಂದಾಗಿದ್ದರು. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಈ ಬಣದ ಮುಂಚೂಣಿಯಲ್ಲಿದ್ದರು. ಮುಖ್ಯಮಂತ್ರಿ ಮಧ್ಯಪ್ರವೇಶದ ಬಳಿಕ ರಾಜೀನಾಮೆ ನಿರ್ಧಾರದಿಂದ ಹಿಂದೆ ಸರಿಯುವುದಾಗಿ ಅವರು ಹೇಳಿದ್ದರು.

ರಾಜೀನಾಮೆ ನೀಡಲು ಮುಂದಾದ ಮೂವರು ಶಾಸಕರು, ವಿಧಾನ ಪರಿಷತ್‌ನ ಇಬ್ಬರು ಸದಸ್ಯರ ಜೊತೆ ಗುರುವಾರ ಸಂಜೆ ಸಭೆ ನಡೆಸಿದ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೆಲ್ಲರ ಅಭಿಪ್ರಾಯವನ್ನೂ ಆಲಿಸಿದರು.

5ನೇ ಪುಟ ನೋಡಿ

ಚಿಕ್ಕಬಳ್ಳಾಪುರಕ್ಕೆ ರಕ್ಷಾ ರಾಮಯ್ಯ?

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್‌ನ ರಕ್ಷಾ ರಾಮಯ್ಯ ಅವರಿಗೆ ಟಿಕೆಟ್ ಸಿಗುವುದು ಬಹುತೇಕ ಖಚಿತವಾಗಿದೆ.

ಮೊದಲ ಹಂತದಲ್ಲಿ ಚುನಾವಣೆ ನಡೆಯಲಿರುವ ಲೋಕಸಭಾ ಕ್ಷೇತ್ರಗಳ ನಾಮಪತ್ರ ಸಲ್ಲಿಕೆಗೆ ಏಪ್ರಿಲ್ 4ರಂದು ಕೊನೆ ದಿನವಾಗಿದೆ. ರಕ್ಷಾ ರಾಮಯ್ಯ, ಮಾಜಿ ಕೇಂದ್ರ ಸಚಿವ ವೀರಪ್ಪ ಮೊಯಿಲಿ ಹಾಗೂ ಮಾಜಿ ಶಾಸಕ ಎಚ್.ಎನ್. ಶಿವಶಂಕರರೆಡ್ಡಿ ಹೆಸರುಗಳು ಮುಂಚೂಣಿಯಲ್ಲಿವೆ. ರಕ್ಷಾ ಹೆಸರನ್ನೇ ವರಿಷ್ಠರು ಅಂತಿಮಗೊಳಿಸಲಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ಬಿಜೆಪಿಯಲ್ಲಿ ಭುಗಿಲೆದ್ದ ಅಸಮಾಧಾನ

ಚಿತ್ರದುರ್ಗ: ಚಿತ್ರದುರ್ಗ ಲೋಕಸಭಾ ಕ್ಷೇತ್ರದಿಂದ ಮಾಜಿ ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ಅವರಿಗೆ ಟಿಕೆಟ್ ನೀಡಿದ್ದಕ್ಕೆ ಜಿಲ್ಲೆಯ ಬಿಜೆಪಿ ವಲಯದಲ್ಲಿ ಅಸಮಾಧಾನ ಭುಗಿಲೆದ್ದಿದೆ.

> ಚಿತ್ರದುರ್ಗ ಕ್ಷೇತ್ರದಲ್ಲಿ ಹಾಲಿ ಸಂಸದರು ಸ್ಪರ್ಧೆಗೆ ನಿರಾಸಕ್ತಿ ತೋರಿದ್ದರಿಂದ ಪಕ್ಷ ನನಗೆ ಟಿಕೆಟ್ ನೀಡಿದೆ. ಹೀಗಾಗಿ ಅಲ್ಲಿ ಗೋಬ್ಯಾಕ್ ಎದುರಾಗುವ ಪ್ರಶ್ನೆ ಉದ್ಭವಿಸುವುದಿಲ್ಲ
>
> **ಗೋವಿಂದ ಕಾರಜೋಳ**
> ಬಿಜೆಪಿ ಅಭ್ಯರ್ಥಿ

ಟಿಕೆಟ್ ಆಕಾಂಕ್ಷಿಯಾಗಿದ್ದ ಶಾಸಕ ಎಂ.ಚಂದ್ರಪ್ಪ ಅವರ ಪುತ್ರ ರಘುಚಂದನ್ ಅವರು ಪಕ್ಷದ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಹಾಗೂ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ವಿಜಯೇಂದ್ರ ವಿರುದ್ಧ ಗುರುವಾರ ಸುದ್ದಿಗೋಷ್ಠಿಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

'ಸೋತವರನ್ನು ಕರೆತಂದು ಚಿತ್ರದುರ್ಗದಲ್ಲಿ ಅಭ್ಯರ್ಥಿ ಮಾಡಲಾಗಿದೆ. ಗಂಡುಮೆಟ್ಟಿದ ನಾಡಲ್ಲಿ ಗಂಡಸರೇ ಇಲ್ಲವೇ' ಎಂದು ಪ್ರಶ್ನಿಸಿರುವ ಅವರು, 'ಟಿಕೆಟ್ ಕೈತಪ್ಪಿದ್ದಕ್ಕೆ ಬೆಂಬಲಿಗರ ಸಭೆ ಕರೆದು ಮುಂದಿನ ತೀರ್ಮಾನ ಪ್ರಕಟಿಸುತ್ತೇವೆ' ಎಂದು ಹೇಳಿದರು.

'ವಯಸ್ಸು, ಅನುಭವದ ಕೊರತೆಯಿಂದಾಗಿ ನನಗೆ ಟಿಕೆಟ್ ಕೈತಪ್ಪಿದೆ ಎಂದುಕೊಳ್ಳೋಣ. ಆದರೆ, ಮಾಜಿ ಸಂಸದ ಜನಾರ್ದನ ಸ್ವಾಮಿ ಅವರಿಗೆ ನೀಡಬಹುದಾಗಿತ್ತು. ಅವರನ್ನು ಬಿಟ್ಟು ಎಲ್ಲೋ ಇದ್ದವರನ್ನು ಕರೆತಂದು ನಿಲ್ಲಿಸುವ ಅವಶ್ಯಕತೆ ಏನಿತ್ತು' ಎಂದು ಪ್ರಶ್ನಿಸಿದರು.

5ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಬಾಂಬ್ ಸ್ಫೋಟ: ಪ್ರಮುಖ ಸಂಚುಕೋರನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣ ಭೇದಿಸುವಲ್ಲಿ ಯಶಸ್ವಿಯಾಗಿರುವ ಎನ್‌ಐಎ ಅಧಿಕಾರಿಗಳು, ಪ್ರಮುಖ ಸಂಚುಕೋರ ಎನ್ನಲಾದ ಮುಜಮ್ಮಿಲ್ ಶರೀಫ್‌ನನ್ನು ಬಂಧಿಸಿದ್ದಾರೆ.

'ಚಿಕ್ಕಮಗಳೂರು ದುಬೈನಗರದ ಮುಜಮ್ಮಿಲ್, ಕೆಫೆಯಲ್ಲಿ ಬಾಂಬ್ ಇರಿಸಿದ್ದ ಶಂಕಿತ ಹಾಗೂ ಇತರರ ಜೊತೆ ಸೇರಿ ಸಂಚು ರೂಪಿಸಿದ್ದ. ಕೆಲ ಪುರಾವೆಗಳನ್ನು ಆಧರಿಸಿ ಮುಜಮ್ಮಿಲ್‌ನನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ಈತನೇ ಪ್ರಮುಖ ಸಂಚುಕೋರ ಎಂಬುದು ಗೊತ್ತಾಗಿದೆ. ಈತನನ್ನು ಬುಧವಾರ ಬಂಧಿಸಲಾಗಿದ್ದು, ಹೆಚ್ಚಿನ ವಿಚಾರಣೆ ಮುಂದುವರಿಸಲಾಗಿದೆ' ಎಂದು ಎನ್‌ಐಎ ಮೂಲಗಳು ತಿಳಿಸಿವೆ.

'ಮಾರ್ಚ್ 1ರಂದು ಬಾಂಬ್ ಸ್ಫೋಟವಾಗಿತ್ತು. ತೀರ್ಥಹಳ್ಳಿಯ ಶಂಕಿತ ಮುಸಾವೀರ್ ಹುಸೇನ್ ಶಾಜೀಬ್ ಎಂಬಾತನೇ ಬಾಂಬ್ ಇರಿಸಿದ್ದನೆಂಬುದು ಸದ್ಯದ ತನಿಖೆಯಿಂದ ಗೊತ್ತಾಗಿದೆ. ಈತನ ಕೃತ್ಯಕ್ಕೆ ಇನ್ನೊಬ್ಬ ಶಂಕಿತ ತೀರ್ಥಹಳ್ಳಿಯ ಅಬ್ದುಲ್ ಮಥೀನ್ ಅಹ್ಮದ್ ತಾಹಾ ಸಹಕಾರ ನೀಡಿದ್ದ ಎಂಬುದಕ್ಕೆ ಪುರಾವೆಗಳು ಲಭ್ಯವಾಗಿವೆ' ಎಂದು ಹೇಳಿವೆ.

7ನೇ ಪುಟ ನೋಡಿ

ಏ.1ರವರೆಗೆ ಕೇಜ್ರಿವಾಲ್ ಇ.ಡಿ ಕಸ್ಟಡಿ ವಿಸ್ತರಣೆ

ನವದೆಹಲಿ (ಪಿಟಿಐ): ಅಬಕಾರಿ ನೀತಿ ಹಗರಣದಲ್ಲಿ ಬಂಧನಕ್ಕೆ ಒಳಗಾಗಿರುವ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಜಾರಿ ನಿರ್ದೇಶನಾಲಯದ (ಇ.ಡಿ) ವಶಕ್ಕೆ ನೀಡಲಾಗಿದ್ದ ಅವಧಿಯನ್ನು ಇಲ್ಲಿನ ರೋಸ್ ಅವೆನ್ಯೂ ನ್ಯಾಯಾಲಯವು ಏಪ್ರಿಲ್ 1ರವರೆಗೆ ವಿಸ್ತರಿಸಿದೆ.



ಕಸ್ಟಡಿ ಅವಧಿ ಗುರುವಾರ ಅಂತ್ಯಗೊಂಡ ಹಿನ್ನೆಲೆಯಲ್ಲಿ ಕೇಜ್ರಿವಾಲ್ ಅವರನ್ನು ಕೋರ್ಟ್ ಮುಂದೆ ಹಾಜರುಪಡಿಸಿದ ಇ.ಡಿ, ಮತ್ತೆ ಏಳು ದಿನಗಳವರೆಗೆ ತನ್ನ ವಶಕ್ಕೆ ನೀಡುವಂತೆ ಕೋರಿತು.

'ಐದು ದಿನಗಳ ಕಾಲ ಕೇಜ್ರಿವಾಲ್ ಅವರನ್ನು ವಿಚಾರಣೆಗೆ ಒಳಪಡಿಸಿ, ಅವರ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಯಿತು. ಆದರೆ, ಅವರು ಸಮರ್ಪಕ ಉತ್ತರ ನೀಡದೇ ನುಣುಚಿಕೊಳ್ಳುತ್ತಿದ್ದರು' ಎಂದು ಇ.ಡಿ ಅಧಿಕಾರಿಗಳು ನ್ಯಾಯಾಲಯಕ್ಕೆ ತಿಳಿಸಿದರು.

7ನೇ ಪುಟ ನೋಡಿ

‘ಐಟಿ ಕಂಪನಿಗಳಿಗೆ ನೀರು ಪೂರೈಕೆ’

ಬೆಂಗಳೂರು: ‘ನಗರದ ಇತರೆ ಪ್ರದೇಶಗಳಂತೆ ಹೊರವಲಯದಲ್ಲಿರುವ ಐಟಿ-ಬಿಟಿ ಕಂಪನಿಗಳಿಗೂ ನೀರಿನ ಕೊರತೆ ಆಗದಂತೆ, ಸಮರ್ಪಕವಾಗಿ ನೀರು ಪೂರೈಸಲು ಜಲಮಂಡಳಿ ಬದ್ಧವಾಗಿದೆ’ ಎಂದು ಬೆಂಗಳೂರು ಜಲಮಂಡಳಿ ಅಧ್ಯಕ್ಷ ಡಾ.ವಿ.ರಾಮ್‌ಪ್ರಸಾತ್ ಮನೋಹರ್ ತಿಳಿಸಿದರು.

ಔಟರ್ ರಿಂಗ್ ರೋಡ್ ಕಂಪನೀಸ್ ಅಸೋಸಿಯೇಷನ್ (ಆರ್ಕಾ) ಪದಾಧಿಕಾರಿಗಳ ಜೊತೆ ಗುರುವಾರ ವೆಬಿನಾರ್ ಮೂಲಕ ಸಭೆ ನಡೆಸಿದ ಅವರು, ಕಾವೇರಿ 5ನೇ ಹಂತ ಪೂರ್ಣವಾದರೆ ನಗರಕ್ಕೆ ಪ್ರತಿದಿನ ಹೆಚ್ಚುವರಿ 775 ಎಂಎಲ್‌ಡಿ ನೀರು ಸಿಗಲಿದೆ. ಇದರಿಂದ ನೀರಿನ ಕೊರತೆ ಕಡಿಮೆಯಾಗಲಿದೆ ಎಂದರು.

ನೀರನ್ನು ಮಿತವಾಗಿ ಬಳಸುವಂತೆ ಕಂಪನಿಯ ನೌಕರರಲ್ಲಿ ಜಾಗೃತಿ ಮೂಡಿಸಬೇಕು. ನೀರಿನ ಸದ್ಬಳಕೆಗೆ ಮೂರು ಸೂತ್ರಗಳಾದ ನೀರು ಸಂರಕ್ಷಣೆ, ಸಂಸ್ಕರಿಸಿದ ನೀರು ಬಳಕೆ, ಮಳೆ ನೀರು ಸಂರಕ್ಷಣೆ ಬಗ್ಗೆ ತಿಳಿಸಿ ಎಂದು ಹೇಳಿದರು.

ನೈಋತ್ಯ ರೈಲ್ವೆ G20

ಆಸಕ್ತಿಯ ಅಭಿವ್ಯಕ್ತಿಗೆ ತಿದ್ದುಪಡಿ – 1

2024–26 ಕ್ಕೆ 02 ವರ್ಷಗಳ ಅವಧಿಗೆ ನೈಋತ್ಯ ರೈಲ್ವೆಗಾಗಿ ಜಾಹೀರಾತು ಏಜೆನ್ಸಿಗಳ ಎಂಪಾನೆಲ್‌ಮೆಂಟ್.

ಸೂಚನೆ ನಂ.PRB/Empanelment of Advt.Agencies/2024/24.

ಟೆಂಡರ್ ಡಾಕ್ಯುಮೆಂಟ್: ಪ್ಯಾರಾ 2.2 ಅನ್ನು ಬದಲಾಯಿಸಲಾಗಿದೆ ಮತ್ತು ಪ್ಯಾರಾ 5.2 ರಲ್ಲಿ – ಅನುಬಂಧ ಇ(i) ಮತ್ತು ಇ(ii) ಅನ್ನು ಲಗತ್ತಿಸಲಾಗಿದೆ.

ಅಸ್ತಿತ್ವದಲ್ಲಿರುವ ಸಲ್ಲಿಸುವ ದಿನಾಂಕ: 05.04.2024 ರಂದು 15:00 ಗಂಟೆಗಳವರೆಗೆ

ಸಲ್ಲಿಸುವ ಪರಿಷ್ಕೃತ ದಿನಾಂಕ: 19.04.2024 ರಂದು 15:00 ಗಂಟೆಗಳವರೆಗೆ

ತೆರೆಯುವ ದಿನಾಂಕ: 19.04.2024 ರಂದು 15:30 ಗಂಟೆಗೆ

ಹೆಚ್ಚಿನ ಮಾಹಿತಿಗಾಗಿ www.swr.indianrailways.gov.in ಗೆ ಲಾಗ್ ಆನ್ ಆಗಿ

ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ
ನೈಋತ್ಯ ರೈಲ್ವೆ, ಹುಬ್ಬಳ್ಳಿ

PUB/784/AAV/PRB/SWR/2023-24

South Western Railway-SWR | SWRRLY | SWRRLY

ವಿದ್ಯುತ್ ಕಂಪನ ಚಿಕಿತ್ಸೆ ಬಗೆಗಿನ ಮಿಥ್ಯೆಗೆ ಕಿವಿಗೊಡದಂತೆ ನಿಮ್ಹಾನ್ಸ್ ವೈದ್ಯರ ಮನವಿ

ಮಿದುಳಿಗೆ ಹಾನಿ ಮಾಡದ ‘ಇಸಿಟಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾನಸಿಕ ಅಸ್ವಸ್ಥರಿಗೆ ನೀಡಲಾಗುವ ವಿದ್ಯುತ್ ಕಂಪನ ಚಿಕಿತ್ಸೆಯು (ಇಸಿಟಿ) ಮಿದುಳಿಗೆ ಯಾವುದೇ ರೀತಿಯ ಹಾನಿ ಮಾಡುವುದಿಲ್ಲ. ಈ ಚಿಕಿತ್ಸೆಗೆ ಗರಿಷ್ಠ 12 ವೋಲ್ಟ್‌ನ ಎಲ್ಇಡಿ ಬಲ್ಬ್ ಒಂದು ಸೆಕೆಂಡ್ ಬೆಳಗಲು ಸಾಕಾಗುವಷ್ಟು ವಿದ್ಯುತ್ ಮಾತ್ರ ಬಳಸಲಾಗುತ್ತದೆ’ ಎಂದು ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯ (ನಿಮ್ಹಾನ್ಸ್) ವೈದ್ಯರು ತಿಳಿಸಿದರು.

ಇಸಿಟಿ ಚಿಕಿತ್ಸೆ ಬಗ್ಗೆ ಕೆಲವರಲ್ಲಿರುವ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಲು ಹಾಗೂ ಜಾಗೃತಿ ಮೂಡಿಸಲು ಸಂಸ್ಥೆಯ ಮನೋವೈದ್ಯ ವಿಜ್ಞಾನ ವಿಭಾಗವು ‘ನಿಮ್ಹಾನ್ಸ್ ಹೆರಿಟೇಜ್ ಮ್ಯೂಸಿಯಂ’ನಲ್ಲಿ ಇಸಿಟಿ ಚಿಕಿತ್ಸೆ ಬಗ್ಗೆ ಪ್ರದರ್ಶನ ಹಮ್ಮಿಕೊಂಡಿದೆ. ಮೂರು ಗ್ಯಾಲರಿಗಳಲ್ಲಿ ಪ್ರದರ್ಶನ ನಡೆಯುತ್ತಿದ್ದು, ಮೊದಲ ಗ್ಯಾಲರಿಯಲ್ಲಿ ಚಿಕಿತ್ಸೆಯ ಇತಿಹಾಸದ ಬಗ್ಗೆ, ಎರಡನೇ ಗ್ಯಾಲರಿಯಲ್ಲಿ ಚಿಕಿತ್ಸೆ ಪಡೆದವರ ಅನುಭವ ಹಾಗೂ ಮೂರನೇ ಗ್ಯಾಲರಿಯಲ್ಲಿ ಈ ಚಿಕಿತ್ಸೆಯನ್ನು ವಿವಿಧ ಬಗೆಯಲ್ಲಿ ಬಿಂಬಿಸಿದ ಸಿನಿಮಾಗಳ ವಿವರ ಮತ್ತು ಚಿಕಿತ್ಸೆ ನೀಡುವ ವಿಧಾನದ ಬಗ್ಗೆ ವಿವರ ಒದಗಿಸಲಾಗಿದೆ.

ಸಂಸ್ಥೆಯು ಇಲ್ಲಿ ಗುರುವಾರ ಹಮ್ಮಿಕೊಂಡಿದ್ದ ವಿಶೇಷ ಪ್ರದರ್ಶನದಲ್ಲಿ ಇಸಿಟಿ ಬಗ್ಗೆ ಪ್ರಾಧ್ಯಾಪಕಿ ಡಾ. ಪ್ರೀತಿ ಸಿನ್ಹಾ ವಿವರಿಸಿದರು. ‘ಎಲೆಕ್ಟ್ರೋ ಕನ್ವಲ್ಸಿವ್ ಥೆರಪಿ ಎಂದು ಕರೆಯಲ್ಪಡುವ ಈ ಚಿಕಿತ್ಸೆಯ ಬಗ್ಗೆ ಜನರಿಗೆ ಈಗಲೂ ತಪ್ಪು ಕಲ್ಪನೆಗಳಿವೆ. ಸಿನಿಮಾ ಸೇರಿ ವಿವಿಧೆಡೆ ಇದನ್ನು ನಕಾರಾತ್ಮಕವಾಗಿ ಬಿಂಬಿಸಿರುವುದೇ ಮುಖ್ಯ ಕಾರಣ. ಕಳೆದ 85 ವರ್ಷಗಳಿಂದ ಈ ಚಿಕಿತ್ಸೆಯನ್ನು ಮಾನಸಿಕ ಅಸ್ವಸ್ಥರಿಗೆ ಒದಗಿಸಲಾಗುತ್ತಿದ್ದು, ಈಗ ಚಿಕಿತ್ಸೆಯಲ್ಲಿ ಸಾಕಷ್ಟು ಪ್ರಗತಿಯಾಗಿದೆ. ಸಂಸ್ಥೆಯಲ್ಲಿ 75 ವರ್ಷಗಳಿಂದ ಚಿಕಿತ್ಸೆ ನೀಡಲಾಗುತ್ತಿದೆ’ ಎಂದು ಹೇಳಿದರು.

ಪ್ರದರ್ಶನದಲ್ಲಿ ಡಾ. ಪ್ರೀತಿ ಸಿನ್ಹಾ ಮತ್ತು ಡಾ. ವರ್ಷಾ ಎಸ್‌. ಅವರು ವಿದ್ಯುತ್ ಕಂಪನ ಚಿಕಿತ್ಸೆಯ ಬಗ್ಗೆ ವಿವರಿಸಿದರು —ಪ್ರಜಾವಾಣಿ ಚಿತ್ರ

‘ಇಸಿಟಿ ಮಿದುಳಿಗೆ ಹಾನಿ ಮಾಡುವುದಿಲ್ಲ. ಬುದ್ಧಿವಂತಿಕೆಯ ಮೇಲೂ ಪರಿಣಾಮ ಬೀರುವುದಿಲ್ಲ. ಈ ಚಿಕಿತ್ಸೆಯಿಂದ ಕೆಲ ರೋಗಿಗಳು ತಾತ್ಕಾಲಿಕ ಮರೆವು ಅನುಭವಿಸಿದರೂ ತೀವ್ರ ಸ್ವರೂಪದ ಸಮಸ್ಯೆ ಕಾಣಿಸಿಕೊಳ್ಳುವುದಿಲ್ಲ. ಇಸಿಟಿ ಕೋರ್ಸ್ ಮುಗಿದ ಬಳಿಕ ಜ್ಞಾಪಕ ಶಕ್ತಿ ಸಾಮಾನ್ಯ ಸ್ಥಿತಿಗೆ ಮರಳುತ್ತದೆ. ರೋಗಿಗಳು ಅರಿವಳಿಕೆಗೆ ಒಳಗಾದಾಗ ಸಣ್ಣ ಪ್ರಮಾಣದಲ್ಲಿ ವಿದ್ಯುತ್ ಚಿಕಿತ್ಸೆ ನೀಡಲಾಗುತ್ತದೆ. ಚಿಕಿತ್ಸೆಯ ಅವಧಿಯಲ್ಲಿ ರೋಗಿಯು ಯಾವುದೇ ನೋವು ಅಥವಾ ಅಸ್ವಸ್ಥತೆ ಅನುಭವಿಸುವುದಿಲ್ಲ’ ಎಂದು ತಿಳಿಸಿದರು.

2ರಿಂದ 3 ತಿಂಗಳು: ‘ಇಸಿಟಿ ಚಿಕಿತ್ಸೆಯನ್ನು ವ್ಯಕ್ತಿಯ ಸ್ಥಿತಿಗತಿ ಅವಲೋಕಿಸಿ ನೀಡಲಾಗುತ್ತದೆ. ಕೆಲವರಿಗೆ ಆರರಿಂದ ಎಂಟು ಬಾರಿ ಇಸಿಟಿ ಸೆಶನ್ಸ್ ನಡೆಸಬೇಕಾಗುತ್ತದೆ. ಇದಕ್ಕೆ ಎರಡರಿಂದ ಮೂರು ತಿಂಗಳು ಅವಧಿ ಅಗತ್ಯ. 2022–23ರಲ್ಲಿ ನಿಮ್ಹಾನ್ಸ್‌ನಲ್ಲಿ 7,890 ಇಸಿಟಿ ಸೆಶನ್ಸ್ ನಡೆಸಲಾಗಿದೆ. ಚಿಕಿತ್ಸೆ ಪಡೆದವರಲ್ಲಿ ಕೆಲವರಿಗೆ ತಲೆನೋವಿನಂತಹ ಸಾಮಾನ್ಯ ಸಮಸ್ಯೆಗಳು ಕೆಲ ಗಂಟೆಗಳು ಕಾಣಿಸಿಕೊಳ್ಳುತ್ತವೆ’ ಎಂದು ಡಾ.ವರ್ಷ ಎಸ್. ವಿವರಿಸಿದರು.

ಈ ಪ್ರದರ್ಶನವು ಮೇ 31ರವರೆಗೆ ನಡೆಯಲಿದೆ. ರಜಾದಿನ ಹೊರತುಪಡಿಸಿ ಉಳಿದ ದಿನಗಳು ಬೆಳಿಗ್ಗೆ 9ರಿಂದ ಸಂಜೆ 4.30ರವರೆಗೆ ಪ್ರದರ್ಶನ ಇರಲಿದೆ. ಸಾರ್ವಜನಿಕರಿಗೆ ಉಚಿತ ಪ್ರವೇಶ ಕಲ್ಪಿಸಲಾಗಿದೆ.

ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ಹೊಸ ಮಳಿಗೆಯನ್ನು ನಟಿ ಶ್ರೀನಿಧಿ ಶೆಟ್ಟಿ ಉದ್ಘಾಟಿಸಿದರು. ಕರ್ನಾಟಕ ಪ್ರಾದೇಶಿಕ ಮುಖ್ಯಸ್ಥ ಫಿಲ್ಸರ್ ಬಾಬು ಮತ್ತು ಅಧಿಕಾರಿಗಳು ಭಾಗವಹಿಸಿದ್ದರು

ಸುದ್ದಿ 2 ನಿಮಿಷ

ಶುಚಿರಹಿತ ಫಲೂಡಾ ತಯಾರಿಕೆ ನೋಟಿಸ್ ನೀಡಲು ಆದೇಶ

ಬೆಂಗಳೂರು: ‘ಶೇಷಾದ್ರಿಪುರ ರಾಜಕಾಲುವೆಯ ಪಕ್ಕದ ಶಿಥಿಲಾವಸ್ಥೆಯಲ್ಲಿರುವ ಕಟ್ಟಡವೊಂದರಲ್ಲಿ ಫಲೂಡಾ, ಐಸ್ ಕ್ರೀಂ, ಬಾದಾಮ್ ಹಾಲು ಉತ್ಪಾದನೆ ಘಟಕ ನಡೆಸ-ಲಾಗುತ್ತಿದೆ’ ಎಂದು ಆಕ್ಷೇಪಿಸಲಾದ ಅರ್ಜಿಗೆ ಸಂಬಂಧಿಸಿದಂತೆ ಭಾರತ ಆಹಾರ ಸುರಕ್ಷತೆ, ಮಾನದಂಡಗಳ ಪ್ರಾಧಿಕಾರ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ನೋಟಿಸ್ ಜಾರಿ ಮಾಡಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಹೈಕೋರ್ಟ್ ವಕೀಲ ಎನ್.ಪಿ.ಅಮೃತೇಶ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್. ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು. ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿದೆ.

ಅರ್ಜಿಯಲ್ಲಿ ಏನಿದೆ?: ‘ಶೇಷಾದ್ರಿಪುರ ರಾಜಕಾಲುವೆ ಬಳಿಯಲ್ಲಿನ ಪಾಳುಬಿದ್ದ ಕಟ್ಟಡದಲ್ಲಿ ಫಲೂಡಾ, ಐಸ್ ಕ್ರೀಂ, ಬಾದಾಮ್ ಹಾಲು ಹಾಗೂ ಇತರೆ ಪಾನೀಯಗಳನ್ನು ತಯಾರಿಸಿ ರಸ್ತೆ ಬದಿಯಲ್ಲಿ ಕಡಿಮೆ ಬೆಲೆಗೆ ಮಾರಾಟ ಮಾಡಲಾಗುತ್ತಿದೆ. ಈ ತಯಾರಿಕಾ ಘಟಕದ ಬಳಿಯಲ್ಲೇ ಜನರು ತ್ಯಾಜ್ಯವನ್ನು ತಂದು ಸುರಿಯುತ್ತಾರೆ. ಅತ್ಯಂತ ಕಲುಷಿತ ಪರಿಸರದಲ್ಲಿ ಆಹಾರ ಸಿದ್ಧಪಡಿಸಲಾಗುತ್ತಿದೆ’ ಎಂದು ಅರ್ಜಿದಾರರು ಆಕ್ಷೇಪಿಸಿದ್ದಾರೆ.

‘ಈ ಕಟ್ಟಡವು ಹಲವು ವರ್ಷಗಳಷ್ಟು ಹಳೆಯದಾಗಿದ್ದು ಯಾವಾಗ ಬೇಕಾದರೂ ನೆಲಕಚ್ಚುವ ಸಂಭವ ಇದೆ. ಈ ಹಿನ್ನೆಲೆಯಲ್ಲಿ ಬಿಬಿಎಂಪಿ ಶಿಥಿಲಗೊಂಡ ಕಟ್ಟಡವನ್ನು ಕೆಡವುವಂತೆ ಕಟ್ಟಡದ ಮಾಲೀಕರಿಗೆ ಸೂಚಿಸಿತ್ತು. ಆದರೂ ಪ್ರಯೋಜನವಾಗಿಲ್ಲ’ ಎಂದು ಅರ್ಜಿದಾರರು ದೂರಿದ್ದಾರೆ.

30ಕ್ಕೆ ವಿಚಾರ ಸಂಕಿರಣ

ಬೆಂಗಳೂರು: ‘ಮಹಾಡ್ ಸತ್ಯಾಗ್ರಹ: ಇತಿಹಾಸ ಮತ್ತು ವರ್ತಮಾನದ ಭಾರತ’ ಕುರಿತು ಒಂದು ದಿನದ ವಿಚಾರ ಸಂಕಿರಣ ಮಾರ್ಚ್ 30ರಂದು ಬೆಳಿಗ್ಗೆ 11.30ರಿಂದ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಲಿದೆ.

ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್‌ವಾದ) ಹಮ್ಮಿಕೊಂಡಿರುವ ಈ ವಿಚಾರ ಸಂಕಿರಣವನ್ನು ಸಾಹಿತಿ ಬರಗೂರು ರಾಮಚಂದ್ರಪ್ಪ ಉದ್ಘಾಟಿಸಲಿದ್ದಾರೆ.

ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಅವರು ಅಧ್ಯಕ್ಷತೆ ವಹಿಸುವರು. ಚಿಂತಕರಾದ ಸರಸ್ವತಿ, ವಿ.ಎಲ್. ನರಸಿಂಹಮೂರ್ತಿ ವಿಷಯ ಮಂಡನೆ ಮಾಡುವರು.

ಹೋರಾಟಗಾರ್ತಿ ಇಂದಿರಾ ಕೃಷ್ಣಪ್ಪ, ಕರ್ನಾಟಕ ಜಾನಪದ ಅಕಾಡೆಮಿ ನಿಯೋಜಿತ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್, ಶಿಕ್ಷಣ ತಜ್ಞ ಬಿ. ಶ್ರೀಪಾದ ಭಟ್ ಅತಿಥಿಗಳಾಗಿರುವರು ಎಂದು ಡಿಎಸ್‌ಎಸ್ (ಅಂಬೇಡ್ಕರ್ ವಾದ) ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ತಿಳಿಸಿದ್ದಾರೆ.

ಬಾಕಿ ವೇತನ ನೀಡದಿದ್ದಕ್ಕೆ ಬಾಂಬ್ ಬೆದರಿಕೆ: ಕೆಲಸಗಾರನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹದೇವಪುರದಲ್ಲಿರುವ ಪಾಸ್ತಾ ರೆಸ್ಟೋರೆಂಟ್‌ಗೆ ಕರೆ ಮಾಡಿ ಬಾಂಬ್ ಬೆದರಿಕೆಯೊಡ್ಡಿದ್ದ ಆರೋಪದಡಿ ವೇಲು ಮುರಗನ್ (29) ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ.

‘ಬಾಣಸವಾಡಿಯ ಮುರುಗನ್, ಪಾಸ್ತಾ ರೆಸ್ಟೋರೆಂಟ್‌ನಲ್ಲಿ ಕೆಲ ತಿಂಗಳು ಕೆಲಸ ಮಾಡಿದ್ದ. ಆದರೆ, ನಿಗದಿತ ದಿನದಂದು ವೇತನ ನೀಡಿರಲಿಲ್ಲ. ಇದರಿಂದ ಬೇಸತ್ತು ಮೂರು ತಿಂಗಳ ಹಿಂದೆಯಷ್ಟೇ ಕೆಲಸ ಬಿಟ್ಟಿದ್ದ. ಬಾಕಿ ವೇತನ ನೀಡದೇ ಸತಾಯಿಸುತ್ತಿದ್ದ ಕಾರಣಕ್ಕೆ ರೆಸ್ಟೋರೆಂಟ್‌ಗೆ ಕರೆ ಮಾಡಿ ಬಾಂಬ್ ಬೆದರಿಕೆಯೊಡ್ಡಿದ್ದ ಎಂಬುದು ಗೊತ್ತಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಬುಧವಾರ (ಮಾರ್ಚ್ 28) ರಾತ್ರಿ 11 ಗಂಟೆ ಸುಮಾರಿಗೆ ಕರೆ ಮಾಡಿದ್ದ ಆರೋಪಿ, ‘ರೆಸ್ಟೋರೆಂಟ್‌ನಲ್ಲಿ ಬಾಂಬ್ ಇರಿಸಲಾಗಿದೆ. ಕೆಲ ನಿಮಿಷಗಳಲ್ಲಿ ಸ್ಫೋಟವಾಗಲಿದೆ’ ಎಂದಿದ್ದ. ಆತಂಕಗೊಂಡಿದ್ದ ಸಿಬ್ಬಂದಿ ಹಾಗೂ ಗ್ರಾಹಕರು, ರೆಸ್ಟೋರೆಂಟ್‌ನಿಂದ ಹೊರಗೆ ಬಂದಿದ್ದರು. ಪೊಲೀಸ್ ನಿಯಂತ್ರಣ ಕೊಠಡಿಗೆ ಮಾಹಿತಿ ನೀಡಿದ್ದರು.’

‘ಸ್ಥಳಕ್ಕೆ ಹೋಗಿದ್ದ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ, ಹಲವು ಗಂಟೆ ಶೋಧ ನಡೆಸಿದ್ದರು. ಯಾವುದೇ ಅನುಮಾನಾಸ್ಪದ ವಸ್ತು ಸಿಕ್ಕಿರಲಿಲ್ಲ. ಇದೊಂದು ಹುಸಿ ಕರೆಯೆಂದು ಹೇಳಿದ್ದರು. ಬಾಂಬ್ ಬೆದರಿಕೆಯೊಡ್ಡಿದ್ದವರ ವಿರುದ್ಧ ಕ್ರಮ ಕೈಗೊಳ್ಳುವಂತೆ ರೆಸ್ಟೋರೆಂಟ್ ಮಾಲೀಕರು ದೂರು ನೀಡಿದ್ದರು’ ಎಂದು ಮೂಲಗಳು ತಿಳಿಸಿವೆ.

‘ಮೊಬೈಲ್ ನೆಟ್‌ವರ್ಕ್ ಆಧರಿಸಿ ತನಿಖೆ ನಡೆಸಿದಾಗ, ಮುರುಗನ್ ಸಿಕ್ಕಿಬಿದ್ದ. ಮದ್ಯದ ಅಮಲಿನಲ್ಲಿ ಈತ ಕರೆ ಮಾಡಿದ್ದನೆಂಬುದು ಗೊತ್ತಾಯಿತು’ ಎಂದು ಹೇಳಿವೆ.

‘ಮುರುಗನ್, ಮದ್ಯವ್ಯಸನಿ ಆಗಿದ್ದ. ಸರಿ ಯಾಗಿ ಕೆಲಸಕ್ಕೆ ಬರುತ್ತಿರಲಿಲ್ಲ. ಬಂದರೂ ಗ್ರಾಹಕರ ಜೊತೆ ಅಸಭ್ಯವಾಗಿ ವರ್ತಿಸುತ್ತಿದ್ದ. ಹೀಗಾಗಿ, ಕೆಲಸದಿಂದ ತೆಗೆಯಲಾಗಿತ್ತು ಎಂಬುದಾಗಿ ರೆಸ್ಟೋರೆಂಟ್ ಮಾಲೀಕ ಹೇಳುತ್ತಿದ್ದಾರೆ’ ಎಂದು ಮೂಲಗಳು ಮಾಹಿತಿ ನೀಡಿವೆ.

ಎನ್‌ಸಿಪಿಎ: 30, 31ಕ್ಕೆ ಸಂಗೀತ, ನೃತ್ಯ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾಷನಲ್ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್ (ಎನ್‌ಸಿಪಿಎ) ಸಂಸ್ಥೆಯು ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದ (ಬಿಐಸಿ) ಸಹಯೋಗದಲ್ಲಿ ಇದೇ 30 ಮತ್ತು 31ರಂದು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ‘ಅನ್ ಬಾಕ್ಸಿಂಗ್ ಬೆಂಗಳೂರು ಹಬ್ಬ’ದ ಭಾಗವಾಗಿ ವೈವಿಧ್ಯಮಯ ಪಾಶ್ಚಿಮಾತ್ಯ, ಅಂತರರಾಷ್ಟ್ರೀಯ ಸಂಗೀತ ಮತ್ತು ನೃತ್ಯ ಕಾರ್ಯಕ್ರಮ-ಗಳನ್ನು ಆಯೋಜಿಸಿದೆ.

ಕಾರ್ಯಕ್ರಮಗಳ ವಿವರ: ಮಾರ್ಚ್ 30ರಂದು ಸಂಜೆ 6ಕ್ಕೆ ಸಿಂಫೋನಿ ಆಫ್ ಆರ್ಕೆಸ್ಟ್ರಾ ಇಂಡಿಯಾ ತಂಡದಿಂದ ಪಾಶ್ಚಿಮಾತ್ಯ ಶಾಸ್ತ್ರೀಯ ಸಂಗೀತ, 7.15ಕ್ಕೆ ಸಿಮರ್ ಸಿಂಗ್, ಪ್ರಿಯಾಂಶಿ ಬನ್ಸಲ್, ವಾನಿಕಾ ಸಂಗ್ತಾನಿ ಮತ್ತು ಅಭಿನ್ ಜೋಶಿ ಅವರಿಂದ ಕವಿತಾ ವಾಚನ.

ಮಾರ್ಚ್ 31 ರಂದು ಸಂಜೆ 6ಕ್ಕೆ ದಿಶಾ – ರತಿಕಾಂತ್ ಮೋಹಪಾತ್ರರಿಂದ ಸೃಜನ್ – ಒಡಿಸ್ಸಿ ನೃತ್ಯ ಪ್ರದರ್ಶನ. 7.30ಕ್ಕೆ ಡೆರೆನ್ ದಾಸ್ ಮತ್ತು ‘ದಿ ಸಿಕ್ತ್ ಸೆನ್ಸ್’ ತಂಡದಿಂದ ‘ಪಾಪ್, ರೆಟ್ರೊ, ರಾಕ್ ಎನ್ ರೋಲ್ ಮತ್ತು ಕ್ಲಾಸಿಕ್ ರಾಕ್’ ಅಂತರರಾಷ್ಟ್ರೀಯ ಸಂಗೀತ ನಡೆಯಲಿದೆ. ಕಾರ್ಯಕ್ರಮಕ್ಕೆ ಪ್ರವೇಶ ಉಚಿತ ಇರಲಿದೆ. ಸಂಗೀತ ಸಂಜೆ ಸವಿಯಲು ಬರುವವರಿಗೆ ವಿಧಾನಸೌಧ ಮೆಟ್ರೊ ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನಕ್ಕೆ ಉಚಿತ ಬಸ್ ಸೇವೆ ಇರಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮದ್ಯದ ಅಮಲಿನಲ್ಲಿ ಹಲ್ಲೆ ಯುವತಿ ಪರಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯದ ಅಮಲಿನಲ್ಲಿದ್ದ ಯುವತಿಯೊಬ್ಬರು ಆಟೊ ಚಾಲಕನ ಮೇಲೆ ಹಲ್ಲೆ ಮಾಡಿ ಪರಾರಿಯಾಗಿದ್ದು, ಈ ಸಂಬಂಧ ಸಂಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಸಂಜಯನಗರ ಠಾಣೆ ವ್ಯಾಪ್ತಿಯಲ್ಲಿ-ರುವ ಎಚ್‌ಎಂಟಿ ಭವನ ಬಳಿ ಮಾರ್ಚ್ 26ರಂದು ರಾತ್ರಿ ನಡೆದಿರುವ ಘಟನೆ ಬಗ್ಗೆ ಆಟೊ ಚಾಲಕ ನಿಶಾಂತ್ ದೂರು ನೀಡಿದ್ದಾರೆ. ಯುವತಿ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಮದ್ಯ ಕುಡಿದಿದ್ದ ಯುವತಿ ಹಾಗೂ ಸ್ನೇಹಿತರು, ಕಾರಿನಲ್ಲಿ ಹೊರಟಿದ್ದರು. ಯುವತಿಯೇ ಕಾರು ಚಲಾಯಿಸುತ್ತಿದ್ದರೆಂದು ಗೊತ್ತಾಗಿದೆ. ದೂರುದಾರ ನಿಶಾಂತ್, ಪ್ರಯಾಣಿಕರ ಕರೆದುಕೊಂಡು ಬಾಣಸವಾಡಿ ಕಡೆಯಿಂದ ಎಚ್‌ಎಂಟಿ ಭವನದ ಕಡೆಗೆ ಬರುತ್ತಿದ್ದರು.’

‘ಯುವತಿ ಕಾರನ್ನು ಅತೀ ವೇಗದಲ್ಲಿ ಅಡ್ಡಾದಿಡ್ಡಿಯಾಗಿ ಚಲಾಯಿಸಿದ್ದರು. ಅದನ್ನು ಗಮನಿಸಿ ನಿಶಾಂತ್, ಮುಂದಕ್ಕೆ ಹೋಗಲು ಜಾಗ ಬಿಡುವಂತೆ ಹಾರ್ನ್ ಮಾಡಿದ್ದರು. ಯುವತಿ, ರಸ್ತೆ ಮಧ್ಯೆಯೇ ಕಾರು ನಿಲ್ಲಿಸಿದ್ದರು. ಬಳಿಕ ನಿಶಾಂತ್ ಬಳಿ ಹೋಗಿ ಜಗಳ ತೆಗೆದಿದ್ದರು’ ಎಂದರು.

‘ಸಾರ್ವಜನಿಕ ರಸ್ತೆಯಲ್ಲಿ ಅಡ್ಡಾದಿಡ್ಡಿ ಆಗಿ ಕಾರು ಚಲಾಯಿಸುವುದು ಸರಿಯಲ್ಲ. ಅಪಘಾತವಾದರೆ ಯಾರು ಹೊಣೆ. ಜಾಗರೂಕತೆಯಿಂದ ವಾಹನ ಚಲಾಯಿಸಿ’ ಎಂದು ಆಟೊ ಚಾಲಕ, ಯುವತಿಗೆ ಬುದ್ಧಿ ಹೇಳಿದ್ದ. ಅಷ್ಟಕ್ಕೆ ಸಿಟ್ಟಾದ ಯುವತಿ, ಚಾಲಕನನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ಬಳಿಕ ಅವರ ಮೇಲೆ ಹಲ್ಲೆ ಸಹ ಮಾಡಿದ್ದರು.’

‘ಕೆಲವರು ಯುವತಿಯನ್ನು ಸಮಾ-ಧಾನಪಡಿಸಿದ್ದರು. ನಂತರ, ಯುವತಿ ಕಾರು ಸಮೇತ ಸ್ಥಳದಿಂದ ಪರಾರಿ ಆಗಿದ್ದಾರೆ. ಹಲ್ಲೆ ದೃಶ್ಯಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ ಯುವತಿ ಯಾರು ? ಎಂಬುದು ಗೊತ್ತಾಗಿಲ್ಲ. ಪತ್ತೆ ಮಾಡಲಾಗುತ್ತದೆ’ ಎಂದು ಪೊಲೀಸರು ಹೇಳಿದರು.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

JOB OPPORTUNITIES

Teachers/ Professors

WANTED QUALIFIED TEACHERS For Primary and High School, PMS Public School, Bettahalasur, Bangalore 9632329017/ 9880113895.

RENTAL PROPERTIES

Accommodation Available

Flats

JAYAMAHAL 2-BHK FLAT WITH CAR PARKING For Rent. Neeladri Mahal, Nandi Durga Road. Contact: 9448257711

Farm House/Land/ Resorts

RESORT & Bar for Rent, Lease or Sale. Contact: 9900480600. Kodagu District (Coorg), Kushalnagar.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

ಸ್ಪರ್ಧಾಮಿತ್ರ ACADEMY
IAS/KAS Prelims & Mains
PSI/PDO/VAO
PGCET RRB/SSC/BANK
ADMISSION OPEN
ಬೆಂಗಳೂರು / ಮೈಸೂರು
9535111133 / 9535111166

AKSHAYA
Modern 2 BHK Luxury Flats FOR SALE
SCHOOLS: Orchid International School, National Public School
HOSPITALS: Rajarajeshwari Hospital, Fortis Hospital
INSTITUTIONS: RV College of Engineering, Rajarajeshwari Medical College, Don Bosco Institute of Technology, Christ University
1Km to ORR 300 Mtrs to Satellite Bus Terminal
BBMP Approved
LOCATION: Site No.56 & 57, Anjaneya Enclave Welfare Association 1st Cross, MM Road, behind Byatarayanapura Police Station, Bengaluru-26. Gali Anjaneya Temple.
LANDMARK - Deepanjali Metro Station,
MAIL US: akshayaproject9@gmail.com
Contact: 99162 18894 / 96639 58493

REAL ESTATE SELLING

House

Basaveshwaranagar

60X40 EAST facing Independent House at prime location for Sale 45 squares building, Ground, 1st & 2nd Floor with 5 Bedrooms with attached bathroom, built with teak wood, Italian Marble Tiles, at BEML Layout, Basaveshwaranagar, Bengaluru. Clear Titles & 'A' Katha. Rs.5.50 Crores. Party going out of station, Immediate Registration. Contact: 9845765559/ 9845043282

Sites

Vishweshwariah Layout

AVAILABLE 20X30 Vishveshwariah Layout 6th Block BDA Site For Sale Rate. 47 Lakhs Contact: 9844603127

Kavalbyrasandra

NADAPRABHU KEMPEGOWDA LAYOUT 1st Block 'K Sector, 30x40 North facing, ₹.6800/- sqft. Contact: 9686469799

Vidyaranyapura

SITES FOR sale-Vaderhalli, Vidyaranayapura post;DC converted sites with all amenities.Further details call-8296106706 / 9845879279

PERSONAL

Change of Name

I, S SAAHITHI daughter of Ser.No.715044-S Ex-SGT, VINOD KUMAR SAVARALA resident of H.No.84, 3rd Main, Bharathnagar, Vidyaranyapura (Post), Bengaluru-560097 Karnataka have changed my name from S SAAHITHI to SAAHITHI SAVARALA vide affidavit dated 19.03.2024 at VII th Addl.Chief Metropolitan Magistrate, Bangalore.

GODOWN SPACE AVAILABLE
AVAILABLE FOR RENT
7500 Sqft, Rs.65/- per Sqft
24 hours Electricity & Parking
Centre of City, 80 Ft Road, Closed by to BTM Layout & Koramangala
108/1, 6th Cross, Sri Ramappa Layout Thavarekere, Bengaluru -560029
9886153036, 9538030520

CHANGE OF NAME
I, Niranjana B S/o Late. A F Basavarajapp @ Malleshappa, R/o H.No. 4, Shivajyoti Layout, Makali village, Harokyathanahalli mainroad, Bengaluru 562162 do hereby declare that, my deceased father has two names A F Basavarajappa and Malleshappa, in my all records my name is recorded as Sri Niranjana B S/o Malleshappa, henceforth I shall be called as Sri Niranjana B S/o A F Basavarajappa onlyl. Hence this affidavit sworn before the Advocate and Notary R Lakshminarayan of Nelamangala.

I, HAALA Mammed wife of Akmal Azeez residing at Elham, Green Park Road Beypore, Kozhikode Kerala-673015, Presently residing at #16, 1st B main, Ganganagar R.T.Nagar Bangalore- 560032, have changed my name from Haala Shathir to HAALA MAMMED vide affidavit dated 27-03-2024 sworn before Notary G.B Turamari, Bangalore.

CHANGE OF NAME
I, DEEPAK R NAIK alias DEEPAK RAMESH S/o RAMESH NAIK H, aged about 45 years R/at No.156/1F, Maramma Temple Road, Hulimavu, Bannerghatta Road, Bangalore 560076, in my (PASSPORT,) my name is mentioned as DEEPAK RAMESH both names are one and same person. vide affidavit dated 27.03.2024 before notary K.V.Mani, Bengaluru. Henceforth I shall be called DEEPAK R NAIK only.

CHANGE OF NAME
I, ANUSHA MANJUNATH alias ANUSHA MANJUNATH SWAMY D/o Manjunatha Swamy, Residing at # 39, Samarthanam Trust for the Disabled, 15th Cross, 16th Main, HSR Layout, Sector 4, Benglauru - 560 102, Both the above names pertian to me. vide affidavit dt. 28-03-2024, before Notary Ranganathagowda, Bengaluru. Henceforth I shall be called ANUSHA MANJUNATH only

Lost

DOCUMENT LOST
I, VEMANNA M, Residing at No. 29, Magadi Main Road, Opp. Raheja Park, Govindarajanagar, Bengaluru-40, have lost my Original Pure Purchase Deed Document No./Identification : Book Number 4072/2010-11 and 957/2011-12. While transit. If Found please Contact: 9900429219, 9886811146

BUSINESS

Business Offers

General

DRYFRUITS, FLAVOURED Cashews, Gift Boxes. Free Home Delivery Throughout Bengaluru. Irresistible Prices Impeccable Quality and Immaculate Taste Contact 'Farms India' 8095059460/ 6360940295

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH Classifieds More value, more impact | ಪ್ರಜಾವಾಣಿ
PUBLIC NOTICE
BOOK YOUR PUBLIC NOTICE
ADS IN DH ALL + PRAJAVANI BENGALURU CITY, ON ALL DAYS
@ 550/-* PER SQCM
www.dhclassifieds.com BOOK NOW
For more details contact:
+91 9886213331 | +91 9731810277
+91 9901641752 | 9845114560
*Conditions apply

ಶಾಂತಲಾ ಸಿಲ್ಕ್ ಫ್ಯಾಂಟಸಿ
ಹಬ್ಬದ ಕೊಡುಗೆ
ಶಾಂತಲಾ ಸಿಲ್ಕ್ಸ್ ರವರಿಂದ ಯುಗಾದಿ ಹಾಗೂ ರಂಜಾನ್ ಹಬ್ಬದ ಪ್ರಯುಕ್ತ
50% ರವರೆಗೆ ರಿಯಾಯಿತಿ ಮಾರಾಟ
ಮಾರ್ಚ್ 18 ರಿಂದ ಏಪ್ರಿಲ್ 18, 2024 ರ ವರೆಗೆ
• ಕಾಂಜೀವರಂ • ಪೋಚಂಪಲ್ಲಿ • ಪಟೋಲ • ಬನಾರಸ್ • ಎಂಬ್ರಾಯಡರಿ • ಕ್ರೇಪ್ • ಟಸ್ಸರ್ • ಶಿಫಾನ್ ಹಾಗೂ ಪ್ರಿಂಟೆಡ್ ಸಿಲ್ಕ್ಸ್
ಈ ಎಲ್ಲಾ ಸೀರೆಗಳು ಸಾವಿರಾರು ಬಣ್ಣ ಹಾಗೂ ಡಿಸೈನ್‌ಗಳಲ್ಲಿ ಲಭ್ಯ
Dress Materials, Italian Printed Shirts, Scarves, Stoles and Dupattas

ಶಾಂತಲಾ ಸಿಲ್ಕ್ & ಸ್ಯಾರೀಸ್ — ಶಾಂತಲಾ ಸರ್ಕಲ್, ಸಿಟಿ ರೈಲ್ವೆ ಸ್ಟೇಷನ್ ಹತ್ತಿರ ಬೆಂಗಳೂರು. ಫೋನ್ : 22872783, 42035567
ಶಾಂತಲಾ ಸಿಲ್ಕ್ ಹೌಸ್ — ಪಿ. ಯು. ಬಿಲ್ಡಿಂಗ್, ಎಂ.ಜಿ.ರಸ್ತೆ, ಬೆಂಗಳೂರು ಫೋನ್ : 25588932, 41232219

ಮೂವರಿಗೆ ಚಾಕು ಇರಿತ • ಜೆ.ಪಿ.ನಗರ ಠಾಣೆಯಲ್ಲಿ ಪ್ರಕರಣ • ಐವರು ಬಾಲಕರು ವಶಕ್ಕೆ

ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ನಡುವೆ ಮಾರಾಮಾರಿ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆ ಮುಗಿಸಿ ಹೊರಗೆ ಬರುತ್ತಿದ್ದ ಸಂದರ್ಭದಲ್ಲಿ ಬ್ಯಾಗ್ ವಿಚಾರಕ್ಕೆ ವಿದ್ಯಾರ್ಥಿಗಳ ನಡುವೆ ಮಾರಾಮಾರಿ ನಡೆದಿದ್ದು, ಚಾಕು ಇರಿತದಿಂದ ಮೂವರು ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ.

‘ರಾಗಿಗುಡ್ಡ ಹಾಗೂ ಸಾರಕ್ಕಿ ಶಾಲೆ ವಿದ್ಯಾರ್ಥಿಗಳ ನಡುವೆ ಮಾರ್ಚ್ 27ರಂದು ಗಲಾಟೆ ನಡೆದಿದೆ. ಇದೇ ಸಂದರ್ಭದಲ್ಲಿ ಮೂವರು ವಿದ್ಯಾರ್ಥಿಗಳಿಗೆ ಚಾಕುವಿನಿಂದ ಇರಿಯಲಾಗಿದೆ. ಕೃತ್ಯ ಎಸಗಿದ್ದ ಆರೋಪದಡಿ ಐವರು ವಿದ್ಯಾರ್ಥಿಗಳನ್ನು ವಶಕ್ಕೆ ಪಡೆದು ಕಾನೂನು ಕ್ರಮ ಜರುಗಿಸಲಾಗಿದೆ’ ಎಂದು ಜೆ.ಪಿ.ನಗರ ಠಾಣೆಯ ಪೊಲೀಸ್ ಮೂಲಗಳು ಹೇಳಿವೆ.

‘ರಾಗಿಗುಡ್ಡದ ಶಾಲೆಯೊಂದರಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷಾ ಕೇಂದ್ರವಿದೆ. ಸ್ಥಳೀಯ ವಿದ್ಯಾರ್ಥಿಗಳು ಹಾಗೂ ಸಾರಕ್ಕಿ ಶಾಲೆಯ ವಿದ್ಯಾರ್ಥಿಗಳು ಇದೇ ಕೇಂದ್ರದಲ್ಲಿ ಪರೀಕ್ಷೆ ಬರೆಯಲು ಬಂದಿದ್ದರು. ಪರೀಕ್ಷೆಗೂ ಮುನ್ನ ಒಂದೇ ಜಾಗದಲ್ಲಿ ಎಲ್ಲರೂ ಬ್ಯಾಗ್ ಇರಿಸಿ ಕೊಠಡಿಯೊಳಗೆ ಹೋಗಿದ್ದರು.’

‘ಪರೀಕ್ಷೆ ಮುಗಿದ ನಂತರ ಕೊಠಡಿಯಿಂದ ಹೊರಬಂದಿದ್ದ ವಿದ್ಯಾರ್ಥಿಗಳು, ಬ್ಯಾಗ್ ತೆಗೆದುಕೊಳ್ಳಲು ಮುಗಿಬಿದ್ದಿದ್ದರು. ಇದೇ ಸಂದರ್ಭದಲ್ಲಿ ಪರಸ್ಪರ ತಳ್ಳಾಟ ಉಂಟಾಗಿತ್ತು. ರಾಗಿಗುಡ್ಡ ಹಾಗೂ ಸಾರಕ್ಕಿ ಶಾಲೆ ವಿದ್ಯಾರ್ಥಿಗಳ ನಡುವೆ ಜಗಳ ಶುರುವಾಗಿತ್ತು. ಸ್ಥಳದಲ್ಲಿದ್ದ ಕೆಲವರು, ಜಗಳ ಬಿಡಿಸಿ ಕಳುಹಿಸಿದ್ದರು’ ಎಂದು ಮೂಲಗಳು ತಿಳಿಸಿವೆ.

ಕಬ್ಬಿನ ಹಾಲು ಮಳಿಗೆಯಲ್ಲಿದ್ದ ಚಾಕು: ‘ಸಾರಕ್ಕಿ ಶಾಲೆ ವಿದ್ಯಾರ್ಥಿಗಳು, ಕೇಂದ್ರದಿಂದ ಮನೆಯತ್ತ ನಡೆದುಕೊಂಡು ಹೊರಟಿದ್ದರು. ಅವರನ್ನು ಅಡ್ಡಗಟ್ಟಿದ್ದ ರಾಗಿಗುಡ್ಡದ ವಿದ್ಯಾರ್ಥಿಗಳು, ಪುನಃ ಜಗಳ ತೆಗೆದಿದ್ದರು. ರಸ್ತೆ ಪಕ್ಕದಲ್ಲಿದ್ದ ಕಬ್ಬಿನ ಹಾಲು ಮಳಿಗೆಯಲ್ಲಿದ್ದ ಚಾಕು ತೆಗೆದುಕೊಂಡು, ಮೂವರು ವಿದ್ಯಾರ್ಥಿಗಳಿಗೆ ಇರಿದಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮಾಹಿತಿ ಬರುತ್ತಿದ್ದಂತೆ ಸ್ಥಳಕ್ಕೆ ಹೋಗಿ ಪರಿಸ್ಥಿತಿ ತಿಳಿಗೊಳಿಸಲಾಯಿತು. ಗಾಯಾಳು ವಿದ್ಯಾರ್ಥಿಗಳಿಂದ ಹೇಳಿಕೆ ಪಡೆದು ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಎಲ್ಲರೂ ಬಾಲಕರಾಗಿರುವುದರಿಂದ, ಹೆಸರು ಬಹಿರಂಗಪಡಿಸಲಾಗದು’ ಎಂದು ತಿಳಿಸಿದರು.

ವಿದ್ಯಾರ್ಥಿಗಳ ಹೊಡೆದಾಟದ ದೃಶ್ಯವನ್ನು ಸ್ಥಳೀಯರೊಬ್ಬರು ಮೊಬೈಲ್‌ನಲ್ಲಿ ಚಿತ್ರೀಕರಿಸಿ ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಿದ್ದರು. ಈ ವಿಡಿಯೊವನ್ನು ಹಲವರು ಹಂಚಿಕೊಂಡಿದ್ದಾರೆ.

ಎದುರಾಳಿ ಹತ್ಯೆಗೆ ಸಂಚು: ಸಹಚರರಿಂದ ರೌಡಿ ಕೊಲೆ

ಬೆಂಗಳೂರು: ಬಾಣಸವಾಡಿ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ರೌಡಿ ದಿನೇಶ್‌ಕುಮಾರ್ ಅಲಿಯಾಸ್ ಕೇರಂ (34) ಹತ್ಯೆ ಪ್ರಕರಣದಲ್ಲಿ ರೌಡಿಗಳು ಸೇರಿ 12 ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ದಿನೇಶ್ ಕುಮಾರ್

‘ದೇವರ ಜೀವನಹಳ್ಳಿಯ (ಡಿ.ಜೆ.ಹಳ್ಳಿ) ಆನಂದಪುರದ ದಿನೇಶ್‌ನನ್ನು ಕಮ್ಮನಹಳ್ಳಿ ಬಳಿಯ ಸರ್ವೀಸ್ ಅಪಾರ್ಟ್‌ಮೆಂಟ್‌ವೊಂದರಲ್ಲಿ ಮಾರ್ಚ್ 27ರಂದು ಹತ್ಯೆ ಮಾಡಲಾಗಿತ್ತು. ತನಿಖೆ ಕೈಗೊಂಡು, 12 ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ’ ಎಂದು ಪೊಲೀಸರು ಹೇಳಿದರು.

‘ರೌಡಿಗಳಾದ ದಿಲೀಪ್ ಸಾಗರ್ ಅಲಿಯಾಸ್ ಸ್ಪೀಡ್, ಅಜಯ್ ಕ್ರಿಸ್ಟೊಫರ್, ಅರವಿಂದ್, ನಿಖಿಲ್ ಅಲಿಯಾಸ್ ವಿಕ್ಕಿ, ಗೌತಮ್, ದರ್ಶನ್, ಮೆಲ್ವಿನ್, ಕಾರ್ತಿಕ್, ಸತೀಶ್, ಕಿಶೋರ್, ದಿವಾಕರ್ ಹಾಗೂ ಶೇಖರ್ ಬಂಧಿತರು’ ಎಂದು ತಿಳಿಸಿದರು.

ರೌಡಿಗಳ ನಡುವೆ ವೈಷಮ್ಯ: ‘ಸುಲಿಗೆ, ದರೋಡೆಗೆ ಯತ್ನ, ಜೀವ ಬೆದರಿಕೆ ಸೇರಿದಂತೆ ಹಲವು ಪ್ರಕರಣಗಳಲ್ಲಿ ದಿನೇಶ್‌ಕುಮಾರ್ ಆರೋಪಿಯಾಗಿದ್ದ. ಕಮರ್ಷಿಯಲ್ ಸ್ಟ್ರೀಟ್ ಹಾಗೂ ಜೆ.ಸಿ.ನಗರ ಠಾಣೆಗಳ ರೌಡಿ ಪಟ್ಟಿಯಲ್ಲಿ ದಿನೇಶ್‌ಕುಮಾರ್ ಹೆಸರಿತ್ತು’ ಎಂದು ಪೊಲೀಸರು ಹೇಳಿದರು.

‘ರೌಡಿ ದಿಲೀಪ್ ಸಾಗರ್ ವಿರುದ್ಧವೂ ಹಲವು ಪ್ರಕರಣಗಳು ದಾಖಲಾಗಿದ್ದವು. ದಿನೇಶ್ ಹಾಗೂ ದಿಲೀಪ್ ಸಾಗರ್ ನಡುವೆ ಹಲವು ವರ್ಷಗಳಿಂದ ವೈಷಮ್ಯವಿತ್ತು. ಮಾರಾಮಾರಿಯೂ ನಡೆದಿತ್ತು. ಇದೇ ವೈಷಮ್ಯದಿಂದ ದಿನೇಶ್ ಕೊಲೆಯಾಗಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ’ ಎಂದು ತಿಳಿಸಿದರು.

ನಂಬಿದ್ದ ಸಹಚರರಿಂದಲೇ ಹತ್ಯೆ: ‘ದಿಲೀಪ್ ಸಾಗರ್ ಹತ್ಯೆ ಮಾಡಲು ಸಂಚು ರೂಪಿಸಿದ್ದ ದಿನೇಶ್, ತನ್ನ ಸಹಚರರಿಗೆ ವಿಷಯ ತಿಳಿಸಿದ್ದ. ಎಲ್ಲರೂ ಸೇರಿ ದಿಲೀಪ್‌ನನ್ನು ಕೊಲೆ ಮಾಡೋಣವೆಂದು ದಿನೇಶ್ ಹೇಳಿದ್ದ. ಈ ಸಂಗತಿ ದಿಲೀಪ್‌ಗೆ ಗೊತ್ತಾಗಿತ್ತು’ ಎಂದು ಪೊಲೀಸರು ಹೇಳಿದರು.

‘ದಿನೇಶ್ ಸಹಚರರನ್ನೇ ತನ್ನತ್ತ ಸೆಳೆದಿದ್ದ ದಿಲೀಪ್, ಹಲವು ಆಮಿಷ ವೊಡ್ಡಿದ್ದ. ದಿನೇಶ್‌ನನ್ನೇ ಕೊಲೆ ಮಾಡುವಂತೆ ಅವರಿಗೆ ಸೂಚನೆ ಕೊಟ್ಟಿದ್ದ. ಮಾರ್ಚ್ 27ರಂದು ದಿನೇಶ್ ಹಾಗೂ ಸಹಚರರು, ಸರ್ವೀಸ್ ಅಪಾರ್ಟ್‌ಮೆಂಟ್‌ಗೆ ಬಂದಿದ್ದರು. ಇದೇ ಸಂದರ್ಭದಲ್ಲಿ ಸಹಚರರು ಹಾಗೂ ದಿಲೀಪ್ ಕಡೆಯವರು, ದಿನೇಶ್‌ನನ್ನು ಕೊಂದು ಪರಾರಿಯಾಗಿದ್ದರು. ಪ್ರಕರಣದ ತನಿಖೆಗೆ ರಚಿಸಲಾಗಿದ್ದ ಐದು ತಂಡಗಳು, ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿವೆ. ಬಂಧಿತರಲ್ಲಿ ಕೆಲವರು, ಮೃತ ದಿನೇಶ್ ಸಹಚರರು’ ಎಂದು ತಿಳಿಸಿದರು.

ಬಿಜೆಪಿ–ಜೆಡಿಎಸ್ ಸಭೆ ಇಂದು

ಬೆಂಗಳೂರು: ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ಸಮನ್ವಯ ಸಭೆ ಶುಕ್ರವಾರ ಬೆಳಿಗ್ಗೆ ರಾಡಿಸನ್ ಬ್ಲೂ ಹೋಟೆಲ್‌ನಲ್ಲಿ ನಡೆಯಲಿದೆ. ಸಭೆಯಲ್ಲಿ ಮಾಜಿ ಪ್ರಧಾನಿ ಎಚ್‌.ಡಿ.ದೇವೇಗೌಡ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್‌.ಯಡಿಯೂರಪ್ಪ, ಜೆಡಿಎಸ್ ಅಧ್ಯಕ್ಷ ಎಚ್‌.ಡಿ.ಕುಮಾರಸ್ವಾಮಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಸಭೆ ವಿರೋಧಪಕ್ಷದ ನಾಯಕ ಆರ್‌. ಅಶೋಕ ಹಾಜರಿರುವರು.

ಪುಸ್ತಕ: ಶೇ 50ರಷ್ಟು ರಿಯಾಯಿತಿ

ಬೆಂಗಳೂರು: ಬಿ.ಆರ್‌. ಅಂಬೇಡ್ಕರ್ ಅವರ ಜಯಂತಿ ಪ್ರಯುಕ್ತ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ತನ್ನ ಪ್ರಕಟಣೆಯ ಪುಸ್ತಕಗಳಿಗೆ ಏಪ್ರಿಲ್ ತಿಂಗಳಲ್ಲಿ ಶೇ 50ರಷ್ಟು ರಿಯಾಯಿತಿ-ಘೋಷಿಸಿದೆ. ಏ.1ರಿಂದ ಏ.30ರವರೆಗೆ ಈ ರಿಯಾಯಿತಿ ಅನ್ವಯವಾಗಲಿದೆ. ಆನ್‌ಲೈನ್ ಮೂಲಕ ಕೂಡ ಪುಸ್ತಕಗಳ ಖರೀದಿಗೆ ಅವಕಾಶವಿದೆ(kuvempubhashabharathi.karnataka.gov.in) ಎಂದು ಪ್ರಾಧಿಕಾರದ ರಿಜಿಸ್ಟ್ರಾರ್ ಈಶ್ವರ್ ಕು. ಮಿರ್ಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಬಿಎಂಪಿ: ಇಬ್ಬರು ಮಾರ್ಷಲ್‌ಗಳ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯನಗರ ಶಾಪಿಂಗ್ ಕಾಂಪ್ಲೆಕ್ಸ್ ಬಳಿಯ ಪಾದಚಾರಿ ಮಾರ್ಗದಲ್ಲಿ ಬ್ಯಾಗ್ ಮಾರಾಟ ಮಾಡುತ್ತಿದ್ದ ಹಿರಿಯ ನಾಗರಿಕರೊಬ್ಬರೊಂದಿಗೆ ಅಮಾನವೀಯವಾಗಿ ವರ್ತಿಸಿದ್ದ ಇಬ್ಬರು ಮಾರ್ಷಲ್‌ಗಳನ್ನು ಕೆಲಸದಿಂದ ಬಿಬಿಎಂಪಿ ವಜಾಗೊಳಿಸಿದೆ.

ಬ್ಯಾಗ್ ಮಾರುತ್ತಿದ್ದ ಹಿರಿಯ ನಾಗರಿಕರಿಂದ ಬ್ಯಾಗ್ ಕಸಿದು, ಎಳೆದಾಡಿದ್ದ ವಿಡಿಯೊ ಜಾಲತಾಣಗಳಲ್ಲಿ ಹರಿದಾಡಿತ್ತು. ಈ ಬಗ್ಗೆ ಮಾರ್ಷಲ್‌ಗಳ ಮೇಲೆ ಆಕ್ರೋಶ ವ್ಯಕ್ತವಾಗತ್ತು. ಇದಕ್ಕೆ ಪ್ರತಿಕ್ರಿಯಿಸಿದ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ‘ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿದ್ದ ಇಬ್ಬರು ಮಾರ್ಷಲ್‌ಗಳನ್ನು ತೆಗೆದುಹಾಕಲಾಗಿದೆ’ ಎಂದು ಹೇಳಿದರು.

ಜಯನಗರ 4ನೇ ಬ್ಲಾಕ್‌ನಲ್ಲಿ ಪಾದಚಾರಿ ಮಾರ್ಗದಲ್ಲಿನ ಶಾಶ್ವತ ನಿರ್ಮಾಣಗಳನ್ನು ತೆಗೆದುಹಾಕಲು ಬಿಬಿಎಂಪಿ ಮಾರ್ಷಲ್‌ಗಳನ್ನು ನಿಯೋಜಿಸಿದೆ. ಬೀದಿಬದಿ ವ್ಯಾಪಾರಿಗಳನ್ನೂ ಮಾರ್ಷಲ್‌ಗಳು ತೆರವುಗೊಳಿಸುತ್ತಿರುವುದಕ್ಕೆ ಸಾಕಷ್ಟು ವಿರೋಧ ವ್ಯಕ್ತವಾಗಿತ್ತು. ಆದರೂ ಬಿಬಿಎಂಪಿ ಈ ಕ್ರಮದಿಂದ ಹಿಂದೆ ಸರಿದಿರಲಿಲ್ಲ.

ಮಾರ್ಚ್ 23ರಂದು, ಜಯನಗರ ಶಾಪಿಂಗ್ ಕಾಂಪ್ಲೆಕ್ಸ್ ಬಳಿಯ ಪಾದಚಾರಿ ಮಾರ್ಗದಲ್ಲಿ ಹಿರಿಯ ನಾಗರಿಕರೊಬ್ಬರು ನಡೆದಾಡಿಕೊಂಡು ಬ್ಯಾಗ್ ಮಾರಾಟ ಮಾಡುತ್ತಿದ್ದರು. ಅವರು ಅಥವಾ ಅವರು ಮಾರಾಟ ಮಾಡುತ್ತಿದ್ದ ಸಾಮಗ್ರಿಗಳು ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿಕೊಂಡಿರಲಿಲ್ಲ. ಹೀಗಿದ್ದರೂ, ಮಾರ್ಷಲ್‌ಗಳು ಅವರು ಹಿಡಿದು, ಬ್ಯಾಗ್ ಕಸಿದುಕೊಂಡು ಎಳೆದಾಡಿದ್ದರು. ಪಾದಚಾರಿಯೊಬ್ಬರು ಈ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದಾಗ ಮಾರ್ಷಲ್‌ಗಳು ಸುಮ್ಮನಾಗಿದ್ದರು.

ಕೆಲಸದಿಂದ ತೆಗೆಯಲು ಮನವಿ: ‘ಮಾರ್ಷಲ್‌ಗಳು ನಾಗರಿಕರ ಮೇಲೆ ದೌರ್ಜನ್ಯ ಹಾಗೂ ದರ್ಪದಿಂದ ನಡೆದುಕೊಳ್ಳುತ್ತಿದ್ದು, ಇದರಿಂದ ಬಿಬಿಎಂಪಿಗೆ ಕೆಟ್ಟ ಹೆಸರು ಬರುತ್ತಿದೆ. ಈ ಹಿಂದೆ ಮಾರ್ಷಲ್‌ಗಳು ಬಿಬಿಎಂಪಿಯ ಗಸ್ತು ವಾಹನದಲ್ಲಿ ಮದ್ಯ ಕೊಂಡೊಯ್ದಿದ್ದರು. ಇದೀಗ, ಜಯನಗರದಲ್ಲಿ ಹಿರಿಯ ನಾಗರಿಕರೊಂದಿಗೆ ಅಮಾನವೀಯವಾಗಿ ವರ್ತಿಸಿದ್ದಾರೆ. ಪಾಲಿಕೆಯಲ್ಲಿ 500ಕ್ಕೂ ಮಾರ್ಷಲ್‌ಗಳನ್ನು ನೇಮಿಸಿಕೊಂಡಿದ್ದು, ಅವರಿಂದ ಕೆಟ್ಟ ಹೆಸರಿನ ಜೊತೆಗೆ ಪಾಲಿಕೆಗೆ ಆರ್ಥಿಕ ನಷ್ಟವೂ ಉಂಟಾಗುತ್ತಿದೆ. ಮಾರ್ಷಲ್‌ಗಳ ಮುಖ್ಯಸ್ಥರಿಗೆ ಕೇಂದ್ರ ಕಚೇರಿಯಲ್ಲಿ ಕಚೇರಿ ನೀಡಿರುವುದೂ ಕಾನೂನು ಬಾಹಿರ. ಎಲ್ಲ ಮಾರ್ಷಲ್‌ಗಳನ್ನು ಬಿಬಿಎಂಪಿ ಕೆಲಸದಿಂದ ತೆಗೆದುಹಾಕಬೇಕು’ ಎಂದು ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ಅವರು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಮಾರ್ಚ್ 27ರಂದು ಪತ್ರ ಬರೆದು ಮನವಿ ಮಾಡಿಕೊಂಡಿದ್ದರು.

ಜಯನಗರದಲ್ಲಿ ಮಾರ್ಷಲ್‌ಗಳು ಹಿರಿಯ ನಾಗರಿಕರಿಂದ ಬ್ಯಾಗ್ ಕಸಿದು ಎಳೆದಾಡಿದ್ದ ದೃಶ್ಯ ಸಾಮಾಜಿಕ ತಾಣಗಳಲ್ಲಿ ಹರಿದಾಡಿತ್ತು

‘ಮಾದಿಗರಿಗೆ ನ್ಯಾಯ ಒದಗಿಸಿ’

ಬೆಂಗಳೂರು: ಕೋಲಾರ ಲೋಕಸಭಾ ಕ್ಷೇತ್ರದಿಂದ ಚಿಕ್ಕಪೆದ್ದಣ್ಣ ಅಥವಾ ಎಲ್‌. ಹನುಮಂತಯ್ಯ ಅವರಿಗೆ ಕಾಂಗ್ರೆಸ್‌ನಿಂದ ಟಿಕೆಟ್ ನೀಡುವ ಮೂಲಕ ಮಾದಿಗ ಸಮುದಾಯಕ್ಕೆ ನ್ಯಾಯ ಒದಗಿಸಬೇಕು ಎಂದು ಕರ್ನಾಟಕ ರಾಜ್ಯ ಮಾದಿಗ ಸಂಘಟನೆಗಳ ಒಕ್ಕೂಟ ಆಗ್ರಹಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಬಿ.ಎ. ಕೇಶವಮೂರ್ತಿ, ‘ಸಾಮಾಜಿಕ ನ್ಯಾಯದ ಹಿತದೃಷ್ಟಿಯಿಂದ ಕೋಲಾರ ಲೋಕಸಭಾ ಕ್ಷೇತ್ರದಲ್ಲಿ ಎಡಗೈ ಮಾದಿಗ ಸಮುದಾಯದವರಿಗೆ ಟಿಕೆಟ್ ನೀಡಬೇಕು. ಇದರಿಂದ, ರಾಜ್ಯದ ಎಲ್ಲ ಲೋಕಸಭಾ ಕ್ಷೇತ್ರಗಳಲ್ಲಿ ಮಾದಿಗ ಸಮುದಾಯದ ಮತಗಳನ್ನು ಪಡೆದುಕೊಳ್ಳಲು ಕಾಂಗ್ರೆಸ್ ಪಕ್ಷಕ್ಕೆ ಅನುಕೂಲವಾಗಲಿದೆ’ ಎಂದು ತಿಳಿಸಿದರು.

‘ಅಸ್ಪೃಶ್ಯರಲ್ಲಿ ಅಸ್ಪೃಶ್ಯರಾದ ಮಾದಿಗ ಸಮುದಾಯಕ್ಕೆ ಸೂಕ್ತ ರಾಜಕೀಯ ಪ್ರಾತಿನಿಧ್ಯ ನೀಡದಿದ್ದರೆ ಲೋಕಸಭಾ ಚುನಾವಣೆಯಲ್ಲಿ ಇದರ ಪರಿಣಾಮ ಎದುರಿಸಬೇಕಾಗುತ್ತದೆ. ಮಾದಿಗ ಸಮುದಾಯಕ್ಕೆ ಕೋಲಾರ ಲೋಕಸಭಾ ಟಿಕೆಟ್ ತಪ್ಪಿಸಲು ಯತ್ನಿಸುತ್ತಿರುವ ಸಚಿವ ಡಾ.ಎಂ.ಸಿ. ಸುಧಾಕರ್ ಹಾಗೂ ಶಾಸಕ ಕೊತ್ತೂರು ಮಂಜುನಾಥ ಹೇಳಿಕೆಗಳು ಖಂಡನೀಯ’ ಎಂದರು.

ಗುದದ್ವಾರಕ್ಕೆ ಏರ್ ಪ್ರೆಷರ್ ಗಾಳಿ: ಯುವಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏರ್ ಪ್ರೆಷರ್ ಪೈಪ್‌ನಿಂದ ಗುದದ್ವಾರದೊಳಗೆ ಗಾಳಿ ಬಿಟ್ಟಿದ್ದರಿಂದ ಹೊಟ್ಟೆಯಲ್ಲಿಯ ಕರುಳು ತುಂಡರಿಸಿ ಆರ್. ಯೋಗೇಶ್ (24) ಎಂಬುವವರು ಮೃತಪಟ್ಟಿದ್ದು, ಪ್ರಕರಣ ಸಂಬಂಧ ‘ಸಿಎನ್‌ಎಸ್ ಕಾರ್ ಸ್ಪಾ’ ಸರ್ವೀಸ್ ಮಳಿಗೆ ಕೆಲಸಗಾರ ಮುರುಳಿ ಅವರನ್ನು ಸಂಪಿಗೆಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ದೇವನಹಳ್ಳಿ ತಾಲ್ಲೂಕಿನ ಯೋಗೇಶ್, ಬೆಂಗಳೂರಿನ ಥಣಿಸಂದ್ರದಲ್ಲಿ ತಂದೆ-ಅಕ್ಕನ ಜೊತೆ ವಾಸವಿದ್ದರು. ಕಾರ್ಯಕ್ರಮ ನಿರ್ವಹಣೆ ಏಜೆನ್ಸಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಇವರ ಸಾವಿನ ಬಗ್ಗೆ ಐಪಿಸಿ 304 (ಕೊಲೆ ಉದ್ದೇಶವಿಲ್ಲದೆ ನಡೆದ ಹತ್ಯೆ) ಅಡಿ ಪ್ರಕರಣ ದಾಖಲಿಸಿಕೊಂಡು, ಆರೋಪಿ ಮುರುಳಿಯನ್ನು ಸೆರೆ ಹಿಡಿಯಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಯೋಗೇಶ್ ಹಾಗೂ ಮುರುಳಿ ಹಲವು ವರ್ಷಗಳ ಸ್ನೇಹಿತರೆಂಬುದು ತನಿಖೆಯಿಂದ ಗೊತ್ತಾಗಿದೆ. ತಮಾಷೆ ಮಾಡುತ್ತಿದ್ದ ಸಂದರ್ಭದಲ್ಲಿ ಈ ಅವಘಡ ಸಂಭವಿಸಿರುವುದಾಗಿ ಆರೋಪಿ ಮುರುಳಿ ಹೇಳಿಕೆ ನೀಡಿದ್ದಾನೆ. ಘಟನೆ ಬಗ್ಗೆ ಹೆಚ್ಚಿನ ಮಾಹಿತಿ ಕಲೆ ಹಾಕಲಾಗುತ್ತಿದ್ದು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ತಿಳಿಸಿದರು.

ಬೈಕ್ ಸರ್ವೀಸ್‌ಗೆ ಹೋಗಿದ್ದ ಯೋಗೇಶ್: ‘ಥಣಿಸಂದ್ರದಲ್ಲಿರುವ ಲೋಹಿತ್ ಗೌಡ ಎಂಬುವವರಿಗೆ ಸೇರಿದ್ದ ‘ಸಿಎನ್‌ಎಸ್ ಕಾರು ಸ್ಪಾ’ ಸರ್ವೀಸ್ ಮಳಿಗೆಯಲ್ಲಿ ಆರೋಪಿ ಮುರುಳಿ ಕೆಲಸ ಮಾಡುತ್ತಿದ್ದ. ಯೋಗೇಶ್, ಆಗಾಗ ಮಳಿಗೆಗೆ ಹೋಗಿ ಸ್ನೇಹಿತ ಮುರುಳಿಯನ್ನು ಮಾತನಾಡಿಸಿಕೊಂಡು ಬರುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಬೈಕ್ ಸರ್ವೀಸ್ ಮಾಡಿಸಿಕೊಂಡು ಬರುವುದಾಗಿ ಮನೆಯಲ್ಲಿ ಹೇಳಿದ್ದ ಯೋಗೇಶ್, ಮಾರ್ಚ್ 25ರಂದು ಸಂಜೆ 7 ಗಂಟೆ ಸುಮಾರಿಗೆ ಮಳಿಗೆಗೆ ಹೋಗಿದ್ದರು. ಈ ಸಂದರ್ಭದಲ್ಲಿ ಯೋಗೇಶ್, ಚಡ್ಡಿ ಧರಿಸಿದ್ದರು’ ಎಂದು ತಿಳಿಸಿದರು.

ಬಿಗಿದಪ್ಪಿ ಗುದದ್ವಾರಕ್ಕೆ ಪೈಪ್ ಹಿಡಿದಿದ್ದ: ‘ಯೋಗೇಶ್ ಮಳಿಗೆಗೆ ಹೋದಾಗ, ಮುರುಳಿ ಕಾರೊಂದನ್ನು ಏರ್ ಪ್ರೆಷರ್ ಪೈಪ್ ಮೂಲಕ ಸ್ವಚ್ಛಗೊಳಿಸುತ್ತಿದ್ದರು. ಯೋಗೇಶ್ ಅವರನ್ನು ನೋಡಿದ್ದ ಆತ, ಪೈಪ್ ಹಿಡಿದುಕೊಂಡೇ ಮಾತನಾಡಿಸಲು ಬಂದಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸ್ನೇಹಿತನೆಂಬ ಕಾರಣಕ್ಕೆ ಆತ್ಮೀಯತೆಯಿಂದ ಮಾತನಾಡಿಸಿದ್ದ ಮುರುಳಿ, ಯೋಗೇಶ್ ಅವರನ್ನು ಹಿಂದಿನಿಂದ ಬಿಗಿದಪ್ಪಿಕೊಂಡು ಗುದದ್ವಾರಕ್ಕೆ ಪೈಪ್ ಹಿಡಿದು ಒತ್ತಿದ್ದರು. ಇದೇ ಸಂದರ್ಭದಲ್ಲಿ ಏರ್ ಪ್ರೆಷರ್ ಪೈಪ್‌ನಿಂದ ಗುದದ್ವಾರದೊಳಗೆ ಅತೀ ವೇಗದಲ್ಲಿ ಗಾಳಿ ನುಗ್ಗಿತ್ತು.’

‘ಗಾಳಿಯ ಒತ್ತಡ ಹೆಚ್ಚಿದ್ದರಿಂದ ಕರುಳು ತುಂಡರಿಸಿ, ಹೊಟ್ಟೆಯೊಳಗೆ ರಕ್ತಸ್ರಾವವಾಗಿತ್ತು. ಯೋಗೇಶ್ ಅವರು ಸ್ಥಳದಲ್ಲೇ ಪ್ರಜ್ಞೆ ತಪ್ಪಿ ಬಿದ್ದಿದ್ದರು. ಕೂಡಲೇ ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆರೋಗ್ಯದಲ್ಲಿ ಏರುಪೇರು ಉಂಟಾಗಿ ಮಾರ್ಚ್ 27ರಂದು ಬೆಳಿಗ್ಗೆ ಅವರು ಅಸುನೀಗಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಗುದದ್ವಾರದೊಳಗೆ ಏರ್ ಪ್ರೆಷರ್ ಗಾಳಿ ಬಿಟ್ಟರೆ ಸಾವು ಸಂಭವಿಸುತ್ತದೆ ಎಂಬುದು ಗೊತ್ತಿದ್ದರೂ ಮುರುಳಿ ನಿರ್ಲಕ್ಷ್ಯ ವಹಿಸಿದ್ದ. ಈತನಿಂದ ಯೋಗೇಶ್ ಮೃತಪಟ್ಟಿರುವುದಾಗಿ ಸಹೋದರಿ ದೂರು ನೀಡಿದ್ದಾರೆ. ಇದೊಂದು ಅಪರೂಪದ ಪ್ರಕರಣವಾಗಿರುವುದರಿಂದ, ಸಾವಿನ ಬಗ್ಗೆ ವೈದ್ಯರಿಂದಲೂ ಹೇಳಿಕೆ ಪಡೆಯಲಾಗಿದೆ’ ಎಂದು ತಿಳಿಸಿವೆ.

‘ಅಕ್ಕನ ಮದುವೆಗೆ ತಯಾರಿ’

‘ಯೋಗೇಶ್ ಅವರ ತಾಯಿ ತೀರಿಕೊಂಡಿದ್ದಾರೆ. ತಂದೆ ಹಾಗೂ ಅಕ್ಕ ಮಾತ್ರ ಇದ್ದಾರೆ. ಅಕ್ಕನಿಗೆ ಏಪ್ರಿಲ್‌ನಲ್ಲಿ ಮದುವೆ ನಿಶ್ಚಯವಾಗಿತ್ತು. ಮದುವೆ ಜವಾಬ್ದಾರಿ ವಹಿಸಿಕೊಂಡಿದ್ದ ಯೋಗೇಶ್, ಅದರ ತಯಾರಿಯಲ್ಲಿದ್ದ’ ಎಂದು ಪೊಲೀಸರು ಹೇಳಿದರು.

ಯಲ್ಲಮ್ಮ ದೇವಸ್ಥಾನ: ₹11.23 ಕೋಟಿ ಸಂಗ್ರಹ

ಉಗರಗೋಳ (ಬೆಳಗಾವಿ ಜಿಲ್ಲೆ): ಇಲ್ಲಿನ ಯಲ್ಲಮ್ಮನಗುಡ್ಡದ ರೇಣುಕಾ ಯಲ್ಲಮ್ಮ ದೇವಸ್ಥಾನದ ಹುಂಡಿಯಲ್ಲಿ 2023–24ನೇ ಸಾಲಿನಲ್ಲಿ ₹11.23 ಕೋಟಿ ಕಾಣಿಕೆ ಸಂಗ್ರಹವಾಗಿದೆ. ಈ ಬಾರಿ ಕಳೆದ ವರ್ಷಕ್ಕಿಂತ ₹2.40 ಕೋಟಿ ಕಾಣಿಕೆ ಹೆಚ್ಚಿದೆ. 2022–23ರಲ್ಲಿ ₹8.01 ಕೋಟಿ ನಗದು, ₹66.28 ಲಕ್ಷ ಮೌಲ್ಯದ ಚಿನ್ನ ಮತ್ತು ₹15.43 ಲಕ್ಷ ಮೌಲ್ಯದ ಬೆಳ್ಳಿ ಆಭರಣಗಳು ಸೇರಿದಂತೆ ₹8.83 ಕೋಟಿ ಕಾಣಿಕೆ ಸಂಗ್ರಹವಾಗಿತ್ತು. ಈ ಬಾರಿ ₹10.22 ಕೋಟಿ ನಗದು, ₹84.14 ಲಕ್ಷ ಮೌಲ್ಯದ ಚಿನ್ನ ಮತ್ತು ₹16.65 ಲಕ್ಷ ಮೌಲ್ಯದ ಬೆಳ್ಳಿ ಆಭರಣಗಳನ್ನು ಹುಂಡಿಯಲ್ಲಿ ಹಾಕಿದ್ದಾರೆ.



ಬಿಜೆಪಿ – ಜೆಡಿಎಸ್ ಸಮನ್ವಯ ಸಭೆ ಬಳಿಕ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿಕೆ

‘ಮತ ಕೇಳುವ ಧೈರ್ಯ ಕಾಂಗ್ರೆಸ್‌ಗಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನರ ಬಳಿ ಹೋಗಿ ಮತಯಾಚಿಸುವ ಧೈರ್ಯ ಬಿಜೆಪಿಗಿದೆ. ಆದರೆ, ಕಾಂಗ್ರೆಸ್‌ಗಿಲ್ಲ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದರು.

ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಲ್ಲಿ ಗುರುವಾರ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರ ಸ್ವಾಮಿ ಅವರ ಜತೆ ನಡೆಸಿದ ಬಿಜೆಪಿ-ಜೆಡಿಎಸ್ ಸಮನ್ವಯ ಸಭೆಯ ನಂತರ ಅವರು ಮಾತನಾಡಿದರು.

ವಿಧಾನಸಭಾ ಹಾಗೂ ಲೋಕಸಭೆ ಚುನಾವಣೆಗಳಲ್ಲಿ ಬೆಂಗಳೂರು ವ್ಯಾಪ್ತಿಯ ಕ್ಷೇತ್ರಗಳಲ್ಲಿ ಹಿಂದೆಯೂ ಬಿಜೆಪಿಗೆ ಬಹುಮತ ಸಿಕ್ಕಿದೆ. ಮೆಟ್ರೊ ಸೇರಿದಂತೆ ಸಾಕಷ್ಟು ಯೋಜನೆಗಳನ್ನು ಬಿಜೆಪಿ ನೀಡಿದೆ. ಈ ಎಲ್ಲ ಕಾರಣಗಳಿಂದಾಗಿ ಜನರ ಬಳಿ ಹೋಗಿ ಮತ ಯಾಚಿಸುವ ಹಕ್ಕು ಬಿಜೆಪಿಗಿದೆ. ಆದರೆ, ಕಾಂಗ್ರೆಸ್ ಸರ್ಕಾರ ‘ಬ್ರ್ಯಾಂಡ್ ಬೆಂಗಳೂರು’ ಎನ್ನುತ್ತಾ ಕುಡಿಯುವ ನೀರು ಇಲ್ಲದಂತೆ ಮಾಡಿದೆ. ಜನರು ನಗರ ತೊರೆದು ಹೊರಟಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೇರಳ ಸರ್ಕಾರ ಐಟಿ ಕಂಪನಿಗಳ ಮುಖ್ಯಸ್ಥರಿಗೆ ಪತ್ರ ಬರೆದು ‘ಬೆಂಗಳೂರಲ್ಲಿ ಮುಖ ತೊಳೆಯಲು ಕೂಡ ನೀರಲ್ಲ, ನಮ್ಮಲ್ಲಿಗೆ ಬನ್ನಿ’ ಎಂದು ಆಹ್ವಾನಿಸಿದೆ. ಹಲವು ಕಂಪನಿಗಳು ನಗರವನ್ನು ಬಿಟ್ಟು ಹೋಗುತ್ತಿವೆ ಎಂದರು.

ಬೆಂಗಳೂರು ದಕ್ಷಿಣ ಕ್ಷೇತ್ರದಲ್ಲಿ ಬಿಜೆಪಿಗೆ ಕಳೆದ ಬಾರಿ 3.30 ಲಕ್ಷ ಲೀಡ್ ಬಂದಿದೆ. ಈ ಬಾರಿ ಇನ್ನೂ ಒಂದು ಲಕ್ಷ ಹೆಚ್ಚು ಲೀಡ್ ಬರುವ ನಿರೀಕ್ಷೆ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಚುನಾವಣಾ ಕಾರ್ಯತಂತ್ರ ಕುರಿತು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಚರ್ಚಿಸಿದರು

ಬೆಂಗಳೂರು ಗ್ರಾಮಾಂತರದಲ್ಲಿ ಧರ್ಮಯುದ್ಧ: ಶಾಸಕ ಮುನಿರತ್ನ

ರಾಜರಾಜೇಶ್ವರಿನಗರ: ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಧರ್ಮ ಯುದ್ಧ ನಡೆಯುತ್ತಿದೆ. ಈ ಯುದ್ಧದಲ್ಲಿ ಧರ್ಮದ ಹಾದಿಯಲ್ಲಿ ಬಿಜೆಪಿ ಅಭ್ಯರ್ಥಿ ಸಿ.ಎನ್. ಮಂಜುನಾಥ್ ನಡೆಯುತ್ತಿದ್ದು, ಧರ್ಮಕ್ಕೆ ಜಯ ಸಿಗಲಿದೆ ಎಂದು ಶಾಸಕ ಮುನಿರತ್ನ ಹೇಳಿದರು.

ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಮತ್ತು ಜೆಡಿಎಸ್ ಕಾರ್ಯಕರ್ತರು, ಮುಖಂಡರ ‘ಸಹೃದಯರ ಸಮಾವೇಶ’ದಲ್ಲಿ ಅವರು ಮಾತನಾಡಿದರು.

ಡಿ.ಕೆ. ಶಿವಕುಮಾರ್, ಡಿ.ಕೆ. ಸುರೇಶ್ ಅವರ ಆಟ, ದಬ್ಬಾಳಿಕೆಗೆ ಕೊನೆಗಾಣಿಸಲು ಸಮರ್ಥ ಅಭ್ಯರ್ಥಿಯಾಗಿ ಡಾ.ಸಿ.ಎನ್. ಮಂಜುನಾಥ್ ಅವರು ಶ್ರೀರಾಮ ರೂಪದಲ್ಲಿ ಬಂದಿದ್ದಾರೆ ಎಂದು ಬಣ್ಣಿಸಿದರು.

‘ಕುಣಿಗಲ್‌ನಲ್ಲಿ ಮಾಜಿ ಸಚಿವ ಡಿ.ನಾಗರಾಜಯ್ಯ, ತುಮಕೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟದ ಮಾಜಿ ಅಧ್ಯಕ್ಷ ಡಿ.ಕೃಷ್ಣಕುಮಾರ್ ಎಂಬ ಜೆಡಿಎಸ್–ಬಿಜೆಪಿ ಸಹೋದರರನ್ನು ಒಗ್ಗೂಡಿಸಿದ್ದು, ಈ ಚುನಾವಣೆಯಲ್ಲಿ ಡಿ.ಕೆ.ಸುರೇಶ್‌ಗೆ ಸೋಲಿನ ರುಚಿ ತೋರಿಸುತ್ತೇನೆ’ ಎಂದು ಸವಾಲು ಹಾಕಿದರು.

ಬಿಜೆಪಿ ಅಭ್ಯರ್ಥಿ ಸಿ.ಎನ್. ಮಂಜುನಾಥ್, ‘ವೈದ್ಯರಿಗೆ ಜಾತಿ, ಧರ್ಮ ಮುಖ್ಯವಲ್ಲ. ಅಭಿವೃದ್ಧಿಗಾಗಿ, ಬಡವ, ಶ್ರೀಮಂತ ಎನ್ನದೆ ಎಲ್ಲರನ್ನೂ ವಿಶ್ವಾಸದಿಂದ ಕಾಣಲು ಬೆಂಬಲಿಸಿ’ ಎಂದು ಮನವಿ ಮಾಡಿದರು.

ವಿಧಾನ ಪರಿಷತ್ ಸದಸ್ಯ ಟಿ.ಎ. ಶರವಣ, ಬೆಂಗಳೂರು ದಕ್ಷಿಣ ಜಿಲ್ಲಾ ಬಿಜೆಪಿ ಎಸ್.ಸಿ.ಮೋರ್ಚಾ ಉಪಾಧ್ಯಕ್ಷ ಎಂ.ಮಂಜುನಾಥ್, ಪಾಲಿಕೆ ಮಾಜಿ ಸದಸ್ಯ ಜಿ.ಎಚ್.ರಾಮಚಂದ್ರ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸಹೃದಯರ ಸಮಾವೇಶದಲ್ಲಿ ಭಾಗವಹಿಸಿದ್ದ ಬಿಜೆಪಿ ಕಾರ್ಯಕರ್ತರು

ಸುದ್ದಿ 2 ನಿಮಿಷ

ತೆರಿಗೆ ಹಂಚಿಕೆಯಲ್ಲಿ ರಾಜ್ಯಕ್ಕೆ ಅನ್ಯಾಯ: ರಾಯರೆಡ್ಡಿ ಆರೋಪ

ಬೆಂಗಳೂರು: ‘ರಾಜ್ಯಕ್ಕೆ ₹11,495 ಕೋಟಿ ಅನುದಾನ ಬಿಡುಗಡೆ ಮಾಡುವಂತೆ 15ನೇ ಹಣಕಾಸು ಆಯೋಗವು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿತ್ತು. ಆದರೆ, ಕೇಂದ್ರ ಸರ್ಕಾರ ಅದನ್ನು ತಿರಸ್ಕರಿಸುವ ಮೂಲಕ ರಾಜ್ಯದ ಜನತೆಗೆ ಅನ್ಯಾಯ ಮಾಡುತ್ತಿದೆ’ ಎಂದು ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ದೂರಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ರಾಜ್ಯದ ತೆರಿಗೆ ಹಂಚಿಕೆ ವಿಚಾರದಲ್ಲಿ ಅನವಶ್ಯಕವಾಗಿ ಸುಳ್ಳು ಹೇಳುತ್ತಿದ್ದಾರೆ. ರಾಜ್ಯ ಸರ್ಕಾರಕ್ಕೆ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಆರ್ಥಿಕ ತೊಂದರೆ ಆಗಿದ್ದರಿಂದ, ಕೇಂದ್ರ ಸರ್ಕಾರಕ್ಕೆ ಹೆಚ್ಚುವರಿ ಹಣ ಕೇಳುತ್ತಿದ್ದಾರೆ ಎಂಬ ನಿರ್ಮಲಾ ಅವರ ಆರೋಪ ಶುದ್ಧ ಸುಳ್ಳು’ ಎಂದು ತಿಳಿಸಿದರು.

‘2020–21ರಲ್ಲಿ 15ನೇ ಹಣಕಾಸು ಆಯೋಗವು ತನ್ನ ಮಧ್ಯಂತರ ವರದಿಯಲ್ಲಿ ಕರ್ನಾಟಕ ರಾಜ್ಯಕ್ಕೆ ₹5,495 ಕೋಟಿ ವಿಶೇಷ ಅನುದಾನ ನಿಗದಿ ಮಾಡಿತ್ತು. ಆದರೆ, ಇದುವರೆಗೂ ಆ ಹಣ ನೀಡಲೇ ಇಲ್ಲ. ನಮಗೆ ಬರಬೇಕಾಗಿರುವ ಬಾಕಿಯ ಬಗ್ಗೆ ಮನವರಿಕೆ ಮಾಡಲು ಸಾಧ್ಯವಾಗದ ಕಾರಣ ನಿರ್ಮಲಾ ಅವರು ಜನರಲ್ಲಿ ಗೊಂದಲ ಮೂಡಿಸುತ್ತಿದ್ದಾರೆ’ ಎಂದು ಹೇಳಿದರು.

‘2021–26ರ ಅವಧಿಯಲ್ಲಿ 15ನೇ ಹಣಕಾಸು ಆಯೋಗದ ವರದಿಯಲ್ಲಿ ಬೆಂಗಳೂರಿನ ಫೆರಿಫೆರಲ್ ರಿಂಗ್ ರಸ್ತೆಗೆ ₹3 ಸಾವಿರ ಕೋಟಿ ಹಾಗೂ ಬೆಂಗಳೂರಿನ ಕೆರೆಗಳು ಸೇರಿದಂತೆ ವಿವಿಧ ಜಲಮೂಲಗಳ ಅಭಿವೃದ್ಧಿಗೆ ₹3 ಸಾವಿರ ಕೋಟಿ ಸೇರಿದಂತೆ ಒಟ್ಟು ₹6 ಸಾವಿರ ಕೋಟಿ ರಾಜ್ಯ ನಿರ್ದಿಷ್ಟ ಅನುದಾನ ರಾಜ್ಯಕ್ಕೆ ನೀಡುವಂತೆ ಶಿಫಾರಸು ಮಾಡಿತ್ತು. ಆದರೆ, ಇದುವರೆಗೂ ಬಿಡುಗಡೆ ಆಗಿಲ್ಲ’ ಎಂದು ದೂರಿದರು.

‘ಹಿರಿಯ ನಾಗರಿಕರ ನಿರ್ಲಕ್ಷ: ನೋಟಾ ಮತ ಚಲಾವಣೆ ಎಚ್ಚರಿಕೆ’

ಬೆಂಗಳೂರು: ‘ಹಿರಿಯ ನಾಗರಿಕರನ್ನು ನಿರ್ಲಕ್ಷಿಸುತ್ತಿರುವ ಸರ್ಕಾರದ ಧೋರಣೆಯನ್ನು ಖಂಡಿಸಿ ಲೋಕಸಭಾ ಚುನಾವಣೆಯಲ್ಲಿ ನೋಟಾ ಮತ ಚಲಾಯಿಸುವ ಬಗ್ಗೆ ಚಿಂತನೆ ನಡೆದಿದೆ’ ಎಂದು ಕರ್ನಾಟಕ ರಾಜ್ಯ ನಿವೃತ್ತ ಸರ್ಕಾರಿ ನೌಕರರ ಹಾಗೂ ಹಿರಿಯ ನಾಗರಿಕರ ಕ್ಷೇಮಾಭಿವೃದ್ಧಿ ಸಂಘ ತಿಳಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಬಿ.ಎ. ಪಾಟೀಲ, ‘ಹಿರಿಯ ನಾಗರಿಕರನ್ನು ಕಾನೂನು ಬದ್ಧವಾಗಿ ರಾಷ್ಟ್ರದ ಸಂಪತ್ತು ಎಂದು ಘೋಷಿಸಬೇಕು. ಎಲ್ಲ ಹಿರಿಯ ನಾಗರಿಕರಿಗೆ ಪ್ರತಿ ತಿಂಗಳು ₹10 ಸಾವಿರ ಸಹಾಯ ಧನ, ಉಚಿತ ವೈದ್ಯಕೀಯ ಚಿಕಿತ್ಸೆ, ಜೀವವಿಮಾ ಸೌಲಭ್ಯ ನೀಡಬೇಕು. ಕೇಂದ್ರ ಮತ್ತು ರಾಜ್ಯದಲ್ಲಿ ಹಿರಿಯ ನಾಗರಿಕರಿಗಾಗಿ ಪ್ರತ್ಯೇಕ ಇಲಾಖೆಯನ್ನು ಸ್ಥಾಪಿಸಬೇಕು’ ಎಂದು ಆಗ್ರಹಿಸಿದರು.

‘ಇದೇ 30ರಂದು ಬೆಂಗಳೂರಿನ ಜಯನಗರದ ಸಾಂಸ್ಕೃತಿಕ ಮತ್ತು ನಾಗರಿಕರ ಸಂಸ್ಥೆಯಲ್ಲಿ ನಡೆಯುವ ಸಭೆಯಲ್ಲಿ ನೋಟಾ ಮತ ಚಲಾಯವಣೆಯ ಬಗ್ಗೆ ನಿರ್ಣಯ ತೆಗೆದುಕೊಳ್ಳಲಾಗುವುದು’ ಎಂದರು.

‘ಉದ್ಯೋಗ ಗ್ಯಾರಂಟಿಗಾಗಿ ಕಣಕ್ಕೆ’

ಪ್ರಜಾವಾಣಿ ವಾರ್ತೆ

ಉದಯ್ ಸಿಂಗ್

ಬೆಂಗಳೂರು: ‘ಪದವಿ ಪೂರೈಸಿದವರಿಗೆ ಉದ್ಯೋಗ ಗ್ಯಾರಂಟಿ ನೀತಿ ರೂಪಿಸುವ ಅಗತ್ಯವಿದೆ. ಅದಕ್ಕಾಗಿ ಶಾಸನ ಸಭೆಯ ಭಾಗವಾಗಲು ಚುನಾವಣೆಗೆ ಸ್ಪರ್ಧಿಸುವ ನಿರ್ಧಾರ ಮಾಡಿದ್ದೇನೆ’ ಎಂದು ಬೆಂಗಳೂರು ಪದವೀಧರ ಕ್ಷೇತ್ರದ ಆಕಾಂಕ್ಷಿ ಆರ್.ಎಸ್.ಉದಯ್ ಸಿಂಗ್ ಹೇಳಿದರು.

‘ದೇಶದ ಕಾನೂನು ಎಲ್ಲ ಅವಕಾಶ ಕೊಟ್ಟರೂ, ರಾಜಕೀಯ ವ್ಯವಸ್ಥೆ ಅದನ್ನು ವಂಚಿಸುತ್ತಿದೆ. ಕಾಲಕಾಲಕ್ಕೆ ನೇಮಕಾತಿ ನಡೆಯದೇ 2.50 ಲಕ್ಷಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇವೆ. ವಿದ್ಯಾರ್ಹತೆ, ಸಮಯ, ವಯಸ್ಸಿಗೆ ಅನುಗುಣವಾಗಿ ಸರಿಯಾದ ಕೆಲಸ ಸಿಗುತ್ತಿಲ್ಲ. ಇಂತಹ ನ್ಯೂನತೆಗಳ ವಿರುದ್ಧ ವಕೀಲನಾಗಿ ಇಷ್ಟು ದಿನ ನೊಂದ ಅಭ್ಯರ್ಥಿಗಳ ಪರ ಕಾನೂನು ಹೋರಾಟ ಮಾಡಿದ್ದೇನೆ’ ಎಂದರು.

ನೇಮಕಾತಿ ಹಗರಣ, ವಿಳಂಬ ದಿಂದಾಗಿ ಬಹುತೇಕ ಪದವೀಧರರು ಉದ್ಯೋಗದ ಭರವಸೆಯನ್ನೇ ಕಳೆದುಕೊಂಡಿದ್ದಾರೆ. ಪದವೀಧರರ ಕ್ಷೇತ್ರದ ಪ್ರತಿನಿಧಿಗಳು ಧ್ವನಿ ಕಳೆದುಕೊಂ-ಡಿದ್ದಾರೆ. ಶಾಲಾ-ಕಾಲೇಜುಗಳ-ಲ್ಲಿ ಬೋಧಕೇತರ ಹುದ್ದೆಗಳನ್ನು ತುಂಬದ ಕಾರಣ ಎಲ್ಲ ಕೆಲಸವನ್ನು ಬೋಧಕರೇ ಮಾಡಬೇಕಾದ ಪರಿಸ್ಥಿತಿ ಎದುರಾಗಿದೆ ಎಂದು ದೂರಿದರು.

ರಾಜ್ಯ ಒಕ್ಕಲಿಗರ ಸಂಘದ ಗೌರವಾಧ್ಯಕ್ಷ ಟಿ.ಎಚ್. ಆಂಜನಪ್ಪ, ಚಿಂತಕ ಹುಲಿಕಲ್ ನಟರಾಜ್, ಹಂಪಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ರಮೇಶ್ ಕುಮಾರ್, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ವೆಂಕಟಗಿರಿ, ಹೆಬ್ಬಾಳ ಕೃಷಿ ವಿಶ್ವವಿದ್ಯಾಲಯದ ವಿಶ್ರಾಂತ ನಿರ್ದೇಶಕ ಜಗದೀಶ್ವರ್, ಕರ್ನಾಟಕ ಖಾಸಗಿ ಶಾಲಾ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳ ಒಕ್ಕೂಟದ ಅಧ್ಯಕ್ಷ ರಾಮಚಂದ್ರಗೌಡ, ಉಜ್ವಲ ಸ್ಪರ್ಧಾತ್ಮಕ ಪರೀಕ್ಷಾ ಅಕಾಡೆಮಿ ನಿರ್ದೇಶಕ ಕೆ.ಯು. ಮಂಜುನಾಥ್ ಅವರು ಉಪಸ್ಥಿತರಿದ್ದರು.

ಕಾಂಗ್ರೆಸ್‌ನಿಂದ ಅಪಪ್ರಚಾರ: ಡಾ.ಕೆ.ಸುಧಾಕರ್

ನೆಲಮಂಗಲ: ‘ಕೋವಿಡ್ ಸಂದರ್ಭದಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿರುವ ಕಾಂಗ್ರೆಸ್‌ನವರು, ತಾವೇ ಅಧಿಕಾರದಲ್ಲಿದ್ದರೂ ನನ್ನ ಮೇಲೆ ಏಕೆ ಕ್ರಮ ಕೈಗೊಂಡಿಲ್ಲ? ನನ್ನ ವಿರುದ್ಧ ಕಾಂಗ್ರೆಸ್ ಅಪಪ್ರಚಾರ ಮಾಡಿದೆ’ ಎಂದು ಚಿಕ್ಕ-ಬಳ್ಳಾಪುರ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಡಾ.ಕೆ. ಸುಧಾಕರ್ ಆರೋಪಿಸಿದರು.

ಪಟ್ಟಣದ ಬಸವಣ್ಣದೇವರ ಮಠಕ್ಕೆ ಭೇಟಿ ನೀಡಿ ಸಿದ್ದಲಿಂಗ ಸ್ವಾಮೀಜಿಯವರ ಆಶೀರ್ವಾದ ಪಡೆದ ಬಳಿಕ ಮಾತನಾಡಿದರು. ‘ನಾನು ಆರೋಗ್ಯ ಸಚಿವನಾಗಿದ್ದಾಗ ಜಾರಿಗೆ ತಂದ ಯೋಜನೆಗಳನ್ನು ಈಗಿನ ಸರ್ಕಾರ ಮುಂದುವರಿಸುತ್ತಿದೆ. ಅಂದರೆ ನಾನು ಉತ್ತಮ ಕೆಲಸ ಮಾಡಿದ್ದೇನೆ ಎಂದರ್ಥವಲ್ಲವೇ? ನಾನು ತಪ್ಪು ಮಾಡಿದ್ದರೆ ಯಾವುದೇ ತನಿಖಾ ಸಂಸ್ಥೆಯಿಂದ ತನಿಖೆ ನಡೆಸಲಿ’ ಎಂದರು.

‘ನನಗೆ ಅಥವಾ ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್ ಇಬ್ಬರಲ್ಲಿ ಯಾರಿಗೇ ಟಿಕೆಟ್ ಸಿಕ್ಕರೂ ಪರಸ್ಪರ ಬೆಂಬಲಿಸುವುದಾಗಿ ಮಾತನಾಡಿಕೊಂಡಿದ್ದೆವು. ಆದರೆ, ಪ್ರಸ್ತುತ ನನಗೆ ಟಿಕೆಟ್ ಸಿಕ್ಕ ನಂತರ ವಿಶ್ವನಾಥ್ ಅವರು ವಿರೋಧಿಸುತ್ತಿರುವುದು ಸರಿ ಅಲ್ಲ’ ಎಂದು ಹೇಳಿದರು.

ನೆಲಮಂಗಲ ಪಟ್ಟಣದ ಬಸವಣ್ಣದೇವರ ಮಠದ ಸಿದ್ದಲಿಂಗಸ್ವಾಮೀಜಿಯವರ ಆಶೀರ್ವಾದವನ್ನು ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಡಾ.ಕೆ. ಸುಧಾಕರ್ ಪಡೆದರು. ಬಿಜೆಪಿ ಮುಖಂಡರಾದ ಸತೀಶ್, ಸಪ್ತಗಿರಿ ಶಂಕರ್‌ನಾಯಕ್, ಎಂ.ವಿ.ನಾಗರಾಜು, ಜಿಲ್ಲಾಧ್ಯಕ್ಷ ರಾಮಕೃಷ್ಣಪ್ಪ ಉಪಸ್ಥಿತರಿದ್ದರು

ಜೈಲಿನಲ್ಲಿದ್ದ ಮಾಜಿ ಶಾಸಕ ಮುಖ್ತಾರ್ ಅನ್ಸಾರಿ ನಿಧನ

ಬಾಂಡಾ/ಲಖನೌ (ಪಿಟಿಐ): ಜೈಲಿನಲ್ಲಿದ್ದ ಮಾಜಿ ಶಾಸಕ ಮುಖ್ತಾರ್ ಅನ್ಸಾರಿ (63) ಉತ್ತರ ಪ್ರದೇಶದ ಬಾಂಡಾ ವೈದ್ಯಕೀಯ ಕಾಲೇಜಿನಲ್ಲಿ ಹೃದಯಾಘಾತದಿಂದ ಗುರುವಾರ ನಿಧನರಾಗಿದ್ದಾರೆ ಎಂದು ಕಾಲೇಜಿನ ಪ್ರಾಂಶುಪಾಲ ಸುನೀಲ್ ಕೌಶಲ್ ತಿಳಿಸಿದ್ದಾರೆ.

ಹೊಟ್ಟೆನೋವಿನಿಂದ ಬಳಲುತ್ತಿದ್ದ ಅನ್ಸಾರಿಯನ್ನು ಬಾಂಡಾ ಜಿಲ್ಲಾ ಕಾರಾಗೃಹದಿಂದ ವೈದ್ಯಕೀಯ ಕಾಲೇಜಿನ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಮಾಊ ಸದರ್ ವಿಧಾನಸಭಾ ಕ್ಷೇತ್ರವನ್ನು ಮುಖ್ತಾರ್ ಐದು ಬಾರಿ ಪ್ರತಿನಿಧಿಸಿದ್ದರು. ಈತನ ವಿರುದ್ಧ 60ಕ್ಕೂ ಹೆಚ್ಚು ಕ್ರಿಮಿನಲ್ ಪ್ರಕರಣಗಳು ಬಾಕಿ ಇವೆ. ಉತ್ತರ ಪ್ರದೇಶದ ವಿವಿಧ ನ್ಯಾಯಾಲಯಗಳು ಎಂಟು ಪ್ರಕರಣಗಳಲ್ಲಿ ಶಿಕ್ಷೆ ವಿಧಿಸಿದ್ದರಿಂದ 2022ರ ಸೆಪ್ಟೆಂಬರ್‌ನಿಂದ ಬಾಂಡಾ ಜೈಲಿನಲ್ಲಿದ್ದರು.

ಉತ್ತರ ಪ್ರದೇಶ ಪೊಲೀಸರು ಕಳೆದ ವರ್ಷ ಪ್ರಕಟಿಸಿದ್ದ 66 ದರೋಡೆಕೋರರ ಪಟ್ಟಿಯಲ್ಲಿ ಅನ್ಸಾರಿಯ ಹೆಸರು ಇತ್ತು. ‘ಮುಖ್ತಾರ್‌ಗೆ ಜೈಲಿನಲ್ಲಿ ವಿಷ ನೀಡಲಾಗಿದೆ’ ಎಂದು ಗಾಜಿಪುರ ಸಂಸದ ಹಾಗೂ ಈತನ ಸಹೋದರ ಅಫ್ಜಲ್ ಅನ್ಸಾರಿ ಈ ಹಿಂದೆ ಆರೋಪಿಸಿದ್ದರು.

ಆರ್‌ಟಿಪಿಎಸ್: ನಾಲ್ಕು ಘಟಕ ಸ್ಥಗಿತ

ಶಕ್ತಿನಗರ (ರಾಯಚೂರು ಜಿಲ್ಲೆ): ತಾಂತ್ರಿಕ ಸಮಸ್ಯೆಯಿಂದಾಗಿ ರಾಯಚೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರದ ನಾಲ್ಕು ವಿದ್ಯುತ್ ಘಟಕಗಳಲ್ಲಿ ಉತ್ಪಾದನೆ ಸ್ಥಗಿತಗೊಂಡಿದೆ.

‘ವಿದ್ಯುತ್ ಘಟಕಗಳ ದುರಸ್ತಿ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಹಿರಂಗ ಸಭೆ ವರದಿ ವೇಳೆ ತಳ್ಳಾಟ, ಮಾತಿನ ಚಕಮಕಿ: ದೂರು, ಪ್ರತಿ ದೂರು ದಾಖಲು

ಪಿಟಿಐ ವರದಿಗಾರ್ತಿ ಮೇಲೆ ಪತ್ರಕರ್ತ ಹಲ್ಲೆ

ಪ್ರಜಾವಾಣಿ ವಾರ್ತೆ

ರಾಮನಗರ: ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ.ಸುರೇಶ್ ಅವರು ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ಗುರುವಾರ ನಡೆದ ಬಹಿರಂಗ ಸಭೆ ವರದಿಗೆ ಬಂದಿದ್ದ ಪತ್ರಕರ್ತರಿಬ್ಬರು ಕಿತ್ತಾಡಿಕೊಂಡಿದ್ದಾರೆ.

ಪಿಟಿಐ ವರದಿಗಾರ್ತಿ ಎಲಿಜಬೆತ್ ಕುರಿಯನ್ ಅವರ ಮೇಲೆ ಎಎನ್‌ಐ ವರದಿಗಾರ ರಾಘವೇಂದ್ರ ರಾವ್ ಅವರು ಹಲ್ಲೆ ನಡೆಸಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಸುರೇಶ್ ಅವರ ಪಕ್ಕವೇ ನಡೆದಿರುವ ಘಟನೆಗೆ ಸಂಬಂಧಿಸಿದಂತೆ ರಾಮನಗರ ಪುರ ಪೊಲೀಸ್ ಠಾಣೆಯಲ್ಲಿ ಇಬ್ಬರೂ ದೂರು-ಪ್ರತಿ ದೂರು ನೀಡಿದ್ದು ಎಫ್‌ಐಆರ್ ದಾಖಲಾಗಿದೆ.

ರ‍್ಯಾಲಿ ಮತ್ತು ಬಹಿರಂಗ ಸಭೆಯ ವರದಿಗೆ ಅನುಕೂಲವಾಗುವಂತೆ ವಿದ್ಯುನ್ಮಾನ ಮತ್ತು ಮುದ್ರಣ ಮಾಧ್ಯಮದವರಿಗೆ ತೆರೆದ ವಾಹನದ ವ್ಯವಸ್ಥೆ ಮಾಡಲಾಗಿತ್ತು. ಸುರೇಶ್ ಅವರು ಭಾಷಣ ಮಾಡುವಾಗ ಮೈಕ್ ಹಿಡಿಯುವ ವಿಚಾರಕ್ಕೆ ಸಂಬಂಧಿಸಿದಂತೆ ಇಬ್ಬರ ನಡುವೆ ತಳ್ಳಾಟ ಮತ್ತು ಮಾತಿನ ಚಕಮಕಿ ನಡೆದಿದೆ. ಈ ವೇಳೆ ರಾಘವೇಂದ್ರ ಅವರು ಎಲಿಜಬೆತ್ ಅವರ ಕೆನ್ನೆಗೆ ಹೊಡೆದಿದ್ದಾರೆ.

ಸ್ಥಳದಲ್ಲಿದ್ದ ವರದಿಗಾರರು ಹಾಗೂ ಕಾಂಗ್ರೆಸ್ ಮುಖಂಡರು, ‘ಹೆಣ್ಣು ಮಗಳ ಮೇಲೆ ಹಲ್ಲೆ ಮಾಡುತ್ತೀಯಾ’ ಎಂದು ರಾಘವೇಂದ್ರ ರಾವ್ ಅವರನ್ನು ತಡೆದು, ಜಗಳ ಬಿಡಿಸಿದ್ದಾರೆ. ಇಬ್ಬರೂ ಪರಸ್ಪರ ದೂರು, ಪ್ರತಿದೂರು ಕೊಟ್ಟಿದ್ದಾರೆ.

‘ಅವಾಚ್ಯ ಶಬ್ದಗಳಿಂದ ನಿಂದಿಸಿ, ಹಲ್ಲೆ ನಡೆಸಿದ್ದಾರೆ’ ಎಂದು ಆರೋಪಿಸಿ ಎಲಿಜಬೆತ್ ಅವರು ದೂರು ಕೊಟ್ಟಿದ್ದಾರೆ. ‘ಕೆಟ್ಟ ಪದಗಳಲ್ಲಿ ನಿಂದಿಸಿದ ಎಲಿಜಬೆತ್ ಅವರು ಕೈಯಲ್ಲಿದ್ದ ಮೈಕ್‌ನಿಂದ ಮುಖಕ್ಕೆ ಹೊಡೆದಿದ್ದಾರೆ’ ಎಂದು ರಾಘವೇಂದ್ರ ದೂರು ನೀಡಿದ್ದಾರೆ.

ಘಟನೆ ಕುರಿತು ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ವಿಡಿಯೊ ಪೋಸ್ಟ್ ಮಾಡಿ ಸ್ಪಷ್ಟನೆ ನೀಡಿರುವ ರಾಘವೇಂದ್ರ ರಾವ್ ಅವರು, ‘ನನ್ನ ತಾಯಿ ಕುರಿತು ಎಲಿಜಬೆತ್ ಕೆಟ್ಟದಾಗಿ ಬೈದಿದ್ದೇ ಘಟನೆಗೆ ಕಾರಣ’ ಎಂದು ದೂರಿದ್ದಾರೆ.

> **ಘಟನೆಗೆ ಸಂಬಂಧ ಇಬ್ಬರೂ ದೂರು ನೀಡಿದ್ದು, ದಾಖಲಿಸಿಕೊಳ್ಳಲಾಗಿದೆ. ಹಲ್ಲೆ ಸಂದರ್ಭದ ಸಂಪೂರ್ಣ ವಿಡಿಯೊ ಸಂಗ್ರಹಿಸಿ ತನಿಖೆಗೆ ಸೂಚಿಸಲಾಗಿದೆ**
> **ಕಾರ್ತಿಕ್ ರೆಡ್ಡಿ**
> ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

‘ಏಕವಚನದಲ್ಲಿ ನಿಂದಿಸಿ ತಳ್ಳಿದ’

‘ಕಾಂಗ್ರೆಸ್ ಅಭ್ಯರ್ಥಿ ಭಾಷಣ ಮಾಡುವಾಗ ನಾನು ಮೈಕ್ ಇಟ್ಟೆ. ಆಗ ರಾಘವೇಂದ್ರ ಏಕಾಏಕಿಯಾಗಿ ನನ್ನ ಮೇಲೆ ರೇಗಿದರು. ಪ್ರಶ್ನಿಸಿದ್ದಕ್ಕೆ ನೀನ್ಯಾರು? ಎಂದು ಕೆಟ್ಟದಾಗಿ ನಿಂದಿಸತೊಡಗಿದರು. ಶರ್ಟ್ ಕಾಲರ್ ಎಳೆದು ತಳ್ಳಿದ್ದಲ್ಲದೆ ಕೆನ್ನೆಗೆ ಎರಡು ಸಲ ಹೊಡೆದರು. ನಿಜವಾಗಿ ಯಾರದ್ದು ತಪ್ಪೆಂಬುದು ಸ್ಥಳದಲ್ಲಿ-ದ್ದವರಿಗೆ ಗೊತ್ತಿದೆ. ವಿಡಿಯೊ ಅನ್ನು ಗಮನಿಸಿದರೆ ಸತ್ಯ ಗೊತ್ತಾಗುತ್ತದೆ’ ಎಂದು ಎಲಿಜಬೆತ್ ಅವರು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ನರೇಗಾ ಕೂಲಿ: ಶೇ 10ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ (ನರೇಗಾ) ಕೂಲಿ ದರವನ್ನು ಪರಿಷ್ಕರಿಸಿದ್ದು, ವಿವಿಧ ರಾಜ್ಯಗಳಿಗೆ ಅಂದಾಜು ಶೇ 4ರಿಂದ ಶೇ 10ರಷ್ಟನ್ನು ಏರಿಕೆ ಮಾಡಿದೆ.

ಕರ್ನಾಟಕ, ಆಂಧ್ರಪ್ರದೇಶ, ಗೋವಾ, ತೆಲಂಗಾಣ ರಾಜ್ಯಗಳಲ್ಲಿ ನರೇಗಾ ಕೂಲಿಯು ಅಂದಾಜು ಶೇ 10ರಷ್ಟು ಹೆಚ್ಚಳವಾಗಿದೆ. ಕರ್ನಾಟಕದ-ಲ್ಲಿ ಈ ಮೊದಲು ದಿನಕ್ಕೆ ₹ 316ರಷ್ಟಿದ್ದ ನರೇಗಾ ಕೂಲಿ ದರವು ಪರಿಷ್ಕರಣೆ ಬಳಿಕ ₹349ಕ್ಕೆ ಏರಿದಂತಾಗಿದ್ದು, ಒಟ್ಟು ₹ 33 ಹೆಚ್ಚಿದಂತಾಗಿದೆ.

ಈ ಯೋಜನೆಯಡಿ ದೇಶದಲ್ಲಿಯೇ ಅತಿ ಹೆಚ್ಚು ಕೂಲಿ ನಿಗದಿಯಾಗಿರುವ ರಾಜ್ಯ ಹರಿಯಾಣ ಆಗಿದ್ದು, ಅಲ್ಲಿ ಅದರ ಪ್ರಮಾಣ ದಿನಕ್ಕೆ ₹ 374ಕ್ಕೆ ಏರಿದೆ. ಅರುಣಾಚಲ ಪ್ರದೇಶ ಮತ್ತು ನಾಗಾಲ್ಯಾಂಡ್ ನಲ್ಲಿ ಕೂಲಿ ಮೊತ್ತ ಅತ್ಯಂತ ಕಡಿಮೆ (₹ 234) ಇದೆ ಎಂದು ಅಧಿಸೂಚನೆ ತಿಳಿಸಿದೆ. ಸಿಕ್ಕಿಂನ ಗ್ನಾಥಾಂಗ್, ಲಾಚುಂಗ್ ಮತ್ತು ಲಾಚೆನ್ ಪಂಚಾಯಿತ್ತಿಗಳಲ್ಲಿ ದಿನಕ್ಕೆ ₹ 374 ಕೂಲಿ ಇದೆ ಎಂದು ಅದು ಹೇಳಿದೆ.

ಆಯೋಗದಿಂದ ಅನುಮತಿ: ಲೋಕಸಭೆ ಚುನಾವಣೆಯ ಮಾದರಿ ನೀತಿ ಸಂಹಿತೆ (ಎಂಸಿಸಿ) ಜಾರಿ ಇರುವ ಕಾರಣ, ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯವು ಚುನಾವಣಾ ಆಯೋಗದಿಂದ ಅನುಮತಿ ಪಡೆದು ನರೇಗಾ ಕೂಲಿ ಪರಿಷ್ಕರಣೆ ಅಧಿ-ಸೂಚನೆಯನ್ನು ಮಾರ್ಚ್ 27ರಂದು ಹೊರಡಿಸಿದೆ.

ನಗರದ ಕನಕಪುರ ರಸ್ತೆಯ ಸೋಮನಹಳ್ಳಿಯ ಅನಂತ ಜ್ಞಾನ ಗಂಗೋತ್ರಿ ಕ್ಯಾಂಪಸ್‌ನಲ್ಲಿರುವ ಎಪಿಎಸ್ ಕಾಲೇಜ್ ಆಫ್ ಎಂಜಿನಿಯರಿಂಗ್‌ನಲ್ಲಿ ಮಂಗಳವಾರ ನಡೆದ ಇಂಡಸ್ಟ್ರಿ 4.0 ಮತ್ತು 3‘ಡಿ’ ಪ್ರಿಂಟಿಂಗ್ ಪ್ರಯೋಗಾಲಯಗಳನ್ನು ಡಿಆರ್‌ಡಿಒ ಚೇರ್ಮನ್ ಬಿನೋಯ್ ಕುಮಾರ್ ದಾಸ್ ಉದ್ಘಾಟಿಸಿದರು. ಎಪಿಎಸ್ ಎಜುಕೇಷನಲ್ ಟ್ರಸ್ಟ್‌ನ ಅಧ್ಯಕ್ಷ ಸಿ.ಎ.ವಿಷ್ಣುಭರತ್ ಪಾಲ್ಗೊಂಡಿದ್ದರು.

‘ಕೆಆರ್‌ಎಸ್‌ಗೆ ಧಕ್ಕೆಯಾಗಬಾರದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾವೇರಿ ನದಿಯು ಕರ್ನಾಟಕ, ತಮಿಳುನಾಡು, ಪುದುಚೇರಿ ಮತ್ತು ಕೇರಳಗಳಿಗೆ ನೀರುಣಿಸುವ ಜೀವ-ನದಿಯಾಗಿದ್ದು, ಇದಕ್ಕೆ ಕಟ್ಟಲಾಗಿ ರುವ ಕೆಆರ್‌ಎಸ್ ಅಣೆಕಟ್ಟಿನ ಸುತ್ತ ಮುತ್ತ ಗಣಿಗಾರಿಕೆ ಮತ್ತು ಅದಕ್ಕೆ ಹೊಂದಿಕೊಂಡಂತಹ ಚಟುವಟಿಕೆಗಳು ಅತ್ಯಂತ ಅಪಾಯಕಾರಿ. ಆದ್ದರಿಂದ, ಅಣೆಕಟ್ಟೆಗೆ ಕಿಂಚಿತ್ತೂ ಧಕ್ಕೆಯಾಗದಂತೆ ನೋಡಿಕೊಳ್ಳಬೇಕಾದ ತುರ್ತು ಇಂದು ಹೆಚ್ಚಿದೆ’ ಎಂದು ಹೈಕೋರ್ಟ್ ಕಾಳಜಿ ವ್ಯಕ್ತಪಡಿಸಿದೆ.

‘ಕೆಆರ್‌ಎಸ್ ಜಲಾಯಶಯದ ಸುತ್ತಲಿನ 20 ಕಿ.ಮೀ ವ್ಯಾಪ್ತಿಯಲ್ಲಿ ಹಾಗೂ ಅದರಾಚೆಗೂ ಕೂಡಾ ಕಲ್ಲು ಗಣಿಗಾರಿಕೆ ಹಾಗೂ ಸ್ಫೋಟಕ ಚಟುವ-ಟಿಕೆಗಳಿಗೆ ಸಂಬಂಧಿಸಿದ ತಕರಾರುಗಳಿಗೆ ಪರಿಹಾರ ಪಡೆಯಲು, ಕರ್ನಾಟಕ ರಾಜ್ಯ ಜಲಾಶಯಗಳ ಸುರಕ್ಷಿತ ಸಮಿತಿಯ ಮುಂದೆಯೇ ಮನವಿ ಸಲ್ಲಿಸಬೇಕು. ಈ ವಿಚಾರದಲ್ಲಿ ಸಮಿತಿಯ ತೀರ್ಮಾನವೇ ಅಂತಿಮ’ ಎಂದು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಗುರುವಾರ ಆದೇಶಿಸಿದೆ.

‘ನಿಮ್ಮ ಮನವಿಯನ್ನು ತಜ್ಞರ ಸಮಿತಿಯ ಮುಂದೆಯೇ ಸಲ್ಲಿಸಿ’ ಎಂದು ಅರ್ಜಿದಾರರಿಗೆ ನಿರ್ದೇಶಿಸಿ ವಿಲೇವಾರಿ ಮಾಡಿತು. ಇದಕ್ಕೆ ಪ್ರತಿಯಾಗಿ ಅರ್ಜಿದಾರರ ಪರ ಹಿರಿಯ ವಕೀಲ ಸಂದೇಶ್ ಎಸ್.ಚೌಟ, ‘ಅರ್ಜಿಯನ್ನು ಇಂತಿಷ್ಟೇ ಅವಧಿಯಲ್ಲಿ ಇತ್ಯರ್ಥಗೊ-ಳಿಸುವಂತೆ ಸಮಯ ಮಿತಿ ವಿಧಿಸಿ’ ಎಂದು ಕೋರಿದರು. ಇದನ್ನು ನಿರಾಕರಿಸಿದ ನ್ಯಾಯಪೀಠ, ‘ಗಡುವಿಗೆ ಸಮಿತಿಯನ್ನೇ ಕೇಳಿಕೊಳ್ಳಿ. ನಾವು ವಿಧಿಸಲು ಆಗುವುದಿಲ್ಲ’ ಎಂದು ಹೇಳಿತು. ಅರ್ಜಿದಾರರ ಪರ ವಿಕ್ರಮ ಉನ್ನಿ ಬಾಲಕೃಷ್ಣ ವಕಾಲತ್ತು ವಹಿಸಿದ್ದರು. ರಾಜ್ಯ ಸರ್ಕಾರದ ಪರ ಎಸ್.ಎಸ್.ಮಹೇಂದ್ರ ವಾದ ಮಂಡಿಸಿದರು.

ಪ್ರಕರಣವೇನು?: ಪಾಂಡವಪುರ ತಾಲ್ಲೂಕಿನ ಕನಗನ ಮರಡಿ ಗ್ರಾಮದ ‘ಮಂಚಮ್ಮದೇವಿ ಸ್ಟೋನ್ ಕ್ರಷರ್ ಹಾಗೂ ಎಂ.ಸ್ಯಾಂಡ್’ ಘಟಕಕ್ಕೆ ಜಿಲ್ಲಾ ಸ್ಟೋನ್ ಕ್ರಷರ್ ಪರವಾನಗಿ ಮತ್ತು ನಿಯಂತ್ರಣ ಪ್ರಾಧಿಕಾರವು 2024ರ ಜ. 20ರಂದು ನೋಟಿಸ್ ನೀಡಿರುವ ಕಾರಣ ಘಟಕದ ಚಟುವಟಿಕೆ ಸ್ಥಗಿತಗೊಳಿಸಲಾಗಿದೆ. ಇದನ್ನು ಪ್ರಶ್ನಿಸಿ ಮಾಲೀಕ ವೈ.ಬಿ.ಅಶೋಕ್‌ಗೌಡ ಪಟೇಲ್ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

13 ಕೆ.ಜಿ ಮಾದಕ ವಸ್ತು ವಶ

ಬೆಂಗಳೂರು: ನಗರದಲ್ಲಿ ₹.18.42 ಲಕ್ಷ ಮೌಲ್ಯದ 13.79 ಕೆ.ಜಿ ಮಾದಕ ವಸ್ತುಗಳನ್ನು ಲೋಕಸಭೆ ಚುನಾವಣೆ ಮಾದರಿ ಚುನಾವಣೆ ನೀತಿ ಸಂಹಿತೆ ಅಧಿಕಾರಿಗಳು ಗುರುವಾರ ವಶಪಡಿಸಿ-ಕೊಂಡಿದ್ದಾರೆ.

₹1.13 ಲಕ್ಷ ಮೌಲ್ಯದ 120 ಲೀಟರ್ ಮದ್ಯ, ₹7.90 ಲಕ್ಷ ಮೌಲ್ಯದ ಉಡುಗೊರೆಗಳು, ₹1.9 ಲಕ್ಷ ನಗದು ಸೇರಿದಂತೆ ಒಟ್ಟು ₹79.54 ಲಕ್ಷ ಮೌಲ್ಯದ ವಸ್ತು, ವಾಹನಗಳನ್ನು ಮಾರ್ಚ್ 28ರಂದು ವಶಪಡಿಸಿಕೊಂಡಿದ್ದಾರೆ.

ಅಂಕಿ-ಅಂಶಗಳು (ಮಾರ್ಚ್ 16ರಿಂದ ಮಾರ್ಚ್ 28)

- ₹4.87 ಕೋಟಿ ಜಪ್ತಿಯಾದ ಒಟ್ಟು ವಸ್ತುಗಳ ಮೌಲ್ಯ
- ₹1.30 ಕೋಟಿ ನಗದು ವಶ
- ₹1.88 ಕೋಟಿ ಮೌಲ್ಯದ (52,755 ಲೀಟರ್) ಮದ್ಯ ಜಪ್ತಿ
- ₹22.02 ಲಕ್ಷ ಮೌಲ್ಯದ (36.54 ಕೆ.ಜಿ) ಮಾದಕ ವಸ್ತು ವಶ
- ₹37.50 ಲಕ್ಷ ಮೌಲ್ಯದ (18.40 ಕೆ.ಜಿ) ಚಿನ್ನ/ಬೆಳ್ಳಿ ವಶ
- ₹6.05 ಲಕ್ಷ ಉಡುಗೊರೆಗಳು
- 352 ಒಟ್ಟು ಎಫ್‌ಐಆರ್ ದಾಖಲು

ನಗರದಲ್ಲಿ ಇಂದು

ಲಾಸ್ಯ ಸಾಧಕಿ–2024 ಪ್ರಶಸ್ತಿ ಪ್ರದಾನ: ಪ್ರಶಸ್ತಿ ಪುರಸ್ಕೃತರು: ಪ್ರಮೀಳಾದೇವಿ, ಸುಮಂಗಲಾ ರತ್ನಾಕರ್ ರಾವ್, ಲೀನಾ ಮೊಹಾಂತಿ, ನಳಿನಾಕ್ಷಿ ಶಿವಕುಮಾರ್, ಆಯೋಜನೆ: ಲಾಸ್ಯ ಅಕಾಡೆಮಿ ಆಫ್ ಡಾನ್ಸ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಬೆಳಿಗ್ಗೆ 9

ದಿಬ್ಬೂರು ಸಿದ್ಧಲಿಂಗಪ್ಪ ಅವರಿಗೆ ನುಡಿನಮನ, ವಚನಾಂಜಲಿ: ಅರವಿಂದ ಜತ್ತಿ, ಪ್ರಭುದೇವ ಜೆ. ಚಿಗಟೇರಿ, ಕೊಂಡಜ್ಜಿ ಬ. ಷಣ್ಮುಖಪ್ಪ, ಕೆ.ವಿ. ನಾಗರಾಜಮೂರ್ತಿ, ನಾ. ಮಲ್ಲಿಕಾರ್ಜುನ, ಪ್ರಮೀಳಾ ಗರಡಿ, ಆಯೋಜನೆ: ಬಸವ ಸಮಿತಿ, ಸ್ಥಳ: ಅರಿವಿನಮನೆ, ಬಸವ ಸಮಿತಿ, ಬೆಳಿಗ್ಗೆ 11

ವಿಶ್ವ ರಂಗಭೂಮಿ ದಿನಾಚರಣೆ ‘ಪರಂಪರಾ ಪುರಸ್ಕಾರ’ ಪ್ರದಾನ: ಚಾಲನೆ: ಟಿ.ಎಚ್. ರಘುರಾಜ್, ಅಧ್ಯಕ್ಷತೆ: ಎಂ. ಬೈರೇಗೌಡ, ಅತಿಥಿಗಳು: ಮಹೇಶ ಅಂಗಡಿ, ಮಹೇಶ್ ಕುಮಾರ್, ಉಪಸ್ಥಿತಿ: ಜಿ.ಪಿ. ರಾಮಣ್ಣ, ಪುರಸ್ಕಾರ ಪುರಸ್ಕೃತರು: ವೆಂಕಟರಮಣಪ್ಪ, ಎಸ್.ಆರ್. ಚಿದಾನಂದ, ‘ಇರು ದಾಸಯ್ಯ ಬರ್ಲಿ’ ನಾಟಕ ಪ್ರದರ್ಶನ: ರಚನೆ: ಪಟ್ಟಸೀಗ ನಾಯಕ್, ನಿರ್ದೇಶನ: ಎಂ. ಮುನಿರಾಜು, ಆಯೋಜನೆ: ಪರಂಪರಾ ಕಲ್ಚರಲ್ ಫೌಂಡೇಶನ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4

ವಿಶ್ವ ರಂಗಭೂಮಿ ದಿನಾಚರಣೆ: ಆಯೋಜನೆ ಮತ್ತು ಸ್ಥಳ: ಕುಶಲ ಕಲಾವೃಂದ ಸಂಘದ ಆವರಣ, ಜೆ.ಪಿ. ನಗರ, ಸಂಜೆ 4

‘ಆತ್ಮತೃಷ–24’ ವಾರ್ಷಿಕ ತಾಂತ್ರಿಕ ಸಾಂಸ್ಕೃತಿಕ ಉತ್ಸವ: **ಅತಿಥಿಗಳು:** ಸಪ್ತಮಿಗೌಡ, ಎಂ.ಆರ್. ದೊರೆಸ್ವಾಮಿ, ಡಿ. ಜವಹರ್, ಅಬಿನಾಶ್ ವಾಸುದೇವ, ಆಯೋಜನೆ ಮತ್ತು ಸ್ಥಳ: ಪಿಇಎಸ್ ವಿಶ್ವವಿದ್ಯಾಲಯ ಮುಖ್ಯಸಭಾಂಗಣ, ಬನಶಂಕರಿ 3ನೇ ಹಂತ, ಸಂಜೆ 5

ಸಪ್ತಮಿಗೌಡ

‘ಧರ್ಮಾಂಗದ ದಿಗ್ವಿಜಯ’ ಯಕ್ಷಗಾನ ಪ್ರದರ್ಶನ: ಹಿಮ್ಮೇಳದ ಭಾಗವತರು: ಪ್ರಸನ್ನ ಹೆಗಡೆ, ಚಂಡೆ: ಸುಬ್ರಮಣ್ಯ ಆಚಾರಿ, ಮದ್ದಳೆ: ಸಂಪತ್ , ಮುಮ್ಮೇಳ: ಶ್ರೀಪಾದ ಭಟ್, ಆಯೋಜನೆ: ಯಕ್ಷ ಸಂಪದ, ಸ್ಥಳ: ಉದಯಭಾನು ಕಲಾಸಂಘ, ಗವೀಪುರ ಗುಟ್ಟಹಳ್ಳಿ, ಸಂಜೆ 4.30

ಗೀತ ಚೈತ್ರೋತ್ಸವ: ಉದ್ಘಾಟನೆ: ಬೈರಮಂಗಲ ರಾಮೇಗೌಡ, ಅಧ್ಯಕ್ಷತೆ: ಕಾ.ವೆಂ. ಶ್ರೀನಿವಾಸಮೂರ್ತಿ, ಆಯೋಜನೆ: ಅಖಿಲ ಕರ್ನಾಟಕ ಸುಗಮ ಸಂಗೀತ ಸಂಸ್ಥೆಗಳ ಒಕ್ಕೂಟ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ಸಿದ್ಧಲಿಂಗಮ್ಮ ಚಂದ್ರಶೇಖರಯ್ಯ ದತ್ತಿ: ಅಧ್ಯಕ್ಷತೆ: ಅರುಣಾ ಚಂದ್ರಶೇಖರ್, ‘ಗುರು ಲಿಂಗ ಜಂಗಮ’ ಉಪನ್ಯಾಸ: ಪರಮೇಶ್, ಉಪಸ್ಥಿತಿ: ಸದಾಶಿವಯ್ಯ ಜರಗನಹಳ್ಳಿ, ಶಾಂತಾಮಣಿ ಮೃತ್ಯುಂಜಯ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಜೆಎಸ್‌ಎಸ್ ಕಾಲೇಜಿನ ಸಭಾಂಗಣ, ಜಯನಗರ, ಸಂಜೆ 5.30

‘ಸಂಗ್ಯಾ ಬಾಳ್ಯಾ’ ನಾಟಕ ಪ್ರದರ್ಶನ: ರಚನೆ: ಚಂದ್ರಶೇಖರ ಕಂಬಾರ, ನಿರ್ದೇಶನ: ರುದ್ರೇಶ್, ಅತಿಥಿಗಳು: ಆನಂದ್, ಶಂಕರ್, ರಾಮಚಂದ್ರ, ರವಿಚಂದ್ರನ್, ಆಯೋಜನೆ: ಗಂಧರ್ವ ಸಾಂಸ್ಕೃತಿಕ ಕಲಾವೇದಿಕೆ, ಸ್ಥಳ: ಲಾಸ್ಯರಂಜನಿ ಕಲಾಕ್ಷೇತ್ರ, ಲಿಂಗರಾಜಪುರ, ಸಂಜೆ 6.30

‘ವ್ಯಾಸರಾಜರ ಮಹಿಮೆ’ ಧಾರ್ಮಿಕ ಉಪನ್ಯಾಸ: ವ್ಯಾಸನಕೆರೆ ಪ್ರಭಂಜನಾಚಾರ್ಯ, ಆಯೋಜನೆ: ಗುರುರಾಜ ಅಸೋಸಿಯೇಷನ್, ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಎನ್.ಆರ್. ಕಾಲೊನಿ, ಸಂಜೆ 6.30

ರಾಯಚೂರಿನಲ್ಲಿ ಗರಿಷ್ಠ 44.3 ಡಿಗ್ರಿ ಸೆಲ್ಸಿಯಸ್ ದಾಖಲು

ರಾಜ್ಯದ ಹಲವೆಡೆ ಸುಡು ಬಿಸಿಲು

ಪ್ರಜಾವಾಣಿ ವಾರ್ತೆ

ಬೆಂಗಳೂರು/ಹುಬ್ಬಳ್ಳಿ/ಕಲಬುರಗಿ: ರಾಜ್ಯದಲ್ಲಿ ಬಿಸಿಲ ತಾಪ ಹೆಚ್ಚಳವಾಗುತ್ತಿದ್ದು, 30 ಜಿಲ್ಲೆಗಳಲ್ಲಿ ಗುರುವಾರ ಗರಿಷ್ಠ ಉಷ್ಣಾಂಶ 38 ಡಿಗ್ರಿ ಸೆಲ್ಸಿಯಸ್ ದಾಟಿದೆ. 18 ಜಿಲ್ಲೆಗಳು ಬಿಸಿ ಗಾಳಿಯ ಮಿತಿಯಾದ 40 ಡಿಗ್ರಿ ಸೆಲ್ಸಿಯಸ್ ಗಡಿ ಮೀರಿವೆ.

ರಾಯಚೂರಿನಲ್ಲಿ ಗುರುವಾರ ಗರಿಷ್ಠ ತಾಪಮಾನ (44.3 ಡಿಗ್ರಿ ಸೆಲ್ಸಿಯಸ್) ವರದಿಯಾಗಿದೆ. ಬೆಳಿಗ್ಗೆ 8ರಿಂದಲೇ ಬಿಸಿಲಿನ ಅನುಭವ ಆರಂಭ ವಾಗುತ್ತಿದ್ದು, ಮಧ್ಯಾಹ್ನದ ವೇಳೆಗೆ ಪ್ರಖರತೆ ಹೆಚ್ಚ-ಳವಾಗುತ್ತಿದೆ. ಕನಿಷ್ಠ ತಾಪಮಾನ 27 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿ ಇದೆ. ಕೊಡಗು ಜಿಲ್ಲೆಯಲ್ಲಿ ಮಾತ್ರ ಗುರುವಾರ ಗರಿಷ್ಠ ಉಷ್ಣಾಂಶ 38 ಡಿಗ್ರಿ ಸೆಲ್ಸಿಯ-ಸ್‌ಕ್ಕಿಂತ ಕಡಿಮೆ (37.4 ಡಿಗ್ರಿ ಸೆಲ್ಸಿಯಸ್) ವರದಿಯಾಗಿದೆ.

ಮಲೆನಾಡಿನ ಜಿಲ್ಲೆಗಳಲ್ಲಿಯೂ ತಾಪಮಾನ ಏರಿಕೆ ಕಂಡಿದೆ. ಶಿವಮೊಗ್ಗದಲ್ಲಿ 40.2 ಡಿಗ್ರಿ ಸೆಲ್ಸಿಯಸ್, ಚಿಕ್ಕಮಗಳೂರಿನಲ್ಲಿ 40.8 ಡಿಗ್ರಿ ಸೆಲ್ಸಿಯಸ್, ಉತ್ತರ ಕನ್ನಡದಲ್ಲಿ 40.9 ಡಿಗ್ರಿ ಸೆಲ್ಸಿಯಸ್ ಗರಿಷ್ಠ ಉಷ್ಣಾಂಶ ವರದಿಯಾಗಿದೆ.

ಮುಂದಿನ ಎರಡು ದಿನಗಳು ಉತ್ತರ ಒಳನಾಡಿನ ಕಲಬುರಗಿ, ಬಾಗಲಕೋಟೆ, ಬೀದರ್ ಮತ್ತು ಕೊಪ್ಪಳ ಜಿಲ್ಲೆಯಲ್ಲಿ ಬಿಸಿ ಗಾಳಿ ಬೀಸುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಮುಂದಿನ ಐದು ದಿನಗಳಲ್ಲಿ ಒಳನಾಡಿನ ಒಂದೆರಡು ಕಡೆ ಗರಿಷ್ಠ ತಾಪಮಾನವು 2–3 ಡಿಗ್ರಿ ಸೆಲ್ಸಿಯಸ್ ಹೆಚ್ಚಳವಾಗುವ ಸಾಧ್ಯತೆಯಿದೆ.

‘ಕಳೆದ ಐದು ವರ್ಷಗಳಿಗೆ ಹೋಲಿಸಿದರೆ ಈ ವರ್ಷ ಅತ್ಯಧಿಕ ತಾಪಮಾನ ಹೊಂದಿದ ವರ್ಷವಾಗಿದೆ. ರಾಜ್ಯದ ಹಲವಾರು ಭಾಗಗಳಲ್ಲಿ, ಅದರಲ್ಲಿಯೂ ಉತ್ತರ ಒಳನಾಡಿನಲ್ಲಿ 40 ಡಿಗ್ರಿ ಸೆಲ್ಸಿಯಸ್‌ಕ್ಕಿಂತ ಹೆಚ್ಚಿನ ತಾಪಮಾನ ವರದಿಯಾಗಿದೆ’ ಎಂದು ಹವಾಮಾನ ಇಲಾಖೆ ಅಧಿಕಾರಿ ಎ.ಪ್ರಸಾದ್ ತಿಳಿಸಿದರು.

ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ವಿ. ರಶ್ಮಿ ಮಹೇಶ್, ‘ಕರ್ನಾಟಕ ಮಾತ್ರವಲ್ಲದೆ ಇಡೀ ಭಾರತದಲ್ಲಿ ತಾಪಮಾನ ಏರಿಕೆಯಾಗಿದೆ. ಏಪ್ರಿಲ್ ಮೂರನೇ ವಾರದವರೆಗೂ ತಾಪಮಾನವು ಸಾಮಾನ್ಯಕ್ಕಿಂತ 2 ಡಿಗ್ರಿ ಸೆಲ್ಸಿಯಸ್ ನಷ್ಟು ಹೆಚ್ಚಳ ಇರುವ ಸಾಧ್ಯತೆಯಿದೆ. ಆ ಮೇಲೆ ಗರಿಷ್ಠ ಮಟ್ಟಕ್ಕೆ ತಲುಪಿ, ಮೇ ವೇಳೆಗೆ ಕಡಿಮೆ ಆಗಬಹುದು’ ಎಂದು ಹೇಳಿದರು.

ಗುರುವಾರದ ಗರಿಷ್ಠ ಉಷ್ಣಾಂಶ (ಡಿಗ್ರಿ ಸೆಲ್ಸಿಯಸ್‌ನಲ್ಲಿ)

ಎಲ್ಲಿ	ಎಷ್ಟು?
ರಾಯಚೂರು	44.3
ಬಳ್ಳಾರಿ	43.3
ಕಲಬುರಗಿ, ಬಾಗಲಕೋಟೆ, ಯಾದಗಿರಿ	42.5
ತುಮಕೂರು	41.8
ಬೀದರ್	42.4
ವಿಜಯಪುರ	42
ಬೆಳಗಾವಿ	41.2
ಗದಗ	41
ಕೊಪ್ಪಳ	41.8
ವಿಜಯನಗರ	40

ನಗರದಲ್ಲಿ ಗರಿಷ್ಠ ತಾಪಮಾನ

ಬೆಂಗಳೂರು: ನಗರದ ವಾತಾವರಣದಲ್ಲಿ ಉಷ್ಣತೆ ಹೆಚ್ಚಳವಾಗುತ್ತಿದ್ದು, ಗುರುವಾರ (ಮಾ.28) ಗರಿಷ್ಠ ತಾಪಮಾನ 37.9 ಡಿಗ್ರಿ ಸೆಲ್ಸಿಯಸ್‌ಗೆ ತಲುಪಿದೆ. ಇದು ಕಳೆದ ಏಳು ವರ್ಷಗಳಲ್ಲಿ ಈ ದಿನ ವರದಿಯಾದ ಗರಿಷ್ಠ ತಾಪಮಾನವಾಗಿದೆ.

ಈ ತಿಂಗಳು ನಗರದ ತಾಪಮಾನದಲ್ಲಿ ಭಾರಿ ಹೆಚ್ಚಳವಾಗಿದ್ದು, ಕಳೆದೊಂದು ವಾರದಿಂದ ಗರಿಷ್ಠ ತಾಪಮಾನ 36 ಡಿಗ್ರಿ ಸೆಲ್ಸಿಯಸ್, ಕನಿಷ್ಠ ತಾಪಮಾನ 22 ಡಿಗ್ರಿ ಸೆಲ್ಸಿಯಸ್ ವರದಿಯಾಗಿದೆ. ಹವಾಮಾನ ಇಲಾಖೆಯ ಪ್ರಕಾರ ಮುಂದಿನ ನಾಲ್ಕು ದಿನಗಳು ಸಹ ಗರಿಷ್ಠ ಹಾಗೂ ಕನಿಷ್ಠ ತಾಪಮಾನ ಇಷ್ಟೇ ಪ್ರಮಾಣದಲ್ಲಿ ಇರುವ ಸಾಧ್ಯತೆಯಿದೆ.

ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ಮೇಲ್ವಿಚಾರಣಾ ಕೇಂದ್ರದ ಪ್ರಕಾರ 2017ರ ಮಾ.28ರಂದು 37.4 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ವರದಿಯಾಗಿತ್ತು. 2018ರಲ್ಲಿ ಈ ದಿನ 36.6 ಡಿಗ್ರಿ ಸೆಲ್ಸಿಯಸ್, 2019ರಲ್ಲಿ 37.5 ಡಿಗ್ರಿ ಸೆಲ್ಸಿಯಸ್, 2020ರಲ್ಲಿ 37.1 ಡಿಗ್ರಿ ಸೆಲ್ಸಿಯಸ್, 2021ರಲ್ಲಿ 37.4 ಡಿಗ್ರಿ ಸೆಲ್ಸಿಯಸ್, 2022ರಲ್ಲಿ 36.7 ಡಿಗ್ರಿ ಸೆಲ್ಸಿಯಸ್ ಹಾಗೂ 2023ರಲ್ಲಿ 36.9 ಡಿಗ್ರಿ ಸೆಲ್ಸಿಯಸ್ ವರದಿಯಾಗಿದೆ.

ಐದು ವರ್ಷದಲ್ಲಿ ಸುರೇಶ್ ಆಸ್ತಿ ₹254 ಕೋಟಿ ಏರಿಕೆ; ಕುಟುಂಬದವರಿಗೇ ₹44 ಕೋಟಿ ಸಾಲ, ಸ್ವಂತ ಕಾರು ಇಲ್ಲ

ಡಿ.ಕೆ. ಸುರೇಶ್ ₹593 ಕೋಟಿ ಒಡೆಯ

ಪ್ರಜಾವಾಣಿ ವಾರ್ತೆ

ರಾಮನಗರ: ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ. ಸುರೇಶ್ ಅವರು ₹106.71 ಕೋಟಿ ಚರಾಸ್ತಿ ಹಾಗೂ ₹ 486.33 ಕೋಟಿ ಸ್ಥಿರಾಸ್ತಿಯೊಂದಿಗೆ ಒಟ್ಟು ₹593.05 ಕೋಟಿ ಒಡೆಯ.

ಕಳೆದ ಐದು ವರ್ಷಗಳಲ್ಲಿ ಅವರ ಆಸ್ತಿಯ ಮೌಲ್ಯ ₹254.19 ಕೋಟಿಯಷ್ಟು ಏರಿಕೆಯಾಗಿದೆ. ಆದರೂ, ಕಾಂಗ್ರೆಸ್ ಅಭ್ಯರ್ಥಿ ಬಳಿ ಸ್ವಂತ ಕಾರು ಇಲ್ಲ!

2019ರಲ್ಲಿ ಅವರು ₹338.86 ಕೋಟಿ ಆಸ್ತಿ ಘೋಷಿಸಿಕೊಂಡಿದ್ದರು. 2014ರ ಚುನಾವಣೆಯಲ್ಲಿ ಘೋಷಿಸಿಕೊಂಡಿದ್ದ ಆಸ್ತಿ ₹85.87 ಕೋಟಿ. ಅದಕ್ಕೆ ಹೋಲಿಸಿದರೆ, ಹತ್ತು ವರ್ಷಗಳಲ್ಲಿ ಅವರ ಆಸ್ತಿಯ ಮೌಲ್ಯ ₹507.18 ಕೋಟಿ ಹೆಚ್ಚಳವಾಗಿದೆ.

ತಾಯಿ ಗೌರಮ್ಮ ಅವರಿಗೆ ₹4.75 ಕೋಟಿ, ಸಹೋದರ ಡಿ.ಕೆ.ಶಿವಕುಮಾರ್ ಅವರಿಗೆ ₹30.08 ಕೋಟಿ, ಡಿಕೆಶಿ ಪುತ್ರಿ ಐಶ್ವರ್ಯಾ ಹೆಗ್ಡೆಗೆ ₹7.94 ಕೋಟಿ ಹಾಗೂ ಪುತ್ರ ಆಕಾಶ್ ಕೆಂಪೇಗೌಡಗೆ ₹1.06 ಕೋಟಿ ಸೇರಿದಂತೆ ಕುಟುಂಬ ಸದಸ್ಯರಿಗೆ ₹43.83 ಕೋಟಿ ಸಾಲ ಕೊಟ್ಟಿದ್ದಾರೆ. ಇಷ್ಟು ಸಾಲ ಕೊಟ್ಟಿರುವ ಸುರೇಶ್ ಸ್ವತಃ ₹150 ಕೋಟಿ ಸಾಲಗಾರ!

ಡಿ.ಕೆ.ಸುರೇಶ್ ಅವರು 21 ಕಡೆ ₹32.75 ಕೋಟಿ ಮೌಲ್ಯದ 72 ಎಕರೆಗೂ ಹೆಚ್ಚು ಕೃಷಿ ಭೂಮಿ ಹೊಂದಿದ್ದಾರೆ. ಬೆಂಗಳೂರು, ಕನಕಪುರ, ಆನೇಕಲ್ ಸೇರಿದಂತೆ 27 ಕಡೆ ₹210.47 ಕೋಟಿ ಮೌಲ್ಯದ ಕೃಷಿಯೇತರ ಭೂಮಿ ಇವರ ಒಡೆತನದಲ್ಲಿದೆ.

ಬೆಂಗಳೂರಿನ ಗ್ಲೋಬಲ್ ಮಾಲ್‌ನಲ್ಲಿ ಸುಮಾರು 40 ಸಾವಿರ ಚದರ ಅಡಿ ಜಾಗ ಸೇರಿ ಒಟ್ಟು ಒಂಬತ್ತು ವಾಣಿಜ್ಯ ಕಟ್ಟಡ ಹೊಂದಿದ್ದಾರೆ. ಇವುಗಳ ಮಾರುಕಟ್ಟೆ ಮೌಲ್ಯವೇ ₹211.97 ಕೋಟಿ. ಬೆಂಗಳೂರಿನ ಸದಾಶಿವನಗರದಲ್ಲಿರುವ ಮನೆ ಸೇರಿದಂತೆ ಸುರೇಶ್ ಬಳಿ ₹ 27.13 ಕೋಟಿ ಮೌಲ್ಯದ ಮೂರು ಮನೆಗಳಿವೆ. 1,260 ಗ್ರಾಂ ಚಿನ್ನಾಭರಣ ಮತ್ತು 4.86 ಕೆ.ಜಿ ಬೆಳ್ಳಿ ಇದೆ. ಇವುಗಳ ಮೌಲ್ಯ ₹23.45 ಲಕ್ಷ.

ದ್ವಿತೀಯ ಪಿಯು ಓದಿರುವ ಅವರು ಮೂಲತಃ ಕೃಷಿಕ. ಅದರೊಂದಿಗೆ ಉದ್ಯಮಿ ಹಾಗೂ ಸಮಾಜ ಸೇವಕ ಎಂದು ಘೋಷಿಸಿಕೊಂಡಿದ್ದು, 31 ಪುಟಗಳಲ್ಲಿ ತಮ್ಮ ಆಸ್ತಿ ವಿವರಗಳನ್ನು ಸಲ್ಲಿಸಿದ್ದಾರೆ.

ರಾಮನಗರದಲ್ಲಿ ಗುರುವಾರ ನಾಮಪತ್ರ ಸಲ್ಲಿಸಿದ ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ. ಸುರೇಶ್ ಅವರು ಬಹಿರಂಗ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ತಬ್ಬಿಕೊಂಡರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವೇದಿಕೆಯಲ್ಲಿದ್ದರು (ಎಡಚಿತ್ರ) ಹಾಸನ ಲೋಕಸಭಾ ಕ್ಷೇತ್ರದ ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿಯಾಗಿ ಪ್ರಜ್ವಲ್ ರೇವಣ್ಣ ಗುರುವಾರ ಚುನಾವಣಾಧಿಕಾರಿ ಸಿ.ಸತ್ಯಭಾಮಾ ಅವರಿಗೆ ನಾಮಪತ್ರ ಸಲ್ಲಿಸಿದರು. ಶಾಸಕರಾದ ಎ.ಮಂಜು, ಸಿ.ಎನ್. ಬಾಲಕೃಷ್ಣ, ಎಚ್.ಡಿ. ರೇವಣ್ಣ, ಸ್ವರೂಪ್ ಪ್ರಕಾಶ್ ಇದ್ದರು.

ಪ್ರಜ್ವಲ್ ರೇವಣ್ಣ ಒಟ್ಟು ಆಸ್ತಿ ₹40.94 ಕೋಟಿ

ಹಾಸನ: ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿ ಪ್ರಜ್ವಲ್ ರೇವಣ್ಣ, ₹5.54 ಕೋಟಿ ಮೌಲ್ಯದ ಚರಾಸ್ತಿ ಹಾಗೂ ₹35.40 ಕೋಟಿ ಮೌಲ್ಯದ ಸ್ಥಿರಾಸ್ತಿ ಹೊಂದಿದ್ದಾರೆ. 2019ರಿಂದ ಇಲ್ಲಿವರೆಗೆ ಅವರ ಸ್ಥಿರಾಸ್ತಿ ಮೌಲ್ಯ ಏಳು ಪಟ್ಟು ಹೆಚ್ಚಾಗಿದೆ. 2019ರಲ್ಲಿ ₹1.64 ಕೋಟಿ ಮೌಲ್ಯದ ಚರಾಸ್ತಿ ಹಾಗೂ ₹4.89 ಕೋಟಿ ಮೌಲ್ಯದ ಸ್ಥಿರಾಸ್ತಿ ಘೋಷಣೆ ಮಾಡಿದ್ದರು.

ಜೆಡಿಎಸ್–ಬಿಜೆಪಿ ಮೈತ್ರಿಕೂಟದ ಅಭ್ಯರ್ಥಿಯಾಗಿ ಗುರುವಾರ ನಾಮಪತ್ರದೊಂದಿಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ, 1,110 ಗ್ರಾಂ ಚಿನ್ನಾಭರಣ, 23 ಕೆ.ಜಿ. ಬೆಳ್ಳಿ, 0.579 ಕ್ಯಾರೆಟ್‌ನ ವಜ್ರ, ಒಂದು ಪಿಸ್ತೂಲ್, ಒಂದು ರೈಫಲ್, 31 ಹಸುಗಳು, 4 ಎತ್ತುಗಳು, ಒಂದು ಟ್ರ್ಯಾಕ್ಟರ್ ಸೇರಿದಂತೆ ₹5.54 ಕೋಟಿ ಮೌಲ್ಯದ ಚರಾಸ್ತಿ ಹಾಗೂ ₹ 35.40 ಕೋಟಿ ಮೌಲ್ಯದ ಸ್ಥಿರಾಸ್ತಿಯನ್ನು ಪ್ರಜ್ವಲ್ ಘೋಷಿಸಿದ್ದಾರೆ.

ಅಜ್ಜಿ ಚನ್ನಮ್ಮ ಅವರಿಗೆ ₹23 ಲಕ್ಷ ಹಾಗೂ ಸಹೋದರ ಸೂರಜ್ ರೇವಣ್ಣ ಅವರಿಗೆ ₹1.56 ಕೋಟಿ ಸಾಲ ನೀಡಿದ್ದಾರೆ.

ಕುಪೇಂದ್ರ ರೆಡ್ಡಿ ಅವರಿಂದ ₹1 ಕೋಟಿ, ಎಚ್.ಡಿ.ರೇವಣ್ಣ ಅವರಿಂದ ₹86.21 ಲಕ್ಷ, ಫಿಜಾ ಡೆವಲಪರ್ಸ್ ಆಂಡ್ ಇನ್ಫ್ರಾ ಸ್ಟ್ರಕ್ಚರ್‌ನಿಂದ ₹2 ಕೋಟಿ ಸಾಲ ಪಡೆದಿದ್ದು, ಒಟ್ಟು ₹4.48 ಕೋಟಿ ಸಾಲವಿದೆ ಎಂದು ತಿಳಿಸಿದ್ದಾರೆ. 2019ರಲ್ಲಿ ₹3.72 ಕೋಟಿ ಸಾಲ ಘೋಷಿಸಿದ್ದರು.

ನಾಮಪತ್ರ ಸಲ್ಲಿಕೆ: ಪ್ರಜ್ವಲ್ ಅವರು ದೇಗುಲಗಳಲ್ಲಿ ಪೂಜೆ ಸಲ್ಲಿಸಿ, ಶಾಸಕರಾದ ಎಚ್.ಡಿ.ರೇವಣ್ಣ, ಎ.ಮಂಜು, ಸಿ.ಎನ್. ಬಾಲಕೃಷ್ಣ, ಸ್ವರೂಪ್ ಪ್ರಕಾಶ್ ಅವರೊಂದಿಗೆ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ, ಚುನಾವಣಾಧಿಕಾರಿ ಸಿ.ಸತ್ಯಭಾಮಾ ಅವರಿಗೆ ನಾಮಪತ್ರ ಸಲ್ಲಿಸಿದರು.

ಹರದನಹಳ್ಳಿಯಲ್ಲಿದ್ದ ತಾತ ಎಚ್.ಡಿ.ದೇವೇಗೌಡರ ಆಶೀರ್ವಾದ ಪಡೆದು, ಸೂಚಕರಾಗಿ ದೇವೇಗೌಡರು ಸಹಿ ಹಾಕಿದ್ದ ನಾಮಪತ್ರವನ್ನು ಸಲ್ಲಿಸಿದರು.

‘ಏ.4 ರಂದು ಬಿ.ಎಸ್.ಯಡಿಯೂರಪ್ಪ ಸೇರಿ ಬಿಜೆಪಿ ನಾಯಕರ ಜೊತೆಗೂಡಿ ಮತ್ತೆ ನಾಮಪತ್ರ ಸಲ್ಲಿಸುವೆ’ ಎಂದು ತಿಳಿಸಿದರು.

ಬರಿಗಾಲಲ್ಲಿ ಬಂದ ರೇವಣ್ಣ: ಪುತ್ರ ಪ್ರಜ್ವಲ್ ನಾಮಪತ್ರ ಸಲ್ಲಿಕೆ ಸಂದರ್ಭದಲ್ಲಿ ಶಾಸಕ ಎಚ್.ಡಿ. ರೇವಣ್ಣ ಬರಿಗಾಲಲ್ಲಿ ಜಿಲ್ಲಾಧಿಕಾರಿ ಕಚೇರಿಗೆ ಬಂದರು. ಜಿಲ್ಲಾಧಿಕಾರಿ ಕಚೇರಿ ಕಾಂಪೌಂಡ್ ಹೊರಗೆ ಕಾರು ನಿಲ್ಲಿಸಿ, ಅಲ್ಲಿಂದ ಬರಿಗಾಲಲ್ಲಿ ನಡೆದು ಬಂದರು.

ಮುಖ್ಯಾಂಶಗಳು

- ಸುರೇಶ್ ತಲೆ ಮೇಲಿದೆ ₹150 ಕೋಟಿ ಸಾಲ
- ದ್ವಿತೀಯ ಪಿಯುವರೆಗೆ ವಿದ್ಯಾಭ್ಯಾಸ
- 31 ಪುಟಗಳಲ್ಲಿ ತಮ್ಮ ಆಸ್ತಿ ವಿವರ

ಕಾಂಗ್ರೆಸ್ ಅಭ್ಯರ್ಥಿ ಮೇಲೆ 3 ಪ್ರಕರಣ

ಚುನಾವಣಾ ಅಧಿಕಾರಿಗೆ ನಾಮಪತ್ರ ಸಲ್ಲಿಸಿದ ವೇಳೆ ನೀಡಿರುವ ಪ್ರಮಾಣಪತ್ರದಲ್ಲಿ ತಮ್ಮ ಮೇಲೆ ಮೂರು ಪ್ರಕರಣಗಳವೆ ಎಂದು ಡಿ.ಕೆ.ಸುರೇಶ್ ನಮೂದಿಸಿದ್ದಾರೆ.

2022ರಲ್ಲಿ ನಡೆದ ಮೇಕೆದಾಟು ಪಾದಯಾತ್ರೆ ಸಂದರ್ಭದಲ್ಲಿ ಕೋವಿಡ್ ನಿಯಮ ಉಲ್ಲಂಘನೆ ಆರೋಪದ ಮೇಲೆ ಕನಕಪುರ ಟೌನ್, ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ತಲಾ ಒಂದು ಪ್ರಕರಣವಿದೆ. ಮೊದಲೆರಡು ಪ್ರಕರಣಗಳಲ್ಲಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದಾರೆ. ಮತ್ತೊಂದು ಪ್ರಕರಣದಲ್ಲಿ ‘ಬಿ’ ರಿಪೋರ್ಟ್ ಸಲ್ಲಿಕೆಯಾಗಿದೆ.

ಮಾದಾರ ಚೆನ್ನಯ್ಯ ಸ್ವಾಮೀಜಿ ಟಿಕೆಟ್ ಕೇಳಿಲ್ಲ: ಕಾರಜೋಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾದಾರ ಚೆನ್ನಯ್ಯ ಸ್ವಾಮೀಜಿ ಯಾವತ್ತೂ ಕೂಡ ರಾಜಕೀಯಕ್ಕೆ ಬರುತ್ತೇನೆ, ತಮಗೆ ಟಿಕೆಟ್ ಕೊಡಿ ಎಂದು ಕೇಳಿಲ್ಲ’ ಎಂದು ಚಿತ್ರದುರ್ಗದ ಬಿಜೆಪಿ ಅಭ್ಯರ್ಥಿ ಗೋವಿಂದ ಕಾರಜೋಳ ಹೇಳಿದರು.

‘ಸ್ವಾಮೀಜಿಯವರು ಧರ್ಮದ ಕೆಲಸ ಮಾಡಿಕೊಂಡು, ಮಠದ ಅಭಿವೃದ್ಧಿ ಮಾಡಿಕೊಂಡು ಭಕ್ತರ ಬೇಕು ಬೇಡಗಳಿಗೆ ಸ್ಪಂದಿಸಿ ಕೆಲಸ ಮಾಡುವ ಇಚ್ಛೆಯಲ್ಲಿದ್ದಾರೆ. ಆದ್ದರಿಂದ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ನೀಡಬೇಕು ಎನ್ನುವ ಚಿಂತನೆ ಇತ್ತು ಎನ್ನುವ ವಿಚಾರವೇ ಅಪ್ರಸ್ತುತ’ ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಚಿತ್ರದುರ್ಗ ಲೋಕಸಭಾ ಕ್ಷೇತ್ರದಲ್ಲಿ ಮಾದಾರ ಚೆನ್ನಯ್ಯ ಸ್ವಾಮೀಜಿ ಚುನಾವಣೆಗೆ ಸ್ಪರ್ಧಿಸಲು ಒಲವು ತೋರದ ಕಾರಣ ನನಗೆ ಟಿಕೆಟ್ ಸಿಕ್ಕಿದೆ ಎನ್ನುವ ಮಾತು ಸರಿಯಲ್ಲ. ಆರಂಭದಲ್ಲಿ ನನ್ನ ಹೆಸರು ಇರಲಿಲ್ಲ ಎನ್ನುವುದು ನಿಜ. ಹಾಲಿ ಸಂಸದರು ನಿರಾಸಕ್ತಿ ತೋರಿದ್ದರಿಂದ ವರಿಷ್ಠರು ನನ್ನನ್ನು ಕಣಕ್ಕೆ ಇಳಿಸಿದ್ದಾರೆ. ಆಕಾಂಕ್ಷಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡುತ್ತೇನೆ’ ಎಂದು ಅವರು ಹೇಳಿದರು.

‘ಹಾಲಿ ಸಂಸದ ನಾರಾಯಣಸ್ವಾಮಿ ಅವರು ರಾಷ್ಟ್ರ ರಾಜಕಾರಣಕ್ಕಿಂತ ರಾಜ್ಯ ರಾಜಕಾರಣದ ಬಗ್ಗೆ ಹೆಚ್ಚಿನ ಒಲವು ಹೊಂದಿದ್ದಾರೆ. ಆದ್ದರಿಂದ, ಅವರು ಸ್ಪರ್ಧೆ ಮಾಡುವುದಿಲ್ಲ. ಚಿತ್ರದುರ್ಗ ಜಿಲ್ಲೆಯ ಶಾಸಕರು, ಮಾಜಿ ಶಾಸಕರು ಮತ್ತು ಪದಾಧಿಕಾರಿಗಳು ಗೋವಿಂದ ಕಾರಜೋಳ ಅನುಭವಸ್ಥರು, 30 ವರ್ಷಗಳಿಂದ ಅವರನ್ನು ನೋಡಿದ್ದೇವೆ. ಅವರು ಸ್ಪರ್ಧಿಸುವುದು ಒಳಿತು ಎಂದು ನನ್ನ ಹೆಸರು ಶಿಫಾರಸು ಮಾಡಿದರು. ಪಕ್ಷದ ವರಿಷ್ಠರೂ ಅದಕ್ಕೆ ಸಹಮತ ನೀಡಿ ಚಿತ್ರದುರ್ಗದ ಅಭ್ಯರ್ಥಿಯಾಗಿ ಘೋಷಣೆ ಮಾಡಿದ್ದಾರೆ’ ಎಂದರು.

‘ಪಕ್ಷದಲ್ಲಿ ಸಾಕಷ್ಟು ಯುವಕರಿದ್ದಾರೆ. ಅವರು ಚುನಾವಣೆಯಲ್ಲಿ ನಿಲ್ಲಬೇಕು. ಟಿಕೆಟ್ ಕೊಡಿ ಎಂದು ಅವರು ಕೇಳಿದ್ದರಲ್ಲಿ ತಪ್ಪೇನಿಲ್ಲ. ಸಾಕಷ್ಟು ಸಮಯ ಕೆಲಸ ಮಾಡಿದವರೂ ಟಿಕೆಟ್ ಸಿಗಬೇಕು ಎಂದು ಕೇಳುತ್ತಾರೆ. ಪಕ್ಷದ ವರಿಷ್ಠರು ತೀರ್ಮಾನ ಮಾಡಿದ ನಂತರ ಎಲ್ಲರೂ ಒಟ್ಟಾಗಿ ಪಕ್ಷವನ್ನು ಗೆಲ್ಲಿಸುವ ಕೆಲಸ ಮಾಡಲಿದ್ದಾರೆ. ಖಂಡಿತವಾಗಿ ನನ್ನ ಗೆಲುವಿಗೆ ಅವರೆಲ್ಲರೂ ಸಹಕರಿಸಿ ಕೆಲಸ ಮಾಡಲಿದ್ದಾರೆ ಎನ್ನುವ ವಿಶ್ವಾಸವಿದೆ’ ಎಂದು ಕಾರಜೋಳ ಹೇಳಿದರು.

ಕಾರ್ಯಕರ್ತರಿಗೆ ಪಕ್ಷ ತಾಯಿ ಇದ್ದಂತೆ. ಪಕ್ಷದ ಆದೇಶಗಳನ್ನು ಧಿಕ್ಕರಿಸುವ ಶಕ್ತಿ ನಮಗಿರುವುದಿಲ್ಲ. ತಾಯಿಯ ಮಾತುಗಳನ್ನು ಕೇಳಿದಂತೆ ಪಕ್ಷದ ನಿರ್ಣಯಗಳನ್ನು ಗೌರವಿಸುತ್ತೇವೆ
ಗೋವಿಂದ ಕಾರಜೋಳ, ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ

ಡಾ.ಮಂಜುನಾಥ್ ವಿರುದ್ಧ ಮತ್ತೊಬ್ಬ ಸಿ.ಎನ್. ಮಂಜುನಾಥ್ ಸ್ಪರ್ಧೆ!

ಪ್ರಜಾವಾಣಿ ವಾರ್ತೆ

ರಾಮನಗರ: ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಡಾ. ಸಿ.ಎನ್. ಮಂಜುನಾಥ್ ಅವರು ಸ್ಪರ್ಧಿಸಿದ್ದಾರೆ. ಈಗ ಅದೇ ಹೆಸರಿನ ಮತ್ತೊಬ್ಬರು ಸ್ಪರ್ಧೆಗೆ ಸಿದ್ಧತೆ ನಡೆಸಿದ್ದಾರೆ. ಸಿ.ಎನ್. ಮಂಜುನಾಥ್ ಹೆಸರಿನ ಇವರು ಚನ್ನರಾಯಪಟ್ಟಣದವರೇ ಎಂಬುದು ವಿಶೇಷ.

ಚನ್ನರಾಯಪಟ್ಟಣದ ತಾಲ್ಲೂಕು ಪಂಚಾಯಿತಿ ಮತ್ತು ಪುರಸಭೆ ಮಾಜಿ ಸದಸ್ಯರಾದ ಸಿ.ಎನ್.ಮಂಜುನಾಥ್ ಪಟ್ಟಣದ ಶಾರದಾ ನಗರ ನಿವಾಸಿ. ದಲಿತ ಸೇನಾ ಪಡೆ ಜಿಲ್ಲಾ ಘಟಕದ ಅಧ್ಯಕ್ಷರಾಗಿದ್ದು, ಕಾಂಗ್ರೆಸ್, ಜೆಡಿಎಸ್ ಹಾಗೂ ಬಿಎಸ್‌ಪಿ ಕಾರ್ಯಕರ್ತರಾಗಿ ಕೆಲಸ ಮಾಡಿದ್ದಾರೆ. ಈಗ ಇದೀಗ ಗ್ರಾಮಾಂತರ ಕ್ಷೇತ್ರದಲ್ಲಿ ಏಪ್ರಿಲ್ 2ರಂದು ನಾಮಪತ್ರ ಸಲ್ಲಿಸಲು ಸಿದ್ಧತೆ ಮಾಡಿಕೊಂಡಿದ್ದಾರೆ.

‘30 ವರ್ಷಗಳಿಂದ ನಾನು ಎಲ್ಲಾ ಪಕ್ಷಗಳಲ್ಲೂ ಕೆಲಸ ಮಾಡಿದ್ದೇನೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಎಸ್‌ಪಿಯಿಂದ ಸ್ಪರ್ಧೆಗೆ ಅವಕಾಶ ಕೊಡುವುದಾಗಿ ಹೇಳಿ ಕೈ ಕೊಟ್ಟರು. ಹಾಗಾಗಿ, ಡಾ. ಮಂಜುನಾಥ್ ಅವರ ಸಹೋದರನಾದ ಜೆಡಿಎಸ್‌ನ ಸಿ.ಎನ್. ಬಾಲಕೃಷ್ಣ ಅವರ ಪರ ಕೆಲಸ ಮಾಡಿದ್ದೆ’ ಎಂದು ಮಂಜುನಾಥ್ ‘ಪ್ರಜಾವಾಣಿ’ಗೆ ತಿಳಿಸಿದರು. ‘ಆಮಿಷ ಅಥವಾ ಒತ್ತಡದಿಂದ ಡಾ.ಮಂಜುನಾಥ್ ಎದುರು ಸ್ಪರ್ಧಿಸುತ್ತಿದ್ದೇನೆ ಎಂಬುದು ಸುಳ್ಳು. ನನ್ನ ಹೋರಾಟ ಬಿಜೆಪಿ ವಿರುದ್ಧ. ಮಂಜುನಾಥ್ ವಿರುದ್ಧವಲ್ಲ. ಅವರು ಜೆಡಿಎಸ್‌ನಿಂದ ಸ್ಪರ್ಧಿಸಿದ್ದರೆ ನಾನು ನಿಲ್ಲುತ್ತಿರಲಿಲ್ಲ’ ಎಂದರು.

ಮೇಕೆದಾಟು ಯೋಜನೆಗೆ ಕೇಂದ್ರದ ಅನುಮತಿ: ದೇವೇಗೌಡರಿಗೆ ಸಿ.ಎಂ ಸವಾಲು

‘ಮೋದಿ ಸಹವಾಸ, ಗೌಡರಿಗೂ ಸುಳ್ಳಿನ ಖಯಾಲಿ’

ಪ್ರಜಾವಾಣಿ ವಾರ್ತೆ

ರಾಮನಗರ: ‘ಮೈತ್ರಿ ಬಳಿಕ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಮತ್ತು ನರೇಂದ್ರ ಮೋದಿ ಗಳಸ್ಯ ಕಂಠಸ್ಯ ಆಗಿದ್ದಾರೆ. ಸಹವಾಸದಿಂದ ದೇವೇಗೌಡರು ಸುಳ್ಳು ಹೇಳುವುದಕ್ಕೆ ಶುರು ಮಾಡಿದ್ದಾರೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಲೇವಡಿ ಮಾಡಿದ್ದಾರೆ.

ಗುರುವಾರ ಇಲ್ಲಿ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ. ಸುರೇಶ್ ನಾಮಪತ್ರ ಸಲ್ಲಿಕೆ ಸಂದರ್ಭದಲ್ಲಿ ಬಹಿರಂಗ ಸಭೆಯಲ್ಲಿ ಅವರು ಮಾತನಾಡಿದರು.

‘ಪ್ರಧಾನಿ ಮೋದಿ ಮತ್ತು ನನ್ನ ನಡುವೆ ಅವಿನಾಭಾವ ಸಂಬಂಧವಿದೆ ಎಂದು ಹೇಳುವ ದೇವೇಗೌಡರು ಮೇಕೆದಾಟು ಯೋಜನೆಗೆ ಕೇಂದ್ರ ಸರ್ಕಾರದಿಂದ ಅನುಮತಿ ಕೊಡಿಸಲಿ’ ಎಂದು ಸವಾಲು ಹಾಕಿದರು.

‘ಚುನಾವಣೆ ಬಳಿಕ ಎನ್‌ಡಿಎ ಸರ್ಕಾರ ಅಸ್ತಿತ್ವಕ್ಕೆ ಬಂದರೆ ಮೇಕೆದಾಟು ಯೋಜನೆ ಜಾರಿಗೆ ತರುತ್ತೇವೆ ಎಂದು ಹೇಳುತ್ತಿರುವ ದೇವೇಗೌಡರು ಅಲ್ಲಿಯವರೆಗೆ ಕಾಯದೆ ಮುಂಚೆಯೇ ಅನುಮತಿ ಕೊಡಿಸಲಿ’ ಎಂದರು.

ಕಾವೇರಿ ಜಲಾನಯನ ಪ್ರದೇಶಕ್ಕೆ ಅವರ ಕೊಡುಗೆ ಶೂನ್ಯ. ನುಡಿದಂತೆ ಎಂದಿಗೂ ನಡೆದುಕೊಂಡಿಲ್ಲ. ಈ ವಿಷಯದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಎರಡೂ ಒಂದೇ ಎಂದು ವಾಗ್ದಾಳಿ ನಡೆಸಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ‘ಪಕ್ಷಾತೀತವಾಗಿ ಮೇಕೆದಾಟು ಪಾದಯಾತ್ರೆ ಕೈಗೊಂಡಾಗ ದೇವೇಗೌಡರು ಬೆಂಬಲ ಕೊಡಲಿಲ್ಲ. ಈಗ, ಕಾವೇರಿ ಜಲಾನಯನ ಪ್ರದೇಶದಲ್ಲಿದ ಮೂರು ಕ್ಷೇತ್ರಗಳಲ್ಲಿ ಅವರ ಕುಟುಂಬದವರೇ ಸ್ಪರ್ಧಿಸಿದ್ದಾರೆ. ರೈತರು ಎಲ್ಲಿ ತಿರಸ್ಕರಿಸುತ್ತಾರೊ ಎಂಬ ಭಯದಿಂದ ಮೇಕೆದಾಟು ಯೋಜನೆಗೆ ಪಕ್ಷಾತೀತ ಹೋರಾಟ ಮಾಡಬೇಕು ಎಂದು ಹೇಳುತ್ತಿದ್ದಾರೆ’ ಎಂದು ಕುಹಕವಾಡಿದರು.

ಸುಳ್ಳೇ ಮೋದಿ ಗ್ಯಾರಂಟಿ. ಒಬ್ಬರು ಸುಳ್ಳು ಹೇಳಿದರೆ, ಮತ್ತೊಬ್ಬರು ಕಣ್ಣೀರು ಹಾಕುತ್ತಾರೆ
ಡಿ.ಕೆ. ಸುರೇಶ್, ಕಾಂಗ್ರೆಸ್ ಅಭ್ಯರ್ಥಿ

‘ಸುರೇಶ್ ಬೇಕೋ, ವೈಟ್ ಕಾಲರ್ ಡಾಕ್ಟರ್ ಬೇಕೋ?’

‘ಸುರೇಶ್ ಅವರು ಪಂಚಾಯಿತಿ ಸದಸ್ಯನಂತೆ ಕೆಲಸ ಮಾಡಿದ್ದಾರೆ. ಜನರ ನಡುವೆ ನಿಂತು ಕಷ್ಟ–ಸುಖಗಳಿಗೆ ಸ್ಪಂದಿಸುವ ಸುರೇಶ್ ಬೇಕೋ ಅಥವಾ ವೈಟ್ ಕಾಲರ್ ಡಾಕ್ಟರ್ ಮಂಜುನಾಥ್ ಬೇಕೋ ಎಂದು ಕ್ಷೇತ್ರದ ಮತದಾರರು ಈಗಾಗಲೇ ನಿರ್ಧರಿಸಿದ್ದಾರೆ. ಸುರೇಶ್ ಗೆಲುವು ಖಚಿತ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ‘ದೇವೇಗೌಡರು ಪ್ರಧಾನಿ, ಸಿ.ಎಂ ಆಗಿದ್ದರು. ಎಚ್.ಡಿ. ಕುಮಾರಸ್ವಾಮಿ ಎರಡು ಸಲ ಸಿ.ಎಂ ಆಗಿದ್ದರು. ಆದರೂ, ಈ ಕ್ಷೇತ್ರದಲ್ಲಿ ಮನೆ ಅಳಿಯನನ್ನು ಬಿಜೆಪಿಯಿಂದ ನಿಲ್ಲಿಸಿದ್ದಾರೆ’ ಎಂದು ವ್ಯಂಗ್ಯವಾಡಿದರು.

‘ಈಶ್ವರಪ್ಪ ವಿರುದ್ಧ ಸಕಾಲದಲ್ಲಿ ಕ್ರಮ’

ಶಿವಮೊಗ್ಗ: ‘ಪಕ್ಷದ ವಿರುದ್ಧ ಬಂಡೆದ್ದಿರುವ ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ವಿರುದ್ಧ ವರಿಷ್ಠರು ಸಕಾಲದಲ್ಲಿ ಕ್ರಮ ತೆಗೆದುಕೊಳ್ಳುತ್ತಾರೆ. ಆದರೆ, ಆ ಪ್ರಮೇಯ ಬರಲಾರದು ಎಂಬ ವಿಶ್ವಾಸವಿದೆ.’ ಎಂದು ಸಂಸದ ಬಿ.ವೈ. ರಾಘವೇಂದ್ರ ಹೇಳಿದರು.

‘ಚುನಾವಣೆಯಲ್ಲಿ ಈಶ್ವರಪ್ಪ ಅವರ ಸ್ವತಂತ್ರ ಸ್ಪರ್ಧೆ ಕುರಿತು ಗುರುವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ‘ತಾಳ್ಮೆ ಬಹಳ ಮುಖ್ಯ. ಪಕ್ಷದ ಹಿರಿಯರು ಅವರ ಚಟುವಟಿಕೆ ಗಮನಿಸುತ್ತಿದ್ದಾರೆ’ ಎಂದರು.

‘ಬೆಳಗಾವಿ, ದಾವಣಗೆರೆಯಲ್ಲಿ ಭಿನ್ನಮತ ಶಮನವಾಗಿದೆ. ಶಿವಮೊಗ್ಗದಲ್ಲಿ ಶೀಘ್ರ ಶಮನವಾಗಲಿದೆ’ ಎಂದು ಹೇಳಿದರು.

ಬ್ರಹ್ಮ ಮಾತ್ರವಲ್ಲ ಪ್ರಧಾನಿ ನರೇಂದ್ರ ಮೋದಿಯೇ ಬಂದು ಹೇಳಿದರೂ ಚುನಾವಣೆ ಕಣದಿಂದ ಹಿಂದಕ್ಕೆ ಸರಿಯುವುದಿಲ್ಲ. ಶಿವಮೊಗ್ಗ ಕ್ಷೇತ್ರದಿಂದ ಸ್ಪರ್ಧೆ ಶತಃಸಿದ್ಧ
ಕೆ.ಎಸ್.ಈಶ್ವರಪ್ಪ, ಮಾಜಿ ಸಚಿವ

ಎಡಗೈಗೆ ಕೋಲಾರ: ಯಾರಿಗೆ ಹಾರ?

ಒಂದನೇ ಪುಟದಿಂದ...

‘ಯಾವುದೇ ಕಾರಣಕ್ಕೂ ಮುನಿಯಪ್ಪ ಕುಟುಂಬಕ್ಕೆ ನೀಡಬಾರದು; ಕ್ಷೇತ್ರದಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿರುವ ಬಲಗೈ ಸಮುದಾಯದ ಸಿ.ಎಂ. ಮುನಿಯಪ್ಪ ಅವರಿಗೆ ನೀಡಿದರೆ ಗೆಲ್ಲಿಸಿಕೊಂಡು ಬರುತ್ತೇವೆ’ ಎಂದು ಸಚಿವ, ಶಾಸಕರ ಬಣ ಪ್ರತಿಪಾದಿಸಿತು.

‘ಪರಿಶಿಷ್ಟ ಜಾತಿಗೆ ಮೀಸಲಾದ ಐದು ಕ್ಷೇತ್ರಗಳ ಪೈಕಿ ಮೂರನ್ನು ಬಲಗೈ ಸಮುದಾಯಕ್ಕೆ ನೀಡಲಾಗಿದೆ. ಚಿತ್ರದುರ್ಗದಲ್ಲಿ ಎಡಗೈ ಸಮುದಾಯಕ್ಕೆ ನೀಡಲಾಗಿದ್ದು, ಕೋಲಾರದಲ್ಲಿ ಬಲಗೈಗೆ ನೀಡಿದರೆ ರಾಜ್ಯದ ವಿವಿಧ ಕ್ಷೇತ್ರಗಳಲ್ಲಿ ಎಡಗೈ ಸಮುದಾಯದ ಆಕ್ರೋಶಕ್ಕೆ ಎಡೆ ಮಾಡಿಕೊಡುತ್ತದೆ. ಹೀಗಾಗಿ, ಎಡಗೈಗೆ ನೀಡಬೇಕಿದೆ’ ಎಂಬ ಚರ್ಚೆಯೂ ನಡೆಯಿತು. ‘ಮುನಿಯಪ್ಪ ಕುಟುಂಬ ಬಿಟ್ಟು ಎಡಗೈ ಸಮುದಾಯದ ಯಾರಿಗಾದರೂ ಕೊಡುವ ವಿಷಯದಲ್ಲಿ ನಿಮ್ಮ ಮತ್ತು ವರಿಷ್ಠರ ತೀರ್ಮಾನಕ್ಕೆ ಬದ್ಧ’ ಎಂದು ಅಸಮಾಧಾನಿತ ಶಾಸಕರು ವಾಗ್ದಾನ ನೀಡಿದರು.

ಸಂಧಾನ ಯಶಸ್ವಿ– ಬೈರತಿ: ಸಭೆಯ ಬಳಿಕ ಮಾತನಾಡಿದ ಸಚಿವ ಬೈರತಿ ಸುರೇಶ್, ‘ಸಂಧಾನ ಸಭೆ ಯಶಸ್ವಿಯಾಗಿದೆ. ಕೋಲಾರ ಟಿಕೆಟ್ ವಿಚಾರದಲ್ಲಿ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಎಐಸಿಸಿ ತೆಗೆದುಕೊಳ್ಳುವ ತೀರ್ಮಾನಕ್ಕೆ ಬದ್ಧರಾಗುವುದಾಗಿ ಶಾಸಕರು ತಿಳಿಸಿದ್ದಾರೆ’ ಎಂದರು.

‘ಕೋಲಾರ ಟಿಕೆಟ್ ಅಂತಿಮವಾಗಿದೆ ಎಂಬ ಕಾರಣಕ್ಕೆ ಶಾಸಕರಲ್ಲಿ ಗೊಂದಲ ಉಂಟಾಗಿತ್ತು. ಸಭೆಯಲ್ಲಿ ಯಾವುದೇ ವ್ಯಕ್ತಿಯ ಹೆಸರು ಪ್ರಸ್ತಾಪ ಆಗಿಲ್ಲ. ಎಲ್ಲ ಶಾಸಕರಿಂದ ವೈಯಕ್ತಿಕ ಅಭಿಪ್ರಾಯ ಕೇಳಿದ್ದಾರೆ’ ಎಂದೂ ಹೇಳಿದರು.

ಹೈಕಮಾಂಡ್ ತೀರ್ಮಾನಕ್ಕೆ ಬದ್ಧ: ಸಚಿವ ಡಾ. ಎಂ.ಸಿ. ಸುಧಾಕರ್, ‘ನಮ್ಮ ಅಭಿಪ್ರಾಯಗಳನ್ನು ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಪಡೆದಿದ್ದಾರೆ. ಭಿನ್ನಾಭಿಪ್ರಾಯಗಳಿದ್ದರೂ ಸರಿಪಡಿಸುವುದಾಗಿ ತಿಳಿಸಿದ್ದಾರೆ’ ಎಂದರು.

‘ನಮ್ಮಿಂದ ಪಕ್ಷಕ್ಕೆ ಹಾನಿಯಾಗಲು ಬಿಡುವುದಿಲ್ಲ. ಪಕ್ಷದ ಆದೇಶಕ್ಕೆ ಗೌರವ ಕೊಟ್ಟು ಅವರು ಹೇಳಿದಂತೆ ನಡೆದುಕೊಳ್ಳುತ್ತೇವೆ. ರಾಜೀನಾಮೆ ನೀಡಲು ಮುಂದಾಗಿರುವುದಕ್ಕೆ ವಿಷಾದ ವ್ಯಕ್ತಪಡಿಸುತ್ತೇವೆ’ ಎಂದರು. ‘ಪಕ್ಷದ ಹಿತದೃಷ್ಟಿ ನಮಗೆ ಮುಖ್ಯ. ಆಕಾಂಕ್ಷಿಗಳ ಬಗ್ಗೆ ಚರ್ಚೆ ಆಗಿಲ್ಲ. ಸಮಸ್ಯೆಗಳನ್ನು ಆಲಿಸಿದ್ದಾರೆ. ಅವರು ಏನೇ ತೀರ್ಮಾನ ಮಾಡಿದರೂ ನಾವು ಅದಕ್ಕೆ ಬದ್ಧ’ ಎಂದು ಹೇಳಿದರು.

ಕೋಲಾರ ಶಾಸಕ ಕೊತ್ತೂರು ಮಂಜುನಾಥ್, ಮಾಲೂರು ಕೆ.ವೈ. ನಂಜೇಗೌಡ, ವಿಧಾನ ಪರಿಷತ್ ಸದಸ್ಯರಾದ ಅನಿಲ್ ಕುಮಾರ್, ನಸೀರ್ ಅಹ್ಮದ್ ಹಾಗೂ ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ಸಭೆಯಲ್ಲಿ ಭಾಗವಹಿಸಿದ್ದರು.

ಕೋಲಾರದಲ್ಲಿ ಎಲ್ಲ ನಾಯಕರು ಒಟ್ಟಾಗಿ ಕಾಂಗ್ರೆಸ್ ಅಭ್ಯರ್ಥಿ ಗೆಲುವಿಗೆ ಕೆಲಸ ಮಾಡಲಿದ್ದಾರೆ. ಯಾರ ವೈಯಕ್ತಿಕ ಪ್ರತಿಷ್ಠೆಗೂ ಅವಕಾಶ ನೀಡುವುದಿಲ್ಲ
ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ

ಅಳಿಯನಿಗೆ ಟಿಕೆಟ್: ಮುನಿಯಪ್ಪ ಪಟ್ಟು

ಅಳಿಯ ಹಾಗೂ ಪುತ್ರಿ ಜೊತೆ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಯನ್ನು ಭೇಟಿ ಮಾಡಿದ ಕೆ.ಎಚ್. ಮುನಿಯಪ್ಪ, ತಮ್ಮ ಅಳಿಯನಿಗೆ ಟಿಕೆಟ್‌ಗೆ ಬೇಡಿಕೆ ಇಟ್ಟಿದ್ದಾರೆ. ಈ ವೇಳೆ ಗೃಹ ಸಚಿವ ಜಿ. ಪರಮೇಶ್ವರ ಕೂಡ ಇದ್ದರು. ‘ಅಳಿಯನಿಗೆ ಟಿಕೆಟ್ ನೀಡಿದರೆ ಗೆಲ್ಲಿಸಿಕೊಂಡು ಬರುತ್ತೇನೆ. ಆದರೆ, ಟಿಕೆಟ್ ವಿಚಾರವಾಗಿ ಅನಗತ್ಯವಾಗಿ ಗೊಂದಲ ಸೃಷ್ಟಿಸುತ್ತಿದ್ದಾರೆ. ರಾಜೀನಾಮೆ ನೀಡುವ ನಾಟಕ ಮಾಡುತ್ತಿದ್ದಾರೆ’ ಎಂದು ಮುನಿಯಪ್ಪ ಹೇಳಿದ್ದಾರೆ. ಅದಕ್ಕೆ, ‘ಟಿಕೆಟ್ ವಿಷಯದಲ್ಲಿ ಜಿಲ್ಲೆಯ ಶಾಸಕರು, ಸಚಿವರ ಅಭಿಪ್ರಾಯ ಮುಖ್ಯ. ಬೇರೆ ಕ್ಷೇತ್ರಗಳಲ್ಲೂ ಶಾಸಕರ ಅಭಿಪ್ರಾಯ ಆಲಿಸಲಾಗಿದೆ. ನೀವು ಸಚಿವರು, ಶಾಸಕರನ್ನು ಒಪ್ಪಿಸಿ’ ಎಂದು ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಸಲಹೆ ನೀಡಿದ್ದಾರೆ.

ವೀಣಾ ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ?

ಬಾಗಲಕೋಟೆ ಲೋಕಸಭಾ ಕ್ಷೇತ್ರದ ಟಿಕೆಟ್ ಕೈತಪ್ಪಿದ ಕಾರಣಕ್ಕೆ ಮುನಿಸಿಕೊಂಡಿರುವ ವೀಣಾ ಕಾಶಪ್ಪನವರ ತಮ್ಮ ಪತಿ, ಶಾಸಕ ವಿಜಯಾನಂದ ಕಾಶಪ್ಪನವರ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಗುರುವಾರ ಭೇಟಿ ಮಾಡಿ ಚರ್ಚೆ ನಡೆಸಿದರು. ಆ ವೇಳೆ ಮುಖ್ಯಮಂತ್ರಿ, ಅವರಿಗೆ ಲೋಕಸಭೆ ಚುನಾವಣೆಯ ಬಳಿಕ ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷ ಸ್ಥಾನ ನೀಡುವ ಭರವಸೆ ನೀಡಿದ್ದಾರೆ. ಇದಕ್ಕೆ ಒಪ್ಪಿರುವ ವೀಣಾ, ಪಕ್ಷದ ಅಭ್ಯರ್ಥಿ ಪರ ಕೆಲಸ ಮಾಡುವುದಾಗಿ ಹೇಳಿದ್ದಾರೆ.

ಬಿಜೆಪಿ ಪಾಳಯದಲ್ಲಿ ಭುಗಿಲೆದ್ದ ಅಸಮಾಧಾನ

ಒಂದನೇ ಪುಟದಿಂದ...

‘ಚಿತ್ರದುರ್ಗ ರಾಜಕೀಯವಾಗಿ ನಿರಾಶ್ರಿತರ ಕೇಂದ್ರವಾಗಿದೆ. ಈ ಹಿಂದೆ ಮೂಡಿಗೆರೆ, ಆನೇಕಲ್‌ನಲ್ಲಿ ಸೋತವರನ್ನು ಸಂಸದರನ್ನಾಗಿ ಮಾಡಲಾಗಿದೆ. ಕ್ಷೇತ್ರದಲ್ಲಿ ಪಕ್ಷದ ಕಾರ್ಯಕರ್ತರಿಗೆ ಏನಾದರೂ ಅನ್ಯಾಯವಾದರೆ 500 ಕಿ.ಮೀ. ದೂರದಿಂದ ಯಾರೂ ಬರುವುದಿಲ್ಲ. ಸ್ಥಳೀಯರಾದ ನಾವೇ ಹೋಗಬೇಕು. ಇದು ಪಕ್ಷದ ಅರಿವಿಗೆ ಇಲ್ಲವೇ’ ಎಂದೂ ಕಿಡಿಕಾರಿದರು.

‘ಹೈಕಮಾಂಡ್ ಗೋವಿಂದ ಕಾರಜೋಳ ಅವರನ್ನು ಕಣಕ್ಕಿಳಿಸಲು ನಿರ್ಧರಿಸಿರುವುದು ಖಂಡನೀಯ. ಮಾರ್ಚ್ 29ರಂದು ಚಿತ್ರದುರ್ಗದಲ್ಲಿ ಪಕ್ಷದ ಸ್ವಾಭಿಮಾನಿ ಕಾರ್ಯಕರ್ತರ ಸಭೆ ಕರೆದಿದ್ದೇವೆ. ಅಲ್ಲಿಯೇ ಮುಂದಿನ ತೀರ್ಮಾನ ಪ್ರಕಟಿಸುತ್ತೇವೆ’ ಎಂದು ಹೇಳಿದರು.

ಎಂ.ಚಂದ್ರಪ್ಪ

ಎಂ.ಸಿ. ರಘುಚಂದನ್

ಟಿಕೆಟ್ ತಪ್ಪಿದ್ದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಶಾಸಕ ಚಂದ್ರಪ್ಪ, ‘ಬಿಎಸ್‌ವೈ ಹಾಗೂ ವಿಜಯೇಂದ್ರ ಅವರನ್ನು ಬಹಳ ನಂಬಿದ್ದೆ, ಆದರೆ, ಕೊನೆಯ ಗಳಿಗೆಯಲ್ಲಿ ಅನ್ಯಾಯ ಮಾಡಿದ್ದಾರೆ. ಇನ್ನೊಬ್ಬರ ಮಕ್ಕಳ ಜೀವನ ಹಾಳು ಮಾಡಲು ಹೋದರೆ ನಾಳೆ ನಿಮ್ಮ ಮಕ್ಕಳ ಜೀವನವೂ ಹಾಳಾಗುತ್ತದೆ. ಎಲ್ಲದಕ್ಕೂ ಕಾಲವೇ ಉತ್ತರ ಕೊಡಲಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ಚಿತ್ರದುರ್ಗದಲ್ಲಿ ಬಿಜೆಪಿಯ ಮಹಾನ್ ನಾಯಕರೊಬ್ಬರಿದ್ದಾರೆ. ಅವರ ಆಟ ಜಾಸ್ತಿ ಆಗಿದೆ. ಈಗಾಗಲೇ ತಕ್ಕ ಶಾಸ್ತಿ ಆಗಿದೆ. ಮುಂದೆಯೂ ಆಗುತ್ತದೆ. ಅವರು ನನ್ನನ್ನೂ ವಂಚಿಸಿದ್ದಾರೆ’ ಎಂದು ಮಾಜಿ ಶಾಸಕ ಜಿ.ಎಚ್.ತಿಪ್ಪಾರೆಡ್ಡಿ ಅವರ ಹೆಸರು ಹೇಳದೇ ಕಿಡಿಕಾರಿದರು.

ಟಿಕೆಟ್ ಕೈತಪ್ಪಲು ಬಿಎಸ್‌ವೈ ಕಾರಣ

‘ನನ್ನ ಮಗನಿಗೆ ಟಿಕೆಟ್ ಕೈತಪ್ಪಲು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೇರ ಕಾರಣ. ಬುಧವಾರ ವರಿಷ್ಠರಿಗೆ ಕರೆ ಮಾಡಿ ರಘುಚಂದನ್‌ಗೆ ಟಿಕೆಟ್ ನೀಡಿದರೆ ಪ್ರಚಾರಕ್ಕೆ ಬರುವುದಿಲ್ಲ ಎಂದು ತಿಳಿಸಿದ್ದಾರೆ. ಹೀಗಾಗಿ, ರಾಷ್ಟ್ರೀಯ ನಾಯಕರು ಗೋವಿಂದ ಕಾರಜೋಳ ಹೆಸರು ಘೋಷಿಸಿದ್ದಾರೆ’ ಎಂದು ಶಾಸಕ ಎಂ.ಚಂದ್ರಪ್ಪ ದೂರಿದರು.

‘2019ರಲ್ಲೇ ನನ್ನ ಪುತ್ರನಿಗೆ ಲೋಕಸಭೆ ಚುನಾವಣೆಯ ಟಿಕೆಟ್ ಕೇಳಲಾಗಿತ್ತು. ಆಗ, ಮುಂದಿನ ಬಾರಿ ಕೊಡುವುದಾಗಿ ಬಿ.ಎಲ್.ಸಂತೋಷ್ ಹೇಳಿದ್ದರು. ಗೋವಿಂದ ಕಾರಜೋಳ ಸಹ ಐದು ವರ್ಷ ಕ್ಷೇತ್ರದಲ್ಲಿ ಓಡಾಡಲು ನನ್ನ ಮಗನಿಗೆ ಹೇಳಿದ್ದರು. ಈಗ ನಮಗೆ ಒಳ್ಳೆಯ ಬಹುಮಾನ ಕೊಟ್ಟಿದ್ದಾರೆ. ಸಮುದಾಯವನ್ನು ಕಡೆಗಣಿಸಿದ್ದಾರೆ’ ಎಂದರು.

‘ಸೋಲು, ಗೆಲುವುಗಳಿಗೆ ಕುಗ್ಗಿ, ಹಿಗ್ಗಬೇಕಿಲ್ಲ’

ನೀನಾಸಂ ಸತೀಶ್, ರಚಿತಾ ರಾಮ್, ಅದಿತಿ ಪ್ರಭುದೇವ ಮುಖ್ಯಭೂಮಿಕೆಯಲ್ಲಿರುವ ‘ಮ್ಯಾಟ್ನಿ’ ಚಿತ್ರ ಮುಂದಿನ ವಾರ ತೆರೆ ಕಾಣುತ್ತಿದೆ. ನಾಯಕನಾಗಿ ಚಿತ್ರರಂಗದಲ್ಲಿ ದಶಕ ಪೂರೈಸಿರುವ ಸತೀಶ್ ತಮ್ಮ ಸಿನಿಪಯಣ ಹಾಗೂ ಚಿತ್ರ ಕುರಿತು ಮಾತನಾಡಿದ್ದಾರೆ...

ವಿನಾಯಕ ಕೆ.ಎಸ್.

- **ಚಿತ್ರಕ್ಕೆ ‘ಮ್ಯಾಟ್ನಿ’ ಎಂಬ ಶೀರ್ಷಿಕೆ ಯಾಕೆ? ಇದು ಸಿನಿಮಾ ಕುರಿತ ಕಥೆಯೇ?**

‘ಮ್ಯಾಟ್ನಿ’ ಎಂದರೆ ಶೋ. ನಾಲ್ಕು ಸಿನಿಮಾ ಶೋಗಳಲ್ಲಿ ಒಂದು. ಹಾಗೆಯೇ ಬದುಕು ಕೂಡ ಒಂದು ಶೋ. ಭೂಮಿಗೆ ಬರುತ್ತೇವೆ, ಏನೋ ಒಂದಷ್ಟು ಮಾಡುತ್ತೇವೆ. ಒಂದು ದಿನ ಇದ್ದಕ್ಕಿದ್ದಂತೆ ಎಲ್ಲವನ್ನೂ ಬಿಟ್ಟು ಎದ್ದು ಹೋಗುತ್ತೇವೆ. ಜಗವೇ ನಾಟಕರಂಗ. ನಾವೆಲ್ಲ ಪಾತ್ರಧಾರಿಗಳಷ್ಟೆ. ಬದುಕಿನ ‘ಮ್ಯಾಟ್ನಿ’ ಅನ್ನೋ ಸಿನಿಮಾವೂ ಒಂದು ಶೋ. ಕಥೆಗೂ ಶೀರ್ಷಿಕೆಗೂ ನೇರ ಸಂಬಂಧವಿಲ್ಲ. ಒಂದು ರೂಪಕವಷ್ಟೆ.

- **ಚಿತ್ರದಲ್ಲಿ ನಿಮ್ಮ ಪಾತ್ರವೇನು?**

ಶ್ರೀಮಂತ ಮನೆತನದ ವ್ಯಕ್ತಿ. ತಾಯಿಯನ್ನು ಪ್ರೀತಿಸುವಾತ. ಬಡವರಿಗೆ ಸಹಾಯ ಮಾಡುತ್ತ, ಪ್ರೀತಿ ಹಂಚುತ್ತ ಬದುಕಿನಲ್ಲಿ ಕಳೆದುಕೊಂಡಿದ್ದನ್ನು ಇನ್ನೊಬ್ಬರ ಪ್ರೀತಿಯಲ್ಲಿ ಗಳಿಸುವ ವ್ಯಕ್ತಿತ್ವ.

- **ಏಕೆ ಎರಡು ವರ್ಷದಿಂದ ನಿಮ್ಮ ಯಾವ ಸಿನಿಮಾವೂ ತೆರೆ ಕಂಡಿಲ್ಲ?**

ಕೋವಿಡ್ ನಂತರ ಪ್ಲಾನಿಂಗ್ ವರ್ಕೌಟ್ ಆಗಲಿಲ್ಲ. ನಾನು ಕಥೆ ಆಯ್ಕೆಯಲ್ಲಿ ತುಂಬ ನಿಧಾನ. ಸಾಕಷ್ಟು ಯೋಚನೆ ಮಾಡಿ ಆಯ್ಕೆ ಮಾಡಿಕೊಳ್ಳುತ್ತೇನೆ. ಹಾಗಂತ ಮಾಡಿದ್ದೆಲ್ಲ ಸೂಪರ್ ಹಿಟ್ ಸಿನಿಮಾ ಆಗಲ್ಲ. ಒಂದಲ್ಲ ಒಂದು ಕೊರತೆ ಆಗಿರುತ್ತದೆ. 2022ರಲ್ಲಿ ‘ಪೆಟ್ರೋಮ್ಯಾಕ್ಸ್’ ತೆರೆ ಕಂಡಿತ್ತು.

- **ನಿಮ್ಮ ಹಿಂದಿನ ಸಿನಿಮಾಗಳಂತೆ ಇದರಲ್ಲಿಯೂ ಹಾಸ್ಯ ಹೆಚ್ಚಿರುತ್ತದೆಯಾ?**

ಯಾವುದೇ ಪಾತ್ರಗಳಲ್ಲಿ ಕಾಮಿಡಿ ಬಿಟ್ಟಿಲ್ಲ. ಅಣ್ಣಾವ್ರ ಸಿನಿಮಾಗಳನ್ನು ನೋಡಿದರೆ ಎಂಥ ಪಾತ್ರದಲ್ಲಿಯೂ ಸಣ್ಣ ಕಾಮಿಡಿ ಇರುತ್ತಿತ್ತು. ಹಾಗೆಯೇ ಇದರಲ್ಲಿಯೂ ಸಣ್ಣ ಹಾಸ್ಯವಿದೆ. ನಾಗಭೂಷಣ್, ಶಿವರಾಜ್ ಕೆ.ಆರ್.ಪೇಟೆ, ಪೂರ್ಣಚಂದ್ರ ಮೈಸೂರು ಮಾಡಿರುವ ಪಾತ್ರಗಳು ನಗಿಸುತ್ತವೆ.

- **ನೀವು ಮಾಡಬೇಕು ಅಂದುಕೊಂಡು ಮಾಡಲಾಗದ ಪಾತ್ರ?**

ಜೀವನದಲ್ಲಿ ಚೆನ್ನಾಗಿದೀನಿ. ನೀನಾಸಂ ತರಬೇತಿ ಅಂಗಳದಿಂದ ಇಲ್ಲಿಯ ತನಕ ಜರ್ನಿ ಮಾಡಿ, 15 ಸಿನಿಮಾ ಆಗಿದೆ. ನಟನಾಗಿ 15 ವರ್ಷ ಪೂರೈಸಿದ್ದೇನೆ. ಸಂತೋಷಪಡಲು ಇದಕ್ಕಿಂತ ಹೆಚ್ಚಿನದು ಏನು ಬೇಕು? ಏನೋ ಮಿಸ್ ಆಗಿದೆ, ನನ್ನ ಪಾತ್ರ ಅವರು ಮಾಡಿಬಿಟ್ಟರು ಎಂದು ದುಃಖಿಸುವ ವ್ಯಕ್ತಿಯಲ್ಲ. ಪ್ರಯತ್ನ ಮಾಡುವುದಷ್ಟೆ ನಮ್ಮ ಕೆಲಸ. ಈಗಾಗಲೇ ಮಾಡಿರುವುದು ಸೋತರೂ ವ್ಯಥೆ ಇಲ್ಲ. ‘ಟೈಗರ್ ಗಲ್ಲಿ’ ಚಿತ್ರ ದೊಡ್ಡಮಟ್ಟದಲ್ಲಿ ಸೋಲು ಕಂಡಿತು. ಅದರ ಬಳಿಕದ ‘ಅಯೋಗ್ಯ’ ದೊಡ್ಡ ಹಿಟ್. ಜನ ಎಲ್ಲವನ್ನೂ ಗಮನಿಸುತ್ತಾರೆ. ಜನಕ್ಕೆ ಸಿನಿಮಾ ಬಗ್ಗೆ ಬಹಳ ಆಸಕ್ತಿ ಇದೆ. ಟೀಸರ್, ಟ್ರೇಲರ್ ಎಲ್ಲವನ್ನೂ ನೋಡಿ ಜನ ಯಾವ ಸಿನಿಮಾಕ್ಕೆ ಹೋಗಬೇಕು ಎಂದು ನಿರ್ಧರಿಸುತ್ತಾರೆ. ಯಾರು ಬಂದರೂ ಅವರ ನಿರ್ಧಾರ ಬದಲಿಸಲು ಸಾಧ್ಯವಿಲ್ಲ. ಇದು ನನ್ನ ಅನುಭವಕ್ಕೆ ಬಂದಿದ್ದು. ಹೀಗಾಗಿ ಮಾಡಲಾಗದ ಪಾತ್ರ ಅಂತೆಲ್ಲ ಅಂದುಕೊಳ್ಳುವುದಿಲ್ಲ. ಜೀವನಕ್ಕಿಂತ ಯಾವುದೂ ದೊಡ್ಡದು ಅಲ್ಲ. ಸಿನಿಮಾವೂ ಬದುಕಿಗಿಂತ ದೊಡ್ಡದಲ್ಲ. ಸೋಲು, ಗೆಲುವುಗಳನ್ನು ಪಕ್ಕಕ್ಕಿಟ್ಟು ಬದುಕಬೇಕು. ಜೀವನ ಹಾಳು ಮಾಡಿಕೊಳ್ಳಬಾರದು.

- **ನಿಮ್ಮ ಕೈಯ್ಯಲ್ಲಿರುವ ಮುಂದಿನ ಸಿನಿಮಾಗಳು...**

‘ಅಶೋಕ ಬ್ಲೇಡ್’ ಚಿತ್ರೀಕರಣ ನಡೆಯುತ್ತಿದೆ. ಮೂರು-ನಾಲ್ಕು ಸ್ಕ್ರಿಪ್ಟ್‌ಗಳು ರೆಡಿ ಇದೆ. ಮುಂಬರುವ ದಿನಗಳಲ್ಲಿ ವರ್ಷಕ್ಕೆ ಮೂರು ನಾಲ್ಕು ಸಿನಿಮಾ ಬರುತ್ತದೆ.

ನೀನಾಸಂ ಸತೀಶ್

ಸಂಗೀತಾ ಶೃಂಗೇರಿ

ದಿಗಂತ್, ಸಂಗೀತಾ ಶೃಂಗೇರಿ ಅಭಿನಯದ ‘ಮಾರಿಗೋಲ್ಡ್’ ಚಿತ್ರ ಮುಂದಿನ ವಾರ ತೆರೆ ಕಾಣುತ್ತಿದೆ. ಚಿತ್ರದ ಬಗ್ಗೆ, ತಮ್ಮ ಮುಂದಿನ ಸಿನಿಪಯಣದ ಕುರಿತು ಸಂಗೀತಾ ಮಾತನಾಡಿದ್ದಾರೆ

‘ಕಿರುತೆರೆ ಸಾಕಷ್ಟು ಅಭಿಮಾನಿಗಳನ್ನು ನೀಡಿದೆ’

‘ಚಿತ್ರದಲ್ಲಿ ಸೋನು ಎಂಬ ಪಾತ್ರ. ಡ್ಯಾನ್ಸರ್ ಆಗಿರುತ್ತೇನೆ. ಇಲ್ಲಿವರೆಗೆ ನಾನು ಗ್ಲಾಮರಸ್ ಪಾತ್ರ ಮಾಡಿರಲಿಲ್ಲ. ಹೀಗಾಗಿ ಈ ಪಾತ್ರ ನನ್ನ ವೃತ್ತಿಜೀವನಕ್ಕೆ ಬಹಳ ಮುಖ್ಯ. ಇಲ್ಲಿ ತುಂಬ ಗಟ್ಟಿಗಿತ್ತಿ ಆಗಿರುತ್ತೇನೆ. ಪ್ರೀತಿಗಾಗಿ ಏನೂ ಬೇಕಾದರೂ ಮಾಡಬಲ್ಲೆ ಎಂಬುದು ಇಲ್ಲಿ ಗೊತ್ತಾಗುತ್ತದೆ’ ಎಂದು ಚಿತ್ರದಲ್ಲಿ ಪಾತ್ರವನ್ನು ವಿವರಿಸಿದರು ಸಂಗೀತಾ.

ಈ ವರ್ಷ ಬಿಗ್‌ಬಾಸ್ ಮನೆಯಿಂದ ಹೊರಬಂದ ಅವರಿಗೆ ಸಾಮಾಜಿಕ ಮಾಧ್ಯಮದಲ್ಲಿ ದೊಡ್ಡ ಅಭಿಮಾನಿ ಬಳಗವೇ ಸೃಷ್ಟಿಯಾಗಿದೆ. ‘ಬಹುಶಃ ಹತ್ತು ಸಿನಿಮಾ ಮಾಡಿದರೂ ಸಂಪಾದಿಸಲಾಗದಷ್ಟು ಅಭಿಮಾನಿಗಳು ಬಿಗ್‌ಬಾಸ್‌ನಿಂದ ಸಿಕ್ಕಿದ್ದಾರೆ. ಅವರ ಪ್ರೀತಿ ಅಪಾರ. ಹಾಗಂತ ಕಿರುತೆರೆಯಲ್ಲಿ ಸಕ್ರಿಯವಾಗುವ ಆಲೋಚನೆ ಇಲ್ಲ. ಒಮ್ಮೆ ಆ ಲೋಕಕ್ಕೆ ಕಾಲಿಟ್ಟರೆ ವರ್ಷಪೂರ್ತಿ ಒಂದೇ ಪಾತ್ರದಲ್ಲಿ ಇರಬೇಕಾಗುತ್ತದೆ. ಹಾಗಾಗಲು ಇಷ್ಟವಿಲ್ಲ. ಭಿನ್ನವಾಗಿದ್ದನ್ನು ಮಾಡಬೇಕೆಂಬ ಆಲೋಚನೆಯೊಂದಿಗೆ ಬಂದವಳು. 2017ರಲ್ಲಿಯೇ ನನ್ನ ಮೊದಲ ಸಿನಿಮಾ ಬಿಡುಗಡೆಯಾಗಿತ್ತು’ ಎಂದು ಅವರು ತಮ್ಮ ಮನದ ಇಂಗಿತ ವ್ಯಕ್ತಪಡಿಸಿದರು.

ಒಂದು ದಶಕದಿಂದ ಕಿರುತೆರೆ, ಹಿರಿತೆರೆಯಲ್ಲಿ ಸಕ್ರಿಯವಾಗಿರುವ ಸಂಗೀತಾ ಅವರಿಗೆ ‘ಚಾರ್ಲಿ’, ‘ಶಿವಾಜಿ ಸೂರತ್ಕಲ್-2’ ಸಿನಿಮಾಗಳು ಸ್ಯಾಂಡಲ್‌ವುಡ್‌ನಲ್ಲಿ ತಕ್ಕಮಟ್ಟಿನ ಜನಪ್ರಿಯತೆ ತಂದುಕೊಟ್ಟವು. ಹಾಗಂತ ಸದ್ಯ ಅವರು ಯಾವುದೇ ಸಿನಿಮಾ ಒಪ್ಪಿಕೊಂಡಿಲ್ಲ. ‘ಕನ್ನಡದಲ್ಲಿ ನಾಯಕಿಗೆ ಪ್ರಾಮುಖ್ಯವಿರುವ ಸಿನಿಮಾಗಳು ಬರುವುದು ಕಡಿಮೆ. ಬಹುತೇಕ ಸಿನಿಮಾಗಳಲ್ಲಿ ಸುಮ್ಮನೆ ಹೆಸರಿಗೆ ನಾಯಕಿ ಇರುತ್ತಾಳೆ. ಅಂತಹ ಚಿತ್ರಗಳನ್ನು ಮಾಡಲು ಇಷ್ಟವಿಲ್ಲ. ಚಿತ್ರದಲ್ಲಿ ಪಾತ್ರ ಪ್ರಮುಖವಾಗಿರಬೇಕು, ಅದಕ್ಕೊಂದು ತೂಕ ಇರಬೇಕು. ಅಂತಹ ಚಿತ್ರಗಳನ್ನು ಹುಡುಕುತ್ತಿರುವೆ. ಹೀಗಾಗಿ ಸದ್ಯಕ್ಕೆ ಯಾವುದೇ ಸಿನಿಮಾ ಒಪ್ಪಿಕೊಂಡಿಲ್ಲ’ ಎನ್ನುತ್ತಾರೆ ಸಂಗೀತಾ.

ಟ್ರೇಲರ್ ಬಿಡುಗಡೆ

ಚಿನ್ನದ ಬಿಸ್ಕತ್ ಮಾರಲು ಹೊರಟ ನಾಲ್ವರು ಹುಡುಗರ ಕಥೆ ಹೊಂದಿರುವ ‘ಮಾರಿಗೋಲ್ಡ್’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ರಾಘವೇಂದ್ರ ಎಂ.ನಾಯ್ಕ್ ನಿರ್ದೇಶನದ ಚಿತ್ರಕ್ಕೆ ರಘುವರ್ಧನ್ ಬಂಡವಾಳ ಹೂಡಿದ್ದಾರೆ. ಚಿನ್ನದ ಬಿಸ್ಕತ್ತಿನ ಹಿಂದೆ ಬಿದ್ದ ನಾಲ್ವರಲ್ಲಿ ಮಾರಿಗೋಲ್ಡ್ ಯಾರ ಪಾಲಾಗುತ್ತದೆ ಎಂಬುದೇ ಚಿತ್ರಕಥೆ ಎಂದು ಮೇಲ್ನೋಟಕ್ಕೆ ತಿಳಿಯುತ್ತಿದೆ. ಆ್ಯಕ್ಷನ್, ಥ್ರಿಲ್ಲರ್ ಕಥಾಹಂದರದ ಚಿತ್ರದಲ್ಲಿ ಯಶ್ ಶೆಟ್ಟಿ, ಕಾಕ್ರೋಚ್ ಸುಧೀ, ಸಂಪತ್ ಮೈತ್ರೇಯಾ ಮೊದಲಾದವರು ನಟಿಸಿದ್ದಾರೆ. ವೀರ್ ಸಮರ್ಥ ಸಂಗೀತ, ರಘು ನಿಡವಳ್ಳಿ ಸಂಭಾಷಣೆ, ಕೆ.ಎಸ್. ಚಂದ್ರಶೇಖರ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಇದು ‘ಪಾರ್ಟ್‌ನರ್’ ಟ್ರೇಲರ್!

ಹೊಸಬರೇ ಸೇರಿ ನಿರ್ಮಿಸಿರುವ ‘ಪಾರ್ಟ್‌ನರ್’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಟಿ.ಆರ್.ಗೌತಮ್‌ಗೌಡ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿದ್ದು, ನಾಗರಾಜ.ಆರ್. ಹಾಗೂ ಟಿ.ಕೆ. ರವಿ ಬಂಡವಾಳ ಹೂಡಿದ್ದಾರೆ.

‘ಕನ್ನಡ, ತೆಲುಗು, ತಮಿಳು ಸಿನಿಮಾಗಳಲ್ಲಿ ಸಹಾಯಕ, ಸಹ ನಿರ್ದೇಶಕನಾಗಿ ಕೆಲಸ ಮಾಡಿ ಅನುಭವವಿದೆ. ಮೊದಲಬಾರಿಗೆ ನಿರ್ದೇಶನ ಮಾಡಿದ್ದೇನೆ. ಇಬ್ಬರು ಸ್ನೇಹಿತರ, ಸ್ನೇಹದ ಸುತ್ತ ನಡೆಯುವ ಕಥೆ ಇದಾಗಿದ್ದು, ಕಮರ್ಷಿಯಲ್ ಚಿತ್ರಕ್ಕೆ ಬೇಕಾದ ಎಲ್ಲ ಅಂಶಗಳು ಚಿತ್ರದಲ್ಲಿವೆ’ ಎಂದರು ನಿರ್ದೇಶಕರು.

ಚೇತಸ್ ಆರ್ ಮತ್ತು ಸತೀಶ್ ಕೃಷ್ಣಶೆಟ್ಟಿ ಚಿತ್ರದ ನಾಯಕರಾಗಿ ನಟಿಸಿದ್ದು, ಅಗ್ನಿಸಾಕ್ಷಿ ಖ್ಯಾತಿಯ ಸುಕೃತಾನಾಗ್ ಹಾಗೂ ಪ್ರೀತಿ ಮಿರಾಜ್ಕರ್ ನಾಯಕಿಯರಾಗಿ ಕಾಣಿಸಿಕೊಂಡಿದ್ದಾರೆ. ಬಲ ರಾಜವಾಡಿ, ಶಿವರಾಜ್ ಕೆ.ಆರ್.ಪೇಟೆ ಮುಂತಾದವರು ಪ್ರಮುಖ ಪಾತ್ರಗಳಲ್ಲಿದ್ದಾರೆ.

ತೆರೆಗೆ ಬರಲು ಸಿದ್ಧರಾದ ‘ರಾಜರಾಣಿ’

ಬಹುತೇಕ ಹೊಸಬರಿಂದಲೇ ಕೂಡಿರುವ ‘ರಾಜರಾಣಿ’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಬಳ್ಳಾರಿಯ ರಣಧೀರ್ ಈ ಚಿತ್ರದ ನಾಯಕ ಮತ್ತು ನಿರ್ದೇಶಕ. ವಿಜಯ್ ಬಳ್ಳಾರಿ ಹಾಗೂ ನೇತ್ರಾವತಿ ಮಲ್ಲೇಶ್ ನಿರ್ಮಾಪಕರು.

‘ಪುದಿಯವರುಗಳ್’ ಎಂಬ ತಮಿಳು ಚಿತ್ರದಲ್ಲಿ ನಾಯಕನಾಗಿ ನಟಿಸಿದ್ದೆ. ಕನ್ನಡದಲ್ಲಿ ಮೂರು ಚಿತ್ರಗಳಲ್ಲಿ ಅಭಿನಯಿಸಿದೆ. ಇದರ ಅನುಭವದಿಂದಲೇ ಈ ಸಿನಿಮಾಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿ, ನಾಯಕನಾಗಿ ಕಾಣಿಸಿಕೊಂಡಿದ್ದೇನೆ. ಅನಾಥನಾಗಿದ್ದ ನನಗೆ ಬದುಕಿನಲ್ಲಿ ರಾಣಿ ಸಿಗುವುದೇ ಚಿತ್ರದ ಕಥೆ’ ಎಂದರು ರಣಧೀರ್.

ಮಂಡ್ಯ ಮೂಲದ ರಿತನ್ಯಾ ಶೆಟ್ಟಿ ನಾಯಕಿ. ಗಿರಿಜಾ ಲೋಕೇಶ್, ಶೋಭರಾಜ್, ಬಿರಾದಾರ್, ಕಿಲ್ಲರ್ ವೆಂಕಟೇಶ್, ಮುಂತಾದವರು ನಟಿಸಿದ್ದಾರೆ. ಒಟ್ಟು ನಾಲ್ಕು ಗೀತೆಗಳಿದ್ದು, ಸುಧನ್ ಪ್ರಕಾಶ್ ಸಂಗೀತ ನೀಡಿದ್ದಾರೆ.

ಮಧು-ಶರತ್ ಛಾಯಾಚಿತ್ರಗ್ರಹಣ, ನಿಶಿತ್ ಪೂಜಾರಿ ಸಂಕಲನ ಚಿತ್ರಕ್ಕಿದೆ. ಬೆಂಗಳೂರು, ಮಂಗಳೂರು, ಮಾಲೂರು, ಕೋಲಾರ, ಚಿಕ್ಕಮಗಳೂರು, ದೊಡ್ಡಬಳ್ಳಾಪುರಗಳಲ್ಲಿ ಚಿತ್ರೀಕರಣಗೊಂಡಿದೆ.

ಟ್ರೇಲರ್ ಬಿಡುಗಡೆ ಸಮಾರಂಭದಲ್ಲಿ ಚಿತ್ರತಂಡದೊಂದಿಗೆ ನಟಿ ಅದ್ವಿತಿ ಶೆಟ್ಟಿ

ಹಿರಿತೆರೆಗೆ ‘ಯುವ’ರಾಜನ ಆಗಮನ

ಸ್ಯಾಂಡಲ್‌ವುಡ್‌ಗೆ ಐಪಿಎಲ್, ಚುನಾವಣೆ ಬಿಸಿ ನಿಧಾನಕ್ಕೆ ತಟ್ಟಲು ಪ್ರಾರಂಭಿಸಿದೆ. ಕಳೆದ ಮೂರು ತಿಂಗಳಲ್ಲಿಯೇ ಕನಿಷ್ಠವೆಂಬಂತೆ ಈ ವಾರ ಎರಡು ಸಿನಿಮಾಗಳು ತೆರೆ ಕಾಣುತ್ತಿವೆ. ಮಲಯಾಳಂನಿಂದ ಕನ್ನಡಕ್ಕೆ ಡಬ್ ಆಗಿರುವ ಒಂದು ಚಿತ್ರ ಕೂಡ ಚಿತ್ರಮಂದಿರಕ್ಕೆ ಲಗ್ಗೆ ಇಟ್ಟಿದೆ...

ಈ ವಾರ ತೆರೆಗೆ

ಯುವ

ರಾಜ್‌ಕುಮಾರ್ ಕುಟುಂಬದ ಕುಡಿ ಯುವ ರಾಜ್‌ಕುಮಾರ್ ಅವರ ಚೊಚ್ಚಲ ಚಿತ್ರ ‘ಯುವ’ ಇಂದು (ಮಾ.29) ತೆರೆ ಕಾಣುತ್ತಿದೆ. ಹೊಂಬಾಳೆ ಫಿಲ್ಮ್ಸ್ ನಿರ್ಮಿಸಿರುವ ಈ ಚಿತ್ರಕ್ಕೆ ಸಂತೋಷ್ ಆನಂದರಾಮ್ ಆ್ಯಕ್ಷನ್-ಕಟ್ ಹೇಳಿದ್ದಾರೆ. ಕೌಟುಂಬಿಕ ಹಾಗೂ ಆ್ಯಕ್ಷನ್ ಕಥಾಹಂದರ ಹೊಂದಿರುವ ಸಿನಿಮಾದಲ್ಲಿ ತಂದೆ - ಮಗನ ಬಾಂಧವ್ಯವೂ ಪ್ರಮುಖ ಅಂಶವಾಗಿದೆ. ಅಪ್ಪನ ಗುಣಗಳನ್ನು ವರ್ಣಿಸುವ ‘ಅಪ್ಪುಗೆ’ ಹಾಡು ಈಗಾಗಲೇ ಬಿಡುಗಡೆಯಾಗಿದೆ. ಯುವ ರಾಜ್‌ಕುಮಾರ್ ಫುಡ್ ಡೆಲಿವರಿ ಬಾಯ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಚಿತ್ರಕ್ಕೆ ಅಜನೀಶ್ ಲೋಕನಾಥ್ ಸಂಗೀತ, ಶ್ರೀಶ ಕುದುವಳ್ಳಿ ಛಾಯಾಚಿತ್ರಗ್ರಹಣವಿದೆ. ಯುವನಿಗೆ ಜೋಡಿಯಾಗಿ ಸಪ್ತಮಿ ಗೌಡ ನಟಿಸಿದ್ದು, ಅಚ್ಯುತ್ ಕುಮಾರ್ ತಂದೆಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಪ್ರಕಾಶ್ ರಾಜ್ ಸೇರಿದಂತೆ ಹಲವು ಕಲಾವಿದರ ದಂಡೇ ತಾರಾಗಣದಲ್ಲಿದೆ.

ತಾರಿಣಿ

ಈಗಾಗಲೇ ಹಲವಾರು ಚಿತ್ರೋತ್ಸವಗಳಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದಿರುವ ‘ತಾರಿಣಿ’ ಚಿತ್ರ ಕೂಡ ಇಂದು ತೆರೆಗೆ ಬರುತ್ತಿದೆ. ನಟಿ ಮಮತಾ ರಾಹುತ್ ಮುಖ್ಯಭೂಮಿಕೆಯಲ್ಲಿರುವ ಮಹಿಳಾ ಪ್ರಧಾನ ಚಿತ್ರವನ್ನು ಸಿದ್ದು ಪೂರ್ಣಚಂದ್ರ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿದ್ದಾರೆ.

ಹಲವು ಅಂತರರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿಯೂ ಪ್ರದರ್ಶನಗೊಂಡಿರುವ ಈ ಚಿತ್ರವನ್ನು ಗಜನಿ ಪ್ರೊಡಕ್ಷನ್ಸ್ ಬ್ಯಾನರ್ ಅಡಿಯಲ್ಲಿ ಸುರೇಶ್ ಕೋಟ್ಯಾನ್ ನಿರ್ಮಿಸಿದ್ದಾರೆ. ನಟಿ ಮಮತಾ ರಾವುತ್ ಗರ್ಭಿಣಿಯಾದ 7ನೇ ತಿಂಗಳಿಂದ ಚಿತ್ರೀಕರಣ ಪ್ರಾರಂಭಿಸಿ ಒಂಬತ್ತನೇ ತಿಂಗಳು ತುಂಬಿದಾಗಲೂ ಇದರಲ್ಲಿ ಭಾಗಿಯಾಗಿದ್ದು ಈ ಚಿತ್ರದ ವಿಶೇಷ.

ನಾಯಕನಾಗಿ ರೋಹಿತ್ ಕಾಣಿಸಿಕೊಂಡಿದ್ದು, ಭವಾನಿ ಪ್ರಕಾಶ್, ಸುಧಾ ಪ್ರಸನ್ನ ಮೊದಲಾದವರು ಚಿತ್ರದಲ್ಲಿದ್ದಾರೆ. ಅನಂತ್ ಆರ್ಯನ್ ಸಂಗೀತ, ದೀಪಕ್ ಸಂಕಲನ ಚಿತ್ರಕ್ಕಿದೆ.

ಪೃಥ್ವಿರಾಜ್, ಅಮಲಾ ಪೌಲ್

16 ವರ್ಷದ ಸಿನಿಮಾ!

ಪೃಥ್ವಿರಾಜ್ ಸುಕುಮಾರನ್ ಅಭಿನಯದ ಮಲಯಾಳಂನ ಬಹುನಿರೀಕ್ಷಿತ ಚಿತ್ರ ‘ಆಡುಜೀವಿತಂ(ಗೋಟ್ ಲೈಫ್)’ ಮಾ.28ರಂದು ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ತೆರೆ ಕಂಡಿದೆ. ಕರ್ನಾಟಕದಲ್ಲಿ ಹೊಂಬಾಳೆ ಫಿಲ್ಮ್ಸ್ ಮೂಲಕ ಬಿಡುಗಡೆಯಾಗಿರುವ ಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ಪುರಸ್ಕೃತ ನಿರ್ದೇಶಕ ಬ್ಲೆಸ್ಸಿ ಆ್ಯಕ್ಷನ್ ಕಟ್ ಹೇಳಿದ್ದಾರೆ. ಅಮಲಾ ಪೌಲ್, ಹಾಲಿವುಡ್ ನಟ ಜಿಮ್ಮಿ ಜೀನ್ ಲೂಯಿಸ್ ಮುಂತಾದವರು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ. ಹೆಸರಾಂತ ಸಂಗೀತ ನಿರ್ದೇಶಕ ಎ.ಆರ್ ರೆಹಮಾನ್ ಸಂಗೀತ ನೀಡಿದ್ದಾರೆ. ಇದು ಬೆನ್ಯಾಮಿನ್ ಅವರು ಬರೆದಿರುವ ಮಲಯಾಳಂ ಕಾದಂಬರಿ ‘ಆಡುಜೀವಿತಂ’ ಕಾದಂಬರಿ ಆಧಾರಿತ ಚಿತ್ರವಾಗಿದ್ದು, ಬೆನ್ಯಾಮಿನ್ ಬದುಕಿನ ನೈಜ ಕಥೆಯನ್ನು ಹೊಂದಿದೆ. 2008 ರಲ್ಲಿಯೇ ಚಿತ್ರ ನಿರ್ಮಾಣದ ಪ್ರಕ್ರಿಯೆ ಪ್ರಾರಂಭವಾಗಿದ್ದು, ಇಡೀ ತಂಡ 16 ವರ್ಷಗಳು ಈ ಚಿತ್ರಕ್ಕಾಗಿ ಶ್ರಮಿಸಿದ್ದು ವಿಶೇಷ.

‘ಒಂದು ಸಿನಿಮಾಗೆ 16 ವರ್ಷಗಳನ್ನು ನೀಡುವುದು ಸುಲಭವಲ್ಲ. ಈ ಅವಧಿಯಲ್ಲಿ ಬದುಕಿನಲ್ಲಿ ಏನೆಲ್ಲ ಆಗಿಹೋಗಿದೆ. ಆದಾಗ್ಯೂ ಒಂದು ದಿನವೂ ಈ ಚಿತ್ರದಿಂದ ಹಿಂದೆ ಸರಿಯಬೇಕು ಅನ್ನಿಸಿಲ್ಲ. ಮನಸ್ಸಿನ ಮೂಲೆಯಲ್ಲಿ ಒಂದು ಕಡೆ ಈ ಚಿತ್ರಕ್ಕಾಗಿ ಯೋಚಿಸುತ್ತಿದೆ’ ಎನ್ನುತ್ತಾರೆ ಪೃಥ್ವಿರಾಜ್.

ಪ್ರಜಾವಾಣಿ ನೋಡಿಯೊ ಸಿನಿಮಾತು ನೋಡಲು ಕೋಡ್ ಸ್ಕ್ಯಾನ್ ಮಾಡಿ

‘ವೈದ್ಯಕೀಯ ಕಾಲೇಜು: ಒಬ್ಬರಿಗೆ ಒಂದೇ ಹುದ್ದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸ್ವಾಯತ್ತ ವೈದ್ಯಕೀಯ ಕಾಲೇಜಿನ ವೈದ್ಯಕೀಯ ಅಧೀಕ್ಷಕರಿಗೆ ಆಸ್ಪತ್ರೆಯ ಬೇರೆ ವಿಭಾಗದ ಮುಖ್ಯಸ್ಥರು ಎಂದು ಹೆಚ್ಚುವರಿ ಹೊಣೆ ನೀಡುವಂತಿಲ್ಲ’ ಎಂದು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಶಿವಮೊಗ್ಗದ ಡಾ.ಎಸ್.ಶ್ರೀಧರ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಂ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದ್ದು, ಶಿವಮೊಗ್ಗ ವೈದ್ಯಕೀಯ ಕಾಲೇಜಿನ ಟಿ.ಡಿ.ತಿಮ್ಮಪ್ಪ ಅವರನ್ನು ಒಂದು ವಿಭಾಗದ ಮುಖ್ಯಸ್ಥರನ್ನಾಗಿ(ಎಚ್‌ಒಡಿ) ನೇಮಕ ಮಾಡಿರುವುದನ್ನು, ‘ಅಕ್ರಮ ಹಾಗೂ ಕಾನೂನು ಬಾಹಿರ’ ಎಂದು ಸಾರಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಾದ ಮಂಡಿಸಿದ್ದ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್, ‘ಒಬ್ಬ ವ್ಯಕ್ತಿ ಎರಡು ಹುದ್ದೆಗಳನ್ನು ನಿರ್ವಹಿಸುವುದು ರಾಷ್ಟ್ರೀಯ ವೈದ್ಯಕೀಯ ಆಯೋಗದ ನಿಯಮಗಳಿಗೆ ವಿರುದ್ಧವಾದುದು ಮತ್ತು ಎರಡೂ ವಿಭಾಗಗಳಲ್ಲೂ ಪರಿಣಾಮಕಾರಿ ಹಾಗೂ ನಿಷ್ಪಕ್ಷಪಾತ ನಿರ್ಧಾರ ಕೈಗೊಳ್ಳಲು ಸಾಧ್ಯವಾಗುವುದಿಲ್ಲ’ ಎಂದು ಪ್ರತಿಪಾದಿಸಿದ್ದರು.

ಇದನ್ನು ಮಾನ್ಯ ಮಾಡಿರುವ ನ್ಯಾಯಪೀಠ, ‘ರಾಷ್ಟ್ರೀಯ ವೈದ್ಯಕೀಯ ನಿಯಮಗಳಿಗೆ ವಿರುದ್ಧವಾಗಿ ಟಿ.ಡಿ. ತಿಮ್ಮಪ್ಪ ಅವರು ಇಎನ್‌ಟಿ ವಿಭಾಗದ ಎಚ್‌ಒಡಿಯ ಹೆಚ್ಚುವರಿ ಹೊಣೆಗಾರಿಕೆ ನಿರ್ವಹಿಸುವಂತಿಲ್ಲ’ ಎಂದು ಆದೇಶಿಸಿದೆ. ಅಂತೆಯೇ, ‘ವೈದ್ಯಕೀಯ ಕಾಲೇಜು ಎನ್‌ಎಂಸಿ ನಿಯಮಗಳಿಗೆ ಅನುಗುಣವಾಗಿ ಆಡಳಿತಾತ್ಮಕ ಮತ್ತು ಕ್ಲಿನಿಕಲ್ ಪಾತ್ರಗಳನ್ನು ಪ್ರತ್ಯೇಕವಾಗಿ ನಿರ್ವಹಿಸಲು ಕ್ರಮ ಕೈಗೊಳ್ಳಬೇಕು’ ಎಂದು ತಾಕೀತು ಮಾಡಿದೆ.

‘ವೈದ್ಯಕೀಯ ಅಧೀಕ್ಷಕರಾಗಿ ಆಸ್ಪತ್ರೆಯ ಆಡಳಿತಾತ್ಮಕ ಕೆಲಸಗಳ ಜೊತೆಗೆ ಬಜೆಟ್, ಸಿಬ್ಬಂದಿ, ಸೌಕರ್ಯಗಳೂ ಸೇರಿದಂತೆ ಆಸ್ಪತ್ರೆಯ ಸಮಗ್ರ ಕೆಲಸ ಕಾರ್ಯಗಳ ಮೇಲ್ವಿಚಾರಣೆ ನಡೆಸಬೇಕಾಗುತ್ತದೆ. ಅಂತಹವರಿಗೆ ಇಎನ್‌ಟಿ ವಿಭಾಗದ ಹೆಚ್ಚುವರಿ ಹೊಣೆ ವಹಿಸಿದರೆ ಆಗ ಶಸ್ತ್ರಚಿಕಿತ್ಸೆ, ವೈದ್ಯಕೀಯ ಚಿಕಿತ್ಸೆ ಸೇರಿದ ಇನ್ನಿತರ ಜವಾಬ್ದಾರಿಗಳನ್ನು ನಿರ್ವಹಿಸಬೇಕಾಗಿ ಬರುತ್ತದೆ. ಹೀಗಾದರೆ, ಎರಡೂ ಹುದ್ದೆಗಳನ್ನು ಒಬ್ಬರೇ ಸಮರ್ಪಕವಾಗಿ ನಿರ್ವಹಿಸಲಾಗದು’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಪ್ರಕರಣವೇನು?: ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಕಾಲೇಜಿನ ವೈದ್ಯಕೀಯ ಅಧೀಕ್ಷಕ ತಿಮ್ಮಪ್ಪ ಅವರಿಗೆ ಇಎನ್‌ಟಿ ವಿಭಾಗದ ಎಚ್‌ಒಡಿ ಆಗಿ ಹೆಚ್ಚುವರಿ ಹೊಣೆಗಾರಿಕೆಯನ್ನು ನೀಡಿ 2024ರ ಜನವರಿ 31ರಂದು ಆದೇಶಿಸಲಾಗಿತ್ತು. ಅರ್ಜಿದಾರರು ಇದನ್ನು ಪ್ರಶ್ನಿಸಿದ್ದರು.

ಕೆಆರ್‌ಇಟಿ ನೇಮಕಕ್ಕೆ ನಿರ್ದೇಶನ

ಬೆಂಗಳೂರು: ‘ಲೋಕಸಭೆ ಚುನಾವಣೆ ನೀತಿ ಸಂಹಿತೆಯ ನೆಪ ಹೇಳದೆ; ಕರ್ನಾಟಕ ರಿಯಲ್ ಎಸ್ಟೇಟ್ ಮೇಲ್ಮನವಿ ನ್ಯಾಯಮಂಡಳಿಯ (ಕೆಆರ್‌ಇಟಿ) ಅಧ್ಯಕ್ಷ ಮತ್ತು ಸದಸ್ಯರ ನೇಮಕಾತಿ ಪ್ರಕ್ರಿಯೆಯನ್ನು ಶೀಘ್ರ ಪೂರ್ಣಗೊಳಿಸಬೇಕು’ ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

‘ಕೆಆರ್‌ಇಟಿಗೆ ಅಧ್ಯಕ್ಷ ಮತ್ತು ಸದಸ್ಯರನ್ನು ನೇಮಕ ಮಾಡಲು ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಕೋರಿ ಮ್ಯಾಥ್ಯೂ ಥಾಮಸ್ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಸರ್ಕಾರದ ಪರ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಹಾಜರಾಗಿ, ‘ಕೆಆರ್‌ಇಟಿಗೆ ಅಧ್ಯಕ್ಷರು ಮತ್ತು ಸದಸ್ಯರನ್ನು ಮುಂದಿನ ಮೂರು ವಾರಗಳಲ್ಲಿ ನೇಮಕ ಮಾಡಬೇಕು ಎಂದು ಹೈಕೋರ್ಟ್, 2024ರ ಫೆಬ್ರುವರಿ 26ರಂದೇ ಸರ್ಕಾರಕ್ಕೆ ಸೂಚಿಸಿದೆ. ಆದರೆ, ಲೋಕಸಭೆ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವ ಕಾರಣ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲು ಆಗುತ್ತಿಲ್ಲ. ಇದಕ್ಕಾಗಿ ಹೆಚ್ಚಿನ ಕಾಲಾವಕಾಶ ನೀಡಬೇಕು’ ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಚುನಾವಣೆ ಘೋಷಣೆಯ ಕಾರಣ ನೀಡಿ ನೇಮಕಾತಿ ಪ್ರಕ್ರಿಯೆಗಳನ್ನು ತಡೆಹಿಡಿಯಲು ಸಾಧ್ಯವಿಲ್ಲ. ಕೆಆರ್‌ಇಟಿ ಅಧ್ಯಕ್ಷರು ಹಾಗೂ ಸದಸ್ಯರ ನೇಮಕಾತಿ ಪ್ರಕ್ರಿಯೆಯನ್ನು 2024ರ ಜನವರಿ 22ರಿಂದಲೇ ಆರಂಭಿಸಲಾಗಿದೆ. ಚುನಾವಣೆ ನೀತಿ ಸಂಹಿತೆ ಇತ್ತೀಚೆಗಷ್ಟೇ ಜಾರಿಗೆ ಬಂದಿದೆ. ಹೀಗಾಗಿ, ನೇಮಕಾತಿ ಪ್ರಕ್ರಿಯೆ ಮುಂದುವರಿಸಲು ಚುನಾವಣೆ ನೀತಿ ಸಂಹಿತೆ ಅಡ್ಡಿಯಾಗುವುದಿಲ್ಲ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿತು.

‘ನ್ಯಾಯಮಂಡಳಿಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಪ್ರಕರಣಗಳು ವಿಚಾರಣೆಗೆ ಬಾಕಿ ಇವೆ. ಅಧ್ಯಕ್ಷರು ಹಾಗೂ ಸದಸ್ಯರಿಲ್ಲದ ಕಾರಣ ಅದು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ನೇಮಕಾತಿಯನ್ನು ಶೀಘ್ರವೇ ಮಾಡಿದರೆ ಹೈಕೋರ್ಟ್‌ಗೆ ಸಲ್ಲಿಕೆಯಾಗುವ ಮೇಲ್ಮನವಿಗಳ ಸಂಖ್ಯೆ ಕಡಿಮೆಯಾಗಲಿದೆ. ಆದ್ದರಿಂದ, ಬೇಗ ನೇಮಕಾತಿ ಪೂರ್ಣಗೊಳಿಸಿ’ ಎಂದು ನಿರ್ದೇಶಿಸಿ ವಿಚಾರಣೆ ಮುಂದೂಡಿತು.

ರಾಹುಲ್ ಗಾಂಧಿ, ಸಿದ್ದರಾಮಯ್ಯ, ಡಿಕೆಶಿಗೆ ಸಮನ್ಸ್

ಬೆಂಗಳೂರು: ಪತ್ರಿಕೆಗಳಲ್ಲಿ ಸುಳ್ಳು ಜಾಹೀರಾತು ನೀಡಿ ಬಿಜೆಪಿ ವರ್ಚಸ್ಸಿಗೆ ಧಕ್ಕೆ ತಂದ ಆರೋಪದಡಿ ದಾಖಲಿಸಲಾಗಿರುವ ಮಾನನಷ್ಟ ಮೊಕದ್ದಮೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಸಮನ್ಸ್ ಜಾರಿಗೊಳಿಸಲು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶಿಸಿದೆ.

ಈ ಕುರಿತಂತೆ ಬಿಜೆಪಿಯ ರಾಜ್ಯ ಘಟಕದ ಕಾರ್ಯದರ್ಶಿ ಹಾಗೂ ವಿಧಾನಪರಿಷತ್ ಸದಸ್ಯ ಬಿ.ಎಸ್.ಕೇಶವಪ್ರಸಾದ್ ಸಲ್ಲಿಸಿರುವ ಖಾಸಗಿ ದೂರನ್ನು ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯ’ದ 42ನೇ ಎಸಿಎಂಎಂ ಕೋರ್ಟ್ ನ್ಯಾಯಾಧೀಶೆ ಜೆ.ಪ್ರೀತ್ ಗುರುವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ರಾಹುಲ್ ಗಾಂಧಿ ಪರ ವಕೀಲರು, ‘ರಾಹುಲ್ ಗಾಂಧಿ ಚುನಾವಣೆಯ ನಿಮಿತ್ತ ನ್ಯಾಯಾಲಯಕ್ಕೆ ಹಾಜರಾಗಲು ಸಾಧ್ಯವಾಗುತ್ತಿಲ್ಲ. ಹೀಗಾಗಿ, ಒಂದಷ್ಟು ಕಾಲಾವಕಾಶ ನೀಡಬೇಕು’ ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಾಧೀಶರು ರಾಹುಲ್ ಗಾಂಧಿ ಜೂನ್ 1ಕ್ಕೆ ಹಾಜರಾಗುವಂತೆ ಆದೇಶಿಸಿದರು.

ಮಾನಹಾನಿ ಮೊಕದ್ದಮೆ ದಾಖಲಿಸಲು ಫೆಬ್ರುವರಿ 23ರಂದೇ ಸೂಚಿಸಿ, ಆರೋಪಿಗಳಿಗೆ ಸಮನ್ಸ್ ಜಾರಿಗೊಳಿಸಲು ಆದೇಶಿಸಲಾಗಿತ್ತು. ಆದರೆ, ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರಿಗೆ ತಲುಪದ ಕಾರಣ ಮರು ಜಾರಿಗೊಳಿಸಲು ಆದೇಶಿಸಲಾಗಿದೆ. ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರು ಏಪ್ರಿಲ್ 29ಕ್ಕೆ ಹಾಜರಾಗುವಂತೆ ಸೂಚಿಸಲಾಗಿದೆ. ದೂರುದಾರರ ಪರ ಹೈಕೋರ್ಟ್ ವಕೀಲ ಎಂ.ವಿನೋದ್ ಕುಮಾರ್ ಹಾಜರಿದ್ದರು.

ಪ್ರಕರಣವೇನು?: ‘2023ರಲ್ಲಿ ನಡೆದ ಕರ್ನಾಟಕ ವಿಧಾನಸಭೆ ಚುನಾವಣೆಯ ಸಂದರ್ಭದಲ್ಲಿ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಪಕ್ಷವು ರಾಷ್ಟ್ರೀಯ ಮತ್ತು ರಾಜ್ಯದ ಪ್ರಮುಖ ದಿನಪತ್ರಿಕೆಗಳಲ್ಲಿ 2023ರ ಮೇ 5ರಂದು ಜಾಹೀರಾತು ನೀಡಿ, ಆಡಳಿತಾರೂಢ ರಾಜ್ಯ ಬಿಜೆಪಿ ಸರ್ಕಾರ ಶೇ 40ರಷ್ಟು ಕಮಿಷನ್ ಸರ್ಕಾರ. ಇದು ಕಳೆದ ನಾಲ್ಕು ವರ್ಷಗಳಲ್ಲಿ ₹1.50 ಲಕ್ಷ ಕೋಟಿ ಲೂಟಿ ಹೊಡೆದಿರುವ ಭ್ರಷ್ಟ ಸರ್ಕಾರ’ ಎಂದು ಆರೋಪಿಸಿದ್ದರು. ‘ಈ ಆರೋಪಕ್ಕೆ ಫಿರ್ಯಾದುದಾರರೇ ಇಲ್ಲ. ಇದು ರಾಷ್ಟ್ರೀಯ ಪಕ್ಷವೊಂದರ ವಿರುದ್ಧ ಮಾಡಲಾಗಿರುವ ಆಧಾರ ರಹಿತ, ಪೂರ್ವಗ್ರಹ ಪೀಡಿತ ಮತ್ತು ಮಾನಹಾನಿಕರ ಆರೋಪ’ ಎಂದು ಈ ಖಾಸಗಿ ದೂರು ದಾಖಲಿಸಲಾಗಿದೆ.

ಹೆದ್ದಾರಿ ಸವಾರಿ ಮತ್ತೆ ದುಬಾರಿ

ಪ್ರಜಾವಾಣಿ ವಾರ್ತೆ

ರಾಮನಗರ: ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಬೆಂಗಳೂರು– ಮೈಸೂರು ಹೆದ್ದಾರಿ ಟೋಲ್ ದರವನ್ನು ₹5ರಿಂದ ₹40ರಷ್ಟು ಏರಿಸಿದೆ. ಪರಿಷ್ಕೃತ ಶುಲ್ಕವು ಏ. 1ರಿಂದ ಜಾರಿಗೆ ಬರಲಿದೆ.

ಇದರೊಂದಿಗೆ ಒಂದು ವರ್ಷದ ಅವಧಿಯಲ್ಲಿ ಹೆದ್ದಾರಿ ಟೋಲ್ ಎರಡು ಸಲ ಏರಿಕೆಯಾದಂತಾಗಿದೆ. ಪ್ರತಿ ವರ್ಷ ಶೇ 22ರಷ್ಟು ಶುಲ್ಕ ಹೆಚ್ಚಳ ಮಾಡುವ ಪ್ರಾಧಿಕಾರ, ಈ ಸಲ ಪ್ರಯಾಣಿಕರಿಗೆ ಹೆಚ್ಚಿನ ಹೊರೆಯಾಗದಂತೆ ಏರಿಕೆ ಮಾಡಿದೆ.

ಕಳೆದ ಏಪ್ರಿಲ್‌ನಲ್ಲಿ ಟೋಲ್ ಹೆಚ್ಚಳವಾದಾಗ ಸಾರ್ವಜನಿಕರಿಂದ ವ್ಯಾಪಕ ಆಕ್ರೋಶ ವ್ಯಕ್ತವಾಗಿತ್ತು. ಆಗ ಪ್ರಾಧಿಕಾರ ಶುಲ್ಕ ಏರಿಕೆ ಕೈಬಿಟ್ಟಿತ್ತು. ಎರಡು ತಿಂಗಳ ಬಳಿಕ ಜೂನ್‌ನಲ್ಲಿ ಶೇ 22ರಷ್ಟು ಹೆಚ್ಚಿಸಿತ್ತು. ಈಗ 9 ತಿಂಗಳ ಬಳಿಕ ಮತ್ತೆ ಟೋಲ್ ಹೆಚ್ಚಿಸಿದೆ.

ಬಾಗೇಪಲ್ಲಿ: ಹೆಚ್ಚಳ

ಚಿಕ್ಕಬಳ್ಳಾಪುರ: ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಬೆಂಗಳೂರು–ಹೈದರಾಬಾದ್ ಹೆದ್ದಾರಿ ಟೋಲ್ ದರ ಏರಿಕೆ ಮಾಡಿದೆ. ಬಾಗೇಪಲ್ಲಿಯ ಸುಂಕ ವಸೂಲಾತಿ ಕೇಂದ್ರದಲ್ಲಿ ಶೇ 5ರಿಂದ ಶೇ 30ರಷ್ಟು ಟೋಲ್ ಶುಲ್ಕ ಹೆಚ್ಚಿಸಲಾಗಿದೆ.

ಪರಿಷ್ಕೃತ ಶುಲ್ಕವು 2024ರ ಏಪ್ರಿಲ್ 1ರಿಂದ 2025ರ ಮಾರ್ಚ್ 31ರವರೆಗೆ ಜಾರಿಯಲ್ಲಿರುತ್ತದೆ ಎಂದು ಪ್ರಾಧಿಕಾರವು ತಿಳಿಸಿದೆ.

ಎಲ್ಲ ಮಾದರಿಯ ವಾಹನಗಳು ಪ್ರಯಾಣದ 24 ತಾಸಿನಲ್ಲಿ ಮರಳಿ ಬಂದಲ್ಲಿ ಶೇ 25ರಷ್ಟು ರಿಯಾಯಿತಿ ನೀಡಲಾಗುತ್ತದೆ. ವಾಹನಗಳು ಪಾವತಿ ದಿನಾಂಕದಿಂದ ಒಂದು ತಿಂಗಳಲ್ಲಿ 50 ಬಾರಿ ಪ್ರಯಾಣಿಸಿದ್ದಲ್ಲಿ ಶೇ 33ರಷ್ಟು ರಿಯಾಯಿತಿ ಇರುತ್ತದೆ.

ಟೋಲ್ ಪ್ಲಾಜಾದಿಂದ 20 ಕಿ.ಮೀ ವಿಸ್ತೀರ್ಣದ ಒಳಗೆ ವಾಸಿಸುವ ಎಲ್ಲ ವಾಣಿಜ್ಯೇತರ ವಾಹನಗಳಿಗೆ ₹340ಕ್ಕೆ ಮಾಸಿಕ ಪಾಸ್ ದೊರೆಯುತ್ತದೆ ಎಂದು ಪ್ರಾಧಿಕಾರವು ಪ್ರಕಟಿಸಿದೆ.

ಮೈಸೂರು–ಬೆಂಗಳೂರು ಹೆದ್ದಾರಿ ಟೋಲ್ ದರ (₹ಗಳಲ್ಲಿ)

ಏಕಮುಖ ಸಂಚಾರ (ನೀಲಿ) / ದ್ವಿಮುಖ ಸಂಚಾರ (ಕಿತ್ತಳೆ)

ಹಿಂದಿನ ದರ	ಪರಿಷ್ಕೃತ ದರ	ಏರಿಕೆ
ಕಾರು, ವ್ಯಾನ್, ಜೀಪು		
165	170	5
250	255	5
ಲಘು ವಾಹನ, ಮಿನಿ ಬಸ್		
270	275	5
405	415	10
ಟ್ರಕ್, ಬಸ್, 2 ಆಕ್ಸೆಲ್ ವಾಹನ		
565	580	15
850	870	20
ಮೂರು ಆಕ್ಸೆಲ್ ವಾಣಿಜ್ಯ ವಾಹನ		
615	635	20
925	950	25
ಕಟ್ಟಡ ನಿರ್ಮಾಣ ಭಾರಿ ವಾಹನ (4–6 ಆಕ್ಸೆಲ್)		
885	910	35
1,330	365	35
ಏಳು ಅಥವಾ ಅದಕ್ಕಿಂತ ಹೆಚ್ಚಿನ ಆಕ್ಸೆಲ್ ವಾಹನ		
1,330	1,362	35
1,620	1,660	40

ಬಾಗೇಪಲ್ಲಿ ಟೋಲ್ ಪ್ಲಾಜಾ ಟೋಲ್ ದರ (₹ಗಳಲ್ಲಿ)

ಏಕಮುಖ ಸಂಚಾರ (ನೀಲಿ) / ದ್ವಿಮುಖ ಸಂಚಾರ (ಕಿತ್ತಳೆ)

ಹಿಂದಿನ ದರ	ಪರಿಷ್ಕೃತ ದರ	ಏರಿಕೆ
ಕಾರು, ವ್ಯಾನ್, ಜೀಪು ಲಘು ಮೋಟಾರ್ ವಾಹನ		
115	115	0
170	175	5
ಲಘು ವಾಣಿಜ್ಯ ಬಳಕೆ ವಾಹನ ಲಘು ಸರಕು ಸಾಗಣೆ ವಾಹನ ಮಿನಿ ಬಸ್		
185	190	5
275	285	10
ಟ್ರಕ್, ಬಸ್, ಎರಡು ಆಕ್ಸೆಲ್ ವಾಹನ		
385	395	10
580	595	15
ಮೂರು ಆಕ್ಸೆಲ್ ವಾಣಿಜ್ಯ ವಾಹನ		
420	430	10
635	650	15
ಕಟ್ಟಡ ನಿರ್ಮಾಣ ಭಾರಿ ವಾಹನ (4–6 ಆಕ್ಸೆಲ್)		
605	620	15
910	935	25
ಏಳು ಅಥವಾ ಅದಕ್ಕಿಂತ ಹೆಚ್ಚಿನ ಆಕ್ಸೆಲ್ ವಾಹನ		
740	755	15
1,105	1,135	30

ವ್ಯಾಪಿಸುತ್ತಿರುವ ಭಯೋತ್ಪಾದನೆ ಸರ್ಕಾರದ ನಿರ್ಲಕ್ಷ್ಯ: ಬಿಜೆಪಿ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಭಯೋತ್ಪಾದನಾ ಚಟುವಟಿಕೆಗಳು ವ್ಯಾಪಿಸುತ್ತಿದ್ದರೂ ರಾಜ್ಯ ಸರ್ಕಾರ ಮಾತ್ರ ಏನೂ ನಡೆಯುತ್ತಿಲ್ಲ ಎಂದು ನಿರ್ಲಕ್ಷ್ಯ ಭಾವನೆಯಲ್ಲಿದೆ. ಕರ್ನಾಟಕ ಅತ್ಯಂತ ದುರ್ದೈವ ಪರಿಸ್ಥಿತಿಯಲ್ಲಿದೆ’ ಎಂದು ಬಿಜೆಪಿ ಉಪಾಧ್ಯಕ್ಷೆ ಮಾಳವಿಕಾ ಅವಿನಾಶ್ ಹೇಳಿದರು.

‘ಎನ್‌ಐಎ ಶಿವಮೊಗ್ಗ ಮತ್ತು ಬೆಂಗಳೂರಿನಲ್ಲಿ ದಾಳಿ ನಡೆಸಿ ಮಹತ್ವದ ಮಾಹಿತಿಗಳನ್ನು ಕಲೆ ಹಾಕಿದೆ. ರಾಮೇಶ್ವರಂ ಕೆಫೆ ಸ್ಫೋಟಕ್ಕೆ ಸಂಬಂಧಿಸಿದಂತೆ ಇಬ್ಬರು ಪ್ರಮುಖ ಆರೋಪಿಗಳ ಕುರಿತು ಮಾಹಿತಿ ಲಭಿಸಿದೆ. ಇಲ್ಲಿನ ಸ್ಫೋಟಕ್ಕೂ ಮಂಗಳೂರಿನ ಸ್ಫೋಟಕ್ಕೂ ಸಂಬಂಧ ಇದೆ ಎಂದು ಹೇಳಿದರೂ ಮುಖ್ಯಮಂತ್ರಿಯವರು ಅಲ್ಲಗಳೆಯುತ್ತಿದ್ದಾರೆ’ ಎಂದು ಅವರು ಸುದ್ದಿಗೋಷ್ಠಿಯಲ್ಲಿ ಟೀಕಿಸಿದರು.

ಲಂಚ ಪಡೆಯುತ್ತಿದ್ದ ಬಿಇಒ ಬಂಧನ

ಮೈಸೂರು: ಅಂಗವಿಕಲ ಶಿಕ್ಷಕ ನರಸಿಂಹಮೂರ್ತಿ ಅವರ 3 ತಿಂಗಳ ಗೌರವ ಧನ ಬಿಡುಗಡೆಗೆ ವಿಶೇಷ ಶಿಕ್ಷಕ ರಮೇಶ ಮೂಲಕ ₹ 5 ಸಾವಿರ ಲಂಚ ಪಡೆಯುತ್ತಿದ್ದ ನಂಜನಗೂಡು ಬಿಇಒ ಎ.ಟಿ.ಶಿವಲಿಂಗಯ್ಯ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

‘ಬಿಇಒ ಶಿವಲಿಂಗಯ್ಯ ₹ 10 ಸಾವಿರಕ್ಕೆ ಬೇಡಿಕೆ ಇರಿಸಿರುವುದಾಗಿ ನರಸಿಂಹಮೂರ್ತಿ ಲೋಕಾಯುಕ್ತಕ್ಕೆ ದೂರು ನೀಡಿದ್ದರು. ಆ ಪ್ರಕಾರ ಕಾರ್ಯಾಚರಣೆ ನಡೆಸಿದಾಗ ಶಿವಲಿಂಗಯ್ಯ, ರಮೇಶ ಅವರು ಸಿಕ್ಕಿಬಿದ್ದರು’ ಎಂದು ಲೋಕಾಯುಕ್ತ ಎಸ್‌ಪಿ ವಿ.ಜೆ.ಸಜಿತ್ ಹೇಳಿದರು.

ಬಾಂಬ್ ಸ್ಫೋಟ: ಪ್ರಮುಖ ಸಂಚುಕೋರನ ಬಂಧನ

ಒಂದನೇ ಪುಟದಿಂದ...

18 ಸ್ಥಳಗಳ ಮೇಲೆ ದಾಳಿ: ‘ಬಾಂಬ್ ಇರಿಸಲು ಸಜ್ಜಾಗಿದ್ದ ಮುಸಾವೀರ್, ತಾಹಾಗೆ ಅಗತ್ಯವಿದ್ದ ಕಚ್ಚಾ ಸಾಮಗ್ರಿ ಹಾಗೂ ಇತರೆ ವಸ್ತುಗಳನ್ನು ಮುಜಮೀಲ್ ಪೂರೈಸಿದ್ದ. ರಾಮೇಶ್ವರಂ ಕೆಫೆ ಸ್ಥಳಕ್ಕೆ ತಲುಪಲು ಹಾಗೂ ಅಲ್ಲಿಂದ ಪರಾರಿಯಾಗುವ ಸಂದರ್ಭದಲ್ಲಿ ಸಾರಿಗೆ ವ್ಯವಸ್ಥೆಗೂ ಅನುಕೂಲ ಕಲ್ಪಿಸಿದ್ದ. ಮುಜಮೀಲ್ ಸಹಾಯದಿಂದಲೇ ಮುಸಾವೀರ್, ಕೆಫೆಯಲ್ಲಿ ಬಾಂಬ್ ಇರಿಸಿ ಪರಾರಿಯಾಗಿದ್ದಾನೆ’ ಎಂದು ಎನ್‌ಐಎ ಮೂಲಗಳು ಹೇಳಿವೆ.

‘ಸ್ಫೋಟದಲ್ಲಿ ಭಾಗಿಯಾಗಿದ್ದವರ ಬಗ್ಗೆ ಮಾಹಿತಿ ಸಿಗುತ್ತಿದ್ದಂತೆಯೇ ಕರ್ನಾಟಕ, ತಮಿಳುನಾಡು ಹಾಗೂ ಉತ್ತರ ಪ್ರದೇಶದ 18 ಸ್ಥಳಗಳ ಮೇಲೆ ಇತ್ತೀಚೆಗೆ ದಾಳಿ ಮಾಡಲಾಯಿತು. ಮುಜಮೀಲ್, ಮುಸಾವೀರ್, ಅಬ್ದುಲ್ ಮಥೀನ್ ತಾಹಾ ಮನೆಗಳು ಹಾಗೂ ಅಂಗಡಿಗಳಲ್ಲಿ ಶೋಧ ನಡೆಸಲಾಯಿತು. ದಾಳಿ ಸಂದರ್ಭದಲ್ಲೇ ಮುಜಮೀಲ್ ಸಿಕ್ಕಿಬಿದ್ದ. ಎಲೆಕ್ಟ್ರಾನಿಕ್ ಉಪಕರಣಗಳು ಹಾಗೂ ನಗದು ಜಪ್ತಿ ಮಾಡಲಾಯಿತು. ಮುಜಮೀಲ್, ಮೊಬೈಲ್ ಮಳಿಗೆ ಇಟ್ಟುಕೊಂಡಿದ್ದನೆಂಬ ಮಾಹಿತಿ ಇದೆ’ ಎಂದು ತಿಳಿಸಿವೆ.



‘ಪ್ರಮುಖ ಶಂಕಿತರಾದ ಮುಸಾವೀರ್ ಹಾಗೂ ಅಬ್ದುಲ್ ತಾಹಾ ಹಲವು ವರ್ಷಗಳಿಂದ ತಲೆಮರೆಸಿಕೊಂಡಿದ್ದಾರೆ. ಕರ್ನಾಟಕ, ತಮಿಳುನಾಡು, ಕೇರಳ ಹಾಗೂ ಇತರೆ ರಾಜ್ಯಗಳಲ್ಲಿ ಇವರ ಚಲನವಲನಗಳಿವೆ. ಅವರಿಬ್ಬರ ಪತ್ತೆಗೆ ಶೋಧ ಮುಂದುವರಿಸಲಾಗಿದೆ’ ಎಂದು ಎನ್‌ಐಎ ಮೂಲಗಳು ಹೇಳಿವೆ.

ದೊಡ್ಡ ಸಂಚು: ‘ಕರ್ನಾಟಕ, ತಮಿಳುನಾಡು ಸೇರಿದಂತೆ ಹಲವು ರಾಜ್ಯದಲ್ಲಿರುವ ಶಂಕಿತರು, ದೇಶದಲ್ಲಿ ಭಯೋತ್ಪಾದನಾ ಕೃತ್ಯ ಎಸಗಲು ಸಂಚು ರೂಪಿಸುತ್ತಿದ್ದಾರೆ. ಅದರ ಭಾಗವಾಗಿಯೇ ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಸ್ಫೋಟವಾಗಿದೆ. ಇದೊಂದು ದೊಡ್ಡ ಸಂಚು. ಇದರ ಹಿಂದಿರುವ ಪ್ರತಿಯೊಬ್ಬರನ್ನು ಪತ್ತೆ ಮಾಡಲು ತನಿಖೆ ಮುಂದುವರಿದಿದೆ’ ಎಂದು ಮೂಲಗಳು ತಿಳಿಸಿವೆ.

‘ಬೆಂಗಳೂರು ಸಮೀಪವೇ ಐಇಡಿ ತಯಾರಿ’

‘ಬಂಧಿತ ಮುಜಮೀಲ್, ಮುಸಾವೀರ್ ಹಾಗೂ ಅಬ್ದುಲ್ ಮಥೀನ್ ತಾಹಾ ಜೊತೆ ನಿರಂತರ ಸಂಪರ್ಕದಲ್ಲಿದ್ದ. ಕಚ್ಚಾ ಬಾಂಬ್ (ಐಇಡಿ) ತಯಾರಿಸಲು ಅಗತ್ಯವಿದ್ದ ಕೆಲ ವಸ್ತುಗಳನ್ನು ಈತನೇ ಪೂರೈಸಿದ್ದನೆಂಬ ಮಾಹಿತಿಯಿದೆ. ಅದೇ ಕಚ್ಚಾ ಸಾಮಗ್ರಿಗಳನ್ನು ಬೆಂಗಳೂರು ಸಮೀಪದ ಸ್ಥಳವೊಂದಕ್ಕೆ ತಂದಿದ್ದ ಶಂಕಿತರು, ಅಲ್ಲಿಯೇ ಐಇಡಿ ತಯಾರಿಸಿದ್ದಾರೆ. ಅದನ್ನೇ ರಾಮೇಶ್ವರಂ ಕೆಫೆಯಲ್ಲಿ ಇಟ್ಟು ಪರಾರಿಯಾಗಿರುವ ಶಂಕೆ ಇದೆ. ಈ ಬಗ್ಗೆ ಹೆಚ್ಚಿನ ಮಾಹಿತಿ ಕಲೆಹಾಕಲಾಗುತ್ತಿದೆ’ ಎಂದು ತನಿಖಾ ತಂಡದ ಮೂಲಗಳು ಹೇಳಿವೆ.

‘ಬೆಂಗಳೂರಿನಲ್ಲಿ 16 ವರ್ಷ ಕೆಲಸ’

‘ಬಂಧಿತ ಮುಜಮೀಲ್, ಬೆಂಗಳೂರಿನ ಹೋಟೆಲ್‌ವೊಂದರಲ್ಲಿ 16 ವರ್ಷ ಕೆಲಸ ಮಾಡಿದ್ದ. ಕಳಸದವರಾದ ಈತನ ಕುಟುಂಬಸ್ಥರು, ಸದ್ಯ ಚಿಕ್ಕಮಗಳೂರಿನಲ್ಲಿ ವಾಸವಿದ್ದಾರೆ’ ಎಂದು ಮೂಲಗಳು ಹೇಳಿವೆ.

ದೆಹಲಿ ಅಬಕಾರಿ ನೀತಿ ಹಗರಣ: ಕೋರ್ಟ್ ಅನುಮತಿ ಪಡೆದು ಹೇಳಿಕೆ ದಾಖಲು

ತನಿಖೆ ಎದುರಿಸಲು ಸಿದ್ಧ: ಅರವಿಂದ ಕೇಜ್ರಿವಾಲ್

ನವದೆಹಲಿ(ಪಿಟಿಐ): ‘ಆಮ್ ಆದ್ಮಿ ಪಕ್ಷ (ಎಎಪಿ) ಭ್ರಷ್ಟಾಚಾರ ನಡೆಸಿದೆ ಎಂದು ದೇಶದ ಮುಂದೆ ಬಿಂಬಿಸಲಾಗುತ್ತಿದ್ದು, ನನ್ನ ವಿರುದ್ಧದ ಆರೋಪಕ್ಕೆ ಸಂಬಂಧಿಸಿ ಜಾರಿ ನಿರ್ದೇಶನಾಲಯ ನಡೆಸುತ್ತಿರುವ ತನಿಖೆ ಎದುರಿಸಲು ನಾನು ಸಿದ್ಧ’ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಇಲ್ಲಿನ ನ್ಯಾಯಾಲಯಕ್ಕೆ ಗುರುವಾರ ತಿಳಿಸಿದರು.

ದೆಹಲಿ ಅಬಕಾರಿ ನೀತಿ ಹಗರಣದ ಜೊತೆ ನಂಟಿನ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ) ಕೇಜ್ರಿವಾಲ್ ಅವರನ್ನು ಬಂಧಿಸಿದೆ. ಇ.ಡಿ. ಕಸ್ಟಡಿ ಗುರುವಾರ ಕೊನೆಗೊಂಡ ಹಿನ್ನೆಲೆಯಲ್ಲಿ ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ಈ ವೇಳೆ ಅವರು, ನ್ಯಾಯಾಧೀಶರಿಂದ ಅನುಮತಿ ಪಡೆದು, ಹೇಳಿಕೆ ದಾಖಲಿಸಿದರು.

ವಿಶೇಷ ನ್ಯಾಯಾಧೀಶರಾದ ಕಾವೇರಿ ಬವೇಜಾ ವಿಚಾರಣೆ ನಡೆಸಿದರು.

‘ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿ ನಾಲ್ಕು ಜನ ಸಾಕ್ಷಿಗಳು ನನ್ನ ಹೆಸರು ಹೇಳಿದ್ದಾರೆ. ನನ್ನನ್ನು ಬಂಧಿಸಲು ಈ ನಾಲ್ವರ ಹೇಳಿಕೆಗಳು ಸಾಕೇ’ ಎಂಬ ಪ್ರಶ್ನೆಯನ್ನು ಕೇಜ್ರಿವಾಲ್ ಮುಂದಿಟ್ಟರು.

‘ಶರತ್‌ಚಂದ್ರ ರೆಡ್ಡಿ ಅವರು ಬಿಜೆಪಿಗೆ ₹ 55 ಕೋಟಿ ದೇಣಿಗೆ ನೀಡಿದ್ದಾರೆ. ಅದೂ, ತಮ್ಮನ್ನು ಬಂಧಿಸಿದ ನಂತರ ಅವರು ಈ ಹಣ ನೀಡಿದ್ದು, ಇದಕ್ಕೆ ತಮ್ಮ ಬಳಿ ಸಾಕ್ಷ್ಯಗಳಿವೆ’ ಎಂದರು.

ರೆಡ್ಡಿ, ಆರೊಬಿಂದೊ ಫಾರ್ಮಾ ಲಿಮಿಟೆಡ್‌ನ ನಿರ್ದೇಶಕ. ಅಬಕಾರಿ ನೀತಿ ಹಗರಣದಲ್ಲಿ ಸಹ ಆರೋಪಿ. ಅವರು ಈಗ ಮಾಫಿಸಾಕ್ಷಿಯಾಗಿದ್ದಾರೆ.

ಕೇಜ್ರಿವಾಲ್ ಪರ ವಾದ ಮಂಡಿಸಿದ ವಕೀಲ ರಮೇಶ್ ಗುಪ್ತಾ, ‘ನನ್ನ ಕಕ್ಷಿದಾರ ತನಿಖೆಗೆ ಸಹಕರಿಸಲು ಇಚ್ಛಿಸಿದ್ದಾರೆ. ಆದರೆ, ಅವರ ಕಸ್ಟಡಿಯನ್ನು ವಿಸ್ತರಿಸಲು ಜಾರಿ ನಿರ್ದೇಶನಾಲಯ ನೀಡುತ್ತಿರುವ ಕಾರಣಗಳ ಪ್ರಕಾರ ನೀಡಲು ಆಗುವುದಿಲ್ಲ’ ಎಂದು ನ್ಯಾಯಾಲಯಕ್ಕೆ ತಿಳಿಸಿದರು.

ಗುರುವಾರ ವಿಚಾರಣೆಗೆ ಹಾಜರಾದ ನಂತರ ರೋಸ್ ಅವೆನ್ಯೂ ಕೋರ್ಟ್‌ನಿಂದ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ನಿರ್ಗಮಿಸಿದರು —ಪಿಟಿಐ ಚಿತ್ರ

> ನನ್ನ ಪತಿಯ ಮೇಲೆ ದೌರ್ಜನ್ಯ ನಡೆಸಲಾಗುತ್ತಿದೆ. ಅವರ ಆರೋಗ್ಯ ಸರಿಯಾಗಿಲ್ಲ. ದೇಹದಲ್ಲಿನ ಸಕ್ಕರೆ ಪ್ರಮಾಣದಲ್ಲಿ ಏರುಪೇರಾಗುತ್ತಿದೆ
>
> **ಸುನೀತಾ ಕೇಜ್ರಿವಾಲ್,** ಅರವಿಂದ ಕೇಜ್ರಿವಾಲ್ ಪತ್ನಿ

ಗೋವಾ ಅಧ್ಯಕ್ಷ ಸೇರಿ ನಾಲ್ವರ ವಿಚಾರಣೆ

ಪಣಜಿ(ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಆಮ್ ಆದ್ಮಿ ಪಕ್ಷದ (ಎಎಪಿ) ಗೋವಾ ಘಟಕದ ಅಧ್ಯಕ್ಷ ಅಮಿತ್ ಪಾಲೇಕರ್ ಹಾಗೂ ಇತರ ಮೂವರನ್ನು ಜಾರಿ ನಿರ್ದೇಶನಾಲಯ (ಇ.ಡಿ.) ಅಧಿಕಾರಿಗಳು ಗುರುವಾರ ವಿಚಾರಣೆಗೆ ಒಳಪಡಿಸಿದರು.

ಪಾಲೇಕರ್, ಮುಖಂಡರಾದ ರಾಮರಾವ್ ವಾಘ್, ದತ್ತಪ್ರಸಾದ್ ನಾಯ್ಕ್ ಹಾಗೂ ಅಶೋಕ್ ನಾಯ್ಕ್ ಅವರನ್ನು ಇಲ್ಲಿನ ಇ.ಡಿ. ಕಚೇರಿಯಲ್ಲಿ ವಿಚಾರಣೆಗೆ ಒಳಪಡಿಸಲಾಯಿತು.

ವಿಚಾರಣೆ ಎದುರಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಪಾಲೇಕರ್,‘ಯಾವುದರ ಕುರಿತು ತನಿಖೆ ನಡೆಸಲಾಗುತ್ತಿದೆ ಎಂಬ ವಿವರಗಳನ್ನು ನಾನು ಬಹಿರಂಗಪಡಿಸುವುದಿಲ್ಲ. ನನಗೆ ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿರುವೆ’ ಎಂದರು.

‘ಇ.ಡಿ. ಅಧಿಕಾರಿಗಳು ತಮ್ಮ ಕರ್ತವ್ಯ ಮಾಡುತ್ತಿದ್ದರೆ, ಒಬ್ಬ ನಾಗರಿಕನಾಗಿ ನಾನು ನನ್ನ ಪಾಲಿನ ಕೆಲಸ ಮಾಡುತ್ತಿರುವೆ’ ಎಂದರು.

‘ರಾಜಕೀಯ ಪಿತೂರಿ’

ವಿಚಾರಣೆಗಾಗಿ ತಮ್ಮನ್ನು ನ್ಯಾಯಾಲಯದ ಸಭಾಂಗಣಕ್ಕೆ ಕರೆದುಕೊಂಡು ಹೋಗುವ ವೇಳೆ ಸುದ್ದಿಗಾರರ ಜೊತೆ ಮಾತನಾಡಿದ ಕೇಜ್ರಿವಾಲ್,‘ತಮ್ಮ ವಿರುದ್ಧದ ಈ ಕಾನೂನುಕ್ರಮ ರಾಜಕೀಯ ಪಿತೂರಿ. ಇದಕ್ಕೆ ಜನರು ತಕ್ಕ ಉತ್ತರ ನೀಡುತ್ತಾರೆ’ ಎಂದು ಹೇಳಿದರು.

‘ಜೈಲಿನಿಂದ ದೆಹಲಿ ಸರ್ಕಾರವನ್ನು ಮುನ್ನಡೆಸಲು ಸಾಧ್ಯ ಇಲ್ಲ’ ಎಂಬುದಾಗಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ಬುಧವಾರ ಹೇಳಿದ್ದರು. ಈ ಕುರಿತು ಪತ್ರಕರ್ತರ ಪ್ರಶ್ನೆಗೆ ಕೇಜ್ರಿವಾಲ್ ಹೀಗೆ ಪ್ರತಿಕ್ರಿಯಿಸಿದ್ದಾರೆ.

ಕೇಜ್ರಿವಾಲ್ ಅವರ ಪತ್ನಿ ಸುನೀತಾ ಕೇಜ್ರಿವಾಲ್, ಸಚಿವರಾದ ಆತಿಶಿ, ಗೋಪಾಲ್ ರಾಯ್, ಸೌರಭ್ ಭಾರದ್ವಾಜ್ ನ್ಯಾಯಾಲಯದಲ್ಲಿ ಹಾಜರಿದ್ದರು.

ಏ.1ರವರೆಗೆ ಕೇಜ್ರಿವಾಲ್ ಇ.ಡಿ ಕಸ್ಟಡಿ ವಿಸ್ತರಣೆ

ಒಂದನೇ ಪುಟದಿಂದ...

ಇ.ಡಿ ಅರ್ಜಿ ವಿಚಾರಣೆ ನಡೆಸಿದ ವಿಶೇಷ ನ್ಯಾಯಾಧೀಶೆ ಕಾವೇರಿ ಬವೇಜಾ,‘ತಾನು ಸಂಗ್ರಹಿಸಿರುವ ಸಾಕ್ಷ್ಯಗಳು ಹಾಗೂ ದಾಖಲಿಸಿಕೊಂಡಿರುವ ಹೇಳಿಕೆಗೆ ಸಂಬಂಧಿಸಿ ಕೇಜ್ರಿವಾಲ್ ಅವರನ್ನು ಮುಖಾಮುಖಿ ಮಾಡಬೇಕು ಎಂಬುದಕ್ಕೆ ಸಂಬಂಧಿಸಿ ಇ.ಡಿ ಸಾಕಷ್ಟು ಕಾರಣಗಳನ್ನು ನೀಡಿದೆ’ ಎಂದರು.

ಡಿಜಿಟಲ್ ಸಾಧನಗಳ ಮೂಲಕ ಸಂಗ್ರಹಿಸಿರುವ ದತ್ತಾಂಶಕ್ಕೆ ಸಂಬಂಧಿಸಿ ಕೇಜ್ರಿವಾಲ್ ಅವರನ್ನು ಮತ್ತಷ್ಟು ವಿಚಾರಣೆಗೆ ಒಳಪಡಿಸುವ ಅಗತ್ಯ ಇದೆ’ ಎಂಬ ಇ.ಡಿ ವಾದ ಪರಿಗಣಿಸಿದ ನ್ಯಾಯಾಧೀಶೆ ಬವೇಜಾ,‘ಕಸ್ಟಡಿ ಅವಧಿ ವಿಸ್ತರಿಸಿದರಲ್ಲದೇ, ಏ. 1ರಂದು ಬೆಳಿಗ್ಗೆ 11ಕ್ಕೆ ಕೇಜ್ರಿವಾಲ್ ಅವರನ್ನು ನ್ಯಾಯಾಲಯದಲ್ಲಿ ಹಾಜರುಪಡಿಸುವಂತೆ ಸೂಚಿಸಿದರು.

ಪ್ರಕರಣಕ್ಕೆ ಸಂಬಂಧಿಸಿ ಇತರ ಮೂವರ ಹೇಳಿಕೆಗಳನ್ನು ಸಹ ದಾಖಲಿಸಿಕೊಳ್ಳಲಾಗಿದೆ ಎಂದು ವಿಚಾರಣೆ ವೇಳೆ ನ್ಯಾಯಾಲಯಕ್ಕೆ ಇ.ಡಿ. ತಿಳಿಸಿತು.

ಇ.ಡಿ ಅರ್ಜಿಯಲ್ಲಿ ಹೇಳಿದ್ದೇನು? : ‘ವಿಚಾರಣೆ ವೇಳೆ, ಆಗಿನ ಡಿಸಿಎಂ ಮನೀಷ್ ಸಿಸೋಡಿಯಾ ಅವರ ಆಪ್ತ ಕಾರ್ಯದರ್ಶಿಯಾಗಿದ್ದ ಸಿ.ಅರವಿಂದ ಅವರನ್ನು ಕೇಜ್ರಿವಾಲ್ ಜೊತೆ ಮುಖಾಮುಖಿಯಾಗಿಸಲಾಯಿತು. 2021–22ರ ಅಬಕಾರಿ ನೀತಿಗೆ ಸಂಬಂಧಿಸಿದ ಸಚಿವರ ಗುಂಪಿನ (ಜಿಒಎಂ) ಕರಡು ವರದಿಯನ್ನು ಮುಖ್ಯಮಂತ್ರಿ ನಿವಾಸದಲ್ಲಿ ಸಿ.ಅರವಿಂದ ಅವರು ಹಸ್ತಾಂತರಿಸಿದ್ದರು. ಈ ಕುರಿತು ಪ್ರಶ್ನಿಸಲಾಯಿತು’ ಎಂದು ಅಧಿಕಾರಿಗಳು ನ್ಯಾಯಾಲಯಕ್ಕೆ ತಿಳಿಸಿದರು.

‘ಕೇಜ್ರಿವಾಲ್ ಕಸ್ಟಡಿಯಲ್ಲಿದ್ದಾಗ, 2022ರಲ್ಲಿ ನಡೆದ ಗೋವಾ ವಿಧಾನಸಭೆ ಚುನಾವಣೆಯ ಎಎಪಿ ಅಭ್ಯರ್ಥಿಯಾಗಿದ್ದವರೊಬ್ಬರ ಹೇಳಿಕೆಯನ್ನು ಸಹ ದಾಖಲಿಸಿಕೊಳ್ಳಲಾಗಿದೆ. ಚುನಾವಣೆ ವೆಚ್ಚಕ್ಕಾಗಿ ಅಭ್ಯರ್ಥಿ ಬಳಿ ಹಣ ಇರಲಿಲ್ಲ. ಎಲ್ಲ ವೆಚ್ಚವನ್ನು ದೆಹಲಿಯಲ್ಲಿರುವ ಎಎಪಿ ಕಚೇರಿಯಿಂದ ನೋಡಿಕೊಳ್ಳಲಾಗುತ್ತಿತ್ತು ಎಂಬ ಅಂಶ ವಿಚಾರಣೆ ವೇಳೆ ಬಹಿರಂಗವಾಯಿತು’ ಎಂದೂ ಇ.ಡಿ. ತಿಳಿಸಿದೆ.

‘ಕಸ್ಟಡಿ ಅವಧಿಯಲ್ಲಿ, ಕೇಜ್ರಿವಾಲ್ ಅವರ ಪತ್ನಿಯ ಮೊಬೈಲ್ ಫೋನ್‌ನಲ್ಲಿದ್ದ ದತ್ತಾಂಶವನ್ನು ಸಂಗ್ರಹಿಸಲಾಗಿದ್ದು, ವಿಶ್ಲೇಷಿಸಲಾಗುತ್ತಿದೆ’ ಎಂದು ಕೇಜ್ರಿವಾಲ್ ಕಸ್ಟಡಿ ವಿಸ್ತರಿಸುವಂತೆ ಕೋರಿ ಸಲ್ಲಿಸಿದ ಅರ್ಜಿಯಲ್ಲಿ ಇ.ಡಿ. ಮಾಹಿತಿ ನೀಡಿದೆ.

‘ಮಾರ್ಚ್ 21ರಂದು ಕೇಜ್ರಿವಾಲ್ ನಿವಾಸದಲ್ಲಿ ನಡೆಸಿದ ಶೋಧದ ವೇಳೆ ನಾಲ್ಕು ಡಿಜಿಟಲ್ ಸಾಧನಗಳನ್ನು ಜಪ್ತಿ ಮಾಡಲಾಗಿದೆ. ತಮ್ಮ ವಕೀಲರೊಂದಿಗೆ ಸಮಾಲೋಚನೆ ನಡೆಸಿದ ನಂತರ ಲಾಗಿನ್ ವಿವರಗಳು ಹಾಗೂ ಪಾಸ್‌ವರ್ಡ್ ಒದಗಿಸಲು ಕೇಜ್ರಿವಾಲ್ ಸಮಯಾವಕಾಶ ಕೇಳಿದ್ದಾರೆ. ಈ ವಿವರಗಳು ಸಿಕ್ಕನಂತರ ಈ ಸಾಧನಗಳಲ್ಲಿನ ದತ್ತಾಂಶ ಸಂಗ್ರಹಿಸಲಾಗುವುದು’ ಎಂದು ಇ.ಡಿ ತಿಳಿಸಿದೆ.

‘ಸ್ಥಿರಾಸ್ತಿ, ಚರಾಸ್ತಿ, ಆದಾಯ ತೆರಿಗೆ ರಿಟರ್ನ್ಸ್ ಹಾಗೂ ಹಣಕಾಸು ವ್ಯವಹಾರಗಳಿಗೆ ಸಂಬಂಧಿಸಿದ ಇತರ ವಿವರಗಳನ್ನು ಕೇಳಿದ್ದೇವೆ. ಮುಖ್ಯಮಂತ್ರಿ ಕೇಜ್ರಿವಾಲ್ ಅಥವಾ ಅವರ ಕುಟುಂಬದ ಸದಸ್ಯರು ಈ ವಿವರಗಳನ್ನು ಒದಗಿಸಬೇಕಿದೆ’.

‘ದೆಹಲಿಯಲ್ಲಿರುವ ಕೆಲ ಸಗಟು ಮದ್ಯ ವರ್ತಕರ ಮೇಲೆ ಒತ್ತಡ ಹೇರಿರುವ ಆರೋಪಗಳಿವೆ. ಇದರಲ್ಲಿ ಶಾಮೀಲಾಗಿದ್ದಾರೆ ಎನ್ನಲಾದ ಪಂಜಾಬ್‌ನ ಕೆಲ ಹಿರಿಯ ಅಬಕಾರಿ ಅಧಿಕಾರಿಗಳಿಗೆ ಸಮನ್ಸ್ ನೀಡಲಾಗಿದೆ. ಸಂಗ್ರೂರ್‌ನಲ್ಲಿ ಸಂಭವಿಸಿದ ಸಾರಾಯಿ ದುರಂತದ ಕಾರಣ ನೀಡಿರುವ ಅಧಿಕಾರಿಗಳು, ಸಮನ್ಸ್‌ಗೆ ಪ್ರತಿಕ್ರಿಯಿಸಲು ಸಮಯ ಕೇಳಿದ್ದಾರೆ’ ಎಂದು ಜಾರಿ ನಿರ್ದೇಶನಾಲಯ ತಿಳಿಸಿದೆ.

ಪಿಐಎಲ್ ವಿಚಾರಣೆಗೆ ನಿರಾಕರಣೆ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ಬಂಧನದಲ್ಲಿರುವ ಅರವಿಂದ್ ಕೇಜ್ರಿವಾಲ್ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ವಜಾಗೊಳಿಸುವಂತೆ ಕೋರಿ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ಕುರಿತು ವಿಚಾರಣೆ ನಡೆಸಲು ದೆಹಲಿ ಹೈಕೋರ್ಟ್ ನಿರಾಕರಿಸಿದೆ.

ಸುರ್ಜಿತ್ ಸಿಂಗ್ ಯಾದವ್ ಅವರು ಸಲ್ಲಿಸಿದ್ದ ಅರ್ಜಿಯನ್ನು ಪರಿಶೀಲಿಸಿದ ಹಂಗಾಮಿ ನ್ಯಾಯಮೂರ್ತಿ ಮನಮೋಹನ್ ಅವರನ್ನೊಳಗೊಂಡ ನ್ಯಾಯಪೀಠವು, ‘ಅರವಿಂದ್ ಅವರನ್ನು ಸರ್ಕಾರದಿಂದ ದೂರವಿರಿಸಲು ಸೂಕ್ತವಾಗಿರುವ ಕಾನೂನು ನಿಬಂಧನೆಗಳನ್ನು ಅರ್ಜಿದಾರರು ತಿಳಿಸಿಲ್ಲ. ಇದರಲ್ಲಿ ನ್ಯಾಯಾಂಗವು ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲ. ಸಾಂವಿಧಾನಿಕ ವೈಫಲ್ಯ ಕಂಡುಬಂದಲ್ಲಿ ಕಾರ್ಯಾಂಗವು ಸರಿಪಡಿಸುತ್ತದೆ’ ಎಂದು ತಿಳಿಸಿದೆ.

‘ಕಾನೂನು ಪ್ರಕ್ರಿಯೆ ಪಾರದರ್ಶಕವಾಗಿರಲಿ’

ನವದೆಹಲಿ: ಭಾರತದ ಪ್ರತಿಭಟನೆಯ ಹೊರತಾಗಿಯೂ ಅಮೆರಿಕ, ಕೇಜ್ರಿವಾಲ್ ಬಂಧನ ಕುರಿತು ನ್ಯಾಯಯುತ, ಪಾರದರ್ಶಕ ಹಾಗೂ ಸಕಾಲದಲ್ಲಿ ಕಾನೂನು ಪ್ರಕ್ರಿಯೆ ನಡೆಯುವಂತೆ ನೋಡಿಕೊಳ್ಳಬೇಕು ಎಂದು ಪುನರುಚ್ಚರಿಸಿದೆ. ಅಲ್ಲದೆ ಲೋಕಸಭಾ ಚುನಾವಣೆಗೂ ಮುನ್ನ ಕಾಂಗ್ರೆಸ್‌ನ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಿದ ಪ್ರಕರಣದ ಕುರಿತೂ ಅದು ಪ್ರಸ್ತಾಪಿಸಿದೆ.

ಅಮೆರಿಕದ ಈ ನಡೆಯನ್ನು ವಿರೋಧಿಸಿರುವ ಭಾರತ ಗುರುವಾರ ಮತ್ತೊಮ್ಮೆ ಬಲವಾಗಿ ಪ್ರತಿಕ್ರಿಯಿಸಿದೆ. ‘ಅಮೆರಿಕ ವಿದೇಶಾಂಗ ಇಲಾಖೆಯ ಇತ್ತೀಚಿನ ಹೇಳಿಕೆಗಳು ಅನಗತ್ಯವಾಗಿವೆ. ನಮ್ಮ ಚುನಾವಣಾ ಮತ್ತು ಕಾನೂನು ಪ್ರಕ್ರಿಯೆಗಳ ಮೇಲೆ ಬಾಹ್ಯ ಹಸ್ತಕ್ಷೇಪ ಸಂಪೂರ್ಣವಾಗಿ ಸ್ವೀಕಾರಾರ್ಹವಲ್ಲ’ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

‘ಕೇಜ್ರಿವಾಲ್ ಬಂಧನ ಮತ್ತು ವಿರೋಧ ಪಕ್ಷ ಕಾಂಗ್ರೆಸ್‌ನ ಬ್ಯಾಂಕ್ ಖಾತೆಗಳ ಸ್ಥಗಿತಕ್ಕೆ ಸಂಬಂಧಿಸಿದ ಬೆಳವಣಿಗೆಗಳನ್ನು ವಾಷಿಂಗ್ಟನ್ ಡಿಸಿ ನಿಕಟವಾಗಿ ಗಮನಿಸುತ್ತಿದೆ’ ಎಂದು ಅಮೆರಿಕ ವಿದೇಶಾಂಗ ಇಲಾಖೆಯ ವಕ್ತಾರರಲ್ಲಿ ಒಬ್ಬರಾದ ಮ್ಯಾಥ್ಯೂ ಮಿಲ್ಲರ್ ಹೇಳಿದ ಗಂಟೆಗಳ ಬಳಿಕ ಜೈಸ್ವಾಲ್ ಪ್ರತಿಕ್ರಿಯಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ತಗ್ಗಿದ ಭೂಮಿ ಪರಿಭ್ರಮಣೆಯ ವೇಗ

ನವದೆಹಲಿ (ಪಿಟಿಐ): ಜಾಗತಿಕ ತಾಪಮಾನ ಹೆಚ್ಚಳದಿಂದಾಗಿ ಗ್ರೀನ್ ಲ್ಯಾಂಡ್ ಮತ್ತು ಅಂಟಾರ್ಕ್ಟಿಕಾದಲ್ಲಿ ಮಂಜುಗಡ್ಡೆ ಕರಗುತ್ತಿದ್ದು, ಅದು ಭೂಮಿಯ ಪರಿಭ್ರಮಣೆಯ ವೇಗವನ್ನು ಬಾಧಿಸುತ್ತದೆ. ಪರಿಣಾಮವಾಗಿ ಸಮಯದಲ್ಲಿ ಏರುಪೇರಾಗಲಿದೆ ಎಂದು ಹೊಸ ಅಧ್ಯಯನವೊಂದು ಹೇಳಿದೆ.

ಹಣಕಾಸು ಮಾರುಕಟ್ಟೆ, ಪ್ರಮಾಣೀಕೃತ ಮತ್ತು ನಿಖರ ಸಮಯದ ಅಗತ್ಯ ಇರುವ ಲೆಕ್ಕಾಚಾರಗಳಿಗಾಗಿ ಸಾರ್ವತ್ರಿಕ ಸಂಯೋಜಿತ ಸಮಯ (ಯುಟಿಸಿ) ಎಂಬ ಲೆಕ್ಕಾಚಾರವನ್ನು ಅಭಿವೃದ್ಧಿಪಡಿಸಲಾಗಿದೆ. ಭೂಮಿಯ ಪರಿಭ್ರಮಣೆಯು ಸದಾ ಒಂದೇ ರೀತಿ ಇರುವುದಿಲ್ಲ. ಹೀಗಾಗಿ ಯುಟಿಸಿಯಲ್ಲಿಯೂ ವ್ಯತ್ಯಾಸ ಮಾಡಿಕೊಳ್ಳಬೇಕಾಗುತ್ತದೆ. 1972ರ ನಂತರದಲ್ಲಿ ಒಟ್ಟು ವೇಗದ ಏರಿಳಿತದಿಂದಾದ ಆಗಿರುವ ವ್ಯತ್ಯಾಸದ ಸಮತೋಲನಕ್ಕೆ ಒಂದು ‘ಅಧಿಕ ಸೆಕೆಂಡ್’ ಅನ್ನು ಯುಟಿಸಿಗೆ ಸೇರಿಸಬೇಕಿತ್ತು. ಆದರೆ, ಈಗ ಭೂಮಿಯ ಪರಿಭ್ರಮಣೆಯ ವೇಗವು ಕಡಿಮೆಯಾಗಿರುವುದರಿಂದ ಈ ಸೇರ್ಪಡೆಯನ್ನು ಮೂರು ವರ್ಷ ವಿಳಂಬ ಮಾಡಬೇಕಾದೀತು ಎಂದು ಅಧ್ಯಯನದ ಲೇಖಕ ಡಂಕನ್ ಆಗ್ನ್ಯೂ ವಿವರಿಸಿದ್ದಾರೆ.

ಕ್ಯಾಲಿಫೋರ್ನಿಯಾದ ಸ್ಯಾನ್ ಡಿಯಾಗೋ ವಿ.ವಿ.ಯಲ್ಲಿ ಆಗ್ನ್ಯೂ ಅವರು ಭೂ ಭೌತವಿಜ್ಞಾನಿಆಗಿದ್ದಾರೆ.

ಕಾಡಾನೆ ದಾಳಿಗೆ ಮಹಿಳೆ ಸಾವು

ವಯನಾಡ್ (ಪಿಟಿಐ): ವಯನಾಡ್ ಮತ್ತು ಮಲಪ್ಪುರಂ ಜಿಲ್ಲೆಗಳ ಗಡಿಭಾಗದ ಅರಣ್ಯ ಪ್ರದೇಶದಲ್ಲಿ ಬುಡಕಟ್ಟು ಮಹಿಳೆಯೊಬ್ಬರನ್ನು ಕಾಡಾನೆಯೊಂದು ತುಳಿದು ಕೊಂದಿರುವ ಘಟನೆ ಗುರುವಾರ ನಡೆದಿದೆ. ಇದು ಕೇರಳದಲ್ಲಿ ಕಳೆದ ಎರಡು ತಿಂಗಳಿನಲ್ಲಿ ಕಾಡಾನೆ ದಾಳಿಗೆ ಸಂಭವಿಸಿದ ನಾಲ್ಕನೇ ಸಾವಿನ ಪ್ರಕರಣವಾಗಿದೆ.

ಘಟನೆಯಲ್ಲಿ ಮೃತ ಮಹಿಳೆಯ ಪತಿ ಗಂಭೀರವಾಗಿ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿ ದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ದಂಪತಿ ಜೇನು ಸಂಗ್ರಹಿಸಲು ಕಾಡಿಗೆ ಹೋಗಿದ್ದ ವೇಳೆ ಪರಪ್ಪನಪಾರಾ ಅರಣ್ಯದಲ್ಲಿ ಘಟನೆ ನಡೆದಿದೆ.

‘ಮಾನವ– ವನ್ಯಜೀವಿ ಸಂಘರ್ಷವನ್ನು ಪರಿಹರಿಸುವಲ್ಲಿ ರಾಜ್ಯ ಸರ್ಕಾರ ಹಾಗೂ ವಯನಾಡ್ ಸಂಸದ ರಾಹುಲ್ ಗಾಂಧಿ ವಿಫಲರಾಗಿದ್ದಾರೆ’ ಎಂದು ವಯನಾಡಿನ ಬಿಜೆಪಿ ಅಭ್ಯರ್ಥಿ ಕೆ. ಸುರೇಂದ್ರನ್ ಆರೋಪಿಸಿದ್ದಾರೆ.

ತೆರಿಗೆ ಮರು ಮೌಲ್ಯಮಾಪನ: ಹೈಕೋರ್ಟ್ ನಕಾರ

ನವದೆಹಲಿ (ಪಿಟಿಐ): ಆದಾಯ ತೆರಿಗೆ ಇಲಾಖೆಯು(ಐ.ಟಿ) ತನ್ನ ವಿರುದ್ಧ ಆರಂಭಿಸಿರುವ ತೆರಿಗೆ ಮರುಮೌಲ್ಯಮಾಪನ ಪ್ರಕ್ರಿಯೆಯನ್ನು ಪ್ರಶ್ನಿಸಿ ಕಾಂಗ್ರೆಸ್ ಸಲ್ಲಿಸಿದ್ದ ಅರ್ಜಿಯನ್ನು ದೆಹಲಿ ಹೈಕೋರ್ಟ್ ಗುರುವಾರ ತಿರಸ್ಕರಿಸಿದೆ.

2017ರಿಂದ 2021ರ ಅವಧಿಯ ತೆರಿಗೆ ಮರುಮೌಲ್ಯಮಾಪನ ಪ್ರಕ್ರಿಯೆಗೆ ಸಂಬಂಧಿಸಿದ ಅರ್ಜಿ ಇದಾಗಿದೆ. 2014–15 ಮತ್ತು 2016–17ರ ಸಾಲಿನ ತೆರಿಗೆ ಮರುಮೌಲ್ಯಮಾಪನ ಪ್ರಕ್ರಿಯೆ ಕುರಿತ ಅರ್ಜಿಗೂ ಕೋರ್ಟ್ ಹೀಗೆಯೇ ಪ್ರತಿಕ್ರಿಯಿಸಿತ್ತು.

ಟೆಲಿಕಾಂ ನೀತಿ ಬದಲಿಸಿದ ₹ 150 ಕೋಟಿ ಚುನಾವಣಾ ಬಾಂಡ್: ಒವೈಸಿ

ಹೈದರಾಬಾದ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಕಂಪನಿಯೊಂದರಿಂದ ₹ 150 ಕೋಟಿ ಮೌಲ್ಯದ ಚುನಾವಣಾ ಬಾಂಡ್‌ಗಳನ್ನು ಪಡೆದ ಬಳಿಕ ಟೆಲಿಕಾಂ ನೀತಿಯನ್ನು ಬದಲಾಯಿಸಿದೆ ಎಂದು ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಒವೈಸಿ ಗುರುವಾರ ಆರೋಪಿಸಿದ್ದಾರೆ.

ಈ ಕುರಿತು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಅವರು, ‘ನೀತಿಯಲ್ಲಿ ಈ ರೀತಿ ಬದಲಾವಣೆ ಮಾಡಿದ್ದರ ಲಾಭ ಯಾರಿಗೆ ದೊರೆತಿದೆ ಎಂಬುದನ್ನು ಅರ್ಥಮಾಡಿಕೊಳ್ಳಿ. 2ಜಿ ಒಂದು ಹಗರಣವಾಗಿದ್ದರೆ, ಇದು ಏನು’ ಎಂದು ಅವರು ಪ್ರಶ್ನಿಸಿದ್ದಾರೆ.

ಭಾರ್ತಿ ಗ್ರೂಪ್ ಈ ಮೊತ್ತವನ್ನು ದೇಣಿಗೆ ನೀಡಿದೆ ಎಂದು ಸೂಚಿಸುವ ವರದಿಯ ಚಿತ್ರವನ್ನು ಒವೈಸಿ ಅವರು ಪೋಸ್ಟ್‌ನಲ್ಲಿ ಟ್ಯಾಗ್ ಮಾಡಿದ್ದಾರೆ.

ದೆಹಲಿ ಮೆಟ್ರೋ ಕಂಬದಲ್ಲಿ ‘ಖಾಲಿಸ್ತಾನ’ ಪರ ಬರಹ

ನವದೆಹಲಿ (ಪಿಟಿಐ): ದೆಹಲಿಯ ಮೆಟ್ರೊ ನಿಲ್ದಾಣದಲ್ಲಿ ಖಾಲಿಸ್ತಾನ ಪರ ಬರಹಗಳನ್ನು ಬರೆದಿರುವುದು ಪತ್ತೆಯಾಗಿದೆ. ಪಶ್ಚಿಮ ದೆಹಲಿಯ ಪಂಜಾಬಿ ಬಾಗ್ ಮೆಟ್ರೊ ನಿಲ್ದಾಣದ ಕಂಬದ ಮೇಲೆ ಗುರುವಾರ ಮುಂಜಾನೆ ಖಾಲಿಸ್ತಾನ ಪರ ಬರಹಗಳು ಕಂಡುಬಂದಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಖಾಲಿಸ್ತಾನ ಪರ ಬರಹದ ಕುರಿತು ಮುಂಜಾನೆ 9.30ರ ಸುಮಾರಿಗೆ ಪೊಲೀಸರಿಗೆ ಕರೆ ಮಾಡಿ ಮಾಹಿತಿ ನೀಡಲಾಗಿದೆ. ಬಳಿಕ ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿದಾಗ ‘ದೆಹಲಿ ಖಾಲಿಸ್ತಾನವಾಗುತ್ತದೆ’ ಎಂದು ಕಪ್ಪು ಬಣ್ಣದಲ್ಲಿ ಬರೆದಿರುವುದು ಪತ್ತೆಯಾಗಿದೆ.

ಎಫ್‌ಐಆರ್ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಎಂಡಿಎಂಕೆ ಸಂಸದ ಗಣೇಶಮೂರ್ತಿ ನಿಧನ

ಈರೋಡ್ (ಪಿಟಿಐ): ಈಚೆಗಷ್ಟೇ ಆತ್ಮಹತ್ಯೆ ಯತ್ನ ನಡೆಸಿದ್ದ ತಮಿಳುನಾಡಿನ ಈರೋಡ್‌ನ ಎಂಡಿಎಂಕೆ ಸಂಸದ ಎ. ಗಣೇಶಮೂರ್ತಿ ಅವರು ಗುರುವಾರ ಬೆಳಿಗ್ಗೆ ಕೊಯಮತ್ತೂರಿನ ಆಸ್ಪತ್ರೆಯಲ್ಲಿ ನಿಧನರಾದರು ಎಂದು ಪಕ್ಷ ಮತ್ತು ಪೊಲೀಸ್ ಮೂಲಗಳು ತಿಳಿಸಿವೆ.

77 ವರ್ಷ ವಯಸ್ಸಿನ ಗಣೇಶಮೂರ್ತಿ ಅವರು ಮಾರ್ಚ್ 24ರಂದು ಈರೋಡ್‌ನ ತಮ್ಮ ಮನೆಯಲ್ಲಿ ಕೆಲ ಮಾತ್ರೆಗಳನ್ನು ಸೇವಿಸಿ ಆತ್ಮಹತ್ಯೆಗೆ ಪ್ರಯತ್ನಿಸಿದ್ದರು. ಅವರನ್ನು ಸ್ಥಳೀಯ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಬಳಿಕ, ಅವರನ್ನು ಕೊಯಮತ್ತೂರಿನ ಖಾಸಗಿ ಆಸ್ಪತ್ರೆಯಲ್ಲಿ ದಾಖಲಿಸಲಾಗಿತ್ತು. ಅವರಿಗೆ ಪತ್ನಿ, ಒಬ್ಬ ಮಗ ಮತ್ತು ಮಗಳಿದ್ದಾರೆ.

ಐಟಿಆರ್ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ದೇಹದ ಮರಣೋತ್ತರ ಪರೀಕ್ಷೆ ನಡೆಸಲಾಗುವುದು. ಈಗಾಗಲೇ ‘ಆತ್ಮಹತ್ಯೆ ಯತ್ನ’ ಪ್ರಕರಣವನ್ನು ದಾಖಲಿಸಲಾಗಿದೆ. ಈಗ ಪ್ರಕರಣವನ್ನು ‘ಆತ್ಮಹತ್ಯೆ’ ಎಂದು ಬದಲಾಯಿಸಲಾಗುತ್ತದೆ ಎಂದು ಪೊಲೀಸರು ತಿಳಿಸಿದ್ದಾರೆ.

ಗಣೇಶಮೂರ್ತಿ ಅವರ ಸ್ವಗ್ರಾಮವಾದ ಕುಮಾರವಲಸುವಿನಲ್ಲಿ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಪಕ್ಷದ ಮೂಲಗಳು ತಿಳಿಸಿವೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ಕಲಿಯುವ ಆಕಾಂಕ್ಷೆ ಇಲ್ಲದಿದ್ದರೆ ಅನುಭವವು ಪಾಠ ಕಲಿಸುವುದರಲ್ಲಿ ಸೋಲುತ್ತದೆ.

–ಜಾರ್ಜ್ ಬರ್ನಾರ್ಡ್ ಶಾ

ದೀರ್ಘಾವಧಿ ಜೈಲುವಾಸ ಕೋರ್ಟ್ ಕಿವಿಮಾತು ಪಾಲನೆಯಾಗಲಿ

ವಿಚಾರಣೆ ಇಲ್ಲದೆಯೇ ಆರೋಪಿಗಳನ್ನು ಜೈಲಿನಲ್ಲಿ ಇರಿಸುವ ಪ್ರವೃತ್ತಿಯ ಬಗ್ಗೆ ಸುಪ್ರೀಂ ಕೋರ್ಟ್ ಈಚೆಗೆ ಬಹಳ ಕಟುವಾಗಿ ಮಾತನಾಡಿದೆ, ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿದೆ. ಜಾರಿ ನಿರ್ದೇಶನಾಲಯವು (ಇ.ಡಿ) ದೇಶದ ತುಂಬೆಲ್ಲ ಬಹಳ ಸಕ್ರಿಯವಾಗಿ ಕಾರ್ಯಾಚರಣೆ ನಡೆಸುತ್ತಿರುವ ಹೊತ್ತಿನಲ್ಲಿ ಸುಪ್ರೀಂ ಕೋರ್ಟ್‌ನ ಮಾತುಗಳು ಬಹಳ ಮಹತ್ವದ್ದಾಗುತ್ತವೆ. ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ (ಪಿಎಂಎಲ್‌ಎ) ಅಡಿ ಆರೋಪಿಗಳಾಗಿ ಜೈಲಿನಲ್ಲಿ ಇರುವ ವ್ಯಕ್ತಿಗಳ ವಿರುದ್ಧ ಪೂರಕ ದೋಷಾರೋಪ ಪಟ್ಟಿಗಳನ್ನು ಸಲ್ಲಿಸುತ್ತ, ಅವರಿಗೆ ಜಾಮೀನು ಸಿಗುವುದನ್ನು ತಡೆಯುವ ಇ.ಡಿ. ಯತ್ನವನ್ನು ಸುಪ್ರೀಂ ಕೋರ್ಟ್‌ನ ವಿಭಾಗೀಯ ಪೀಠವು ತೀವ್ರವಾಗಿ ಟೀಕಿಸಿದೆ. ಜಾರ್ಖಂಡ್‌ನ ಮುಖ್ಯಮಂತ್ರಿ ಆಗಿದ್ದ ಹೇಮಂತ್ ಸೊರೇನ್ ಅವರ ನಿಕಟವರ್ತಿ ಪ್ರೇಮ್ ಪ್ರಕಾಶ್ ಎನ್ನುವವರ ಪ್ರಕರಣದಲ್ಲಿ ಕೋರ್ಟ್ ಈ ಮಾತುಗಳನ್ನು ಆಡಿದೆ. ಪ್ರಕಾಶ್ ಅವರನ್ನು ಅಕ್ರಮ ಗಣಿಗಾರಿಕೆ ಜೊತೆ ನಂಟು ಹೊಂದಿದೆ ಎನ್ನಲಾದ ಹಣದ ಅಕ್ರಮ ವರ್ಗಾವಣೆ ಪ್ರಕರಣವೊಂದರಲ್ಲಿ 2022ರಲ್ಲಿ ಬಂಧಿಸಲಾಗಿದೆ. ತನಿಖಾ ಸಂಸ್ಥೆಯು ಪೂರಕ ದೋಷಾರೋಪ ಪಟ್ಟಿಯನ್ನು ಸಲ್ಲಿಸುತ್ತಲೇ ಇರುವ ಕಾರಣ ಪ್ರಕಾಶ್ ಅವರು ಇನ್ನೂ ಜೈಲಿನಲ್ಲೇ ಇದ್ದಾರೆ. ಪೂರಕ ದೋಷಾರೋಪ ಪಟ್ಟಿಗಳನ್ನು ಸಲ್ಲಿಸುವ ಮೂಲಕ ಜಾರಿ ನಿರ್ದೇಶನಾಲಯವು ಆರೋಪಿಯ ಹಕ್ಕುಗಳನ್ನು ನಿರಾಕರಿಸಿದ್ದಷ್ಟೇ ಅಲ್ಲದೆ, ಕಾನೂನು ಪ್ರಕ್ರಿಯೆಯನ್ನು ಕೂಡ ವಿಳಂಬಗೊಳಿಸಿದೆ ಎಂದು ಪೀಠವು ಹೇಳಿದೆ.

ನಾಗರಿಕರ ಹಕ್ಕುಗಳಿಗೆ ಬೆಲೆ ಕೊಡುವ ದಿಸೆಯಲ್ಲಿ ಸುಪ್ರೀಂ ಕೋರ್ಟ್ ಹೇಳಿರುವ ಕಿವಿಮಾತು ಬಹಳ ಮುಖ್ಯ ಹಾಗೂ ಬಹಳ ಅಗತ್ಯ

‘ನೀವು ವ್ಯಕ್ತಿಯೊಬ್ಬನನ್ನು ಬಂಧಿಸಿದಾಗ ವಿಚಾರಣೆ ಶುರುವಾಗಬೇಕು’ ಎಂದು ಇ.ಡಿ. ಅಧಿಕಾರಿಗಳನ್ನು ಉದ್ದೇಶಿಸಿ ಹೇಳಿರುವ ಪೀಠವು ಆರೋಪಿಯನ್ನು ಯಾವುದೇ ವಿಚಾರಣೆಗೆ ಗುರಿಪಡಿಸದೆ 18 ತಿಂಗಳುಗಳಿಂದ ನಿರಂತರವಾಗಿ ಜೈಲಿನಲ್ಲಿ ಇರಿಸಿರುವುದು ‘ನಮ್ಮನ್ನು ಕಳವಳಕ್ಕೆ ಈಡುಮಾಡಿದೆ’ ಎಂದು ಹೇಳಿದೆ. ಕಾನೂನನ್ನು ಮೀರಲು ಇ.ಡಿ. ಪೂರಕ ದೋಷಾರೋಪ ಪಟ್ಟಿ ಸಲ್ಲಿಸುವ ಕೆಲಸ ಮಾಡುತ್ತಿದೆ. ದೇಶದ ಪ್ರಜೆಗಳಿಗೆ ಜೀವಿಸುವ ಸ್ವಾತಂತ್ರ್ಯವನ್ನು ಕಲ್ಪಿಸಿರುವ ಸಂವಿಧಾನದ 21ನೇ ವಿಧಿಯಿಂದಾಗಿ ಜಾಮೀನಿನ ಹಕ್ಕು ಕೂಡ ಪ್ರಜೆಗಳಿಗೆ ಇದೆ. ಪಿಎಂಎಲ್‌ಎ ಕಾನೂನು ಜಾಮೀನು ನೀಡಲು ಒಡ್ಡುವ ಷರತ್ತುಗಳು ಅತ್ಯಂತ ಪ್ರಮುಖವಾದ ಮೂಲಭೂತ ಹಕ್ಕಿಗೆ ವಿರುದ್ಧವಾಗಿವೆ. ವಿಚಾರಣೆ ವಿಳಂಬವಾದರೆ, ಆರೋಪಿಯು ಜೈಲಿನಲ್ಲಿ ಬಹುಕಾಲದಿಂದ ಇದ್ದರೆ ಆತನಿಗೆ ಜಾಮೀನು ನೀಡಬಾರದು ಎಂದು ಕಾನೂನು ಹೇಳುವುದಿಲ್ಲ ಎಂಬ ಮಾತನ್ನು ಪೀಠವು ಇ.ಡಿಗೆ ಹೇಳಿದೆ. ಪಿಎಂಎಲ್‌ಎ ಕಾನೂನಿನ ಸೆಕ್ಷನ್ 45ರಲ್ಲಿ ಇರುವ ಜಾಮೀನಿನ ಷರತ್ತುಗಳನ್ನು ಕೋರ್ಟ್ ಈ ಹಿಂದೆ ಅಸಿಂಧುಗೊಳಿಸಿದ್ದೂ ಇದೆ. ಆರೋಪಿಯು ಯಾವುದೇ ತಪ್ಪು ಮಾಡಿಲ್ಲ ಎಂದು ಭಾವಿಸಲು ಸಾಕಷ್ಟು ಆಧಾರಗಳಿವೆ ಎಂಬುದು ಹಾಗೂ ಜಾಮೀನು ಪಡೆದ ನಂತರ ಆರೋಪಿಯು ಮತ್ತೆ ಯಾವುದೇ ಅಪರಾಧ ಎಸಗುವುದಿಲ್ಲ ಎಂಬುದು ಜಾಮೀನು ನೀಡುವಾಗ ನ್ಯಾಯಾಲಯಕ್ಕೆ ಮನವರಿಕೆ ಆಗಬೇಕು ಎಂದು ಈ ಸೆಕ್ಷನ್ ಹೇಳುತ್ತದೆ.

ಕೋರ್ಟ್ ಆಡಿರುವ ಮಾತುಗಳು ಸ್ವಾತಂತ್ರ್ಯಕ್ಕೆ ಬೆಲೆ ಕೊಡುವ ನಿಲುವನ್ನು ಮತ್ತೊಮ್ಮೆ ಸ್ಪಷ್ಟಪಡಿಸುವಂತೆ ಇವೆ. ಅಲ್ಲದೆ, ಕೋರ್ಟ್ ಈ ಹಿಂದೆ ಮೂಲಭೂತ ಹಕ್ಕುಗಳನ್ನು ಎತ್ತಿಹಿಡಿದ ಹಲವು ತೀರ್ಪುಗಳಲ್ಲಿ ಆಡಿದ್ದ ಮಾತುಗಳಿಗೆ ಅನುಗುಣವಾಗಿಯೂ ಇವೆ. ಹಣದ ಅಕ್ರಮ ವರ್ಗಾವಣೆಯಂತಹ ಅಪರಾಧಗಳನ್ನು ತಡೆಯಲು ಕಠಿಣವಾದ ಕಾನೂನು ಕ್ರಮಗಳ ಅಗತ್ಯ ಇದೆಯಾದರೂ, ಅಂತಹ ಕಾನೂನುಗಳನ್ನು ನಾಗರಿಕರ ಮೂಲಭೂತ ಹಕ್ಕು ಹಾಗೂ ಸ್ವಾತಂತ್ರ್ಯ ಕಸಿಯಲು ಬಳಸಬಾರದು. ಪಿಎಂಎಲ್‌ಎ ಕಾನೂನನ್ನು ಈಗ ವ್ಯಾಪಕವಾಗಿ ಬಳಕೆ ಮಾಡುತ್ತಿರುವುದು ಸರ್ಕಾರದ ಟೀಕಾಕಾರರಿಗೆ ಹಾಗೂ ವಿರೋಧಿಗಳಿಗೆ ಕಿರುಕುಳ ನೀಡಲಿಕ್ಕೇ ವಿನಾ, ಆ ಕಾನೂನನ್ನು ಜಾರಿಗೆ ತಂದ ಮೂಲ ಉದ್ದೇಶಕ್ಕಾಗಿ ಅಲ್ಲ. ಈ ಕಾಯ್ದೆಯ ಅಡಿಯಲ್ಲಿ ದಾಖಲು ಮಾಡಲಾದ ಪ್ರಕರಣಗಳಲ್ಲಿ ಆರೋಪಿಗಳಿಗೆ ಶಿಕ್ಷೆ ಆಗುತ್ತಿರುವ ಪ್ರಮಾಣವು ಬಹಳ ಕಡಿಮೆ ಇದೆ ಎಂಬುದು ಇದನ್ನು ತೋರಿಸುತ್ತಿದೆ. ಇ.ಡಿ. ದಾಖಲು ಮಾಡಿರುವ ಬಹುತೇಕ ಪ್ರಕರಣಗಳು ವಿರೋಧ ಪಕ್ಷಗಳ ನಾಯಕರನ್ನು ಗುರಿಯಾಗಿಸಿಕೊಂಡಿವೆ. ಇಂತಹ ಪರಿಸ್ಥಿತಿಯಲ್ಲಿ ನಾಗರಿಕರ ಹಕ್ಕುಗಳಿಗೆ ಬೆಲೆ ಕೊಡಲು ಸುಪ್ರೀಂ ಕೋರ್ಟ್ ಹೇಳಿರುವ ಕಿವಿಮಾತು ಬಹಳ ಮುಖ್ಯ ಹಾಗೂ ಬಹಳ ಅಗತ್ಯ.

ದಿನದ ಟ್ವೀಟ್

ಕುಟುಂಬ ರಾಜಕಾರಣದ ಪರಮಾವಧಿ

ಮುನಿಯಪ್ಪ ಹಲವು ಬಾರಿ ಸಂಸದರಾಗಿದ್ದವರು ಮತ್ತು ಕೇಂದ್ರ ಸಚಿವರೂ ಆಗಿದ್ದವರು. ಅಂತಹವರಿಗೆ ಶಾಸಕ ಸ್ಥಾನಕ್ಕೆ ಟಿಕೆಟ್ ಕೊಟ್ಟಿದ್ದೇ ತಪ್ಪಾಗಿತ್ತು ಮತ್ತು ಅವರು ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಸಚಿವರಾಗಿದ್ದಾರೆ. ಸಂಸದ ಸ್ಥಾನದ ಟಿಕೆಟ್ಟನ್ನೂ ಅವರೀಗ ತಮ್ಮ ಕುಟುಂಬಕ್ಕೇ ಬಯಸುತ್ತಿದ್ದಾರೆ! 84 ವರ್ಷದ ಮೊಯಿಲಿ ಸಹ ಚಿಕ್ಕಬಳ್ಳಾಪುರ ಕ್ಷೇತ್ರದ ಟಿಕೆಟ್ ಬೇಡಿಕೆಯಿಂದ ಹಿಂದೆ ಸರಿಯುತ್ತಿಲ್ಲ! ಏನು ನಡೆಯುತ್ತಿದೆ!

ಶ್ರೀನಿವಾಸ ಕಾರ್ಕಳ

ಕಿಡಿನುಡಿ



ಕೆಲವು ವಕೀಲರ ವಿರುದ್ಧ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯವರಿಗೆ ಪತ್ರ ಬರೆದಿರುವ 600 ಮಂದಿ ವಕೀಲರ ಪೈಕಿ ಚುನಾವಣಾ ಬಾಂಡ್‌ಗೆ ಸಂಬಂಧಿಸಿದ ತೀರ್ಪನ್ನು ಅನೂರ್ಜಿತಗೊಳಿಸುವಂತೆ ಕೋರಿದ್ದ ಆದಿಶ್ ಅಗರ್ವಾಲ್ ಅವರೂ ಇದ್ದಾರೆ ಎಂದರೆ ಹಾಗೂ ಪ್ರಧಾನಮಂತ್ರಿ ಅವರು ಆ 600 ವಕೀಲರ ಪಡೆಯನ್ನು ಬೆಂಬಲಿಸಿದ್ದಾರೆ ಎಂದಾದರೆ, ಅದರ ಬಗ್ಗೆ ಹೇಳುವುದಕ್ಕೆ ಇನ್ನೇನೂ ಉಳಿದಿಲ್ಲ.

ಮೋಹನ್ ಕಾತರಕಿ, ಹಿರಿಯ ವಕೀಲ, ಸುಪ್ರೀಂ ಕೋರ್ಟ್

25 ವರ್ಷಗಳ ಹಿಂದೆ

ಸೋಮವಾರ, 29-3-1999

• ಅವ್ಯವಹಾರ: ಹಾಪ್‌ಕಾಮ್ಸ್ ಆಡಳಿತ ಮಂಡಳಿ ರದ್ದು

ಬೆಂಗಳೂರು, ಮಾರ್ಚ್ 28– ತೋಟಗಾರಿಕೆ ಉತ್ಪನ್ನಗಳ ಸಹಕಾರ ಮಾರುಕಟ್ಟೆ ಮತ್ತು ಸಂಸ್ಕರಣಾ ಸಂಘದ (ಹಾಪ್‌ಕಾಮ್ಸ್) ಆಡಳಿತ ಮಂಡಳಿಯನ್ನು ರದ್ದುಪಡಿಸಿರುವ ಸರ್ಕಾರ, ಸಂಘಕ್ಕೆ ಆಡಳಿತಾಧಿಕಾರಿಯನ್ನು ನೇಮಿಸಿದೆ.

ಹಾಪ್‌ಕಾಮ್ಸ್‌ನಲ್ಲಿ ನಡೆದಿದೆ ಎನ್ನಲಾದ ಭಾರಿ ಪ್ರಮಾಣದ ಹಣ ದುರುಪಯೋಗ ಹಾಗೂ ಇನ್ನಿತರ ಅಕ್ರಮಗಳ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ. ಕಳೆದ 10ರಿಂದ 15 ವರ್ಷಗಳ ಅವಧಿಯಲ್ಲಿ ಹಾಪ್‌ಕಾಮ್ಸ್ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಅಧಿಕಾರಿಗಳೇ ಹಣ ದುರುಪಯೋಗದಲ್ಲಿ ಭಾಗಿಯಾಗಿದ್ದಾರೆ ಎಂಬ ಅಂಶ ಬೆಳಕಿಗೆ ಬಂದಿದೆ.

• ಮೂರುಸಾವಿರ ಮಠಕ್ಕೆ ಉತ್ತರಾಧಿಕಾರಿ

ಹುಬ್ಬಳ್ಳಿ, ಮಾರ್ಚ್ 28– ಹಲವಾರು ದಿನಗಳಿಂದ ಕುತೂಹಲದ ಕೇಂದ್ರವಾಗಿದ್ದ ಹುಬ್ಬಳ್ಳಿಯ ಪ್ರತಿಷ್ಠಿತ ಮೂರುಸಾವಿರ ಮಠದ ಉತ್ತರಾಧಿಕಾರಿಯಾಗಿ ಇಂದು ಹಾನಗಲ್ ಕುಮಾರಸ್ವಾಮಿ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದ್ದು, ನಾಳೆ ನಗರದಲ್ಲಿ ಅವರ ಪಟ್ಟಾಭಿಷೇಕ ನಡೆಯಲಿದೆ.

ಗದುಗಿನ ತೋಂಟದಾರ್ಯ ಸಿದ್ಧಲಿಂಗ ಸ್ವಾಮಿಗಳು, ಮುಂಡರಗಿ ಅನ್ನದಾನೇಶ್ವರ ಸ್ವಾಮಿಗಳು, ಬೈಲಹೊಂಗಲದ ಗಂಗಾಧರ ಸ್ವಾಮಿಗಳು, ಆನಂದಪುರದ ಮಲ್ಲಿಕಾರ್ಜುನ ಸ್ವಾಮಿಗಳು ಹಾಗೂ ಮೂರುಸಾವಿರ ಮಠದ ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳ ಸಮ್ಮುಖದಲ್ಲಿ ನಡೆದ ಭಕ್ತರು ಹಾಗೂ ಗಣ್ಯರ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು.

50 ವರ್ಷಗಳ ಹಿಂದೆ

ಶುಕ್ರವಾರ, 29-3-1974

• ಕೊಳ್ಳುವ, ಮಾರುವ ಬೆಲೆ ವಿಪರೀತ ಏರುವ ಗೋಧಿ ನೀತಿ

ನವದೆಹಲಿ, ಮಾರ್ಚ್ 28– ಒಂದು ವರ್ಷದ ಹಿಂದೆ ಗೋಧಿ ಸಗಟು ವ್ಯಾಪಾರವನ್ನು ಸರ್ಕಾರ ಸ್ವಾಧೀನಪಡಿಸಿಕೊಂಡ ನೀತಿ ಅಂತ್ಯಗೊಂಡು, ಲಭ್ಯವಿರುವ ಗೋಧಿ ಪ್ರಮಾಣ ಹೆಚ್ಚಿಸುವುದಕ್ಕಾಗಿ ಸಂಗ್ರಹ ಮತ್ತು ಸರ್ಕಾರಿ ಮಾರಾಟ ಬೆಲೆಗಳನ್ನು ವಿಪರೀತ ಏರಿಸಿರುವುದನ್ನು ಕೇಂದ್ರ ಆಹಾರ ಮತ್ತು ಕೃಷಿ ಸಚಿವ ಫಕ್ರುದ್ದೀನ್ ಅಲಿ ಅಹಮದ್ ಅವರು ಇಂದು ಲೋಕಸಭೆಯಲ್ಲಿ ಪ್ರಕಟಿಸಿದರು.

ಹೆಚ್ಚುವರಿ ಫಸಲು ಲಭ್ಯವಿರುವ ರಾಜ್ಯಗಳಲ್ಲಿ ವರ್ತಕರು ಮತ್ತು ಸಹಕಾರಿ ಸಂಸ್ಥೆಗಳು ಕ್ವಿಂಟಲ್‌ಗೆ 105 ರೂ.ಗಳಂತೆ ಶೇ 50ರಷ್ಟನ್ನು ಕಡ್ಡಾಯವಾಗಿ ಲೆವಿ ರೂಪದಲ್ಲಿ ಒಪ್ಪಿಸಿ ಉಳಿದುದನ್ನು ಪರ್ಮಿಟ್ ಪಡೆದು ರಾಜ್ಯದಲ್ಲಿ ಅಥವಾ ರಾಜ್ಯದ ಹೊರಗಡೆ ಮಾರಲು ಅವಕಾಶ ಕೊಡುವಂತೆ ಗೋಧಿ ನೀತಿಯನ್ನು ಮಾರ್ಪಡಿಸಲಾಗಿದೆ.

• ಹಾನಗಲ್‌ನ ಗ್ರಾಮಸೇವಕ ಹಾಲಪ್ಪನವರಮಠ ಅವರಿಗೆ ಬಹುಮಾನ

ನವದೆಹಲಿ, ಮಾರ್ಚ್ 28– ಧಾರವಾಡ ಜಿಲ್ಲೆಯ ಹಾನಗಲ್ ಬ್ಲಾಕಿನ ಎಸ್.ಬಿ. ಹಾಲಪ್ಪನವರಮಠ ಅವರಿಗೆ 1972–73ನೇ ಸಾಲಿನ ಅತ್ಯುತ್ತಮ ಗ್ರಾಮಸೇವಕ ಬಹುಮಾನ ದೊರೆತಿದೆ. ಪಂಜಾಬಿನ ಜಲಂಧರ್ ಜಿಲ್ಲೆಯ ಶ್ರೀಮತಿ ಅಜಿತ್ ಕೌರ್ ಅವರು ಅತ್ಯುತ್ತಮ ಗ್ರಾಮಸೇವಿಕೆ ಆಗಿ ಆಯ್ಕೆ ಆಗಿದ್ದಾರೆ.

ಕೇಂದ್ರ ಕೃಷಿ ಸಚಿವ ಫಕ್ರುದ್ದೀನ್ ಅಲಿ ಅಹಮದ್ ಅವರು ಇಂದು ಈ ಇಬ್ಬರು ಬಹುಮಾನ ವಿಜೇತರಿಗೆ 1,250 ರೂ. ನಗದು ಬಹುಮಾನ ಮತ್ತು ಅರ್ಹತಾ ಪತ್ರ ನೀಡಿದರು.

701 ಕಿ.ಮೀ. ಉದ್ದದ ಸೂಪರ್ ಎಕ್ಸ್‌ಪ್ರೆಸ್ ಹೆದ್ದಾರಿಯ ಉದ್ದೇಶ ಫಲಿಸುವುದೇ?

ವನ್ಯಜೀವಿಗಳ ರಕ್ಷಣೆಗೆ ‘ಮಹಾಮಾರ್ಗ’



ವಿಶ್ಲೇಷಣೆ

ಎಚ್.ಆರ್.ಕೃಷ್ಣಮೂರ್ತಿ

ಈ ಹೆದ್ದಾರಿಯ ಅಧಿಕೃತ ಹೆಸರು ‘ಹಿಂದೂ ಹೃದಯ ಸಾಮ್ರಾಟ್ ಬಾಳಾಸಾಹೇಬ್ ಠಾಕ್ರೆ ಮಹಾರಾಷ್ಟ್ರ ಸಮೃದ್ಧಿ ಮಹಾಮಾರ್ಗ’. ಆದರೆ ಸಂಕ್ಷಿಪ್ತವಾಗಿ ‘ಸಮೃದ್ಧಿ ಮಹಾಮಾರ್ಗ’ ಎಂದೇ ಹೆಚ್ಚು ಪರಿಚಿತ. 701 ಕಿ.ಮೀ. ಉದ್ದದ ಈ ಸೂಪರ್ ಎಕ್ಸ್‌ಪ್ರೆಸ್ ಹೆದ್ದಾರಿಯು ಮುಂಬೈ ಮತ್ತು ನಾಗಪುರದ ನಡುವೆ ಸಂಪರ್ಕ ಕಲ್ಪಿಸುತ್ತದೆ. ಆರು ಲೇನ್‌ಗಳ ಈ ಹೆದ್ದಾರಿಯು ಮಹಾರಾಷ್ಟ್ರದ 10 ಜಿಲ್ಲೆಗಳ ಮೂಲಕ ಹಾದುಹೋಗುವುದು. ಅದರ ಉದ್ದಕ್ಕೂ ಸುತ್ತಮುತ್ತಲಿರುವ ಪ್ರವಾಸೋದ್ಯಮ ತಾಣಗಳು, ಕೈಗಾರಿಕಾ ಪ್ರದೇಶಗಳು, ಕಾರಿಡಾರ್‌ಗಳು, ಕೃಷಿ ಉತ್ಪನ್ನ ಮತ್ತು ವಾಣಿಜ್ಯ ವ್ಯವಹಾರ ಕೇಂದ್ರಗಳು, ಧಾರ್ಮಿಕ ನಗರ, ಪಟ್ಟಣಗಳ ಆರ್ಥಿಕ ಸ್ವರೂಪವನ್ನೇ ಬದಲಿಸುತ್ತಿದೆ.

2022ರ ಡಿಸೆಂಬರ್‌ನಲ್ಲಿ, ಸಂಪೂರ್ಣವಾಗಿ ಸಿದ್ಧವಾಗುವ ಮುನ್ನವೇ ಮೊದಲ ಹಂತ ಉದ್ಘಾಟನೆಯಾಯಿತು. 55 ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ಬಳಕೆಯಿಂದ ನಿರ್ಮಿತವಾಗಿರುವ ಈ ಮಹಾಮಾರ್ಗದಲ್ಲಿ 65 ಫ್ಲೈಓವರ್‌ಗಳು, ಕಣಿವೆಗಳನ್ನು ದಾಟಲು ಕಟ್ಟಲಾಗಿರುವ ಎತ್ತರದ ಸೇತುವೆಗಳು, ಪಥ ಬದಲಿಸುವ 24 ವ್ಯವಸ್ಥೆಗಳು, 6 ಸುರಂಗಗಳು ಮತ್ತು 400 ಅಂಡರ್‌ಪಾಸ್‌ಗಳಿವೆ. ಹೆದ್ದಾರಿಯ ಉದ್ದಕ್ಕೂ ವಾಹನಗಳು ಮತ್ತು ಪ್ರಯಾಣಿಕರಿಗೆ ಎಲ್ಲ ಸೌಲಭ್ಯಗಳನ್ನೂ ಕಲ್ಪಿಸಿ, ಗರಿಷ್ಠ 120 ಕಿ.ಮೀ. ವೇಗದ ಸಂಚಾರಕ್ಕೆ ಅನುಮತಿ ನೀಡಲಾಗಿದೆ. ತುರ್ತು ಸಂದರ್ಭಗಳಲ್ಲಿ ಈ ಹೆದ್ದಾರಿಯಲ್ಲಿ ವಿಮಾನಗಳನ್ನೂ ಇಳಿಸಬಹುದು. ಇವುಗಳೆಲ್ಲದರ ಜೊತೆಗೆ, ಹೆದ್ದಾರಿಯ ನಿರ್ದಿಷ್ಟ ಭಾಗಗಳಲ್ಲಿ ವನ್ಯಜೀವಿಗಳು ಹೆದ್ದಾರಿಯನ್ನು ಸುರಕ್ಷಿತವಾಗಿ ದಾಟಲು 8 ಮೇಲ್ಸೇತುವೆಗಳು (ಓವರ್‌ಪಾಸ್) ಮತ್ತು 17 ಕೆಳದಾರಿಗಳನ್ನು ನಿರ್ಮಿಸಲಾಗಿದೆ. ವನ್ಯಜೀವಿಗಳ ರಕ್ಷಣೆಯನ್ನು ಯೋಜನೆಯ ಭಾಗವನ್ನಾಗಿ ಅಳವಡಿಸಿಕೊಂಡಿರುವ, ದೇಶದ ಮೊದಲ, ಅತಿದೊಡ್ಡ, ‘ಗ್ರೀನ್‌ಫೀಲ್ಡ್ ರೂಟ್ ಅಲೈನ್‌ಮೆಂಟ್ ಪ್ರಾಜೆಕ್ಟ್’ ಎಂಬ ಹೆಗ್ಗಳಿಕೆಯೂ ಈ ಮಹಾಮಾರ್ಗಕ್ಕಿದೆ.

ನಮ್ಮ ದೇಶದಲ್ಲಿ 55,000 ಕಿ.ಮೀ.ಗಳಷ್ಟು ಉದ್ದದ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳು 26 ಹುಲಿ ಸಂರಕ್ಷಣಾ ಪ್ರದೇಶಗಳ ಮೂಲಕ ಹಾದುಹೋಗುತ್ತವೆ. ಶ್ರೀನಗರದಿಂದ ಕನ್ಯಾಕುಮಾರಿಯವರೆಗಿನ ದೇಶದ ಅತಿ ಉದ್ದವಾದ 44ನೇ ರಾಷ್ಟ್ರೀಯ ಹೆದ್ದಾರಿಯು ನಾಲ್ಕು ಸಂರಕ್ಷಿತ ಪ್ರದೇಶಗಳ ಮೂಲಕ ಮತ್ತು ಖಾನ್ಹಾ, ಸಾತ್ಪುರ, ಪೆಂಚ್, ಬಾಂಧವನಗರ ಮತ್ತು ಪನ್ನಾ ಹುಲಿ ಸಂರಕ್ಷಿತ ಪ್ರದೇಶಗಳನ್ನು ಜೋಡಿಸುವ ವನ್ಯಜೀವಿ ಕೊಂಡಿದಾರಿಯ (ವೈಲ್ಡ್‌ಲೈಫ್ ಕಾರಿಡಾರ್) ಮೂಲಕ ಹಾದುಹೋಗುತ್ತದೆ. ಸೂರತ್‌ನಿಂದ ಕೋಲ್ಕತ್ತದವರೆಗಿನ ಎರಡನೆಯ ಅತಿ ಉದ್ದದ ಎನ್‌ಎಚ್6, ಮೇಲ್ಘಾಟ್, ಬೋರಾ, ನಾಗ್‌ಝಿರ, ಸಿಮ್ಲಿಪಾಲ್ ಸುತ್ತಲಿನ ವನ್ಯಜೀವಿ ಕೊಂಡಿದಾರಿಗಳ ಮೂಲಕ ಮತ್ತು ಇತರ ಏಳು ರಾಷ್ಟ್ರೀಯ ಉದ್ಯಾನಗಳು ಮತ್ತು ಸಂರಕ್ಷಿತ ಪ್ರದೇಶಗಳ ಮೂಲಕ ಹಾದುಹೋಗುತ್ತದೆ.

ಇಂತಹ ರಸ್ತೆಗಳಿಂದ ಆಗುವ ಪ್ರಮುಖ ತೊಂದರೆಯೆಂದರೆ, ವಾಹನಗಳ ಡಿಕ್ಕಿಯಿಂದ ಆಗುವ ವನ್ಯಜೀವಿಗಳ ಸಾವುನೋವು. ಈ ವನ್ಯಜೀವಿಗಳಲ್ಲಿ ಹುಲಿ, ಆನೆ, ಚಿರತೆ, ಕಾಡುಬೆಕ್ಕು, ಕಡವೆ, ಜಿಂಕೆ, ಹಕ್ಕಿಗಳು, ಹಾವು ಹಾಗೂ ಇತರ ಸರೀಸೃಪಗಳು ಸೇರಿವೆ. ಮಹಾರಾಷ್ಟ್ರದ ವೈಲ್ಡ್‌ಲೈಫ್ ಕನ್ಸರ್ವೇಷನ್ ಟ್ರಸ್ಟ್ ಅಭಿವೃದ್ಧಿಪಡಿಸಿರುವ ‘ರೋಡ್‌ಕಿಲ್ ಆ್ಯಪ್’ 2018ರಲ್ಲಿ, ವನ್ಯಜೀವಿ ಸಂರಕ್ಷಿತ ಪ್ರದೇಶಗಳ ಮೂಲಕ ಹಾದುಹೋಗುವ ದೇಶದ ರಸ್ತೆಗಳಲ್ಲಿ 3,500 ವನ್ಯಜೀವಿಗಳು ಸಾವಿಗೀಡಾಗಿರುವುದನ್ನು ದಾಖಲಿಸಿದೆ. ವರದಿಯಾಗದ ಸಾವುಗಳ ಸಂಖ್ಯೆ ಇದರ ಎರಡರಷ್ಟಿರಬಹುದೆಂದು ಅಂದಾಜಿಸಲಾಗಿದೆ. ವನ್ಯಜೀವಿ ವಿಜ್ಞಾನಿ ಸಂಜಯ ಗುಬ್ಬಿ ಮತ್ತು ಸಹಚರರು ನಡೆಸಿರುವ ಅಧ್ಯಯನಗಳ ಪ್ರಕಾರ, 2010-17ರ ಅವಧಿಯಲ್ಲಿ ಕರ್ನಾಟಕದಲ್ಲಿ 130 ಜಿಂಕೆಗಳು, 26 ಕಡವೆಗಳು, 27 ಕರಡಿಗಳು, ಎರಡು ಆನೆಗಳು, ಎರಡು ಕತ್ತೆಕಿರುಬಗಳು, ಒಂದು ಹುಲಿಯು ವಾಹನಗಳ ಡಿಕ್ಕಿಯಿಂದ ಸಾವನ್ನಪ್ಪಿವೆ. ಇನ್ನು ಅಪಘಾತದಿಂದ ಊನಗೊಳ್ಳುವ ವನ್ಯಜೀವಿಗಳ ಬದುಕು ಅಸಹನೀಯವಾಗುತ್ತದೆ.

2016ರಲ್ಲಿ ಸಮೃದ್ಧಿ ಮಹಾಮಾರ್ಗದ ‘ವಿಸ್ತೃತ ಯೋಜನಾ ವರದಿ’ಯನ್ನು ಸಿದ್ಧಪಡಿಸಲು ಮಹಾರಾಷ್ಟ್ರ ಸರ್ಕಾರ ಪರಿಣತ ಸಮಾಲೋಚಕರನ್ನು ನೇಮಿಸಿತು. 701 ಕಿ.ಮೀ.ಗಳ ಮಹಾಮಾರ್ಗವು ಠಾಣೆ ಜಿಲ್ಲೆಯ ತಾನ್ಸಾ, ಅಕೋಲಾದ ಕಾಟೇಪೂರ್ಣ ಮತ್ತು ವಾಸಿಮ್ ಜಿಲ್ಲೆಯ ಕಾರಂಜಾ- ಸೋಹೋಲ್ ವನ್ಯಜೀವಿ ಅಭಯಾರಣ್ಯಗಳ ಮೂಲಕ, ಒಟ್ಟು 117 ಕಿ.ಮೀ.ಗಳ ದೂರ ಹಾದುಹೋಗಲಿದೆಯೆಂಬ ವಿಷಯ ತಿಳಿಯುತ್ತಿದ್ದಂತೆ, ವನ್ಯಜೀವಿ ಸಂಘಟನೆಗಳು ದನಿಯೆತ್ತಿದವು. ವೇಗವಾಗಿ ಚಲಿಸುವ ವಾಹನಗಳಿಂದ ಸಾವಿಗೀಡಾಗುವ ವನ್ಯಜೀವಿಗಳ ಪ್ರಮಾಣವನ್ನು ಈ ಮಹಾಮಾರ್ಗ ಗಣನೀಯವಾಗಿ ಹೆಚ್ಚಿಸುವುದೆಂಬ ಕಳವಳ ವ್ಯಕ್ತವಾಯಿತು. ಇದಕ್ಕೆ ಸ್ಪಂದಿಸಿದ ಮಹಾರಾಷ್ಟ್ರ ರಾಜ್ಯ ರಸ್ತೆ ಅಭಿವೃದ್ಧಿ ಕಾರ್ಪೊರೇಷನ್, ಅಂತಹ ಅನಾಹುತಗಳನ್ನು ತಡೆಯಲು ಸೂಕ್ತ ಕ್ರಮಗಳನ್ನು ಸೂಚಿಸಲು, ಡೆಹ್ರಾಡೂನ್‌ನ ವೈಲ್ಡ್‌ಲೈಫ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಜೊತೆಗೆ ಒಪ್ಪಂದವೊಂದಕ್ಕೆ ಸಹಿ ಹಾಕಿತು. ಅದರಂತೆ ವಿಜ್ಞಾನಿಗಳ ತಂಡ ನೀಡಿದ ಸಲಹೆಯ ಅನುಸಾರ, ಮಹಾಮಾರ್ಗ ಹಾದುಹೋಗುವ ಮೂರು ಅಭಯಾರಣ್ಯಗಳ ಪರಿಸರ ಸೂಕ್ಷ್ಮ ಪ್ರದೇಶಗಳಲ್ಲಿ, ವನ್ಯಜೀವಿಗಳು ಹೆದ್ದಾರಿ ದಾಟಲು ನೆರವಾಗುವಂತೆ 8 ಓವರ್‌ಪಾಸ್ ಮತ್ತು 17 ಕೆಳದಾರಿಗಳನ್ನು ಯೋಜನೆಯ ವಿನ್ಯಾಸದಲ್ಲಿ ಅಳವಡಿಸಲಾಯಿತು.

‘ಹಸಿರು ಸೇತುವೆ’ಯೆಂದು ಕರೆಯಲಾಗುವ, 32 ಮೀಟರ್ ಅಗಲದ ಈ ವನ್ಯಜೀವಿ ಮಾರ್ಗಗಳನ್ನು ನಿಸರ್ಗ-ಸಹಜವಾಗಿ, ಸ್ಥಳೀಯ ಮರಗಿಡಗಳ ಹಿನ್ನೆಲೆಯಲ್ಲಿ ಎದ್ದು ಕಾಣದೇ ಬೆರೆಯುವಂತೆ ನಿರ್ಮಿಸಲು ಸೂಚಿಸಲಾಯಿತು. ಕೇಂದ್ರ ಸರ್ಕಾರದ ಪರಿಸರ ಸಚಿವಾಲಯ ಮತ್ತು ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಅನುಮೋದನೆಯ ನಂತರ 2019ರ ಜನವರಿಯಲ್ಲಿ ಮಹಾಮಾರ್ಗದ ನಿರ್ಮಾಣ ಕಾರ್ಯ ಪ್ರಾರಂಭವಾಯಿತು. ಕೋವಿಡ್ ತಂದ ಅಡೆತಡೆಗಳಿಂದ ಯೋಜನೆಯ ಕೆಲಸ ಕುಂಟುತ್ತ ಸಾಗಿದರೂ, 2022ರ ಡಿಸೆಂಬರ್‌ನಲ್ಲಿ, ನಾಗಪುರ-ಶಿರಡಿಯನ್ನು ಜೋಡಿಸುವ ಮೊದಲ ಹಂತದ ಹೆದ್ದಾರಿಯನ್ನು ಪ್ರಧಾನಿ ಉದ್ಘಾಟಿಸಿದರು. 2023ರ ಮೇ ತಿಂಗಳಲ್ಲಿ ಎರಡನೇ ಹಂತ ಮುಗಿದು, ಅಂತಿಮ ಹಂತದ 100 ಕಿ.ಮೀ.ಗಳ ಹೆದ್ದಾರಿ ಈ ವರ್ಷದ ಜುಲೈ ವೇಳೆಗೆ ಸಂಚಾರಕ್ಕೆ ಮುಕ್ತವಾಗುವ ನಿರೀಕ್ಷೆಯಿದೆ.

ವನ್ಯಜೀವಿಗಳಿಗೆಂದೇ ಪ್ರತ್ಯೇಕ ಮಾರ್ಗವನ್ನು ನಿರ್ಮಿಸಿದ ಮಾತ್ರಕ್ಕೆ ಅವು ಅದನ್ನು ಬಳಸಲು ಪ್ರಾರಂಭಿಸುವುದಿಲ್ಲ. ವನ್ಯಜೀವಿಗಳ ಸಹಜ ಪ್ರವೃತ್ತಿಯಲ್ಲಿ ಬದಲಾವಣೆ ಬರಲು ಬಹಳಷ್ಟು ಕಾಲ ಬೇಕು. ಹೀಗಾಗಿಯೇ 2022ರ ಡಿಸೆಂಬರ್‌ನಲ್ಲಿ ಕೆಲವು ಮಾರ್ಗಗಳು ಸಿದ್ಧವಾದರೂ 2023ರ ಅಂತ್ಯದವರೆಗೆ ಬಹುಪಾಲು ವನ್ಯಜೀವಿಗಳು ಅವುಗಳನ್ನು ಬಳಸಲಿಲ್ಲ. ಮಹಾಮಾರ್ಗ ಹಾದುಹೋಗುವ ಮೂರು ವನ್ಯಜೀವಿ ಅಭಯಾರಣ್ಯಗಳ, ಆಯ್ದ 64 ಜಾಗಗಳಲ್ಲಿ ಕ್ಯಾಮೆರಾಗಳನ್ನು ಅಳವಡಿಸಿ, ವನ್ಯಜೀವಿಗಳ ಸಂಚಾರ, ಅವು ಆಯ್ಕೆ ಮಾಡುವ ಮಾರ್ಗದಂತಹವನ್ನು ಅಧ್ಯಯನ ಮಾಡಲಾಗುತ್ತಿದೆ. ಈ ವರ್ಷದ ಮೊದಲ ಎರಡೂವರೆ ತಿಂಗಳ ಅವಧಿಯಲ್ಲಿ ನೀಲ್‌ಗಾಯ್, ಚಿಂಕಾರಾ, ಕಾಡುಹಂದಿ, ಮೊಲ, ಮುಳ್ಳುಹಂದಿ, ಮುಂಗುಸಿ, ಲಂಗೂರ್ ಕೋತಿ ಮತ್ತು ಚಿರತೆಗಳು ಈ ವನ್ಯಜೀವಿ ಮಾರ್ಗಗಳನ್ನು ಬಳಸುತ್ತಿರುವುದು ದಾಖಲಾಗಿದೆ. ಇದು ಒಳ್ಳೆಯ ಬೆಳವಣಿಗೆ ಎನ್ನಿಸಿದರೂ ವನ್ಯಜೀವಿ ಸಂಘಟನೆಗಳಲ್ಲಿ ಈ ಬಗ್ಗೆ ಅಸಮಾಧಾನವಿದೆ.

ವನ್ಯಜೀವಿಗಳ ಸಾವನ್ನು ತಪ್ಪಿಸಲು ಹಸಿರು ಸೇತುವೆ ಮತ್ತು ಕೆಳದಾರಿಗಳ ಸಲಹೆ ನೀಡಿ, ಅವುಗಳ ವಿನ್ಯಾಸ ಮಾಡಿದವರು ಡೆಹ್ರಾಡೂನ್‌ನ ವನ್ಯಜೀವಿ ಸಂಸ್ಥೆಯ ವಿಜ್ಞಾನಿಗಳು. ಈಗ ಅಂತಹ ಮಾರ್ಗಗಳ ಬಳಕೆ ಮತ್ತು ಉಪಯುಕ್ತತೆಯ ಮೌಲ್ಯಮಾಪನ ಮಾಡುತ್ತಿರುವುದು ಹೆಚ್ಚು ಕಡಿಮೆ ಅದೇ ವಿಜ್ಞಾನಿಗಳ ತಂಡ. ಈ ವಿರೋಧಾಭಾಸದಲ್ಲಿರುವ ‘ಹಿತಾಸಕ್ತಿಯ ಸಂಘರ್ಷ’ದಿಂದ ಪ್ರಾಮಾಣಿಕವಾದ ಫಲಿತಾಂಶ ದೊರೆಯುವುದಿಲ್ಲ ಎಂಬುದು ವನ್ಯಜೀವಿ ಸಂಘಟನೆಗಳ ದೂರು. ವನ್ಯಜೀವಿಗಳು ಹೆದ್ದಾರಿಗೆ ಬರದಂತೆ ರಸ್ತೆಯ ಎರಡೂ ಕಡೆ ತಡೆಗೋಡೆಗಳನ್ನು ನಿರ್ಮಿಸಿದಾಗ ಮಾತ್ರ ಅವು ಮೇಲ್ಸೇತುವೆ ಅಥವಾ ಕೆಳದಾರಿಗಳನ್ನು ಬಳಸುವಂತೆ ಮಾಡುವುದು ಸಾಧ್ಯ. ಆದರೆ ತಡೆಗೋಡೆಯ ಕೆಲಸ ಬಹಳ ನಿಧಾನಗತಿಯಲ್ಲಿ ಸಾಗುತ್ತಿದೆ. ಆ ಕೆಲಸ ಮುಗಿದನಂತರ ಸ್ವತಂತ್ರವಾಗಿ, ನಿಷ್ಪಕ್ಷಪಾತವಾಗಿ ನಡೆಯುವ ಮೌಲ್ಯಮಾಪನದಿಂದ ಮಾತ್ರ ಈ ಪ್ರತ್ಯೇಕ ವನ್ಯಜೀವಿ ಮಾರ್ಗಗಳ ವಿನ್ಯಾಸ, ಉಪಯುಕ್ತತೆಯ ಬಗ್ಗೆ ಖಚಿತ ನಿಲುವು ತಳೆಯುವುದು ಸಾಧ್ಯವೆಂಬುದು ಪರಿಣತರ ಅಭಿಪ್ರಾಯ.

ಚುರುಮುರಿ



ಹೊಡೀರಿ ಕಪಾಳಕ್ಕೆ!

• ಬಿ.ಎನ್.ಮಲ್ಲೇಶ್

‘ಏನ್ ಮಂಜಮ್ಮ, ಏನೈತೆ ತಿಂಡಿ?’ ಗುಡ್ಡೆ ಕೇಳಿದ.

‘ತಿಂಡಿ ಏನಿಲ್ಲ, ಓನ್ಲಿ ಚಾ...’ ಮಂಜಮ್ಮ ಮಸಿಬಟ್ಟೆ ಕೊಡವಿ ನಕ್ಕಳು.

‘ನಿಮ್ ಪಾರ್ಟೀಲಿ ಚಾ ಒಂದೇ ಗ್ಯಾರಂಟಿ. ನಮ್ ಕೈ ಪಾರ್ಟಿಗೆ ಬಾ, ಮೊಹಬ್ಬತ್ ಕಾ ದುಖಾನ್... ಅಂದ್ರೆ ಪ್ರೀತಿ ಅಂಗಡೀನೇ ಇಟ್ಟದೀವಿ’ ಎಂದ ಗುಡ್ಡೆ.

‘ಹೊಡೀರಿ ಕಪಾಳಕ್ಕೆ’ ಎಂದ ದುಬ್ಬೀರ, ‘ಲೇಯ್, ಪ್ರೀತಿ ಅಂಗಡಿ ಇಟ್ಟದೀವಿ ಅಂತೀರಿ, ನೀವೂ ಹೊಡಿ ಬಡಿ ಮಾತಾಡ್ತೀರಿ, ಎಲ್ಲೈತೋ ಪ್ರೀತಿ?’ ಎಂದ.

‘ಅಂದ್ರೆ ಹೂವಿನ ಪಾರ್ಟಿಲೇನು ಬರೀ ಹೂವಿನಂಥ ಮಾತೇ ಬರ್ತಿದಾವಾ? ಅವ್ರು ಬಾಯಿಗೆ ಬಂದಂಗ್ ಮಾತಾಡ್ತಿಲ್ವ?’ ಗುಡ್ಡೆಗೆ ಸಿಟ್ಟು ಬಂತು.

‘ನಮ್ಗೆ ದೇಶ ಮುಖ್ಯ, ಧರ್ಮ, ಸಂಸ್ಕೃತಿ ಇಟ್ಕಂಡು ರಾಜಕೀಯ ಮಾಡೋರು ನಾವು’ ಮಂಜಮ್ಮ ವಾದಿಸಿದಳು.

‘ಹೊಡೀರಿ ಕಪಾಳಕ್ಕೆ’ ಎಂದ ದುಬ್ಬೀರ, ‘ಬರೀ ಇ.ಡಿ, ಸಿಬಿಐ, ಇನ್‌ಕಂಟ್ಯಾಕ್ಸ್ ರಾಜಕೀಯ ನಿಮ್ದು, ಎಲ್ಲೈತೆ ನ್ಯಾಯ, ನೀತಿ, ಧರ್ಮ?’ ಎಂದ.

‘ಹಾ...ಇದಪ್ಪ ಮಾತು’ ಎಂದ ಗುಡ್ಡೆ. ಮಂಜಮ್ಮಗೂ ಸಿಟ್ಟು ಬಂತು ‘ನಿನ್ ಮೂತಿಗಿಷ್ಟು’ ಎಂದಳು. ‘ನಮ್ ಗ್ಯಾರಂಟಿಗಳನ್ನ ತಗಳ್ಳದೆ ನಿನ್ ತಾಕತ್ ತೋರ್ಸು’ ಎಂದ ಗುಡ್ಡೆ. ಮಾತಿಗೆ ಮಾತು, ಗದ್ದಲ ಶುರುವಾಯಿತು.

ಅಷ್ಟೆಲ್ಲ ಗದ್ದಲ ನಡೆದರೂ ತೆಪರೇಸಿ ಮಾತ್ರ ಪಿಟಿಕ್ಕನ್ನದೆ ಕೂತಿದ್ದ. ‘ಯಾಕೋ ತೆಪರ, ಏನೂ ಮಾತಾಡ್ತಿಲ್ಲ?’ ಕೇಳಿದ ಕೊಟ್ರ.

‘ನೋಡ್ರಪಾ, ನಂಗೆ ಈ ರಾಜಕೀಯ ಅಂದ್ರೆ ಆಗಲ್ಲ. ನಾನು ಯಾವ ಪಾರ್ಟಿಗೂ ಸೇರ್ದೋನಲ್ಲ. ನಾನೊಬ್ಬ ಸಾಮಾನ್ಯ ಮತದಾರ. ನನ್ ಪಾಡಿಗೆ ನನ್ನ ಬಿಟ್ಬಿಡಿ’ ಎಂದ ತೆಪರೇಸಿ.

‘ಹೊಡೀರಿ ಕಪಾಳಕ್ಕೆ’ ಎಂದ ದುಬ್ಬೀರ, ‘ಲೇಯ್, ಇದೆಲ್ಲ ನಿನ್ನಿಂದ್ಲೇ ಆಗ್ತಿರೋದು. ಮತದಾರ ಅಂತೆ. ಈ ಮತದಾರ ಅನ್ನೋನು ಒಬ್ಬ ನೆಟ್ಟಗಿದ್ದಿದ್ರೆ ರಾಜಕೀಯದೋರು ಎಲ್ಲಾ ನೆಟ್ಟಗಿರೋರು’ ಎಂದ. ಎಲ್ಲರೂ ಗೊಳ್ಳಂತ ನಕ್ಕರು. ತೆಪರೇಸಿ ಪಿಟಿಕ್ಕನ್ನಲಿಲ್ಲ.

ಸಂಗತ

ಮರಣ: ಏಕಿಷ್ಟು ವೈಭವೀಕರಣ?

ಮರಣವೆಂಬ ನೈಸರ್ಗಿಕ ವಿದ್ಯಮಾನ ನಮ್ಮನ್ನು ಅತಿಯಾಗಿ ಕಾಡಬಾರದು

• ಯೋಗಾನಂದ

ಸಾವು ಎಂಬುದು ಬದುಕಿನ ಸ್ವಾಭಾವಿಕ ಕ್ರಿಯೆ. ಹುಟ್ಟಿದ್ದೆಲ್ಲ ಒಂದಿಲ್ಲೊಂದು ದಿನ ಗತಿಸಲೇಬೇಕು. ಹೀಗಿದ್ದೂ ಮರಣವೆಂಬ ನೈಸರ್ಗಿಕ ವಿದ್ಯಮಾನ ನಮ್ಮನ್ನೇಕೆ ಈ ಪರಿ ಕಾಡಬೇಕು? ಸಹಜವಾದದ್ದರ ಬಗ್ಗೆ ಭಯಪಡುವುದು ಅಸಹಜ. ಪ್ರೀತಿಪಾತ್ರರಾದವರ ಮೃತ್ಯು ನಮ್ಮ ಪಾಲಿಗೆ ನಿರ್ಭಾಗ್ಯ ಅನುಭವ ಆಗಬೇಕಿಲ್ಲ. ನಮ್ಮ ಆಪ್ತೇಷ್ಟರು ಕಾಲವಶರಾದರೆ ಅದಕ್ಕೂ ಅನಾಹುತ, ಕೇಡು ಮತ್ತೊಂದಿಲ್ಲ ಎನ್ನುವಂತೆ ತಲ್ಲಣ, ತಳಮಳಗಳಿಗೆ ಸಿಲುಕಿರುತ್ತೇವಲ್ಲ. ಇದು ಅನಿವಾರ್ಯವೇ?

ನಾವು ದುರಂತಕ್ಕಿಂತ ಗಟ್ಟಿ ಎನ್ನುವ ತಥ್ಯ ಸವಕಲಾಗಬಾರದು. ‘ತುಂಬಲಾಗದ ನಷ್ಟ’, ‘ಜಗತ್ತೇ ಶೂನ್ಯವಾಗಿದೆ’, ‘ವಿಧಿ ಅದೆಷ್ಟು ನಿರ್ದಯಿ’ ಎಂದೆಲ್ಲ, ಕಾಲವಶರಾದವರ ಬಗ್ಗೆ ಸ್ಥಾಪಿತ ಅಂಬೋಣಗಳು. ನೆಂಟರಿಷ್ಟರ ಅಗಲಿಕೆ ಅವರನ್ನು ಮರೆಯಲು ಕಾರಣ ಆಗಬೇಕಿಲ್ಲ. ಇಷ್ಟಾದರೂ ಸ್ಮಾರಕ ನಿರ್ಮಾಣಕ್ಕೆ ಒತ್ತಾಯ. ಸಾರ್ವಜನಿಕ ರಸ್ತೆಗೊ, ಕಟ್ಟಡಕ್ಕೊ ಇಲ್ಲವೆ ಸೇತುವೆಗೊ ಮೃತರ ಹೆಸರನ್ನಿಡುವಂತೆ ಮನವಿಗಳ ಮಹಾಪೂರ. ಅವು ಚಳವಳಿಗಳಾಗಿ ಹಿಂಸಾರೂಪ ತಳೆಯುವುದೂ ಉಂಟು.

ನಿರಾಳ, ಸಂರಚಿತ ಹಾಗೂ ಕ್ರಮಬದ್ಧವಾದ ಸಾವು ನಮ್ಮನ್ನು ಬೆದರಿಸದು, ನಾವು ಅದಕ್ಕೆ ಬೆದರುತ್ತೇವೆ ಅಷ್ಟೆ! ಸಾವಿನ ವಾಸ್ತವ ಅರಿತರೆ ನಮಗೆ ಶೋಕ ಎನ್ನುವುದಿರದು. ದುಃಖವು ಸಂಬಂಧವನ್ನು ಕುರಿತದ್ದು. ಬುದ್ಧಿಗಿಂತ ಭಾವಕ್ಕೆ ಹೆಚ್ಚು ಮಹತ್ವ ನೀಡುತ್ತೇವೆ. ನಾವೆಂದೂ ಭೇಟಿಯೇ ಆಗಿಲ್ಲದಿರುವವರು ಮರಣಿಸಿದಾಗಲೂ ವ್ಯಥೆ ಆವರಿಸಿರುತ್ತದೆ. ಆತ್ಮೀಯರಾದವರ ಅಗಲಿಕೆಯ ನೋವನ್ನು ಸಹಿಸಲಾಗದೆ ಆತ್ಮಹತ್ಯೆಗೆ ಶರಣಾಗುವ ಪ್ರಸಂಗಗಳಂತೂ ಅದೆಷ್ಟು ದಾರುಣ. ತಮಗೂ ವರ್ತಮಾನವಿದೆ, ಬದುಕಿದೆ, ಅದನ್ನು ಮೌಲಿಕವಾಗಿ ನಿರ್ವಹಿಸಬೇಕೆಂಬ ಪ್ರಬುದ್ಧತೆಯ ಕೊರತೆ ಇಂತಹ ವಿಪರ್ಯಾಸಗಳಿಗೆ ಹಾದಿಯಾಗುತ್ತದೆ.

ಕೊರಗು ಆತ್ಮವಿಶ್ವಾಸವನ್ನು ಕಸಿಯುತ್ತದೆ. ನಮಗೆ ಮುಖ್ಯರೆನಿಸಿದ್ದವರ ನಿಧನಕ್ಕೆ ನಾವು ಸಲ್ಲಿಸುವ ಸಂತಾಪವು ಒಂದು ನೈಜ ಪ್ರಕ್ರಿಯೆ. ತಂತಾನೇ ಶಮನಗೊಳ್ಳುವ ಬೇಸರ, ಬೇನೆಗೆ ಅಲ್ಲೋಲ ಕಲ್ಲೋಲದ ಹಣೆಪಟ್ಟಿ ಕಟ್ಟಿ ಮತ್ತಷ್ಟು ದುಗುಡ ಹೇರಿಕೊಳ್ಳುತ್ತೇವೆ. ಬಂಧುಮಿತ್ರರನ್ನು ಕಳೆದುಕೊಂಡ ದುಃಖವನ್ನು ಅವರೊಂದಿಗೆ ಕಳೆದ ಸವಿ ನೆನಪುಗಳೇ ಮಸುಕಾಗಿಸುತ್ತವೆ. ಕಾಲಕ್ಕಿಂತ ಸಮರ್ಥ ಚಿಕಿತ್ಸಕ ಇನ್ನೊಂದಿಲ್ಲ. ಅಂತೂ ಸಾವು ಸಂಭವಿಸುವತನಕ ಬದುಕಿದ್ದರಲ್ಲ ಎನ್ನುವ ದಿಟವೇ ನಮ್ಮನ್ನು ಸಾಂತ್ವನಗೊಳಿಸಲು ಸಾಕು. ಯಾರಿಗೂ, ಎಂದೂ ಆಗಬಾರದ ಅವಘಡ ಈಗ ಆಗಿಲ್ಲವೆಂಬ ಸಮಾಧಾನ ಮೂಡುತ್ತದೆ.

ಅಮರತ್ವ ಒಂದು ಕಳಂಕಿತ ಅಸ್ತಿತ್ವ. ಸಾವಿರದೆ ಯಾರೂ ಇರಲಾರರು. ರಾಜನು ಕೈಗೊಂಡ ದೀರ್ಘ ಕಠಿಣ ತಪಸ್ಸು ಫಲಿಸಿ ದೈವ ಪ್ರತ್ಯಕ್ಷ ಆಗುತ್ತದೆ. ಮೃತ್ಯುಂಜಯನಾಗು ಅಂತ ಅದು ಹರಸುತ್ತದೆ. ಒಡನೆಯೆ ತಪಸ್ವಿ ‘ಖಂಡಿತ ಒಲ್ಲೆ. ನನ್ನ ಕಣ್ಮುಂದೆಯೇ ನನ್ನ ಮಕ್ಕಳು, ಮರಿಮಕ್ಕಳು, ಪರಿವಾರ ಅಸುನೀಗುವುದು ಕೂಡದು’ ಎನ್ನುವನು. ನಮ್ಮ ಪುರಾಣ ಕಥೆಗಳಲ್ಲಿ ಇಂತಹ ವೃತ್ತಾಂತಗಳು ಅನೇಕ.

ಡೆನ್ಮಾರ್ಕ್‌ನ ಮಕ್ಕಳ ಸಾಹಿತಿ ಗ್ಲೆನ್‌ರಿಂಗ್ ಟಿವಿಡ್ ಪ್ರಶ್ನಿಸುವಂತೆ, ಮರಣವೇ ಇಲ್ಲದಿದ್ದರೆ ಜೀವನಕ್ಕೇನು ಬೆಲೆ? ಮಳೆ ಎನ್ನುವುದಿರದಿದ್ದರೆ ಸೂರ್ಯನನ್ನು ಹೊಗಳುವವರೇ ಇರರು. ಜಗತ್ತು ಸಾಗಿಬಂದಿರುವುದೇ ಜನನ ಮತ್ತು ಮರಣದಿಂದ. ರಾಮಾಯಣದಲ್ಲಿ ಭರತನನ್ನು ಸಂತೈಸುವ ಋಷಿಗಳು ‘ಪ್ರತಿಯೊಬ್ಬರೂ ಒಂದು ದಿನ ತಮ್ಮ ತಂದೆಯನ್ನು ಕಳೆದುಕೊಳ್ಳಲೇ ಬೇಕಲ್ಲ’ ಎನ್ನುತ್ತಾರೆ. ಸಾವಿರದ ಮನೆಯಿಲ್ಲ. ಮರಣವನ್ನು ಶಪಿಸುವುದು ಪರಿಸರವನ್ನು ಹಳಿದಂತೆ, ನಿಸರ್ಗದ ನಾಜೂಕು ಮತ್ತು ಶಿಸ್ತನ್ನು ನಿರಾಕರಿಸಿದಂತೆ.

ವೇದವ್ಯಾಸರು ತಮ್ಮ ಮಹಾಭಾರತದ ವನಪರ್ವದಲ್ಲಿ ‘ಬದುಕು ಅಶಾಶ್ವತ, ಒಂದಿಲ್ಲೊಂದು ದಿನ ಅಳಿಯುತ್ತೇವೆಂದು ಸಕಲರಿಗೂ ತಿಳಿದೇ ಇದೆ. ಆದರೂ ತಾನು ಮಾತ್ರ ಅಳಿಯೆನು ಎಂದು ಮನುಷ್ಯ ಭಾವಿಸಿದ್ದಾನೆ. ಇದಕ್ಕಿಂತ ಅಚ್ಚರಿಯಿಲ್ಲ’ ಎನ್ನುತ್ತಾರೆ. ಸಾವಿಗೆ ದೇಶ, ಗಡಿ, ವರ್ಗ, ಪಂಗಡ, ಜಾತಿ, ಭಾಷೆ ಎನ್ನುವ ಭೇದವಿಲ್ಲ. ಅದಕ್ಕೆ ಸಕಾಲಿಕ, ಅಕಾಲಿಕ ಎನ್ನುವುದೂ ಅಪ್ರಸ್ತುತ. ಹಾಗಿದ್ದರೂ ಇಂತಹ ಪದ್ಧತಿಯಂತೆ, ಇಂತಹ ಕ್ರಮದಂತೆ ಅಂತ್ಯವಿಧಿ ನೆರವೇರಲಿದೆ ಎಂಬ ಉದ್ಗಾರ ಎಷ್ಟು ಸಮಂಜಸ?



ಗತಿಸಿದವರ ಕುರಿತು ದುಃಖಪಡುವ ಬದಲಿಗೆ ಅವರ ಒಳ್ಳೆಯ ಗುಣಗಳನ್ನು ನಮ್ಮ ಬದುಕಿಗೆ ತಂದುಕೊಳ್ಳುವುದರಲ್ಲಿ ಅರ್ಥವಿದೆ. ಕೆ.ಶಿವರಾಮ ಕಾರಂತರು ತಮ್ಮ ‘ಅಳಿದ ಮೇಲೆ’ ಕಾದಂಬರಿಯಲ್ಲಿ ಮನೋಜ್ಞವಾದ ಸಂದೇಶವೊಂದನ್ನು ನೀಡಿದ್ದಾರೆ. ಸತ್ತಮೇಲೆ ಪುನರ್ಜನ್ಮ ಉಂಟೋ ಇಲ್ಲವೋ ತಿಳಿಯದು. ಮೃತರ ದಿವ್ಯಾದರ್ಶಗಳಿಗೆ ಕಟಿಬದ್ಧರಾದರೆ, ಅವರ ಸದಾಶಯಗಳನ್ನು ಕಾರ್ಯರೂಪಕ್ಕೆ ತಂದರೆ ಅದೇ ಅಗಲಿದವರ ಪುನರ್ಜನ್ಮ. ನಮ್ಮ ಜನಪದರ ಹಾಡು, ಹಸೆಗಳಲ್ಲಿ ಇದೇ ಧೋರಣೆಗಳು ವ್ಯಾಪಕವಾಗಿ ಅನಾವರಣಗೊಂಡಿವೆ. ‘ಸತ್ಯವುಳ್ಳ ಧರ್ಮರು ಸತ್ತರೆನ್ನಬೇಡಿ, ಬಿತ್ತು ಹೋಗವ್ರೆ ಅವರೇಯ’ ಎಂಬ ಧ್ವನಿಪೂರ್ಣ ಪದವೊಂದು ನಮ್ಮನ್ನು ಸೆಳೆಯುತ್ತದೆ.

ಸ್ಮರಣಾರ್ಥ ಸ್ಥಾವರಗಳು ಕಾಲಪ್ರವಾಹಕ್ಕೆ ತತ್ತರಿಸಿ ನಲುಗುತ್ತವೆ. ಆದರೆ ಜಂಗಮಕ್ಕೆ ಮರಣವಿರದು. ತಮ್ಮ ಜೀವಿತದಲ್ಲಿ ಅಗಲಿದವರು ಅಳವಡಿಸಿ ಕೊಂಡಿದ್ದ ಸನ್ನಡತೆಗಳ ಪೈಕಿ ಒಂದಾದರೂ ಸರಿಯೆ ಪಾಲಿಸುವಂತಾಗಬೇಕು. ಸ್ಮಾರಕಗಳು, ನಾಮಕರಣಗಳು ಕಟ್ಟಿಕೊಡದವನ್ನು ಅದು ತುಂಬಿರುತ್ತದೆ. ಸಾಧು, ಸಂತ, ಸಾಧಕರು ಆ ಮೂಲಕ ಮತ್ತೆ ಹುಟ್ಟಿಬಂದಿರುತ್ತಾರೆ. ಉಪದೇಶ ಮಾಡಬೇಡಿ ಬದುಕಿ ತೋರಿಸಿ ಎಂದರು ಕಾರಂತರು.

ವಾಚಕರ ವಾಣಿ

ಅಕಾಡೆಮಿಗಳ ಅಧ್ಯಕ್ಷತೆ: ಪ್ರಾದೇಶಿಕ ನ್ಯಾಯ ಎಲ್ಲಿ?

ಲೋಕಸಭಾ ಚುನಾವಣೆಯ ಪೂರ್ವದಲ್ಲಿ ವಿವಿಧ ಅಕಾಡೆಮಿಗಳಿಗೆ ಅಧ್ಯಕ್ಷರು ಹಾಗೂ ಸದಸ್ಯರ ನೇಮಕಾತಿಯು ಸಾಮಾಜಿಕ ನ್ಯಾಯ ಅನುಸರಿಸಿ ನಡೆದಿರುವುದು ಸ್ವಾಗತಾರ್ಹ. ಅದೇ ಸಂದರ್ಭದಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಿಗೆ ಪ್ರಾತಿನಿಧ್ಯ ನೀಡಬೇಕಿತ್ತು. ಅದು ಸಾಧ್ಯವಾಗದಿದ್ದರೆ, ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ, ಮಲೆನಾಡು, ಕರಾವಳಿ ಕರ್ನಾಟಕಗಳಿಗೆ ಅಕಾಡೆಮಿಗಳ ಅಧ್ಯಕ್ಷತೆಯಲ್ಲಿ ಸಮಪಾಲು ದೊರೆಯಬೇಕಿತ್ತು. ಎರಡು ಅಕಾಡೆಮಿಗಳಲ್ಲಿ ಉತ್ತರ ಕರ್ನಾಟದವರು ಒಬ್ಬರು, ಇನ್ನೊಬ್ಬರು ಹಳೆಯ ಮದ್ರಾಸ್ ಪ್ರಾಂತಕ್ಕೆ ಸೇರಿದವರಿಗೆ ಅಧ್ಯಕ್ಷತೆಯ ಅವಕಾಶ ದೊರಕಿದೆ. ಕಲ್ಯಾಣ ಕರ್ನಾಟಕದ ಯಾರೂ ಅಕಾಡೆಮಿಗಳ ಅಧ್ಯಕ್ಷರಾಗಿಲ್ಲ. ಅವರಲ್ಲಿ ಅರ್ಹರು ಇಲ್ಲವೇ?

ಕರ್ನಾಟಕದ ಕ್ರಾಂತಿಯ ನೆಲೆವೀಡಾಗಿದ್ದ ಬೀದರ್‌ನವರು ಸ್ವಾತಂತ್ರ್ಯ ಬಂದ 75 ವರ್ಷಗಳ ನಂತರವೂ ಒಂದು ಅಕಾಡೆಮಿಗೂ ಅಧ್ಯಕ್ಷರಾಗಿಲ್ಲ. ಯಾವ ಪಕ್ಷ ಅಧಿಕಾರಕ್ಕೆ ಬಂದರೂ ಕಲ್ಯಾಣ ಕರ್ನಾಟಕಕ್ಕೆ, ಉತ್ತರ ಕರ್ನಾಟಕಕ್ಕೆ ಸಮಾನ ಪ್ರಾತಿನಿಧ್ಯ ದೊರಕುತ್ತಿಲ್ಲ. ಇನ್ನು ಮುಂದಾದರೂ ಸರ್ಕಾರವು ಕಲ್ಯಾಣ ಕರ್ನಾಟಕಕ್ಕೆ ಪ್ರತಿಷ್ಠಾನಗಳು, ರಂಗಾಯಣಗಳು, ಅಧ್ಯಯನ ಕೇಂದ್ರಗಳಲ್ಲಿ ಸೂಕ್ತ ಪ್ರಾತಿನಿಧ್ಯ ನೀಡಬೇಕೆಂದು ಒತ್ತಾಯಿಸುತ್ತೇವೆ.

ಬಸವರಾಜ ಸಬರದ, ಮೀನಾಕ್ಷಿ ಬಾಳಿ, ಎಸ್.ಟಿ.ಪೋತೆ, ಕೆ.ನೀಲಾ, ಕಲಬುರಗಿ, **ಕಾಶೀನಾಥ ಅಂಬಲಗೆ,** ಬೀದರ್, **ಈರಪ್ಪ ಕಂಬಳಿ, ಅಲ್ಲಮಪ್ರಭು ಬೆಟ್ಟದೂರು,** ಕೊಪ್ಪಳ, **ಭಗತರಾಜ ನಿಜಾಮಕರ್,** ರಾಯಚೂರು

ಹಿರಿಯ ನಾಗರಿಕರಿಗೆ ಬೇಕು ವಿಶೇಷ ಗ್ರಾಮಸಭೆ

ಗದಗದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ ಹಿರಿಯ ನಾಗರಿಕರ ಸಮಸ್ಯೆಗಳು ಮತ್ತು ಸವಾಲುಗಳ ಬಗ್ಗೆ ಇತ್ತೀಚೆಗೆ ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ಹಿರಿಯ ನಾಗರಿಕರು ವ್ಯಕ್ತಪಡಿಸಿದ ಸಮಸ್ಯೆಗಳು ಚಿಂತನಾರ್ಹವಾಗಿವೆ. ‘ಸಮಾಜ ನಮ್ಮ ಸಮಸ್ಯೆಗಳಿಗೆ ಕಿವುಡಾಗಿದೆ. ನಮ್ಮ ಇಷ್ಟಾನಿಷ್ಟಗಳನ್ನು ಎಲ್ಲಿ, ಹೇಗೆ ಹೇಳಿಕೊಳ್ಳಬೇಕೆಂದು ತಿಳಿಯುತ್ತಿಲ್ಲ. ಈ ದಿಸೆಯಲ್ಲಿ ನಮ್ಮ ದುಃಖ, ದುಮ್ಮಾನಗಳನ್ನು ಹೇಳಿಕೊಳ್ಳುವುದಕ್ಕೆ ಸರ್ಕಾರ ಸೂಕ್ತ ವ್ಯವಸ್ಥೆಯನ್ನು ರೂಪಿಸಬೇಕು’ ಎಂಬ ಹಕ್ಕೊತ್ತಾಯ ಅವರಿಂದ ಕೇಳಿಬಂತು.

ನಿಜ, ತೀವ್ರಗತಿಯಲ್ಲಿ ಬದಲಾಗುತ್ತಿರುವ ಇಂದಿನ ಕಾಲಘಟ್ಟದಲ್ಲಿ ಹಿರಿಯ ನಾಗರಿಕರು, ಅದರಲ್ಲೂ ಹಿರಿಯ ಮಹಿಳೆಯರು ಒಂಟಿಯಾಗುತ್ತಿದ್ದಾರೆ. ತೀವ್ರತರವಾದ ದೈಹಿಕ ಮತ್ತು ಮಾನಸಿಕ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಅವರಲ್ಲಿ ಒಂದು ರೀತಿಯ ಅನಾಥ ಭಾವ ಶುರುವಾಗಿದೆ. ಅದರಲ್ಲೂ ಗ್ರಾಮೀಣ ಪ್ರದೇಶದ ಹಿರಿಯರು ಇತರರಿಗಿಂತ ಹೆಚ್ಚು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಆದರೆ, ವ್ಯಕ್ತಪಡಿಸುವುದಕ್ಕೆ ಯಾವುದೇ ವೇದಿಕೆಯಿಲ್ಲದೆ ಮೂಕ ರೋದನೆಗೆ ಒಳಗಾಗುತ್ತಿದ್ದಾರೆ. ಅದಕ್ಕಾಗಿ, ಪಂಚಾಯಿತಿ ಮಟ್ಟದಲ್ಲಿ ಮಕ್ಕಳಿಗಾಗಿ ವಿಶೇಷ ಗ್ರಾಮಸಭೆಗಳನ್ನು ಆಯೋಜಿಸಿದಂತೆ, ಹಿರಿಯ ನಾಗರಿಕರಿಗೂ ‘ವಿಶೇಷ ಗ್ರಾಮಸಭೆ’ಗಳನ್ನು ಅರ್ಥಪೂರ್ಣವಾಗಿ ಆಯೋಜಿಸಿದರೆ, ಅವರಿಗೆ ತಮ್ಮ ಸಮಸ್ಯೆಳನ್ನು ಹೇಳಿಕೊಳ್ಳಲು, ಪರಿಹಾರ ಕಂಡುಕೊಳ್ಳಲು ಸಹಾಯವಾಗುತ್ತದೆ. ಹಾಗೆಯೇ, ಸಭೆಯಲ್ಲಿ ಚರ್ಚಿಸಿದ ಸಮಸ್ಯೆಗಳನ್ನು ತುರ್ತು ಕೆಲಸವೆಂದು ಪರಿಗಣಿಸಿ ಶೀಘ್ರವಾಗಿ ಪರಿಹರಿಸಿದರೆ, ಹಿರಿಯರು ಇರುವಷ್ಟು ದಿನ ನೆಮ್ಮದಿಯಿಂದ ಬದುಕು ದೂಡುವುದಕ್ಕೆ ಸಾಧ್ಯವಾಗುತ್ತದೆ. ಅದು ನಮ್ಮ ನಾಗರಿಕ ಸಮಾಜದ ಕರ್ತವ್ಯ ಕೂಡ.

ಆನಂದ ಎನ್.ಎಲ್., ಅಜ್ಜಂಪುರ

ಆತಂಕ ತಂದ ವಿದ್ಯಮಾನ

ಪತ್ರಿಕೆಯಲ್ಲಿನ ಎರಡು ಸುದ್ದಿಗಳು (ಪ್ರ.ವಾ., ಮಾರ್ಚ್ 28) ಗಮನ ಸೆಳೆದವು ಮತ್ತು ಆತಂಕ ಹುಟ್ಟಿಸುವಂತಿದ್ದವು. ಒಂದು: ಧಾರವಾಡ ಲೋಕಸಭಾ ಕ್ಷೇತ್ರಕ್ಕೆ ಬಿಜೆಪಿಯಿಂದ ಘೋಷಿತವಾಗಿರುವ ಅಭ್ಯರ್ಥಿ ಪ್ರಲ್ಹಾದ ಜೋಶಿ ಅವರನ್ನು ಬದಲಾಯಿಸುವಂತೆ ಶಿರಹಟ್ಟಿ ಫಕೀರ ದಿಂಗಾಲೇಶ್ವರ ಸ್ವಾಮೀಜಿ ಅವರು ಮಾಡಿರುವ ಒತ್ತಾಯ. ಅದಕ್ಕೆ ಅವರು ಏನೇ ಕಾರಣ ಕೊಟ್ಟಿದ್ದರೂ ರಾಜಕೀಯದಲ್ಲಿ ಮಠಾಧೀಶರ ಹಸ್ತಕ್ಷೇಪ ಅತಿಯಾಯಿತು ಎನಿಸುತ್ತದೆ. ತೆರೆಯಮರೆಯಲ್ಲಿ ರಾಜಕೀಯ ಮಾಡುತ್ತಿದ್ದ ಮಠಾಧೀಶರು ಈಗ ನೇರವಾಗಿ ರಾಜಕೀಯ ಮಾಡುತ್ತಿದ್ದಾರೆ. ಹಾಗೆ ನೋಡಿದರೆ ಮಠಾಧೀಶರು ರಾಜಕೀಯದಲ್ಲಿ ಮೂಗು ತೂರಿಸಲು ಅನುವು ಮಾಡಿಕೊಟ್ಟಿದ್ದೇ ರಾಜಕೀಯ ನಾಯಕರು!

ಇನ್ನೊಂದು, ಕೋಲಾರ ಮೀಸಲು ಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯ ಬಗೆಗಿನ ಬಿಕ್ಕಟ್ಟು. ಅದರಲ್ಲೂ ದಲಿತರ ಎರಡು ಬಣಗಳೊಳಗಿನ ಈ ಹೋರಾಟ ಬೇಸರ ತರಿಸುವಂತಿದೆ. ಅಂಬೇಡ್ಕರ್ ಯಾವ ಸಮುದಾಯಕ್ಕೆ ರಾಜಕೀಯ ಪ್ರಾತಿನಿಧ್ಯ ಕೊಡಬೇಕೆಂದು ಬಯಸಿದ್ದರೋ ಆ ಸಮುದಾಯವು ಸವರ್ಣೀಯರ ವಿರೋಧವನ್ನು ಇನ್ನೂ ಎದುರಿಸಬೇಕಾಗಿದೆ. ಇಂತಹ ಸಂದರ್ಭದಲ್ಲಿ, ಅವರದೇ ಎರಡು ಬಣಗಳ ನಡುವೆ ಇಂತಹ ಪರಿಸ್ಥಿತಿ ಬರಬಾರದಿತ್ತು. ಒಟ್ಟಿನಲ್ಲಿ ಎರಡೂ ವಿದ್ಯಮಾನಗಳು ಸಾಮಾಜಿಕವಾಗಿ, ರಾಜಕೀಯವಾಗಿ ಆತಂಕಕಾರಿಯಾಗಿಯೇ ಇವೆ.

ಹೊಸಮನೆ ವೆಂಕಟೇಶ, ಟಿ.ನರಸೀಪುರ

ಹಕ್ಕು ಚಲಾವಣೆ: ಸನ್ನದ್ಧರಾಗೋಣ

ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿರುವ ಭಾರತದಲ್ಲಿ ಮತದಾನದ ಪ್ರಮಾಣ ಕಡಿಮೆ ಇರುವುದನ್ನು ಅಂಕಿಅಂಶಗಳು ನಮಗೆ ತಿಳಿಸುತ್ತವೆ. ಇದಕ್ಕೆ ವಿದ್ಯಾವಂತರು ಚುನಾವಣೆಯನ್ನು ಲಘುವಾಗಿ ಪರಿಗಣಿಸಿರುವುದೇ ಕಾರಣ. ಶೀಘ್ರದಲ್ಲೇ ಲೋಕಸಭಾ ಚುನಾವಣೆ ನಡೆಯಲಿದೆ. 18 ವರ್ಷ ತುಂಬಿದವರು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ನೋಂದಾಯಿಸಿಕೊಳ್ಳಲು ಏಪ್ರಿಲ್ 15ರವರೆಗೆ ಅವಕಾಶವಿದೆ. ಇದನ್ನು ಸದುಪಯೋಗಪಡಿಸಿಕೊಳ್ಳಬೇಕು. ಮತದಾನದ ಹಕ್ಕು ಇರುವವರು ಕಡ್ಡಾಯವಾಗಿ ಮತದಾನ ಮಾಡಬೇಕು. ಈ ಬಾರಿ 85 ವರ್ಷ ಮತ್ತು ಅದಕ್ಕೆ ಮೇಲ್ಪಟ್ಟವರು, ಅಂಗವಿಕಲರು ಮನೆಯಿಂದಲೇ ಮತದಾನ ಮಾಡಲು ಅರ್ಜಿ ಸಲ್ಲಿಸಬಹುದು. ಕೆಲಸದ ನಿಮಿತ್ತ ದೇಶದ ನಾನಾ ಭಾಗಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಉದ್ಯೋಗಿಗಳಿಗೆ ಅಂಚೆ ಮತದಾನಕ್ಕೆ ಅವಕಾಶ ಮಾಡಿಕೊಟ್ಟರೆ ಮತದಾನದ ಪ್ರಮಾಣ ಸ್ವಲ್ಪ ಮಟ್ಟಿಗಾದರೂ ಹೆಚ್ಚಾಗುವ ಸಾಧ್ಯತೆ ಇದೆ. ಡಿಜಿಟಲ್ ಯುಗದಲ್ಲಿ ಆನ್‌ಲೈನ್ ಮತದಾನದ ವ್ಯವಸ್ಥೆ ಮಾಡುವುದರ ಬಗ್ಗೆಯೂ ಚುನಾವಣಾ ಆಯೋಗ ಯೋಚಿಸಬೇಕಾಗಿದೆ.

ಅಮೂಲ್ಯವಾದ ಮತವನ್ನು ಸರಿಯಾಗಿ ಬಳಸುವ ಮೂಲಕ ದೇಶ ಮತ್ತು ರಾಜ್ಯವನ್ನು ಅಭಿವೃದ್ಧಿ ಪಥದಲ್ಲಿ ಮುನ್ನಡೆಸುವ ನಾಯಕರನ್ನು ಆಯ್ಕೆ ಮಾಡಬೇಕು. ಚುನಾವಣೆಗೂ ಮುನ್ನವೇ ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಇದೆಯೇ ಇಲ್ಲವೇ ಎಂಬುದನ್ನು ತಿಳಿದುಕೊಳ್ಳಬೇಕು. ತಪ್ಪುಗಳಾಗಿದ್ದರೆ ನಾವು ಆನ್‌ಲೈನ್ ಮೂಲಕವೂ ಆಯೋಗಕ್ಕೆ ದೂರು ಸಲ್ಲಿಸಬಹುದು.

ಚನ್ನಕೇಶವ ಜಿ.ಕೆ., ತರೀಕೆರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅಮೆರಿಕ: ಮೂರೇ ತಿಂಗಳಲ್ಲಿ 9 ಅಸಹಜ ಸಾವು

ಭಾರತೀಯ ವಿದ್ಯಾರ್ಥಿಗಳೇ ಏಕೆ ಗುರಿ?

ಪ್ರಜಾವಾಣಿ ವಾರ್ತೆ

'ಅಮೆರಿಕದಲ್ಲಿ ಕಳೆದ ವರ್ಷದಿಂದ ದ್ವೇಷಾಪರಾಧ ಪ್ರಕರಣಗಳು ಏರಿಕೆಯಾಗಿವೆ. ಸಮುದಾಯಗಳ ನಡುವಣ ದ್ವೇಷಾಪರಾಧಗಳ ಸಂಖ್ಯೆಯೂ ಏರಿಕೆಯಾಗಿದೆ. ಆದರೆ, ಈ ದ್ವೇಷಕ್ಕೆ ಬಲಿಯಾಗುತ್ತಿರುವುದು ಮಾತ್ರ ವಿದ್ಯಾರ್ಥಿಗಳು' ಎನ್ನುತ್ತಾರೆ 28 ವರ್ಷದ ಭಾರತದ ಅನುಕ್ತಾ ದತ್ತಾ. ಇವರು ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಓದುತ್ತಿದ್ದಾರೆ.

'ಅಮೆರಿಕದಲ್ಲಿ ಹೆಚ್ಚುತ್ತಿರುವ ಭಾರತದ ವಿದ್ಯಾರ್ಥಿಗಳ ಮೇಲಿನ ಅಪರಾಧ ಪ್ರಕರಣಗಳನ್ನು ನೋಡಿದಾಗ, ನಾನು ಇಲ್ಲಿಗೆ ಪರಕೀಯಳು ಎನ್ನುವ ಭಾವನೆ ಮೂಡುತ್ತಿದೆ. ಕ್ಯಾಲಿಫೋರ್ನಿಯಾವು ಹೆಚ್ಚು ಪ್ರಗತಿಪರ ರಾಜ್ಯ. ಆದರೂ ರಾಜ್ಯದಲ್ಲಿ ಎಲ್ಲೇ ಹೋದರೂ ನಮ್ಮನ್ನು ಜನಾಂಗೀಯ ತಾರತಮ್ಯದಿಂದಲೇ ನೋಡುತ್ತಾರೆ. ನಾನು ಸ್ನೇಹಿತರೊಂದಿಗೇ ಇರುತ್ತೇನೆ. ಆದರೆ, ಇಂಥ ಘಟನೆಗಳು ನಡೆದಾಗ, ಒಬ್ಬೊಬ್ಬರೇ ಇದ್ದಾಗ ಎಷ್ಟು ಭಯವಾಗುತ್ತದೆ ಎಂಬುದನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ' ಎಂದು ಆತಂಕ ವ್ಯಕ್ತಪಡಿಸುತ್ತಾರೆ ಇದೇ ವಿಶ್ವವಿದ್ಯಾಲಯದಲ್ಲಿ ಓದುತ್ತಿರುವ ಭಾರತದ ಕಾಜರಿ ಸಹಾ.

2023ರ ಡಿಸೆಂಬರ್‌ನಲ್ಲಿ ನಡೆದ ಅಧಿವೇಶನದಲ್ಲಿ ಸಂಸದೆ ಮೌಸಂ ನೂರ್ ಎಂಬುವರು ಕೇಂದ್ರ ಸರ್ಕಾರದಿಂದ ಮಾಹಿತಿಯೊಂದನ್ನು ಕೇಳಿದ್ದರು. ವಿದೇಶಗಳಲ್ಲಿ ಓದುತ್ತಿರುವ ಭಾರತೀಯ ವಿದ್ಯಾರ್ಥಿಗಳ ಸುರಕ್ಷತೆಯ ಬಗೆಗಿನ ಪ್ರಶ್ನೆ ಅದಾಗಿತ್ತು. 2018ರಿಂದ ಈಚೆಗೆ ವಿದೇಶಗಳಲ್ಲಿ ವ್ಯಾಸಂಗ ಮಾಡುತ್ತಿರುವ ಎಷ್ಟು ಭಾರತೀಯ ವಿದ್ಯಾರ್ಥಿಗಳು ಮೃತಪಟ್ಟಿದ್ದಾರೆ ಮತ್ತು ಯಾವ ಯಾವ ದೇಶಗಳಲ್ಲಿ ಎಷ್ಟು ವಿದ್ಯಾರ್ಥಿಗಳು ಮೃತಪಟ್ಟಿದ್ದಾರೆ ಎಂದು ಕೇಂದ್ರವನ್ನು ಕೇಳಿದ್ದರು. ಇದಕ್ಕೆ ಉತ್ತರ ನೀಡಿದ್ದ ಕೇಂದ್ರದ ವಿದೇಶಾಂಗ ಸಚಿವಾಲಯವು, '2018–2023ರ ಅವಧಿಯಲ್ಲಿ ನೈಸರ್ಗಿಕ ವಿಕೋಪಗಳಲ್ಲಿ, ಅಪಘಾತದಲ್ಲಿ, ವೈದ್ಯಕೀಯ ಕಾರಣಗಳಿಗಾಗಿ ವಿದೇಶಗಳಲ್ಲಿ ಓದುತ್ತಿರುವ ಭಾರತೀಯ ವಿದ್ಯಾರ್ಥಿಗಳಲ್ಲಿ 403 ವಿದ್ಯಾರ್ಥಿಗಳು ಮೃತಪಟ್ಟಿದ್ದಾರೆ' ಎಂದು ಉತ್ತರಿಸಿತ್ತು.

ಇದೇ ಅವಧಿಯಲ್ಲಿ ಅಮೆರಿಕ ಒಂದರಲ್ಲಿಯೇ 36 ವಿದ್ಯಾರ್ಥಿಗಳು ಮೃತಪಟ್ಟಿದ್ದಾರೆ ಎನ್ನುವುದು ಕೇಂದ್ರ ಸರ್ಕಾರ ನೀಡಿದ ಉತ್ತರದಿಂದಲೇ ತಿಳಿದುಬಂದಿದೆ. ಐದು ವರ್ಷಗಳಲ್ಲಿ 36 ವಿದ್ಯಾರ್ಥಿಗಳು ಸತ್ತಿದ್ದರೆ, 2024ರ ಮೊದಲ ಮೂರು ತಿಂಗಳಲ್ಲೇ 9 ವಿದ್ಯಾರ್ಥಿಗಳು ಮೃತಪಟ್ಟಿದ್ದಾರೆ. ಇದು ಅಮೆರಿಕದಲ್ಲಿ ಓದುತ್ತಿರುವ ಭಾರತೀಯ ವಿದ್ಯಾರ್ಥಿಗಳಲ್ಲಿ, ಅವರ ಪೋಷಕರಲ್ಲಿ ಆತಂಕವನ್ನು ಹೆಚ್ಚಿಸಿದೆ. ಭಾರತೀಯ ವಿದ್ಯಾರ್ಥಿಗಳು ಹಾಗೂ ಅಮೆರಿಕದಲ್ಲಿ ನೆಲೆಸಿರುವ ಭಾರತ ಮೂಲದ ವಿದ್ಯಾರ್ಥಿಗಳ ಸಾವಿನ ಪ್ರಕರಣಗಳು ಅಮೆರಿಕದಲ್ಲಿ ಅಧಿಕವಾಗ ತೊಡಗಿರುವುದರನ್ನು ಈ ಅಂಕಿ–ಅಂಶವು ತೋರಿಸುತ್ತದೆ.

ವಿಶ್ವವಿದ್ಯಾಲಯಗಳ ಸಮೀಪ, ಹತ್ತಿರ ಅರಣ್ಯ ಪ್ರದೇಶದಲ್ಲಿ, ಮನೆಗಳ ಸಮೀಪವೇ ಸಾವು ಸಂಭವಿಸುತ್ತಿವೆ. ಕೆಲವರನ್ನು ಭೀಕರವಾಗಿ ಸಾಯಿಸಲಾಗಿದೆ. ಕೆಲವು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ. ತೀವ್ರ ಚಳಿಯ ಕಾರಣಕ್ಕೆ ವಿದ್ಯಾರ್ಥಿಯೋರ್ವ ಮೃತಪಟ್ಟಿದ್ದಾನೆ ಎಂದು ಹೇಳಲಾಗಿದೆ... ಹೀಗೆ ನಾನಾ ರೀತಿಯಲ್ಲಿ ಸಾವು ಸಂಭವಿಸಿವೆ. ಆದರೆ, ಈ ಯಾವ ಸಾವುಗಳಿಗೂ ನಿಖರ ಕಾರಣ ತಿಳಿದುಬಂದಿಲ್ಲ, ತನಿಖೆ ಮುಂದುವರಿಯುತ್ತಲೇ ಇದೆ ಎನ್ನುತ್ತಾರೆ ಅಲ್ಲಿನ ಪೊಲೀಸರು.

ಅಕುಲ್ ಬಿ. ಧವನ್ ಎನ್ನುವ ವಿದ್ಯಾರ್ಥಿಯು ವಿಶ್ವವಿದ್ಯಾಲಯದ ಸಮೀಪವೇ ಮೃತಪಟ್ಟಿದ್ದ. ಆತ ಕಾಣೆಯಾಗಿದ್ದಾನೆ ಎಂದು ದೂರು ಕೂಡ ದಾಖಲಾಗಿತ್ತು. ಕಾಣೆಯಾದ ಜಾಗದಿಂದ ತುಸುವೇ ದೂರದಲ್ಲಿ ವಿದ್ಯಾರ್ಥಿಯ ಮೃತದೇಹವು ದೂರು ದಾಖಲಾದ ಮಾರನೆ ದಿನ ಪತ್ತೆಯಾಗಿತ್ತು. ವಿಶ್ವವಿದ್ಯಾಲಯದ ಪೊಲೀಸರು ದೂರಿನ ಕುರಿತು ನಿರ್ಲಕ್ಷ್ಯ ಎಸಗಿದ್ದಾರೆ ಎಂದು ಅಕುಲ್ ಅವರ ಪೋಷಕರು ಪೊಲೀಸರ ವಿರುದ್ಧವೇ ದೂರು ನೀಡಿದ್ದಾರೆ. ವಿದ್ಯಾರ್ಥಿಗಳ ಸಾವಿನ ಹಲವು ಪ್ರಕರಣಗಳು ದಾಖಲಾಗಿದ್ದರೂ ಯಾವ ಪ್ರಕರಣದಲ್ಲಿಯೂ ಸಾವಿನ ಕಾರಣದ ಕುರಿತು ಯಾವುದೇ ಅಂತಿಮವಾದ ಮಾಹಿತಿ ಪತ್ತೆಯಾಗಿಲ್ಲ. ಯಾವ ತನಿಖೆಯೂ ಪೂರ್ಣಗೊಳ್ಳುತ್ತಿಲ್ಲ.

ಅಮೆರಿಕದಲ್ಲಿರುವ ಭಾರತೀಯ ರಾಯಭಾರ ಕಚೇರಿಯ ಪ್ರಕಾರ, ಅಮೆರಿಕದಲ್ಲಿ ಓದುತ್ತಿರುವ ವಿದೇಶಿ ವಿದ್ಯಾರ್ಥಿಗಳ ಪೈಕಿ, ಭಾರತೀಯ ವಿದ್ಯಾರ್ಥಿಗಳ ಪ್ರಮಾಣವು ಶೇ 25ರಷ್ಟಿದೆ. ಅಮೆರಿಕದಲ್ಲಿ ಓದಬಯಸುವ ವಿದ್ಯಾರ್ಥಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಏರುತ್ತಿದ್ದರೆ, ಇನ್ನೊಂದೆಡೆ ಅಮೆರಿಕದಲ್ಲಿ ಭಾರತೀಯ ವಿದ್ಯಾರ್ಥಿಗಳ ಸಾವಿನ ಸಂಖ್ಯೆಯು ಏರಿಕೆಯಾಗುತ್ತಿದೆ. ಭಾರತೀಯ ವಿದ್ಯಾರ್ಥಿಗಳು ಅಮೆರಿಕದಲ್ಲೇ ನೆಲೆಸಿ ತಮ್ಮ ಉದ್ಯೋಗಾವಕಾಶಗಳನ್ನು ಕಸಿದುಕೊಳ್ಳುತ್ತಾರೆ ಎಂಬ ಭಾವನೆ ಅಮೆರಿಕದ ನಿರುದ್ಯೋಗಿಗಳಲ್ಲಿ, ನಿರ್ಗತಿಕರಲ್ಲಿ ಹೆಚ್ಚುತ್ತಿದೆ. ಭಾರತದ ವಿದ್ಯಾರ್ಥಿಗಳ ಮೇಲೆ ದಾಳಿ ಹೆಚ್ಚಾಗಲು ಇದೇ ಪ್ರಮುಖ ಕಾರಣ ಎಂದು ವಿಶ್ಲೇಷಿಸಲಾಗುತ್ತಿದೆ. ಆದರೆ ಈ ಬಗ್ಗೆ ಸರ್ಕಾರಗಳು ಅಧಿಕೃತವಾಗಿ ಏನನ್ನೂ ಹೇಳುತ್ತಿಲ್ಲ.

ಆಧಾರ: ಪಿಟಿಐ, ಎಫ್‌ಬಿಐ ದ್ವೇಷಾಪರಾಧ ಅಂಕಿ–ಅಂಶ ವರದಿ 2022, ನ್ಯೂಯಾರ್ಕ್ ಟೈಮ್ಸ್, ಕೇಂದ್ರ ಸರ್ಕಾರ ರಾಜ್ಯಸಭೆಯಲ್ಲಿ ನೀಡಿದ ಉತ್ತರ

'ಹಿಂದೂ ವಿರೋಧಿ' ಪ್ರಕರಣಗಳು 25

ಅಮೆರಿಕದಲ್ಲಿ ದ್ವೇಷಾಪರಾಧ ಪ್ರಕರಣಗಳು ಹೆಚ್ಚಾಗತೊಡಗಿದೆ ಎನ್ನುತ್ತದೆ ಫೆಡರಲ್ ಬ್ಯುರೊ ಆಫ್ ಇನ್‌ವೆಸ್ಟಿಗೇಷನ್ (ಎಫ್‌ಬಿಐ) ವರದಿ. ದ್ವೇಷಾಪರಾಧಗಳ ಕುರಿತು ಎಫ್‌ಬಿಐ ಪ್ರತಿ ವರ್ಷವೂ ಅಂಕಿ–ಅಂಶಗಳ ವರದಿಯೊಂದನ್ನು ಬಿಡುಗಡೆ ಮಾಡುತ್ತದೆ. ಈ ವರದಿಯಲ್ಲಿ 35 ವಿವಿಧ ಸಮುದಾಯಗಳ ವಿರುದ್ಧ ನಡೆಯುವ ಅಪರಾಧ ಪ್ರಕರಣಗಳ ಲೆಕ್ಕವನ್ನೂ ಇಡಲಾಗುತ್ತದೆ. ಈ ಸಮುದಾಯಗಳ ಪಟ್ಟಿಯಲ್ಲಿ 'ಹಿಂದೂ ವಿರೋಧಿ' ಎನ್ನುವ ಅಂಶವನ್ನು ಕೆಲ ವರ್ಷಗಳ ಈಚೆಗೆ ಸೇರಿಸಲಾಗಿದೆ. ಅಮೆರಿಕದಲ್ಲಿ ನೆಲೆಸಿರುವ ಹಿಂದೂ ಪರ ಸಂಘಟನೆಗಳ ಒತ್ತಾಯದ ಕಾರಣಕ್ಕಾಗಿ ಈ ಅಂಶವನ್ನು ಸೇರಿಸಲಾಗಿದೆ.

ಈ ವರದಿಯ ಪ್ರಕಾರ, 2022ರಲ್ಲಿ ದಾಖಲಾದ ಹಿಂದೂ ವಿರೋಧಿ ಪ್ರಕರಣಗಳ ಸಂಖ್ಯೆ 25. ಈ ಪ್ರಕರಣಗಳಲ್ಲಿ 31 ಜನರು ಸಂತ್ರಸ್ತರು. 2021ರಲ್ಲಿ ಹಿಂದೂ ವಿರೋಧಿ ಪ್ರಕರಣಗಳ ಸಂಖ್ಯೆ 10. ಅಂದರೆ, ಒಂದೇ ವರ್ಷದಲ್ಲಿ ಹಿಂದೂ ವಿರೋಧಿ ಪ್ರಕರಣಗಳು ಶೇ 150ರಷ್ಟು ಏರಿಕೆಯಾಗಿವೆ. ದ್ವೇಷಾಪರಾಧಗಳಲ್ಲಿ ಕಪ್ಪು ಜನರ ಮೇಲಿನ ಜನಾಂಗೀಯ ನಿಂದಿನೆ ಪ್ರಕರಣಗಳೇ ಹೆಚ್ಚು.

ಅಮೆರಿಕನ್ನರು ಉದ್ಯೋಗಾವಕಾಶ ವಂಚಿತರಾದ ಕಾರಣಕ್ಕೆ ಭಾರತೀಯ ವಿದ್ಯಾರ್ಥಿಗಳು ಮತ್ತು ನೌಕರರ ಮೇಲೆ ನಡೆಸುತ್ತಿದ್ದ ಹಲ್ಲೆಗೂ, ಧರ್ಮಾಧಾರಿತ ಹಲ್ಲೆಗಳಿಗೂ ಬಹಳ ವ್ಯತ್ಯಾಸವಿದೆ. ಈ ಸ್ವರೂಪದ ಹಲ್ಲೆ ಅಥವಾ ದೌರ್ಜನ್ಯಗಳು ಈಚಿನ ವರ್ಷಗಳಲ್ಲಿ ನಡೆಯುತ್ತಿವೆ. ಭಾರತದ ಕೇಂದ್ರ ಸರ್ಕಾರದ ನಿಲುವುಗಳ ಕಾರಣದಿಂದ ಇಂತಹ ದೌರ್ಜನ್ಯ ಹೆಚ್ಚಾಗುತ್ತಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ರಷ್ಯಾ ಮತ್ತು ಉಕ್ರೇನ್ ಕದನದಲ್ಲಿ ಭಾರತ ಉಕ್ರೇನ್ ಪರ ನಿಲ್ಲಲಿಲ್ಲ ಎಂದೂ, ಮತ್ತು ಇಸ್ರೇಲ್–ಪ್ಯಾಲೆಸ್ಟೀನ್ ಯುದ್ಧದಲ್ಲಿ ಇಸ್ರೇಲ್ ಪರವಾಗಿ ನಿಂತಿತೆಂದು ಅಮೆರಿಕದಲ್ಲಿನ ಭಾರತೀಯರ ವಿರುದ್ಧ ಅಲ್ಲಿ ಪ್ರತಿಭಟನೆ ಮತ್ತು ಆಕ್ಷೇಪಗಳು ದಾಖಲಾದ ಉದಾಹರಣೆಗಳಿವೆ.

ಭಾರತದಲ್ಲಿನ ಆಂತರಿಕ ವಿಚಾರಗಳೂ ಅಮೆರಿಕದಲ್ಲಿ ಭಾರತೀಯರನ್ನು ನೋಡುವ ದೃಷ್ಟಿಕೋನವನ್ನು ಪ್ರಭಾವಿಸುತ್ತಿದೆ ಎಂಬುದನ್ನು ಈಚಿನ ಕೆಲ ಬೆಳವಣಿಗೆಗಳು ಸೂಚಿಸುತ್ತವೆ. ಈ ವಾರವಷ್ಟೇ (ಮಾರ್ಚ್ 26ರಂದು) ಅಮೆರಿಕದ 100ಕ್ಕೂ ಹೆಚ್ಚು ಸ್ವಯಂಸೇವಾ ಸಂಘಟನೆಗಳು ಸರ್ಕಾರಕ್ಕೆ ಬಹಿರಂಗ ಪತ್ರ ಬರೆದಿದ್ದವು. ಅಮೆರಿಕದಲ್ಲಿನ ಭಾರತೀಯರು ಕಟು ಹಿಂದುತ್ವವನ್ನು ಪ್ರತಿಪಾದಿಸುತ್ತಿದ್ದಾರೆ. ಭಾರತದಲ್ಲಿ ಮುಸ್ಲಿಂ ದ್ವೇಷವನ್ನು ಉದ್ದೀಪಿಸುತ್ತಿರುವಂತೆ ಇಲ್ಲಿನ ಭಾರತೀಯ ಹಿಂದೂಗಳೂ ಮುಸ್ಲಿಂ ದ್ವೇಷವನ್ನು ಪ್ರಚುರಪಡಿಸುತ್ತಿದ್ದಾರೆ. ಇದು ಅಮೆರಿಕದ ಪ್ರಜಾಪ್ರಭುತ್ವ ನಿಲುವುಗಳಿಗೆ ವಿರುದ್ಧವಾದುದು. ಅಮೆರಿಕದಲ್ಲಿ ಭಾರತೀಯರು ಮತ್ತು ಭಾರತೀಯ ವಿದ್ಯಾರ್ಥಿಗಳ ಮೇಲೆ ದಾಳಿಗಳು ಹೆಚ್ಚಾಗಲು ಇದೂ ಒಂದು ಕಾರಣ. ಇಂತಹ ಬೆಳವಣಿಗೆಗಳಿಗೆ ಕಡಿವಾಣ ಹಾಕಬೇಕು ಎಂದು ಆ ಪತ್ರದಲ್ಲಿ ಒತ್ತಾಯಿಸಿದ್ದವು. ಆ ಪತ್ರಕ್ಕೆ ಅಮೆರಿಕ ಸರ್ಕಾರವು ಈವರೆಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಕೆಲವು ಪ್ರಕರಣಗಳು

- **ಜನವರಿ: ವಿವೇಕ್ ಸೈನಿ (25):** ಸೈನಿ ಅವರು ಜಾರ್ಜಿಯಾದ ಲಿಥೋನಿಯಾದಲ್ಲಿ ಎಂಬಿಎ ಪದವಿ ಓದುತ್ತಿದ್ದರು. ಜೊತೆಜೊತೆಗೆ ಅಂಗಡಿಯೊಂದರಲ್ಲಿ ಕ್ಲರ್ಕ್ ಉದ್ಯೋಗವನ್ನೂ ಮಾಡುತ್ತಿದ್ದರು. ಮನೆ–ಮಠ ಇಲ್ಲದ ಜುಲಿಯಾನ್ ಫಾಲ್ನರ್‌ಗೆ ಇದೇ ಅಂಗಡಿಯಲ್ಲಿ ಆಶ್ರಯ ನೀಡಲಾಗಿತ್ತು. ಸೈನಿ ಅವರು ಆತನಿಗೆ ತಿನ್ನುವುದಕ್ಕೆ ಕುಡಿಯುವುದಕ್ಕೆ ನೀಡುತ್ತಿದ್ದರು. ಆದರೆ, ಇವಕ್ಕೆ ಹಣ ನೀಡಬೇಕು ಎಂದು ಸೈನಿ ಹೇಳಿದರು. ಇದನ್ನು ಫಾಲ್ನರ್ ನಿರಾಕರಿಸಿದರು. ಆಹಾರಕ್ಕಾಗಿ ಹಣ ಕೇಳಿದ್ದಕ್ಕೆ ಮನೆಗೆ ಮರಳುವ ವೇಳೆಯಲ್ಲಿ ಸೈನಿ ಅವರ ಮೇಲೆ ಈತ ದಾಳಿ ನಡೆಸಿದ. ತಲೆ ಹಾಗೂ ಮುಖದ ಭಾಗಕ್ಕೆ ಸುಮಾರು 50 ಬಾರಿ ಸುತ್ತಿಗೆಯಿಂದ ಹೊಡೆದಿದ್ದಾನೆ. ಈ ದಾಳಿಯ ವಿಡಿಯೊವು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ
- **ಜನವರಿ: ಶ್ರೇಯಸ್ ರೆಟದಟಿ ಬೆನಿಗರ್ (19):** ಲಿಂಡ್ನರ್ ಸ್ಕೂಲ್ ಆಫ್ ಬ್ಯುಜಿನೆಸ್‌ನಲ್ಲಿ ಇವರು ಓದುತ್ತಿದ್ದರು. ಇವರನ್ನು ಹತ್ಯೆ ಮಾಡಲಾಗಿಲ್ಲ ಎಂದು ಪೊಲೀಸರು ಹೇಳಿದ್ದಾರೆ. ಆದರೆ, ಸಾವಿಗೆ ನಿಖರ ಕಾರಣ ತಿಳಿದುಬಂದಿಲ್ಲ
- **ಜನವರಿ: ನೀಲ್ ಆಚಾರ್ಯ:** ಪರ್ಡೇ ವಿಶ್ವವಿದ್ಯಾಲಯದಲ್ಲಿ ಇವರು ವ್ಯಾಸಂಗ ಮಾಡುತ್ತಿದ್ದರು. ಮಗ ಕಾಣೆಯಾಗಿದ್ದಾನೆ ಎಂದು ನೀಲ್ ತಾಯಿ ಜನವರಿ 28ರಂದು ಪೊಲೀಸರಿಗೆ ದೂರು ನೀಡಿದ್ದರು. ಇದಾದ ಕೆಲವು ದಿನಗಳ ಬಳಿಕ, ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿಯೇ ನೀಲ್ ಮೃತದೇಹ ಪತ್ತೆಯಾಯಿತು
- **ಫೆಬ್ರುವರಿ: ಸಯ್ಯದ್ ಮಝುರ್ ಅಲಿ:** ಅಲಿ ಅವರು ಇಂಡಿಯಾನ ವೆಸ್ಲೆಯನ್ ವಿಶ್ವವಿದ್ಯಾಲಯದಲ್ಲಿ ಮಾಹಿತಿ ತಂತ್ರಜ್ಞಾನದಲ್ಲಿ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿದ್ದರು. ತಮ್ಮ ಮನೆಗೆ ತೆರಳುತ್ತಿದ್ದಾಗ ಮೂವರು ಅನಾಮಿಕರು ಅವರ ಮೇಲೆ ದಾಳಿ ನಡೆಸಿದರು. ದಾಳಿಯ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಅಲಿ ಅವರು ತಮ್ಮ ಮೇಲಾದ ದಾಳಿ ಕುರಿತು, ದಾಳಿ ಬಳಿಕವೇ ಖುದ್ದು ವಿಡಿಯೊ ಮಾಡಿದ್ದರು. ನಂತರ, ಅವರನ್ನು ಸ್ಥಳೀಯ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ, ಅವರು ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟರು
- **ಫೆಬ್ರುವರಿ: ಸಮೀತ್ ಕಾಮತ್ (23):** ಇವರು ಅಮೆರಿಕದಲ್ಲಿ ನೆಲೆಸಿರುವ ಭಾರತೀಯ. ಪರ್ಡೇ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿದ್ದರು. ವಿಶ್ವವಿದ್ಯಾಲಯದ ಸಮೀಪದಲ್ಲಿನ ಅರಣ್ಯ ಪ್ರದೇಶದಲ್ಲಿ ಸಮೀತ್ ಮೃತದೇಹ ದೊರೆತಿತ್ತು
- **ಮಾರ್ಚ್: ಅಮರ್‌ನಾಥ್ ಘೋಷ್ (34):** ಇವರು ಪಶ್ಚಿಮ ಬಂಗಾಳದವರು. ಈತ ಕೂಚುಪುಡಿ ಹಾಗೂ ಭರತನಾಟ್ಯ ನೃತ್ಯಪಟು. ವಾಷಿಂಗ್ಟನ್ ವಿಶ್ವವಿದ್ಯಾಲಯದಲ್ಲಿ ನೃತ್ಯದ ಕುರಿತು ಹೆಚ್ಚಿನ ವ್ಯಾಸಂಗ ಮಾಡುತ್ತಿದ್ದ ಈತನನ್ನು ಗುಂಡಿಕ್ಕಿ ಹತ್ಯೆ ಮಾಡಲಾಗಿದೆ. ಲೂಯಿಸ್ ಅಕಾಡೆಮಿಯ ಹತ್ತಿರವೇ ಅಮರ್‌ನಾಥ್ ಮೇಲೆ ಹಲವು ಸುತ್ತಿನ ಗುಂಡಿನ ದಾಳಿ ನಡೆಸಲಾಗಿತ್ತು. ಅಮರ್‌ನಾಥ್ ಅವರು ಸ್ಥಳದಲ್ಲಿಯೇ ಮೃತಪಟ್ಟಿದ್ದರು
- **ಮಾರ್ಚ್: ಅಭಿಜೀತ್ ಪುರುಚುರು (20):** ಬಾಸ್ಟನ್ ವಿಶ್ವವಿದ್ಯಾಲಯದಲ್ಲಿ ಅಭಿಜೀತ್ ಅವರು ಎಂಜಿನಿಯರಿಂಗ್ ಓದುತ್ತಿದ್ದರು. ಬಾಸ್ಟನ್‌ನ ಅರಣ್ಯ ಪ್ರದೇಶವೊಂದರಲ್ಲಿ ಕಾರೊಂದರಲ್ಲಿ ಅಭಿಜೀತ್ ಅವರ ಮೃತದೇಹ ಪತ್ತೆಯಾಗಿದೆ. ಸಾವಿಗೆ ಕಾರಣ ತಿಳಿದುಬಂದಿಲ್ಲ. ಆದರೆ, ಸ್ಥಳೀಯ ಮಾಧ್ಯಮಗಳು ಇದನ್ನು ಹತ್ಯೆ ಎಂದು ಹೇಳುತ್ತಿವೆ

ಸಿನಿ ಬಿಟ್ಸ್

ವಿಕ್ರಮ್‌ಗೆ ಜೋಡಿಯಾದ ಸಂಜನಾ

ಸಂಜನಾ

'ಕೆಮಿಸ್ಟ್ರಿ ಆಫ್ ಕರಿಯಪ್ಪ' ಸಿನಿಮಾದ ಮೂಲಕ ಸ್ಯಾಂಡಲ್‌ವುಡ್ ಪ್ರವೇಶಿಸಿದ ನಟಿ ಸಂಜನಾ ಆನಂದ್, ಕ್ರೇಜಿಸ್ಟಾರ್ ಪುತ್ರ ವಿಕ್ರಮ್ ನಟನೆಯ 'ಮುಧೋಳ' ಸಿನಿಮಾದಲ್ಲಿ ನಾಯಕಿಯಾಗಿ ಬಣ್ಣಹಚ್ಚಲಿದ್ದಾರೆ. ಚಂದನವನ ಸೇರಿದಂತೆ ತೆಲುಗು ಚಿತ್ರರಂಗದಲ್ಲೂ ಸಕ್ರಿಯರಾಗಿರುವ ಸಂಜನಾ, ವಿಕ್ರಮ್‌ಗೆ ಜೋಡಿಯಾಗಲಿದ್ದಾರೆ ಎನ್ನುವ ಸುದ್ದಿ ಇತ್ತು. ಇದೀಗ ಚಿತ್ರತಂಡವೇ ಇದನ್ನು ಘೋಷಿಸಿದೆ. ದಿನಕರ್ ತೂಗುದೀಪ ನಿರ್ದೇಶನದ 'ರಾಯಲ್' ಹಾಗೂ ತೆಲುಗಿನ 'ಫುಲ್ ಬಾಟಲ್' ಎಂಬ ಚಿತ್ರಗಳ ಬಿಡುಗಡೆಗೆ ಎದುರು ನೋಡುತ್ತಿರುವ ಸಂಜನಾ ಇತ್ತೀಚೆಗಷ್ಟೇ ಧನ್ವೀರ್ ನಟನೆಯ 'ಹಯಗ್ರೀವ' ಸಿನಿಮಾ ಒಪ್ಪಿಕೊಂಡಿದ್ದರು. 'ತ್ರಿವಿಕ್ರಮ್' ಸಿನಿಮಾ ಮೂಲಕ ಚಿತ್ರರಂಗ ಪ್ರವೇಶಿಸಿದ ವಿಕ್ರಮ್ ಅವರ ಎರಡನೇ ಪ್ರಾಜೆಕ್ಟ್ 'ಮುಧೋಳ'. ತಮಿಳು, ತೆಲುಗು ಚಿತ್ರರಂಗದಲ್ಲಿ ಸಹ ನಿರ್ದೇಶಕನಾಗಿ, ಸಿನಿಮಾ ಬರಹಗಾರನಾಗಿ ಗುರುತಿಸಿಕೊಂಡಿರುವ ಕಾರ್ತಿಕ್ ರಾಜನ್ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.

'ವಿದ್ಯಾರ್ಥಿ'ಯಾದ ಚಂದನ್‌ಶೆಟ್ಟಿ

ನಟ, ಸಂಗೀತ ನಿರ್ದೇಶಕ ಚಂದನ್ ಶೆಟ್ಟಿ ಸದ್ದುಗದ್ದಲವಿಲ್ಲದೆ 'ವಿದ್ಯಾರ್ಥಿ ವಿದ್ಯಾರ್ಥಿನಿಯರೇ' ಚಿತ್ರದ ಚಿತ್ರೀಕರಣ ಮುಗಿಸಿದ್ದಾರೆ. ಅರುಣ್ ಅಮುಕ್ತ ಆ್ಯಕ್ಷನ್–ಕಟ್ ಹೇಳಿದ್ದು, ಸುಬ್ರಮಣ್ಯ ಕುಕ್ಕೆ ಮತ್ತು ಎ.ಸಿ ಶಿವಲಿಂಗೇಗೌಡ ಬಂಡವಾಳ ಹೂಡಿದ್ದಾರೆ.

'ಬೆಂಗಳೂರು, ಮೈಸೂರು, ಮಂಗಳೂರು, ಚಿಕ್ಕಮಗಳೂರು ಮುಂತಾದೆಡೆಗಳಲ್ಲಿ ಐವತ್ತು ದಿನಗಳ ಕಾಲ ಚಿತ್ರೀಕರಣ ನಡೆಸಲಾಗಿದೆ. ಪೋಸ್ಟ್ ಪ್ರೊಡಕ್ಷನ್ ಕೆಲಸಗಳುನಡೆಯುತ್ತಿದ್ದು, ಜೂನ್‌ನಲ್ಲಿ ಬಿಡುಗಡೆ ಆಲೋಚನೆಯಿದೆ. ಚಂದನ್ ಶೆಟ್ಟಿ ಪಾತ್ರಕ್ಕೆ ಮೂರು ಶೇಡ್‌ಗಳಿವೆ. ಕಾಲೇಜು ಹುಡುಗರ ಕಥೆ' ಎಂದರು ನಿರ್ದೇಶಕರು.

ಭಾವನಾ, ಮಾನಸಿ ಚಂದನ್‌ಗೆ ಜೋಡಿಯಾಗಿದ್ದಾರೆ. ಪ್ರಶಾಂತ್ ಸಂಬರ್ಗಿ, ಹಿರಿಯ ನಟ ಭವ್ಯಾ, ರಘು ರಾಮನಕೊಪ್ಪ ಮುಂತಾದವರು ತಾರಾಗಣದಲ್ಲಿದ್ದಾರೆ. ಕುಮಾರ್ ಗೌಡ ಛಾಯಾಚಿತ್ರಗ್ರಹಣ, ವಿಜೇತ್ ಕೃಷ್ಣ, ವಾಸು ದೀಕ್ಷಿತ್ ಮತ್ತು ಶಶಾಂಕ್ ಶೇಷಗಿರಿ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ.

ಚಂದನ್ ಶೆಟ್ಟಿ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

'ಇ.ಡಿ ಬಂಧಿಸಿದ ತಕ್ಷಣ ಅರವಿಂದ ಕೇಜ್ರಿವಾಲ್ ಪ್ಯಾಂಟ್‌ನಲ್ಲೇ ಮೂತ್ರ ಮಾಡಿಕೊಂಡಿದ್ದಾರೆ' ಎಂಬ ವಿವರ ಇರುವ ಪೋಸ್ಟ್ ಮತ್ತು ಚಿತ್ರವು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಿದೆ. ಆದರೆ ಇದು ತಿರುಚಲಾದ ಚಿತ್ರ.

ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಕೇಜ್ರಿವಾಲ್ ಅವರನ್ನು ಬಂಧಿಸಿದ್ದು ರಾತ್ರಿಯ ವೇಳೆ. ಆದರೆ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಿರುವ ಚಿತ್ರ ಬೆಳಗ್ಗಿನ ಹೊತ್ತು ತೆಗೆದದ್ದು. ಆ ಚಿತ್ರವನ್ನು ಗೂಗಲ್ ರಿವರ್ಸ್ ಸರ್ಚ್‌ನಲ್ಲಿ ಹುಡುಕಿದಾಗ, 2022ರ ಜೂನ್ 6ರಂದು ಅಹಮದಾಬ್ ವಿಮಾನ ನಿಲ್ದಾಣದಲ್ಲಿ ಬಂದಿಳಿದ ಕೇಜ್ರಿವಾಲ್ ಎಂದು ಸುದ್ದಿ ಸಂಸ್ಥೆಗಳು ಪ್ರಕಟಿಸಿದ ಚಿತ್ರ ಪತ್ತೆಯಾಯಿತು. ಆ ಚಿತ್ರವನ್ನೇ ತಿರುಚಿ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಮಾರ್ಚ್ 29, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣ ಚತುರ್ಥಿ ಗಂ. 20-21 ನಕ್ಷತ್ರ: ವಿಶಾಖಾ ಗಂ.20-36 ಯೋಗ: ವಜ್ರ ಗಂ. 23-11 ಕರಣ: ಬವ ಗಂ. 07-43, ಮೀನ ಮಾಸದ 15 ನೇ ದಿನ, ಮಳೆನಕ್ಷತ್ರ: ಉತ್ತರಾಭಾದ್ರ 4. ರಾಹುಕಾಲ : ಬೆಳಿಗ್ಗೆ 10-30 - 12-00
ಸೂರ್ಯೋದಯ : 06-32 ಸೂರ್ಯಾಸ್ತ : 06-39
ಮುಸ್ಲಿಂ ದಿನಾಂಕ : 18 ರಂಜಾನ್
ದಿನ ವಿಶೇಷ : ಗುಡ್ ಫ್ರೈಡೇ , ಅದೃಷ್ಟ ಸಂಖ್ಯೆ : 2, 6

ಮೇಷ: ವಾಣಿಜ್ಯ ಸಂಸ್ಥೆಯೊಂದರಲ್ಲಿ ಕೆಲಸ ಕೊಡಿಸಿಕೊಡಲು ಅಣ್ಣನ ಸಹಾಯ ಪಡೆಯುವುದರಿಂದ ಯಶಸ್ವಿಯಾಗುವಿರಿ. ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶಗಳು ಸಿಗಲಿವೆ. ಪಾನೀಯ ಮಾರಾಟಗಾರರಿಗೆ ಶುಭ ದಿನ.

ವೃಷಭ: ಎಣ್ಣೆ ಮತ್ತು ಬೇಳೆ ಕಾಳು ವ್ಯಾಪಾರದಲ್ಲಿ ಮಾರಾಟ ಜೋರಾಗಿರುವುದು. ಜೀವನದಲ್ಲಿ ಸ್ಥಿರತೆ ಹಾಗೂ ಅಭಿವೃದ್ಧಿ ಸಾಧಿಸುವ ದಿನವೆನಿಸಲಿದೆ. ಪ್ರೀತಿ ಪಾತ್ರರೊಡನೆ ಆತ್ಮೀಯ ಒಡನಾಟ ಉಳಿಸಿಕೊಳ್ಳಿರಿ.

ಮಿಥುನ: ಜವಾಬ್ದಾರಿ ಕೆಲಸಗಳು ಒದಗಿ ಬಂದು ಅವುಗಳನ್ನು ಮುಗಿಸಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ವೈದ್ಯರಿಗೆ ತುರ್ತು ಕೆಲಸಗಳಿಂದ ಬಿಡುವಿಲ್ಲದಂತಾಗುವುದು. ಧಾರ್ಮಿಕ ಆಚರಣೆಯ ಬಗ್ಗೆ ಆಸಕ್ತಿ ಮೂಡಲಿದೆ.

ಕರ್ಕಾಟಕ: ವರ್ಗಾವಣೆಯಿಂದಾಗಿ ದೂರದ ಊರಿನಲ್ಲಿ ವಾಸಿಸುವ ಸಂದರ್ಭ ಬರಲಿದೆ. ಕೌಟುಂಬಿಕ ವಿಚಾರಗಳತ್ತ ಸಂಪೂರ್ಣ ಗಮನ ನೀಡಬೇಕಾಗುತ್ತದೆ. ಧರ್ಮದಲ್ಲಿ ಶ್ರದ್ಧೆ ಹೆಚ್ಚಲಿದೆ, ಧಾರ್ಮಿಕ ಕೆಲಸಗಳಲ್ಲಿ ತೊಡಗುತ್ತೀರಿ.

ಸಿಂಹ: ರಾಜಕಾರಣಿಗಳ ಮಾತಿನ ಪ್ರಭಾವದಿಂದ ಅಥವಾ ಹಣಬಲದಿಂದ ಕೆಲಸ ನೆರವೇರುತ್ತದೆ. ಯೋಜನೆಯ ಮೇಲೆ ಹಿಡಿತ ಸಾಧಿಸಲು ಸ್ನೇಹಿತರ ಬೆಂಬಲ ಸಕಾಲದಲ್ಲಿ ಸಿಗಲಿದೆ. ಮಂಜುನಾಥನ ದರ್ಶನ ಪಡೆದುಕೊಳ್ಳಿರಿ.

ಕನ್ಯಾ: ಬಾಲ್ಯ ಜೀವನ, ನಡೆದು ಬಂದ ದಾರಿಯತ್ತ ಒಮ್ಮೆ ಕಣ್ಣುಹಾಯಿಸುವುದು ಉತ್ತಮ. ಅನುಭವಿಗಳ ಸಲಹೆಗಳನ್ನು ಪಡೆದು ಸರಿಯಾದ ಮಾರ್ಗದಲ್ಲಿ ಸಾಗಿರಿ. ಹೆಂಡತಿ ಮಕ್ಕಳ ಆರೋಗ್ಯ ಉತ್ತಮವಾಗಿರುವುದು.

ತುಲಾ: ವೈಯಕ್ತಿಕ ಅಥವಾ ದಾಂಪತ್ಯಕ್ಕೆ ಸಂಬಂಧಿಸಿದ ವಿಚಾರಗಳಲ್ಲಿ ಸಣ್ಣ ಪುಟ್ಟ ಬದಲಾವಣೆಗಳಿಂದ ಮಾನಸಿಕ ನೆಮ್ಮದಿಯನ್ನು ಕಳೆದುಕೊಳ್ಳುವಂತೆ ಆಗಬಹುದು. ಕುಲ ಕಸುಬುಗಳು ಅಭ್ಯುದಯಕ್ಕೆ ಕಾರಣವಾಗುತ್ತದೆ.

ವೃಶ್ಚಿಕ: ಭಾಷಾ ಅಧ್ಯಾಪಕರಿಗೆ ಮತ್ತು ನಾಟಕ ಕಲಾವಿದರಿಗೆ ಹೆಚ್ಚಿನ ಮನ್ನಣೆ ಸಿಗುವುದು. ಕಟ್ಟಡದ ನಿರ್ಮಾಣ ಸಾಮಗ್ರಿಗಳ ಖರೀದಿಗಾಗಿ ಹೆಚ್ಚಿನ ಖರ್ಚು ಉಂಟಾಗುವುದು. ಹಿರಿಯರಿಂದ ಆರ್ಥಿಕ ಸಹಾಯ ಒದಗಲಿದೆ.

ಧನು: ಗೌರವ ಮತ್ತು ಸ್ಥಾನಲಾಭ ಈ ದಿನ ನಿಮಗಿದೆ. ಸಾಮಾಜಿಕ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಿ. ಹೊಸ ವಿಷಯ ತಿಳಿದುಕೊಳ್ಳುವ ಉತ್ತಮ ಅವಕಾಶಗಳು ಬರಲಿವೆ. ಸಮಾಲೋಚಿಸಿ ನಿರ್ಧಾರ ಕೈಗೊಳ್ಳುವುದು ಸೂಕ್ತ.

ಮಕರ: ಚರ್ಮದ ವಸ್ತುಗಳ ಮಾರಾಟಗಾರರಿಗೆ ವಿದೇಶದಿಂದ ಹೆಚ್ಚಿನ ಕೆಲಸದ ಅವಕಾಶಗಳು ಅಥವಾ ರಫ್ತು ವ್ಯವಹಾರದಲ್ಲಿ ಅತ್ಯಂತ ಲಾಭ ಇರಲಿದೆ. ಚಾಲಕ ವೃತ್ತಿಯನ್ನು ನಡೆಸುವವರು ಈ ದಿನ ಜಾಗ್ರತರಾಗಿರಿ.

ಕುಂಭ: ವೃತ್ತಿಯಲ್ಲಿ ಅಭಿಪ್ರಾಯಗಳು ಬೇರೆಯವರ ಆಲೋಚನೆಗೆ ಹೊಂದಿಕೊಳ್ಳುವುದರಿಂದ ಪರಸ್ಪರ ಮಿತ್ರತ್ವ ಅಭಿವೃದ್ಧಿಯಾಗಲಿದೆ. ವಾಹನ ಚಾಲನೆಯ ಕಲಿಕೆಯ ಆಸಕ್ತಿಯನ್ನು ಹೊಂದಿದವರು ಆರಂಭಿಸಬಹುದು.

ಮೀನ: ಶತ್ರುಗಳ ಬಣ್ಣ ಬಯಲಾಗುವುದು. ಮಕ್ಕಳ ಮಾತುಗಳು ಮನಸ್ಸಿಗೆ ಚುಚ್ಚಿ ನೋವಾಗುವಂತೆ ಆಗಬಹುದು. ಪತ್ರಿಕೆಯವರ ಸಹಕಾರದಿಂದ ನಿಮ್ಮ ಕೆಲಸಕ್ಕೆ ಹೆಚ್ಚಿನ ಪ್ರಚಾರ ಲಭಿಸುವುದು.

ನುಡಿ ಬೆಳಗು

ನಾನು ಹೇಗೆ ಜ್ಞಾನಿ ಅಂದರೆ...


ಪ್ರೊ.ಎಂ. ಕೃಷ್ಣೇಗೌಡ

ನಿಮಗೆ ಸಾಕ್ರೆಟಿಸ್ ಗೊತ್ತಿರಬಹುದು. ಎರಡೂವರೆ ಸಾವಿರ ವರ್ಷಗಳ ಹಿಂದೆ ಪ್ರಾಚೀನ ಗ್ರೀಸ್ ದೇಶದ ಅಥೆನ್ಸ್‌ನಲ್ಲಿ ಬದುಕಿದ್ದ ಘನ ತತ್ತ್ವಜ್ಞಾನಿ ಆತ. ಯಾವುದೇ ವಿಚಾರವನ್ನು ಗಹನವಾಗಿ ಆಲೋಚಿಸುವುದು, ವಿಶ್ಲೇಷಿಸುವುದು, ಯುವಕರೊಂದಿಗೆ ಮಾತಾಡುವುದು, ಅವರು ಪ್ರಶ್ನೆ ಮಾಡುವಂತೆ ಪ್ರಚೋದಿಸುವುದು, ಸಾಕ್ರೆಟಿಸ್‌ನ ದಿನಚರಿ. ಹೀಗೆ ಪ್ರಶ್ನೆ ಮಾಡಲು ಪ್ರಚೋದಿಸಿದ್ದರಿಂದಲೇ ಸಾಕ್ರೆಟಿಸ್ ಆ ಕಾಲದಲ್ಲಿ ಆಳುವವರಿಗೆ ಕಣ್ಣುರಿಯಾಗಿದ್ದ. ಆ ಮಾತು ಬೇರೆ. 'ಸಾಕ್ರಟಿಸ್ ಈ ಕಾಲದ ಮಹಾಜ್ಞಾನಿ' ಎಂದು ಅಥೆನ್ಸ್‌ನ ನಗರ ದೇವತೆ ಘೋಷಣೆ ಮಾಡಿಬಿಟ್ಟಿದ್ದಳಂತೆ.

ಯಾರೋ ಒಂದು ಸಲ ಸಾಕ್ರೆಟಿಸ್‌ನನ್ನು ಕೇಳಿದರು: 'ಸಾಕ್ರೆಟಿಸ್, ನೀನು ಮಹಾ ಜ್ಞಾನಿಯಂತೆ, ಹೌದಾ?' ಸಾಕ್ರೆಟಿಸ್ ಹೇಳಿದ: 'ಹೌದು ನಾನು ಜ್ಞಾನಿ' ಕೇಳಿದವನಿಗೆ ಸಾಕ್ರೆಟಿಸ್‌ಗೆ ಬಹಳ ಗರ್ವ, ಅವನಿಗೆ ತಲೆ ಕುತ್ತಿಗೆಯ ಮೇಲೆ ನಿಲ್ಲುತ್ತಿಲ್ಲ ಅನಿಸಿತು. ಅಲ್ಲಾ, ಯಾರಾದರೂ ಜ್ಞಾನಿ ಆದವನು ತಾನು ಜ್ಞಾನಿ ಅಂತ ಹೇಳಿಕೊಳ್ಳುತ್ತಾನಾ? ಅವನು ಮತ್ತೆ ಪ್ರಶ್ನೆ ಕೇಳಿದ: 'ಸಾಕ್ರಟಿಸ್, ಹೇಳು, ನೀನು ಅದು ಹೇಗೆ ಜ್ಞಾನಿ?'

ಆ ಪ್ರಶ್ನೆಗೆ ಸಾಕ್ರಟಿಸ್ ಏನು ಹೇಳಿದ ಅನ್ನುವುದೇ ಬಹಳ ಅದ್ಭುತ: 'ನಾನು ಹೇಗೆ ಜ್ಞಾನಿ ಅಂದರೆ, ಈ ಜಗತ್ತಿನ ಹಲವಾರು ವಿಷಯಗಳಲ್ಲಿ ನನಗೆ ಯಾವ ಜ್ಞಾನವೂ ಇಲ್ಲ, ಅನ್ನುವ ಜ್ಞಾನ ಇದೆ, ಆದ್ದರಿಂದ ನಾನು ಜ್ಞಾನಿ'.

ಬಹುಶಃ ಈ ಮಾತಿಗೆ ವ್ಯಾಖ್ಯಾನವೇ ಅಗತ್ಯವಿಲ್ಲ. ನನಗೆ ಎಲ್ಲವೂ ಗೊತ್ತು ಎನ್ನುವವನಿಗಿಂತ ಅಜ್ಞಾನಿ ಬೇರಾರೂ ಇಲ್ಲ. ನಿಜವಾದ ಜ್ಞಾನಿ ಆದ್ದರಿಂದಲೇ ಅನಿವಾರ್ಯವಾಗಿ ವಿನೀತನಾಗಿಬಿಡುತ್ತಾನೆ. ಗರ್ವ, ಅಹಂಕಾರ ಎಂಬುದೆಲ್ಲಾ ಅವಿದ್ಯೆಯ ಫಲವೇ.

ಇದೇ ಸಾಕ್ರೆಟಿಸ್‌ಗೆ ಯಾರೋ ಪಂಡಿತನೊಬ್ಬ ಬಂದು ಕಿಚಾಯಿಸಿದ: 'ಸಾಕ್ರೆಟಿಸ್, ನಿನ್ನ ಶಿಷ್ಯರಿದ್ದಾರಲ್ಲ, ಅವರನ್ನೆಲ್ಲಾ ನೀನು ಸಭ್ಯರನ್ನಾಗಿ ಮಾಡಿಬಿಟ್ಟಿದ್ದೇನೆ ಅಂತ ಬೀಗುತ್ತಿದ್ದೀಯಲ್ಲ, ಆ ಪರಿವರ್ತನೆ ಸತ್ಯವಲ್ಲ. ಅವರೆಲ್ಲಾ ಢೋಂಗಿಗಳು. ನೀನು ಒಂದೇ ಒಂದು ದಿನ ಆ ನಿನ್ನ ಶಿಷ್ಯರನ್ನು ನನ್ನೊಂದಿಗೆ ಕಳುಹಿಸಿಕೊಡು. ಚಿಟಿಕೆ ಹೊಡೆಯುವಷ್ಟರಲ್ಲಿ ಅವರನ್ನೆಲ್ಲಾ ಹಾಳುಮಾಡಿಬಿಡುತ್ತೇನೆ'.

ಸಾಕ್ರೆಟಿಸ್ ಹೇಳಿದ: 'ಅಯ್ಯಾ, ಇದಕ್ಕೆ ಇಷ್ಟೊಂದು ಪಾಂಡಿತ್ಯವಿರುವ ನೀನೇಕೆ ಬೇಕು? ಯಾರು ಬೇಕಾದರೂ ಆ ಕೆಲಸವನ್ನು ಮಾಡಬಹುದು. ಒಂದು ಬಂಡೆಯನ್ನು ಇಷ್ಟಿಷ್ಟೇ ಉರುಳಿಸಿಕೊಂಡು ಪ್ರಯಾಸಪಟ್ಟು ನಾನು ಪರ್ವತದೆತ್ತರಕ್ಕೆ ಹೋಗುತ್ತಿದ್ದೇನೆ. ಮೇಲಿಂದ ತಳ್ಳುವುದಕ್ಕೆ ಶ್ರಮವೇ ಬೇಕಿಲ್ಲ. ಬೆರಳು ತಾಕಿದರೂ ಆ ಬಂಡೆ ಉರುಳಿಕೊಂಡು ಕೆಳಗೆ ಬಂದುಬಿಡುತ್ತದೆ. ಮೇಲಕ್ಕೆತ್ತುವುದು ಪ್ರಯಾಸ, ಉರುಳಿಸುವುದು ಸಲೀಸು. ಮೇಲಿರುವುದನ್ನು ಕೆಳಕ್ಕೆ ಉರುಳಿಸಲು ನಿನ್ನ ಪಾಂಡಿತ್ಯ ಖರ್ಚಾಗಬೇಕೆ? ಯೋಚಿಸು'.

ಜ್ಞಾನಿಗಳ ಮಾತು, ಕೃತಿ ಎಲ್ಲಾ ಎಷ್ಟು ಚಂದ ಅಲ್ಲವೇ?

ಪದಬಂಧ 5635

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ವಯಸ್ಸಿನಿಂದ ಹಿರಿಯನಾದವನು (4)
3.ನೂರು ಹೆಜ್ಜೆ ನಡೆಯುವುದು (4)
5.ಬೆಳಗಿನ ಜಾವವಿದು (3)
6.ಎಳ್ಳು ನೀರು ಬಿಡುವಿಕೆ (4)
8.ತಿರುಗಿದ್ದಕ್ಕೆ ಈ ಹಿಗ್ಗು! (3)
10.ಮನ ಹೀಗೆ ಕೋತಿಯಂತೆ! (3)
12.ತುಸುವೇ ಬೀರಿರುವ ಮಂದಹಾಸ (4)
15.ಅನೇಕ ಚಿಕ್ಕ ಚಿಕ್ಕ ಮನೆಗಳುಳ್ಳ ಆವಾರ (3)
16.ಸಾರವಾದ ಭಾಗದೊಂದಿಗಿರುವ ಕ್ಷೀರ (4)
17.ಅತ್ಯಂತ ಪರಾಕ್ರಮಿ (4)

ಮೇಲಿಂದ ಕೆಳಕ್ಕೆ

1.ಗತಿಸಿದ ಮಹಾಪುರುಷರ ಹುಟ್ಟುಹಬ್ಬ (3)
2.ಕನ್ನ ಹಾಕಿ ಕದ್ದಿರುವ ಚಿನ್ನ (3)
3.ಮುಂದಾಗುವುದನ್ನು ತಿಳಿಸುವುದು (3)
4.ಸೊಂಟಕ್ಕೆ ಸುತ್ತಿಕೊಳ್ಳುವ ಬಟ್ಟೆ (2)
7.ಯಾವ ಉದ್ದೇಶವೂ ಇಲ್ಲದ್ದು (5)
9.ಅಂತಶ್ಶಕ್ತಿಯಿದು (5)
11.ಮೈ ಒರೆಸಿಕೊಳ್ಳುವ ಬಟ್ಟೆ (3)
12.ಪಾಪಿಗಳ ಲೋಕ (3)
13.ನೆಲವನ್ನು ಅಗೆಯುವ ಕಬ್ಬಿಣದ ಸಾಧನ (3)
14.ಬೇಸಿಗೆಯ ತಾಪ (2)



5634ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಐಹಿಕ 3.ಮಸ್ತಕ
5.ರವಿಕಿರಣ 6.ತಡ
8.ನಾಯಿ 9.ನಾರಿ
10.ಕದ 14.ನರಭಕ್ಷಕ
15.ಕಡಲು 16.ವಿನಾಶ

ಮೇಲಿಂದ ಕೆಳಕ್ಕೆ:
1.ಐರಾವತ 2.ಕರಡಿ
3.ಮಣಕ 4 ಕಸುಗಾಯಿ
7.ಡಬರಿ 8.ನಾಸ್ತಿಕ
9.ನಾಗರಿಕ 11.ದಶಮಾಂಶ
12.ಹೊನಲು 13.ಕುಕವಿ

ಸುಡೊಕು 6020

			9		2	1		6
1		6					8	
	8	2		6			4	5
7								
	5		7	1	4	2		8
4					6			7
2		5		7			6	
	6					8		
8		1	6		3		2	9

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6019 ಸುಡೊಕು

4	3	8	2	1	9	5	6	7
1	2	9	6	5	7	3	4	8
7	6	5	8	4	3	2	9	1
3	4	2	9	6	1	8	7	5
8	7	6	3	2	5	9	1	4
5	9	1	7	8	4	6	3	2
9	1	7	5	3	2	4	8	6
6	5	3	4	7	8	1	2	9
2	8	4	1	9	6	7	5	3

ಗುಸುಗುಸು

ನೆಂಟರೆಲ್ಲ ವ್ಯಾಪ್ತಿ ಪ್ರದೇಶದ ಹೊರಗೆ...

ದಾವಣಗೆರೆ ಲೋಕಸಭಾ ಕಣದಲ್ಲಿ ಬೀಗತಿಯರ ನಡುವಿನ ಕದನ ತಾರಕಕ್ಕೇರಿದೆ. ಕ್ಷೇತ್ರದಲ್ಲಿ ಬಹು ಸಂಖ್ಯಾತರಾಗಿರುವ ಸಾದು ಲಿಂಗಾಯತ ಸಮಾಜದ ಇಬ್ಬರು ನಾರಿ ಮಣಿಯರ ಕದನ ಸಮಾಜದ ಉಳಿದ ನೆಂಟರಿಷ್ಟರಿಗೆ ಪೀಕಲಾಟ ತಂದಿದೆಯಂತೆ.

ಪ್ರಭಾ ಮಲ್ಲಿಕಾರ್ಜುನ್

ಗಾಯತ್ರಿ ಸಿದ್ದೇಶ್ವರ

ಶಾಮನೂರು ಕುಟುಂಬದ ಸೊಸೆ ಪ್ರಭಾ ಮಲ್ಲಿಕಾರ್ಜುನ್ ಕಾಂಗ್ರೆಸ್‌ನಿಂದ ಹಾಗೂ ಭೀಮಸಮುದ್ರದ ಅಡಿಕೆ ವರ್ತಕ ಜಿ. ಮಲ್ಲಿಕಾರ್ಜುನಪ್ಪ ಕುಟುಂಬದ ಸೊಸೆ ಗಾಯತ್ರಿ ಬಿಜೆಪಿಯಿಂದ ಸ್ಪರ್ಧಿಸಿದ್ದಾರೆ. ಕ್ಷೇತ್ರದಲ್ಲಿನ ಅವರ ಸಮಾಜದ ಬಹುತೇಕ ಕುಟುಂಬಗಳು ಇಬ್ಬರಿಗೂ ನೆಂಟರೇ. ಚುನಾವಣಾ ಪ್ರಚಾರ ಬಿರುಸು ಪಡೆದಿದ್ದು, ಬೆಂಬಲ ಕೋರಿ ಬೆಳಿಗ್ಗೆ ಒಬ್ಬರು ಬಂದರೆ, ಸಂಜೆ ಮತ್ತೊಬ್ಬರು ಬರುತ್ತಿದ್ದಾರಂತೆ. ಇಬ್ಬರಲ್ಲಿ ಯಾರ ಪರ ನಿಂತರೂ ಮತ್ತೊಬ್ಬರಿಗೆ ಬೇಸರವಾಗುತ್ತದೆ. ತಟಸ್ಥರಾಗಿ ಉಳಿದರೆ ಇಬ್ಬರ ಸಿಟ್ಟಿಗೆ ಗುರಿಯಾಗಬೇಕಾಗುತ್ತದೆ ಎಂದು ಲೆಕ್ಕಾಚಾರ ಹಾಕಿದ ಬಹುತೇಕ ಕುಟುಂಬದವರು ಬೇಸಿಗೆ ರಜೆಯನ್ನೇ ನೆಪವಾಗಿಟ್ಟುಕೊಂಡು ಮೆಲ್ಲಗೆ ಜಾಗ ಖಾಲಿ ಮಾಡುತ್ತಿದ್ದಾರಂತೆ. ಬಹುತೇಕ ಮನೆಗಳು ಬೀಗ ಹಾಕಿರುವುದನ್ನು ಕಂಡು ಮೊಬೈಲ್ ಫೋನ್‌ಗೆ ಕರೆ ಮಾಡಿದರೆ 'ನೀವು ಕರೆ ಮಾಡಿದ ಚಂದಾದಾರರು ವ್ಯಾಪ್ತಿ ಪ್ರದೇಶದ ಹೊರಗೆ ಇದ್ದಾರೆ' ಎಂದೋ, 'ಮೊಬೈಲ್ ಸ್ವಿಚ್ಡ್‌ಆಫ್' ಎಂದೋ ಬರುತ್ತಿದೆಯಂತೆ. ಅಷ್ಟಕ್ಕೇ ಸುಮ್ಮನಾಗದ ಬೀಗತಿಯರು ಬೀಗ ಹಾಕಿ ಮನೆಗಳನ್ನು ಗುರುತು ಮಾಡಿಕೊಂಡು ಅವರ ಬಹುಹತ್ತಿರದ ನೆಂಟರಿಗೆ ಹುಡುಕಿ ಕರೆ ತರುವ ಹೊಣೆಯನ್ನೂ ಹೊರಿಸಿದ್ದಾರಂತೆ.

ಮತ ಆಮಿಷ: ಆಯೋಗದ ವಶ

₹20.14 ಕೋಟಿ ನಗದು

ಉಚಿತ ಉಡುಗೊರೆ	₹ 3.17 ಕೋಟಿ
ಮದ್ಯ	₹ 26.35 ಕೋಟಿ (8.44 ಲಕ್ಷ ಲೀ)
ಮಾದಕವಸ್ತು	₹ 1.33 ಕೋಟಿ (181.80 ಕೆ.ಜಿ.)
ಚಿನ್ನ	₹ 9.01 ಕೋಟಿ (14.05 ಕೆ.ಜಿ.)
ಬೆಳ್ಳಿ	₹26.19 ಲಕ್ಷ (55.75 ಕೆ.ಜಿ.)

ಎಂಥಾ ಮಾತು!

ಕೇಂದ್ರ ಗೃಹ ಸಚಿವ ಅಮಿತ್ ಶಾ ಒಬ್ಬ ಗೂಂಡಾ, ರೌಡಿ. ಅಂಥವರನ್ನು ಪ್ರಧಾನಿ ಮೋದಿಯವರು ಪಕ್ಕದಲ್ಲಿ ಕೂರಿಸಿಕೊಂಡಿದ್ದಾರೆ. ಗುಜರಾತ್‌ನಲ್ಲಿ ಅವರ ಮೇಲೆ ಕೊಲೆ ಆರೋಪವಿದೆ. ಅಪರಾಧ ಚಟುವಟಿಕೆಗಳ ಹಿನ್ನಲೆಯುಳ್ಳ ಅವರು ಈಗ ದೇಶದ ಉನ್ನತ ಸ್ಥಾನದಲ್ಲಿದ್ದಾರೆ. ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿಸುವುದಾಗಿ ಪ್ರಧಾನಿ ಹೇಳಿದ್ದರು. ಈಗ ಉದ್ಯೋಗ ಸೃಷ್ಟಿಸುವುದು ಕೇಂದ್ರದ ಹೊಣೆಯಲ್ಲ ಎನ್ನುತ್ತಿದ್ದಾರೆ. ಕಪ್ಪು ಹಣ ವಾಪಸು ತರುತ್ತೇವೆ ಎಂದಿದ್ದರು. ತಂದರಾ? ಕನಿಷ್ಠ ಪಕ್ಷ ಸ್ವಿಸ್ ಬ್ಯಾಂಕ್‌ಗಳಲ್ಲಿ ಯಾರದ್ದೆಲ್ಲ ಖಾತೆ ಇದೆ ಎಂಬ ಮಾಹಿತಿಯನ್ನೂ ನೀಡಿಲ್ಲ

ಯತೀಂದ್ರ ಸಿದ್ದರಾಮಯ್ಯ, ಕಾಂಗ್ರೆಸ್ ಮುಖಂಡ

ಕ್ಷೇತ್ರ ಮಹಾತ್ಮೆ

ಉತ್ತರ ಕನ್ನಡ



ಹಿಂದುತ್ವದ ಉಗ್ರ ಪ್ರತಿಪಾದಕ ಅನಂತಕುಮಾರ ಹೆಗಡೆಯವರನ್ನು ಸುದೀರ್ಘ ಅವಧಿ ಸಾಕಿ ಸಲಹಿದ್ದ ಉತ್ತರ ಕನ್ನಡ ಲೋಕಸಭಾ ಕ್ಷೇತ್ರ, ಒಂದು ಕಾಲಕ್ಕೆ ಕಾಂಗ್ರೆಸ್‌ನ ಭದ್ರ ನೆಲೆ. ಹೆಗಡೆಯವರ ಹಿಂದುತ್ವವಾದಿ ರಾಜಕಾರಣ ಶುರುವಾದ ಮೇಲೆ, ಹಸ್ತ ಮುದುಡಿ ಹೋಗಿತ್ತು. ಈ ಬಾರಿ ಬೆಂಕಿಚೆಂಡಿಗೆ ಟಿಕೆಟ್ ತಪ್ಪಿಸಿದ ಬಿಜೆಪಿ ವರಿಷ್ಠರು, ಸೌಮ್ಯವಾದಿ ವಿಶ್ವೇಶ್ವರ ಹೆಗಡೆ ಕಾಗೇರಿಯವರನ್ನು ಕಣಕ್ಕೆ ಇಳಿಸಿದ್ದಾರೆ. ವಿಧಾನಸಭೆ ಚುನಾವಣೆಯಲ್ಲಿ ಶಿರಸಿಯಲ್ಲಿ ಸೋತ ಕಾಗೇರಿ ಎದುರು ಖಾನಾಪುರದಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಸೋತಿದ್ದ ಅಂಜಲಿ ನಿಂಬಾಳ್ಕರ್ ಅವರನ್ನು ಕಣಕ್ಕೆ ದೂಡಿದೆ. ಬೆಳಗಾವಿ ಜಿಲ್ಲೆಯ ಖಾನಾಪುರ–ಕಿತ್ತೂರು ಉತ್ತರ ಕನ್ನಡಕ್ಕೆ ಸೇರಿದೆ ಎಂಬುದನ್ನು ಬಿಟ್ಟರೆ, ಅಂಜಲಿಯವರಿಗೆ ಕ್ಷೇತ್ರವೇ ಹೊಸದು. ಟಿಕೆಟ್ ಸಿಗುವ ನಿರೀಕ್ಷೆಯಲ್ಲಿಯೇ, ಸಂವಿಧಾನ ಬದಲಾವಣೆಯ ಮಾತನಾಡುತ್ತ ಬಂದಿದ್ದ ಅನಂತಕುಮಾರ ಹೆಗಡೆಯವರನ್ನು ಕೇಸರಿ ಪಡೆ ಕೈಬಿಟ್ಟಿದ್ದು, ಅವರು ಮರೆಗೆ ಸರಿದಿದ್ದಾರೆ. ಹೆಗಡೆಯವರ ಪ್ರಭಾವವೇ ತನ್ನನ್ನೂ ಕ್ಷೇತ್ರಕ್ಕೆ 'ಹೆಗಡೆ'ಯಾಗಿಸಲಿದೆ ಎಂಬ ಭರವಸೆಯಲ್ಲಿದ್ದ ಕಾಗೇರಿಗೆ, ಈಗ 'ಅನಂತ' ದೂರವಾಗಿದ್ದಾರೆ. ಬಿಜೆಪಿಯ ಸಾಂಪ್ರದಾಯಿಕ ಮತ, ಹವ್ಯಕ ಸಮುದಾಯ ಮತಗಳೇ ಕಾಗೇರಿಗೆ ಆಧಾರ. ಕ್ಷೇತ್ರ ವ್ಯಾಪ್ತಿಯ 8 ವಿಧಾನಸಭೆ ಕ್ಷೇತ್ರಗಳಲ್ಲಿ ಐವರು ಕಾಂಗ್ರೆಸ್ ಶಾಸಕರಿದ್ದು, ಬಿಜೆಪಿಯಿಂದ ಗೆದ್ದಿದ್ದ ಶಿವರಾಮ ಹೆಬ್ಬಾರ್, ಕಮಲ ಬಿಟ್ಟು 'ಕೈ' ಚಾಚಿದ್ದಾರೆ. ಅದೇ ಧೈರ್ಯದ ಮೇಲೆ 'ನಾನೇ ಅಂಜಲಿ, ನಾನ್ಯಾರಿಗೆ ಅಂಜಲಿ' ಎಂದು ನಿಂಬಾಳ್ಕರ ಕಣಕ್ಕೆ ಇಳಿದಿದ್ದಾರೆ. ಕಾಂಗ್ರೆಸ್ ಶಾಸಕರು, ಗ್ಯಾರಂಟಿಗಳು ಕೈಹಿಡಿದರೆ ಅಂಜಲಿಗೆ ದೆಹಲಿ. ಹಿಂದುತ್ವವೇ ನಿರ್ಣಾಯಕವಾದರೆ ಲೋಕಸಭೆಗೆ ಕಾಗೇರಿ ಸವಾರಿ... ಉತ್ತರ ಕನ್ನಡ ಯಾರಿಗೆ ಹತ್ತಿರ ಎಂಬುದು ಮತರಹಸ್ಯವೇ ಸರಿ.

ಉಜ್ವಲಾ, ಕಿಸಾನ್ ಸಮ್ಮಾನ್, ಜನಧನ್ ಯೋಜನೆಗಳ ಲಾಭ ಪಡೆಯಲು ಬಿಜೆಪಿ ಯತ್ನ

ಮೋದಿ ಗ್ಯಾರಂಟಿ 'ಮತ ಅಸ್ತ್ರವೇ'

37,52,238 (ಕುಟುಂಬಗಳು)	49,34,485 (ರೈತರು)	1,91,93,543	₹9,047.56 ಕೋಟಿ
ಉಜ್ವಲಾ ಯೋಜನೆ ಫಲಾನುಭವಿಗಳು	ಕಿಸಾನ್ ಸಮ್ಮಾನ್ ಫಲಾನುಭವಿಗಳು	ಜನ್‌ಧನ್ ಫಲಾನುಭವಿಗಳು	ಖಾತೆಯಲ್ಲಿರುವ ಮೊತ್ತ

• ಎಸ್. ರವಿಪ್ರಕಾಶ್

ಮತ ಮಂಥನ

ದೇಶದಲ್ಲಿ ಈಗ 'ಗ್ಯಾರಂಟಿ'ಗಳದ್ದೇ ದೊಡ್ಡ ಸದ್ದು. ಒಂದು ಕಡೆ ಮೋದಿ 'ಗ್ಯಾರಂಟಿ', ಮತ್ತೊಂದು ಕಡೆ ಕಾಂಗ್ರೆಸ್ 'ಗ್ಯಾರಂಟಿ'. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ತನ್ನ ಐದು ಗ್ಯಾರಂಟಿಗಳನ್ನು ಜನರ ಮುಂದಿಟ್ಟು, ಮತಗಳನ್ನು ಬಾಚಿಕೊಂಡಿತ್ತು. ಈಗ ಲೋಕಸಭಾ ಚುನಾವಣೆಯಲ್ಲಿ ಮೋದಿ 'ಗ್ಯಾರಂಟಿ'ಗಳು ಮತ ಸೂರೆಗೊಳ್ಳಲು ಅಸ್ತ್ರವಾಗಬಲ್ಲವೇ? ಅಥವಾ ಕಾಂಗ್ರೆಸ್ 'ಗ್ಯಾರಂಟಿ'ಗಳೇ ಮೇಲುಗೈ ಪಡೆಯಲಿವೆಯೇ? ಇಂತಹದೊಂದು ಚರ್ಚೆ ಬಿರುಸುಗೊಂಡಿದೆ.

ಬಡವರ್ಗದವರ ಜೀವನದಲ್ಲಿ ಪರಿವರ್ತನೆ ತರುವುದಾಗಿ ಹೇಳಿ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ 'ಜನಧನ', 'ಉಜ್ವಲಾ', 'ಕಿಸಾನ್ ಸಮ್ಮಾನ್'ಗಳಂತಹ ಯೋಜನೆಗಳನ್ನು ಜಾರಿಗೊಳಿಸಿದೆ. ಫಲಾನುಭವಿಗಳ ಖಾತೆಗಳಿಗೆ ನೇರವಾಗಿ ನಗದು ಜಮೆ ಆಗುತ್ತಿದೆ. 'ಕೇಂದ್ರದಿಂದ ಬಿಡುಗಡೆ ಆಗುವ ಮೊತ್ತದಲ್ಲಿ ಒಂದು ಪೈಸೆ ಕೂಡ ಸೋರಿಕೆ ಆಗುತ್ತಿಲ್ಲ. ಮಧ್ಯವರ್ತಿಗಳ ಜೇಬಿಗೆ ಹೋಗುತ್ತಿಲ್ಲ' ಎಂಬುದನ್ನು ಪ್ರಧಾನಿ ನರೇಂದ್ರ ಮೋದಿಯವರು ಪದೇ ಪದೇ ಹೇಳುವ ಮೂಲಕ ತಮ್ಮ ಯೋಜನೆಗಳನ್ನು ಜನರಿಗೆ ನೆನಪಿಸುವ ಕೆಲಸ ಮಾಡುತ್ತಲೇ ಬಂದಿದ್ದಾರೆ. ಮೋದಿ 'ಗ್ಯಾರಂಟಿ'ಗಳನ್ನು ಚುನಾವಣೆಯಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಬಿಜೆಪಿ ತಯಾರಿ ನಡೆಸಿದೆ.

ಲೋಕಸಭಾ ಚುನಾವಣೆಯ ಭಾಗವಾಗಿ ದೇಶದ ಮೂಲೆ– ಮೂಲೆಗಳಲ್ಲೂ 'ವಿಕಸಿತ ಭಾರತ' ಕಾರ್ಯಕ್ರಮ ಹಮ್ಮಿಕೊಂಡು, 10 ವರ್ಷಗಳಲ್ಲಿ ಜನ ಸಾಮಾನ್ಯರಿಗಾಗಿ ಜಾರಿ ಮಾಡಿದ ಪ್ರಮುಖ ಯೋಜನೆಗಳ ಮಾಹಿತಿಯನ್ನು ತಲುಪಿಸುವ ಕೆಲಸವನ್ನೂ ಬಿಜೆಪಿ ಮಾಡಿದೆ. ಕರ್ನಾಟಕದಲ್ಲಿ ಮನೆಯಂಗಳದಲ್ಲಿ ಚರ್ಚೆ ಮೂಲಕ ಕೇಂದ್ರದ ಯೋಜನೆಗಳ ಫಲಾನುಭವಿಗಳನ್ನು ಸಂಪರ್ಕಿಸುವ ಕೆಲಸ ಹಮ್ಮಿಕೊಂಡಿದೆ. ಮೂರನೇ ಹಂತದಲ್ಲಿ ಫಲಾನುಭವಿಗಳ ಸಮಾವೇಶವನ್ನು ಹಮ್ಮಿಕೊಂಡಿದೆ. ಇದು, ಜನರಿಗೆ ಮನವರಿಕೆಯಾಗಿ, ಮತವಾಗಿ ಪರಿವರ್ತನೆಯಾಗಲಿದೆ ಎಂಬ ನಿರೀಕ್ಷೆ ಬಿಜೆಪಿ ನಾಯಕರಲ್ಲಿದೆ.

ಇದಕ್ಕೆ ಪ್ರತಿಯಾಗಿ ರಾಜ್ಯದಲ್ಲಿ ಜಾರಿ ಮಾಡಿರುವ ಐದು ಗ್ಯಾರಂಟಿಗಳನ್ನು ಕಾಂಗ್ರೆಸ್ ನಾಯಕರು ಪ್ರಚಾರದ ಮುಂಚೂಣಿಗೆ ತಂದಿದ್ದಾರೆ. ಈ ಗ್ಯಾರಂಟಿಗಳು ವಿಫಲವಾಗಿವೆ ಬಿಜೆಪಿ–ಜೆಡಿಎಸ್ ಮೈತ್ರಿಕೂಟ ಟೀಕಿಸುತ್ತಲೇ ಇದೆ. 'ನಮ್ಮ ಗ್ಯಾರಂಟಿ ಯೋಜನೆಗಳು ಕಾಂಗ್ರೆಸ್ ಗ್ಯಾರಂಟಿಗಿಂತ ಭಿನ್ನವಾಗಿವೆ. ಇವು ಜನರ ಜೀವನ ಮಟ್ಟ ಸುಧಾರಿಸುವಂತಹದ್ದು' ಎಂದು ಬಿಜೆಪಿ ಪ್ರತಿಪಾದಿಸುತ್ತಿದೆ.

ಬಡವರು, ರೈತರು, ಮಹಿಳೆಯರೇ ಫಲಾನುಭವಿಗಳಾದ, ಅವರಿಗೆ ನೇರವಾಗಿ ತಲುಪುವ ಯೋಜನೆಗಳನ್ನು ಮೋದಿ ನೇತೃತ್ವದ ಸರ್ಕಾರ ಜಾರಿ ಮಾಡಿದೆ ಎಂದು ಪ್ರತಿಪಾದಿಸುತ್ತಿರುವ ಬಿಜೆಪಿ, ಅದನ್ನು ಮತಗಳಿಕೆಯ ಅಸ್ತ್ರವನ್ನಾಗಿ ಬಳಸುತ್ತಿದೆ. ಅದು ಫಲ ಕೊಡಲಿದೆ ಎಂಬ ನಿರೀಕ್ಷೆಯೂ ಬಿಜೆಪಿ ನಾಯಕರಲ್ಲಿದೆ.

ಉಜ್ವಲಾ ಮೇಲೆ ನಿರೀಕ್ಷೆ

ಬಿಪಿಎಲ್ ವರ್ಗದವರ ಜೀವನಕ್ಕೆ ನೇರವಾಗಿ ತಟ್ಟುವ ಯೋಜನೆಗಳ ಪೈಕಿ ಮುಖ್ಯವಾದುದು 'ಉಜ್ವಲಾ' ಯೋಜನೆ. ಈ ಯೋಜನೆಯಿಂದಾಗಿ ಮಹಿಳೆಯರ ಸಬಲೀಕರಣ ಮತ್ತು ಅವರ ಆರೋಗ್ಯದ ಸುಧಾರಣೆಯಾಗಿದೆ. ಉಜ್ವಲಾ ಯೋಜನೆ ಜಾರಿ ಮಾಡಿದ್ದರಿಂದ ಸೌದೆ, ಇದ್ದಿಲು, ಮರದ ಹೊಟ್ಟಿನ ಒಲೆಗಳು, ಸೀಮೆಎಣ್ಣೆ ಸ್ಟೌವ್ ಬಳಕೆ ಗಣನೀಯ ಪ್ರಮಾಣದಲ್ಲಿ ತಗ್ಗಿ ಹೋಗಿದೆ ಎಂದು ಬಿಜೆಪಿ ಹೇಳುತ್ತಿದೆ. ಈ ಯೋಜನೆಯಡಿ ಆರಂಭದಲ್ಲಿ ಸಿಲಿಂಡರ್ ಉಚಿತವಾಗಿ ಕೊಟ್ಟರೂ ಬಳಿಕ ರೀಫಿಲಿಂಗ್‌ಗೆ ಹಣ ಕೊಡಲೇಬೇಕು ಎಂದು ವಿರೋಧ ಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿದ್ದವು. ಉಜ್ವಲಾ ಯೋಜನೆಯಡಿ ಪಡೆಯುವ ರೀಫಿಲ್ಲಿಂಗ್ ಸಿಲಿಂಡರ್‌ಗಳಿಗೆ ಕೇಂದ್ರ ಸರ್ಕಾರ ₹300 ಸಬ್ಸಿಡಿ ನೀಡುತ್ತಿದೆ. ಇದರಿಂದ ಒಂದು ಸಿಲಿಂಡರ್ ₹600 ರಂತೆ ಸಿಗುತ್ತಿದೆ.

ಜನ ಧನ

2014ರಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ ಪ್ರಕಟಿಸಿದ ಮಹತ್ವದ ಯೋಜನೆಗಳಲ್ಲಿ ಜನಧನ ಯೋಜನೆಯೂ ಒಂದು. ಬ್ಯಾಂಕ್ ಖಾತೆಗಳನ್ನೇ ಹೊಂದಿರದ ಕುಟುಂಬಗಳನ್ನು ಶೂನ್ಯ ಠೇವಣಿಯಲ್ಲಿ ಬ್ಯಾಂಕ್ ಖಾತೆಗಳನ್ನು ತೆರೆಯುವ ಮೂಲಕ ಬ್ಯಾಂಕಿಂಗ್ ವ್ಯವಸ್ಥೆಗೆ ಒಳಪಡಿಸುವುದು ಇದರ ಉದ್ದೇಶ. ಸರ್ಕಾರದ ವಿವಿಧ ಯೋಜನೆಗಳಡಿ ನೇರವಾಗಿ ನಗದು ವರ್ಗಾವಣೆ, ಪಿಂಚಣಿ, ಕ್ರೆಡಿಟ್ ವಿಮೆಯ ಮೊತ್ತವನ್ನು ಈ ಖಾತೆಗಳಿಗೆ ಜಮೆ ಮಾಡಲು ಸಾಧ್ಯ. ಈ ಯೋಜನೆಯಡಿ ರಾಜ್ಯದಲ್ಲಿ 1.91 ಕೋಟಿ ಖಾತೆಗಳನ್ನು ತೆರೆಯಲಾಗಿದೆ. ಈ ಖಾತೆಗಳಲ್ಲಿ ₹ 9,047.56 ಕೋಟಿ ಠೇವಣಿ ಇದೆ. 1.15 ಕೋಟಿ ರೂಪೇ ಕಾರ್ಡ್‌ಗಳನ್ನು ಫಲಾನುಭವಿಗಳಿಗೆ ವಿತರಿಸಲಾಗಿದೆ ಎಂಬುದು ಕೇಂದ್ರದ ಮಾಹಿತಿ.

ಕಿಸಾನ್ ಸಮ್ಮಾನ್

ದೇಶದ ಸಣ್ಣ ರೈತರ ಅಗತ್ಯಗಳನ್ನು ಪೂರೈಸಲು ನೆರವಾಗಲೆಂದು ಜಾರಿ ತಂದ 'ಕಿಸಾನ್ ಸಮ್ಮಾನ್' ಯೋಜನೆ ಅಡಿ ರೈತರಿಗೆ ಪ್ರತಿ ವರ್ಷ ₹6,000 ನಗದು ವರ್ಗಾವಣೆ ಮಾಡಲಾಗುತ್ತಿದೆ. ರಾಜ್ಯದಲ್ಲಿ ಬಿ.ಎಸ್.ಯಡಿಯೂರಪ್ಪ 2019ರಲ್ಲಿ ಮತ್ತೊಮ್ಮೆ ಅಧಿಕಾರ ಸೂತ್ರ ಹಿಡಿದ ಬಳಿಕ ಈ ಯೋಜನೆಗೆ ಇನ್ನೂ ₹4,000 ಸೇರಿಸಿ ಒಟ್ಟು ₹10,000 ರೈತರ ಖಾತೆಗಳಿಗೆ ವರ್ಗಾವಣೆ ಮಾಡಲಾಗುತ್ತಿತ್ತು. ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ರಾಜ್ಯ ಸರ್ಕಾರದ ವತಿಯಿಂದ ನೀಡುತ್ತಿದ್ದ ₹4,000ಗಳನ್ನು ನೀಡುತ್ತಿಲ್ಲ. 'ಗ್ಯಾರಂಟಿ' ಜಾರಿಯಿಂದ ತಿಂಗಳಿಗೆ ಒಂದು ಕುಟುಂಬಕ್ಕೆ ₹5 ಸಾವಿರದವರೆಗೆ ಸಿಗುತ್ತಿರು ವುದರಿಂದ ಅದಕ್ಕಿಂತ ಹೆಚ್ಚಿನ ಮೊತ್ತವೇ ಸಿಗುತ್ತಿದೆ ಎಂದೂ ಕಾಂಗ್ರೆಸ್ ವಾದಿಸುತ್ತಿದೆ.

'ಡಿಸೆಂಬರ್‌ನೊಳಗೆ ರಾಜ್ಯ ಸರ್ಕಾರ ಪತನ'

ಪ್ರಜಾವಾಣಿ ವಾರ್ತೆ

ಎಚ್‌.ಡಿ.ಕುಮಾರಸ್ವಾಮಿ

ಮಂಡ್ಯ: 'ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಆಕಸ್ಮಿಕವಾಗಿ ಅಧಿಕಾರ ಹಿಡಿದಿದೆ. ಆ ಪಕ್ಷದ ಬೆಳವಣಿಗೆಗಳನ್ನು ನೋಡಿದರೆ ಡಿಸೆಂಬರ್‌ನೊಳಗೆ ಸರ್ಕಾರದ ಪತನ ನಿಶ್ಚಿತ' ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಡಿ.ಕುಮಾರಸ್ವಾಮಿ ಹೇಳಿದರು.

ನಗರದಲ್ಲಿ ಗುರುವಾರ ಬಿಜೆಪಿ– ಜೆಡಿಎಸ್ ಮುಖಂಡರ ಸಮನ್ವಯ ಸಭೆಯಲ್ಲಿ ಮಾತನಾಡಿ, 'ಬಿಜೆಪಿ ಹಾಗೂ ಜೆಡಿಎಸ್ ನಡುವಿನ ಪೈಪೋಟಿಯೇ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲು ಕಾರಣವಾಯಿತು' ಎಂದು ಹೇಳಿದರು.

'ಲೋಕಸಭಾ ಚುನಾವಣೆಯಲ್ಲಿ ಎಲ್ಲ 28 ಕ್ಷೇತ್ರಗಳಲ್ಲಿ ಮೈತ್ರಿ ಅಭ್ಯರ್ಥಿಗಳು ಗೆಲ್ಲಲಿದ್ದಾರೆ. 2004ರಲ್ಲಿಯೇ ಬಿಜೆಪಿ– ಜೆಡಿಎಸ್ ನಡುವೆ ಸಹಜ ಮೈತ್ರಿಯಾಗಿದೆ. ಆಗ ನಾವು ಒಂದಾಗಿ ನೀಡಿದ 20 ತಿಂಗಳ ಆಡಳಿತವನ್ನು ಜನ ಇಂದಿಗೂ ನೆನೆಯುತ್ತಾರೆ' ಎಂದರು.

'ಬಿಜೆಪಿಗೆ ಅಧಿಕಾರ ಹಸ್ತಾಂತರಿಸಲಿಲ್ಲ ಎಂದು ನನ್ನ ವಿರುದ್ಧ ಅಪಪ್ರಚಾರ ನಡೆಯಿತು. ನನ್ನದಲ್ಲದ ತಪ್ಪಿಗೆ ಬಲಿಪಶು ಮಾಡಲಾಯಿತು. ಅಂದಿನಿಂದ ಈವರೆಗೆ 17 ವರ್ಷ ವನವಾಸ ಮಾಡಿದ್ದೇನೆ. ಪಕ್ಷ ಕಟ್ಟಲು ಒಬ್ಬಂಟಿಯಾಗಿ ಹೋರಾಡಿದ್ದೇನೆ' ಎಂದು ಸ್ಮರಿಸಿದರು. 'ಮಂಡ್ಯ ಜಿಲ್ಲೆಯ ಕಾರ್ಯಕರ್ತರು, ಮುಖಂಡರ ಒತ್ತಾಸೆಯಂತೆ ಈಗ ಮಂಡ್ಯ ಕ್ಷೇತ್ರದಿಂದ ಚುನಾವಣೆಗೆ ಕಣಕ್ಕಿಳಿಯುತ್ತಿದ್ದೇನೆ. ಇದೊಂದು ಧರ್ಮಯುದ್ಧ' ಎಂದು ಭರವಸೆ ನೀಡಿದರು.

ಬೆಂಬಲಿಗರ ಸಭೆ 30ಕ್ಕೆ

ಸುಮಲತಾ

ಬಿಜೆಪಿ ಟಿಕೆಟ್ ವಂಚಿತರಾಗಿರುವ ಸಂಸದೆ ಸುಮಲತಾ ಅವರ ಮುಂದಿನ ನಡೆ ಬಗ್ಗೆ ಚರ್ಚಿಸಲು ಬೆಂಗಳೂರಿನಲ್ಲಿ ಮಾರ್ಚ್ 30ರಂದು ಸುಮಲತಾ ಬೆಂಬಲಿಗರ ಸಭೆ ನಡೆಯಲಿದೆ. 'ಸುಮಲತಾ ಅವರ ನಿವಾಸದಲ್ಲೇ ಸಭೆ ನಡೆಯಲಿದೆ. ಮುಂದಿನ ರಾಜಕೀಯ ನಡೆಯ ಬಗ್ಗೆ ಸಂಸದರು ಜನರ ಅಭಿಪ್ರಾಯ ಸಂಗ್ರಹಿಸಲಿದ್ದಾರೆ' ಎಂದು ಸುಮಲತಾ ಬೆಂಬಲಿಗರ ಬೇಲೂರು ಸೋಮಶೇಖರ್ ಹೇಳಿದರು.

ನೀತಿ ಸಂಹಿತೆ ಉಲ್ಲಂಘನೆ: ಹೆಬ್ಬಾಳಕರಗೆ ಸಮನ್ಸ್

ಪ್ರಜಾವಾಣಿ ವಾರ್ತೆ

ಲಕ್ಷ್ಮಿ ಹೆಬ್ಬಾಳಕರ

ಬೆಳಗಾವಿ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರಿಗೆ ಮಾದರಿ ನೀತಿ ಸಂಹಿತೆ ಉಲ್ಲಂಘಿಸಿರುವ ಆರೋಪ ಕುರಿತಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಗುರುವಾರ ಸಮನ್ಸ್ ಜಾರಿ ಮಾಡಿದೆ.

ಸಚಿವೆ ತಮ್ಮ ಗೃಹಕಚೇರಿ ಪಕ್ಕದ ಸಭಾಂಗಣದಲ್ಲಿ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು, ಆಶಾ ಕಾರ್ಯಕರ್ತೆಯರ ಸಭೆಯನ್ನು ಮಾರ್ಚ್ 20ರಂದು ನಡೆಸಿದ್ದರು. ಅದಕ್ಕೆ ಅನುಮತಿ ಪಡೆದಿರಲಿಲ್ಲ. 'ಅಧಿಕಾರ ದುರ್ಬಳಕೆ ಮಾಡಿಕೊಂಡಿದ್ದಾರೆ' ಎಂದು ದೂರಲಾಗಿತ್ತು.

'ಏಪ್ರಿಲ್ 30ರೊಳಗೆ ಉತ್ತರಿಸಬೇಕು' ಎಂದು ಸಮನ್ಸ್‌ನಲ್ಲಿ ಸೂಚಿಸಲಾಗಿದೆ. ಎರಡನೇ ಆರೋಪಿಯಾಗಿ ಹೆಸರಿಸಿರುವ ಸಭಾಂಗಣದ ಮಾಲೀಕ ಉಮೇಶ ಮಲ್ಲಪ್ಪ ವಾಸಣ್ಣವರ ಅವರಿಗೂ ಸಮನ್ಸ್ ಜಾರಿ ಮಾಡಲಾಗಿದೆ.

'ಸಿದ್ದರಾಮಯ್ಯಗೆ ಜೆಡಿಎಸ್ ಶಕ್ತಿ ತೋರಿಸುವೆ'

ಪ್ರಜಾವಾಣಿ ವಾರ್ತೆ

ಎಚ್‌.ಡಿ.ದೇವೇಗೌಡ

ಅರಕಲಗೂಡು: 'ರಾಜ್ಯದಲ್ಲಿ ಜೆಡಿಎಸ್ ಪಕ್ಷ ಎಲ್ಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಲೇವಡಿ ಮಾಡಿದ್ದಾರೆ. ಜೆಡಿಎಸ್ ಸ್ಪರ್ಧಿಸಿರುವ ಮೂರು ಕ್ಷೇತ್ರಗಳನ್ನು ಗೆಲ್ಲಿಸಿಕೊಳ್ಳುವುದಲ್ಲದೇ, ಉಳಿದ ಕ್ಷೇತ್ರಗಳಲ್ಲೂ ಪಕ್ಷದ ಶಕ್ತಿಯನ್ನು ಬಿಜೆಪಿಗೆ ಕೊಡಿಸುವ ಮೂಲಕ ಸಿದ್ದರಾಮಯ್ಯ ಮಾತಿಗೆ ತಕ್ಕ ಉತ್ತರ ನೀಡುವೆ' ಎಂದು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ತಿರುಗೇಟು ನೀಡಿದರು.

ಪಟ್ಟಣದಲ್ಲಿ ಗುರುವಾರ ಪಕ್ಷದ ಮುಖಂಡರು, ಕಾರ್ಯಕರ್ತರ ಸಭೆ ಉದ್ಘಾಟಿಸಿದ ಅವರು, 'ಜೆಡಿಎಸ್ ಬಗ್ಗೆ ಲಘುವಾಗಿ ಮಾತನಾಡಬೇಡಿ. ಬಿಜೆಪಿ 18 ರಾಜ್ಯಗಳಲ್ಲಿ ಆಡಳಿತದಲ್ಲಿದೆ. ನಾಲ್ಕು ರಾಜ್ಯ ಬಿಟ್ಟರೆ ಕಾಂಗ್ರೆಸ್ ಎಲ್ಲಿದೆ ಎಂದು ಹೇಳುತ್ತೀರಾ' ಎಂದು ಪ್ರಶ್ನಿಸಿದರು. 'ಕಾಂಗ್ರೆಸ್ ಪಕ್ಷವು ಸುಭದ್ರವಾಗಿದ್ದಿದ್ದರೆ ರಾಹುಲ್ ಗಾಂಧಿ ಕೇರಳಕ್ಕೆ ಏಕೆ ಹೋಗುತ್ತಿದ್ದರು? ಸೋನಿಯಾ ಗಾಂಧಿ ರಾಜ್ಯಸಭೆಗೆ ಏಕೆ ಹೋದರು' ಎಂದು ಅವರು ಪ್ರಶ್ನಿಸಿದರು.

'ತಮಿಳುನಾಡಿಗೆ ಕಾವೇರಿ ನೀರು ಹರಿಸಿದ್ದರ ಫಲವನ್ನು ಬೆಂಗಳೂರಿನ ಜನ ಈಗ ಅನುಭವಿಸಬೇಕಾಗಿದೆ. ಬರಗಾಲವಿದ್ದು, ನೀರು ಹರಿಸಲು ಸಾಧ್ಯವಿಲ್ಲ ಎಂಬ ದಿಟ್ಟ ಉತ್ತರ ನೀಡಿದ್ದರೆ, ಇಂದು ಜನರು ಸಂಕಷ್ಟಕ್ಕೆ ಒಳಗಾಗುವ ಪರಿಸ್ಥಿತಿ ಬರುತ್ತಿರಲಿಲ್ಲ' ಎಂದು ಅಭಿಪ್ರಾಯಪಟ್ಟರು.

'ಸಂಕಷ್ಟಕ್ಕೆ ಸ್ಪಂದಿಸದವರಿಗೆ ಛೀಮಾರಿ ಸ್ವಾಗತ ನೀಡಿ'

ಬಳ್ಳಾರಿ: 'ಬರಗಾಲದಿಂದ ಸಂಕಷ್ಟಕ್ಕೆ ಸಿಲುಕಿರುವ ರೈತರ ಸಮಸ್ಯೆಗಳಿಗೆ ಸ್ಪಂದಿಸದ ರಾಜಕಾರಣಿಗಳಿಗೆ ಗ್ರಾಮಗಳಲ್ಲಿ ಛೀಮಾರಿ ಸ್ವಾಗತ ನೀಡಬೇಕು' ಎಂದು ಕರ್ನಾಟಕ ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ರೈತರಿಗೆ ಕರೆ ನೀಡಿದ್ದಾರೆ.

ಕುರುಬೂರು ಶಾಂತಕುಮಾರ್

'ರೈತರು ಸಂಕಷ್ಟದಲ್ಲಿ ಇದ್ದಾರೆ. ರಾಜಕಾರಣಿಗಳು ಚುನಾವಣೆ ಗುಂಗಿನಲ್ಲಿದ್ದು, ಪ್ರಚಾರಕ್ಕೆಂದು ಗ್ರಾಮಗಳಿಗೆ ಬಂದರೆ 'ಛೀಮಾರಿ ಸ್ವಾಗತ' ನೀಡಬೇಕು' ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಅಭಿಪ್ರಾಯಪಟ್ಟರು.

'ರಾಜ್ಯದಲ್ಲಿ ಕುಡಿಯುವ ನೀರಿಗೆ ತತ್ವಾರ ಎದುರಾಗಿದೆ. ದನಕರುಗಳಿಗೆ ಮೇವಿಲ್ಲ. ರಾಜ್ಯದಲ್ಲಿರುವ 40 ಲಕ್ಷ ಕೊಳವೆಬಾವಿಗಳ ಪೈಕಿ 10 ಲಕ್ಷ ಕೃಷಿ ಕೊಳವೆಬಾವಿಗಳು ಬತ್ತಿವೆ. ವಿದ್ಯುತ್ ಸಮಸ್ಯೆಯೂ ಇದೆ ಇದೆ' ಎಂದು ಅವರು ಸಮಸ್ಯೆಗಳನ್ನು ಪಟ್ಟಿ ಮಾಡಿದರು. 'ಬರಗಾಲದಲ್ಲಿ ಕೃಷಿ ಸಾಲ ವಸೂಲಿ ಮಾಡದಂತೆ ಎಲ್ಲ ಬ್ಯಾಂಕ್, ಸಹಕಾರ ಸಂಘಗಳಿಗೆ ಸರ್ಕಾರ ಆದೇಶ ನೀಡಿದೆ. ಆದರೂ ರೈತರಿಂದ ಸಾಲ ವಸೂಲಾತಿ ಮುಂದುವರೆದಿದೆ' ಎಂದು ಆರೋಪಿಸಿದರು.

ಚುನಾವಣಾ ಪಟ

ಸಿದ್ಧತೆ ಜೋರು

ಲೋಕಸಭಾ ಚುನಾವಣಾ ಪ್ರಚಾರಕ್ಕೆ ಭರದ ಸಿದ್ಧತೆ: ಕೋಲ್ಕತ್ತದ ಕುಶಲಕರ್ಮಿಯ ಕೈಯಲ್ಲಿ ಗಾಳಿಪಟದ ರೂಪ ಪಡೆದ ರಾಜಕೀಯ ಪಕ್ಷಗಳ ಚಿಹ್ನೆಗಳು
–ಪಿಟಿಐ ಚಿತ್ರ

'ರೆಡ್ಡಿ ಹೋಗಿದ್ದು ಇಷ್ಟವೂ ಇಲ್ಲ ನಷ್ಟವೂ ಇಲ್ಲ'

ಬಳ್ಳಾರಿ: 'ಜನಾರ್ದನ ರೆಡ್ಡಿ ಅವರಂತಹ ನೂರು ಜನರು ಬಿಜೆಪಿಗೆ ಸೇರಿದರೂ ಕಾಂಗ್ರೆಸ್‌ಗೆ ಏನೂ ಹಾನಿ ಮಾಡಲಾಗದು' ಎಂದು ಜಿಲ್ಲಾ ಉಸ್ತುವಾರಿ ಸಚಿವ ಬಿ.ನಾಗೇಂದ್ರ ಗುರುವಾರ ಹೇಳಿದರು.

ಬಿ. ನಾಗೇಂದ್ರ

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಬಿಜೆಪಿ ವಿರುದ್ಧ ತೊಡೆ ತಟ್ಟಿ ಸ್ವಂತಪಕ್ಷ ಸ್ಥಾಪಿಸಿದ್ದ ರೆಡ್ಡಿ ವಿಧಾನಸಭಾ ಚುನಾವಣೆಯಲ್ಲಿ ಪತ್ನಿಯನ್ನು ಚುನಾವಣೆಗೆ ಕಣಕ್ಕಿಳಿಸಿದ್ದರು. ರಾಜ್ಯಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಮತ ನೀಡಿದ್ದರು. ಈಗ ಬಿಜೆಪಿಗೆ ಸೇರಿದ್ದಾರೆ' ಎಂದರು.

'ರೆಡ್ಡಿ ವಿರುದ್ಧ ಗಣಿ ಅಕ್ರಮಕ್ಕೆ ಸಂಬಂಧಿಸಿದ ಪ್ರಕರಣಗಳಿವೆ. ಆ ಭಯದಿಂದ ಬಿಜೆಪಿಗೆ ಸೇರಿರಬಹುದು. ಅವರು ಬಿಜೆಪಿಗೆ ಸೇರಿದ್ದು ನಮಗೆ ಇಷ್ಟವಿಲ್ಲ. ಹಾಗಂತ ನಮಗೆ ಯಾವ ನಷ್ಟವೂ ಇಲ್ಲ. ನಾವು ಸುಮ್ಮನೆ ಕೂರುವುದೂ ಇಲ್ಲ' ಎಂದರು.

ಕಣದತ್ತ ಕಿರುನೋಟ

ದಕ್ಷಿಣ ಕನ್ನಡ

ಹೊಸಬರ ಹಣಾಹಣಿ

ಸ್ವಾತಂತ್ರ್ಯ ಸಿಕ್ಕ ನಂತರದ ಸತತ 9 ಚುನಾವಣೆಗಳಲ್ಲಿ ಕಾಂಗ್ರೆಸ್ ಗೆದ್ದಿತ್ತು. 1991ರ ಬಳಿಕ ಸತತ 8 ಸಲ ಬಿಜೆಪಿ ಗೆದ್ದಿದೆ. ಬಿಜೆಪಿಯ ಭದ್ರಕೋಟೆಯಂತಿರುವ ಕ್ಷೇತ್ರದಲ್ಲಿ ನಳಿನ್ ಕುಮಾರ್ ಕಟೀಲ್ 2009ರಿಂದ ಸತತ ಮೂರು ಸಲ ಗೆದ್ದಿದ್ದರು. ಸಂಸದರ ವಿರುದ್ಧದ ಅಸಮಾಧಾನದ ಅಲೆಯ ಕಾರಣಕ್ಕೆ ಅಭ್ಯರ್ಥಿಯನ್ನು ಬದಲಿಸಿರುವ ಬಿಜೆಪಿ ಅದೇ ಬಂಟ ಸಮುದಾಯದ ಕ್ಯಾ.ಬ್ರಿಜೇಶ್ ಚೌಟ ಅವರನ್ನು ಕಣಕ್ಕಿಳಿಸಿದೆ. 33 ವರ್ಷಗಳಿಂದ ಗೆಲುವನ್ನೇ ಕಾಣದ ಕಾಂಗ್ರೆಸ್, ಯುವ ವಕೀಲ, ಬಿಲ್ಲವ ಸಮುದಾಯದ ಪದ್ಮರಾಜ್ ಆರ್. ಅವರನ್ನು ಕಣಕ್ಕಿಳಿಸಿದೆ. ಇಬ್ಬರಿಗೂ ಮೊದಲ ಚುನಾವಣೆ ಇದು.

ಹಿಂದುತ್ವದ ಪ್ರಭಾವ ಕ್ಷೇತ್ರದಲ್ಲಿ ಗಾಢವಾಗಿದೆ. ಹಳ್ಳಿ ಹಳ್ಳಿಯಲ್ಲೂ ಇರುವ ಕಾರ್ಯಕರ್ತರ ಪಡೆ ಬಿಜೆಪಿಯ ಶಕ್ತಿ. ಬಿಲ್ಲವರು, ಮುಸ್ಲಿಮರು, ಕ್ರೈಸ್ತರು ಹಾಗೂ ಹಿಂದುಳಿದ ವರ್ಗಗಳ ಮತಗಳ ಮೇಲೆ ಕಾಂಗ್ರೆಸ್ ಕಣ್ಣಿಟ್ಟಿದೆ. ಗ್ಯಾರಂಟಿ ಯೋಜನೆ ಕೈಹಿಡಿಯಲಿದೆ ಎಂಬುದು ಕಾಂಗ್ರೆಸ್ ಲೆಕ್ಕಾಚಾರ. ಹಿಂದೂ ಜಾಗರಣ ವೇದಿಕೆಯ ಮುಖಂಡರಾಗಿದ್ದ ಸತ್ಯಜಿತ್ ಸುರತ್ಕಲ್ (ಬಿಲ್ಲವ) ಬಿಜೆಪಿ ಟಿಕೆಟ್ ಸಿಗದಿದ್ದರೆ ಬಂಡಾಯವೇಳುವುದಾಗಿ ಹೇಳಿದ್ದರು. ಅವರು ಸ್ಪರ್ಧಿಸಿದರೆ ಕಣ ಮತ್ತಷ್ಟು ರಂಗೇರಲಿದೆ.

ಅಭ್ಯರ್ಥಿಗಳು

ಬ್ರಿಜೇಶ್ ಚೌಟ
ಬಿಜೆಪಿ

ಪದ್ಮರಾಜ್ ಆರ್.
ಕಾಂಗ್ರೆಸ್

ವಿಧಾನಸಭೆ ಕ್ಷೇತ್ರಗಳ ಪಕ್ಷವಾರು ಪ್ರಾತಿನಿಧ್ಯ

ಕಾಂಗ್ರೆಸ್	ಬಿಜೆಪಿ
2	6

ಮತದಾರರ ಸಂಖ್ಯೆ

ಪುರುಷರು	ಮಹಿಳೆಯರು	ಲಿಂಗತ್ವ ಅಲ್ಪಸಂಖ್ಯಾತರು
8,77,438	9,19,321	67

ಒಟ್ಟು 17,96,826

2019	ಹೆಸರು	ಪಕ್ಷ	ಪಡೆದ ಮತಗಳು
ಗೆದ್ದವರು	ನಳಿನ್ ಕುಮಾರ್ ಕಟೀಲ್	ಬಿಜೆಪಿ	7,74,285
ಸಮೀಪದ ಪ್ರತಿಸ್ಪರ್ಧಿ	ಮಿಥುನ್ ಎಂ.ರೈ	ಕಾಂಗ್ರೆಸ್	4,99,664

ಚಿಕ್ಕೋಡಿ

ಕೈ–ಕಮಲ ಸಮಬಲ ಪ್ರದರ್ಶನ

ಚಿಕ್ಕೋಡಿ ಲೋಕಸಭೆ ಕ್ಷೇತ್ರದಲ್ಲಿ ಬಿಜೆಪಿಯ ಹಾಲಿ ಸಂಸದ ಅಣ್ಣಾಸಾಹೇಬ ಜೊಲ್ಲೆ ಪುನರಾಯ್ಕೆ ಬಸಿದ್ದಾರೆ. ಸಚಿವ ಸತೀಶ ಜಾರಕಿಹೊಳಿ ಪುತ್ರಿ ಪ್ರಿಯಾಂಕಾ ಜಾರಕಿಹೊಳಿ ಅವರು ಕಾಂಗ್ರೆಸ್ ಅಭ್ಯರ್ಥಿ. ಇಬ್ಬರ ನಡುವೆ ನೇರ ಹಣಾಹಣಿ ಇದೆ.

1957, 1962ರ ಚುನಾವಣೆಗಳಲ್ಲಿ ಸಾಮಾನ್ಯ ಕ್ಷೇತ್ರವಾಗಿದ್ದ ಚಿಕ್ಕೋಡಿ, ನಂತರ ಮೀಸಲು ಕ್ಷೇತ್ರವಾಯಿತು. 2004ರ ಚುನಾವಣೆಯಲ್ಲಿ ಮತ್ತೆ ಸಾಮಾನ್ಯ ಕ್ಷೇತ್ರವಾಗಿ ಪರಿವರ್ತನೆಗೊಂಡಿದೆ. ಲಿಂಗಾಯತರು ಹಾಗೂ ಅಹಿಂದ ಮತಗಳು ಇಲ್ಲಿ ನಿರ್ಣಾಯಕ. ಪ್ರಧಾನಿ ನರೇಂದ್ರ ಮೋದಿ ಅವರ ಪ್ರಭಾವ, ಕೇಂದ್ರ ಸರ್ಕಾರದ ಯೋಜನೆಗಳು ಮತ್ತು ರಾಮ ಮಂದಿರ ನಿರ್ಮಾಣದ ವಿಷಯವನ್ನೇ ಜೊಲ್ಲೆ ಬಂಡವಾಳವಾಗಿ ನೆಚ್ಚಿಕೊಂಡಿದ್ದಾರೆ. ಪ್ರಬಲ ಲಿಂಗಾಯತ ಸಮುದಾಯಕ್ಕೆ ಸೇರಿದ್ದರಿಂದ ಅವರ ತೂಕ ದೊಡ್ಡದು ಎಂಬುದು ಬಿಜೆಪಿಯವರ ನಂಬಿಕೆ.

ಕಾಂಗ್ರೆಸ್‌ನ ಪ್ರಕಾಶ ಹುಕ್ಕೇರಿ ಚಿಕ್ಕೋಡಿ ಕ್ಷೇತ್ರದ ಪ್ರಶ್ನಾತೀತ ನಾಯಕರಾಗಿ ಬೆಳೆದವರು. ಅವರ 'ಆಶೀರ್ವಾದ' ಪ್ರಿಯಾಂಕಾ ಅವರಿಗೆ ಎಷ್ಟು ಅಗತ್ಯ ಎಂಬುದು ಪಕ್ಷಕ್ಕೆ ಗೊತ್ತು. ಹೈಕಮಾಂಡ್ ಎಷ್ಟೇ ಕೇಳಿಕೊಂಡರೂ ಪ್ರಕಾಶ ಹುಕ್ಕೇರಿ ಅಭ್ಯರ್ಥಿ ಆಗಲು ಒಪ್ಪಲಿಲ್ಲ. ಕೊನೆಯ ಪಕ್ಷ ಪ್ರಿಯಾಂಕಾ ಜಾರಕಿಹೊಳಿ ಅವರ ಬೆನ್ನಿಗೆ ನಿಲ್ಲಬೇಕು ಎಂಬ 'ಕೋರಿಕೆ' ಒಪ್ಪುವರೇ ಎಂಬುದೇ ಕುತೂಹಲಕರ. ಐವರು ಶಾಸಕರು ಹಾಗೂ ಐದು ಗ್ಯಾರಂಟಿ ಯೋಜನೆಗಳೇ ಪ್ರಿಯಾಂಕಾ ಶಕ್ತಿ.

ಅಭ್ಯರ್ಥಿಗಳು

ಪ್ರಿಯಾಂಕಾ ಜಾರಕಿಹೊಳಿ
ಕಾಂಗ್ರೆಸ್

ಅಣ್ಣಾಸಾಹೇಬ ಜೊಲ್ಲೆ
ಬಿಜೆಪಿ

ವಿಧಾನಸಭೆ ಕ್ಷೇತ್ರಗಳ ಪಕ್ಷವಾರು ಪ್ರಾತಿನಿಧ್ಯ

ಕಾಂಗ್ರೆಸ್	ಬಿಜೆಪಿ
5	3

ಮತದಾರರ ಸಂಖ್ಯೆ

ಪುರುಷರು	ಮಹಿಳೆಯರು	ಲಿಂಗತ್ವ ಅಲ್ಪಸಂಖ್ಯಾತರು
8,75,953	8,65,731	74

ಒಟ್ಟು 17,41,758

2019	ಹೆಸರು	ಪಕ್ಷ	ಪಡೆದ ಮತಗಳು
ಗೆದ್ದವರು	ಅಣ್ಣಾಸಾಹೇಬ ಜೊಲ್ಲೆ	ಬಿಜೆಪಿ	6,41,232
ಸಮೀಪದ ಪ್ರತಿಸ್ಪರ್ಧಿ	ಪ್ರಕಾಶ ಹುಕ್ಕೇರಿ	ಕಾಂಗ್ರೆಸ್	5,24,871

ತುಮಕೂರು

ಅವಕಾಶ ವಂಚಿತನಿಗೆ ಹೊರಗಿನವರ ಸವಾಲು

ತುಮಕೂರು ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಸ್.ಪಿ.ಮುದ್ದಹನುಮೇಗೌಡ ಹಾಗೂ ಬಿಜೆಪಿ– ಜೆಡಿಎಸ್ ಮೈತ್ರಿ ಅಭ್ಯರ್ಥಿ ವಿ.ಸೋಮಣ್ಣ ನಡುವೆ ನೇರ ಪೈಪೋಟಿಗೆ ವೇದಿಕೆ ಸಿದ್ಧವಾಗಿದೆ.

ಕಳೆದ ಬಾರಿ ಜೆಡಿಎಸ್– ಕಾಂಗ್ರೆಸ್ ಮೈತ್ರಿ ಅಭ್ಯರ್ಥಿಯಾಗಿದ್ದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು 'ಹೊರಗಿನವರು' ಎಂಬ 'ಅಸ್ತ್ರ'ವೇ ಸೋಲಿಗೆ ಪ್ರಮುಖ ಕಾರಣವಾಗಿತ್ತು. ಈ ಬಾರಿಯೂ ಅಂತಹುದೇ ಅಸ್ತ್ರ ಪ್ರಯೋಗ ಮಾಡಲಾಗುತ್ತಿದೆ. ಹಿಂದಿನ ಬಾರಿ 'ಹೊರಗಿನವರು' ಎಂಬ ವಿಚಾರವನ್ನು ಬಿಜೆಪಿ ಮುನ್ನೆಲೆಗೆ ತಂದಿತ್ತು. ಈಗ ಅದೇ ಅಸ್ತ್ರವನ್ನು ವಿರೋಧಿಗಳು ಬಿಜೆಪಿ ಅಭ್ಯರ್ಥಿ ಸೋಮಣ್ಣ ವಿರುದ್ಧ ಪ್ರಯೋಗಿಸುತ್ತಿದ್ದಾರೆ.

ಗ್ಯಾರಂಟಿ ಯೋಜನೆಗಳ ಜಾರಿಯ ಬಲವನ್ನು ಮುಂದಿಟ್ಟುಕೊಂಡು ಕಾಂಗ್ರೆಸ್ ಚುನಾವಣೆ ಎದುರಿಸಲು ಸಜ್ಜಾಗಿದೆ. ಜತೆಗೆ ತಮ್ಮ ಅಭ್ಯರ್ಥಿ ಹೊಂದಿರುವ ಘನತೆ, ಗೌರವ, ಸಂಭಾವಿತ, ವಿಚಾರವಂತ ಎಂಬ ವಿಚಾರಗಳನ್ನು ಮತದಾರರ ಮುಂದಿಡಲಾಗುತ್ತಿದೆ. 'ಅವಕಾಶ ವಂಚಿತ' ಎಂಬ ಭಾವನಾತ್ಮಕ ಮಾತುಗಳು ಸಹ ಕ್ಷೇತ್ರದಲ್ಲಿ ಪ್ರಮುಖವಾಗಿ ಚರ್ಚೆಯಾಗುತ್ತಿವೆ.

ಅಭ್ಯರ್ಥಿಗಳು


ಎಸ್.ಪಿ. ಮುದ್ದಹನುಮೇಗೌಡ
ಕಾಂಗ್ರೆಸ್

ವಿ.ಸೋಮಣ್ಣ
ಬಿಜೆಪಿ– ಜೆಡಿಎಸ್ ಮೈತ್ರಿ

ವಿಧಾನಸಭೆ ಕ್ಷೇತ್ರಗಳ ಪಕ್ಷವಾರು ಪ್ರಾತಿನಿಧ್ಯ

ಕಾಂಗ್ರೆಸ್	ಜೆಡಿಎಸ್	ಬಿಜೆಪಿ
4	2	2

ಮತದಾರರ ಸಂಖ್ಯೆ

ಪುರುಷರು	ಮಹಿಳೆಯರು	ಲಿಂಗತ್ವ ಅಲ್ಪಸಂಖ್ಯಾತರು
8,14,555	8,36,775	73

ಒಟ್ಟು 16,51,403

2019	ಹೆಸರು	ಪಕ್ಷ	ಪಡೆದ ಮತಗಳು
ಗೆದ್ದವರು	ಜಿ.ಎಸ್.ಬಸವರಾಜು	ಬಿಜೆಪಿ	5,92,127
ಸಮೀಪದ ಪ್ರತಿಸ್ಪರ್ಧಿ	ಎಚ್.ಡಿ.ದೇವೇಗೌಡ	(ಜೆಡಿಎಸ್– ಕಾಂಗ್ರೆಸ್ ಮೈತ್ರಿ ಅಭ್ಯರ್ಥಿ)	5,82,788

ಸಂಪನ್ಮೂಲ ಹಂಚಿಕೆಯಲ್ಲಿ ದಕ್ಷಿಣದ ರಾಜ್ಯಗಳಿಗೆ ಕೇಂದ್ರ ಸರ್ಕಾರ ತಾರತಮ್ಯ ಮಾಡುತ್ತಿದೆ ಎಂಬ ಆರೋಪ ದಶಕಗಳಿಂದ ಇದೆ. ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆ ಅವರು 1983ರಲ್ಲಿ ಕೇಂದ್ರ ಸರ್ಕಾರದ ಮಲತಾಯಿ ಧೋರಣೆ ವಿರುದ್ಧ ಸಂಘರ್ಷಕ್ಕೆ ಇಳಿದಿದ್ದರು. ತಮಿಳುನಾಡು ಹಾಗೂ ಆಂಧ್ರ ಪ್ರದೇಶದ ಮುಖ್ಯಮಂತ್ರಿಗಳು ಧ್ವನಿಗೂಡಿಸಿದ್ದರು. 40 ವರ್ಷಗಳ ಬಳಿಕ ಕೇಂದ್ರದ ವಿರುದ್ಧ ಧ್ವನಿ ಮೊಳಗಿದ್ದು ಕರ್ನಾಟಕದಿಂದಲೇ. ರಾಜ್ಯದ ಧ್ವನಿಗೆ ಸಾಥ್ ನೀಡಿದ್ದು ಕೇರಳ ಹಾಗೂ ತಮಿಳುನಾಡು. ಬಿಜೆಪಿಯ ಭಾವನಾತ್ಮಕ ವಿಷಯಗಳ ಅಸ್ತ್ರಕ್ಕೆ 'ತೆರಿಗೆ ಸಂಘರ್ಷ' ಪ್ರತ್ಯಸ್ತ್ರ ಆಗಲಿದೆ ಎಂಬ ವಿಶ್ವಾಸದಲ್ಲಿ ಬಿಜೆಪಿಯೇತರ ಪಕ್ಷಗಳ ನಾಯಕರಿದ್ದಾರೆ. ಈ ವಿಷಯ ಬಿಜೆಪಿ ನಾಯಕರಿಗೆ ಬಿಸಿ ತುಪ್ಪವಾಗಿದೆ

ದಕ್ಷಿಣದ 'ತೆರಿಗೆ ದಂಗೆ': ಬಿಜೆಪಿಗೆ ಬಿಸಿ ತುಪ್ಪ

ಕೇಂದ್ರ ಸರ್ಕಾರದ ವಿರುದ್ಧ ರಾಷ್ಟ್ರ ರಾಜಧಾನಿಯಲ್ಲಿ ಶಕ್ತಿ ಪ್ರದರ್ಶನ ಮಾಡಿ ಸಡ್ಡು ಹೊಡೆದ ದಕ್ಷಿಣದ ರಾಜ್ಯಗಳು

• ಮಂಜುನಾಥ ಹೆಬ್ಬಾರ್

ತೆರಿಗೆ ಪಾಲು ಹಂಚಿಕೆಯಲ್ಲಿ ದಕ್ಷಿಣದ ರಾಜ್ಯಗಳಿಗೆ ಘೋರ ಅನ್ಯಾಯವಾಗಿದೆ ಎಂದು ಆರೋಪಿಸಿ ಬಿಜೆಪಿಯೇತರ ಸರ್ಕಾರಗಳು ಕೇಂದ್ರ ಸರ್ಕಾರದ ಜೊತೆಗೆ ಸಂಘರ್ಷಕ್ಕೆ ಇಳಿದಿವೆ. 'ಗೆರಿಲ್ಲಾ' ಮಾದರಿಯ ತೆರಿಗೆ ಹೋರಾಟದಿಂದ 'ಅಜೇಯ' ಬಿಜೆಪಿಯ ವೇಗಕ್ಕೆ ಕಡಿವಾಣ ಹಾಕಿ ಲೋಕಸಭಾ ಚುನಾವಣೆಯಲ್ಲಿ ಭಾರಿ ಫಸಲು ಪಡೆಯಬಹುದು ಎಂಬ ಆಸೆಯಲ್ಲಿವೆ. 'ಶತಮಾನದ ಬರದಿಂದ ತತ್ತರಿಸಿರುವ ಕರುನಾಡಿಗೆ ಕೇಂದ್ರ ಸರ್ಕಾರವು ನ್ಯಾಯೋಚಿತ ಪಾಲು ನೀಡದೆ ಚಿಲ್ಲರೆ ರಾಜಕಾರಣ ಮಾಡುತ್ತಿದೆ' ಎಂಬುದನ್ನು ಕಾಂಗ್ರೆಸ್ ಪಕ್ಷವು ಚುನಾವಣಾ ಅಸ್ತ್ರವನ್ನಾಗಿ ಬಳಸಿಕೊಳ್ಳಲು ಸಜ್ಜಾಗಿದೆ. ಪ್ರಧಾನಿ ನರೇಂದ್ರ ಮೋದಿ ಪ್ರಭಾವಳಿ ಎದುರು ತೆರಿಗೆ ಮಾತಿಗೆ ಕಿಮ್ಮತ್ತು ಸಿಗುವುದಿಲ್ಲ ಎಂಬುದು ಕಮಲ ಪಾಳಯದ ಅಮಿತ ವಿಶ್ವಾಸ.

ಕೇಂದ್ರದ ವಿರುದ್ಧ ರಾಜ್ಯಮಟ್ಟದಲ್ಲಿ ಹೋರಾಟ, ರಾಷ್ಟ್ರ ರಾಜಧಾನಿಯಲ್ಲಿ ಶಕ್ತಿ ಪ್ರದರ್ಶನ ಮಾಡಿ ಸಡ್ಡು ಹೊಡೆದಿರುವ ದಕ್ಷಿಣದ ರಾಜ್ಯಗಳು ತೆರಿಗೆ ಪಾಲಿಗಾಗಿ ದೇಶದ ಉನ್ನತ ನ್ಯಾಯಾಲಯದ ಮೆಟ್ಟಿಲೇರಿವೆ. ಈ ಮೂಲಕ ಹೋರಾಟವನ್ನು ಇನ್ನೊಂದು ಮಜಲಿಗೆ ಕೊಂಡೊಯ್ದಿವೆ. ದಕ್ಷಿಣದ ರಾಜ್ಯಗಳ ಅಭಿಯಾನವನ್ನು ಬಿಜೆಪಿ ರಾಷ್ಟ್ರೀಯ ನಾಯಕರು ಆರಂಭದಲ್ಲಿ ನಿರ್ಲಕ್ಷಿಸಿದ್ದರು. ಈ ಹೋರಾಟ ರಾಜಕೀಯ ಸ್ವರೂಪ ತಾಳುತ್ತಿದ್ದಂತೆ ಎಚ್ಚೆತ್ತು ಆರೋಪಕ್ಕೆ ತಿರುಗೇಟು ನೀಡಿದರು. ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಎಂದಿನ ಶೈಲಿಯಲ್ಲಿ 'ನನ್ನ ತೆರಿಗೆ– ನನ್ನ ಹಕ್ಕು' ಆಂದೋಲನವನ್ನು 'ದೇಶ ವಿಭಜಕ ಭಾಷೆ' ಎಂಬ ಹೆಸರು ಕೊಟ್ಟು ಹೋರಾಟದ ಕಾವನ್ನು ತಗ್ಗಿಸುವ ಪ್ರಯತ್ನ ಮಾಡಿದರು. 'ಗ್ಯಾರಂಟಿ' ಅನುಷ್ಠಾನಕ್ಕೆ ದುಡ್ಡಿಲ್ಲದೆ ಕಾಂಗ್ರೆಸ್ ಈ ಹೋರಾಟ ಮಾಡುತ್ತಿದೆ ಎಂದು ಬಿಜೆಪಿ ನಾಯಕರು ಅಣಕವಾಡಿದರು. ಕರ್ನಾಟಕದ ಕಾಂಗ್ರೆಸ್ ನಾಯಕರು ಅಂಕಿ ಅಂಶಗಳ ಸಮೇತ ಪ್ರತ್ಯುತ್ತರ ನೀಡಿದರು. ಕೇರಳ ಹಾಗೂ ತಮಿಳುನಾಡು ಸರ್ಕಾರಗಳು ತಮ್ಮ ರಾಜ್ಯಕ್ಕಾಗುತ್ತಿರುವ ಅನ್ಯಾಯದ ವಿರುದ್ಧ ಧ್ವನಿ ಮೊಳಗಿಸಿದವು. ಈ ಅಭಿಯಾನ ಜನರ ಮನಸ್ಸಿಗೆ ನಾಟುವಂತೆ ಮಾಡುವಲ್ಲಿ ತಕ್ಕ ಮಟ್ಟಿಗೆ ಯಶಸ್ವಿಯಾದವು.

'ಗ್ಯಾರಂಟಿ' ಯೋಜನೆಗಳನ್ನು ಜಾರಿ ಮಾಡಿದ ಮೇಲೆ ಕರ್ನಾಟಕದ ಜಿಎಸ್‌ಟಿ ಸಂಗ್ರಹದಲ್ಲಿ ಗಮನಾರ್ಹ ಏರಿಕೆ ಆಗಿದೆ. ಇಷ್ಟೆಲ್ಲ ಮಾಡಿದರೂ ಜಿಎಸ್‌ಟಿ ಸಂಗ್ರಹಣೆಯಲ್ಲಿ ರಾಜ್ಯಕ್ಕೆ ಶೇ 52ರಷ್ಟು ಮಾತ್ರ ಸಿಗುತ್ತಿದೆ. ಈ ವರ್ಷ ₹4 ಲಕ್ಷ ಕೋಟಿಗೂ ಹೆಚ್ಚು ವರಮಾನ ತೆರಿಗೆ, ಸೆಸ್, ಸುಂಕ ರೂಪದಲ್ಲಿ ಸಂಗ್ರಹಿಸಲಾಗಿದೆ. ಆದರೆ, ರಾಜ್ಯಕ್ಕೆ ಕೇಂದ್ರ ನೀಡುತ್ತಿರುವುದು ₹50,000 ಕೋಟಿಯಷ್ಟು ಮಾತ್ರ. ಕರ್ನಾಟಕದಿಂದ ಸಂಗ್ರಹವಾಗುವ ₹100 ತೆರಿಗೆಯಲ್ಲಿ ₹15 ಮಾತ್ರ ವಾಪಸು ಬರುತ್ತಿದೆ. ಆದರೆ, ಹಿಂದಿ ಸೀಮೆಯ ರಾಜ್ಯಗಳಿಗೆ ಉದಾರವಾಗಿ ಅನುದಾನ ನೀಡಲಾಗುತ್ತಿದೆ' ಎಂಬುದು ಕರ್ನಾಟಕದ ಆರೋಪ.

'ಅಭಿವೃದ್ಧಿಯಲ್ಲಿ ಹಿಂದುಳಿದ ಬಡ ರಾಜ್ಯಗಳಿಗೆ ಅಧಿಕ ಅನುದಾನ ನೀಡುವುದಕ್ಕೆ ನಮ್ಮ ತಕರಾರು ಇಲ್ಲ. ಚಿನ್ನದ ಮೊಟ್ಟೆ ಇಡುವ ಕೋಳಿಯನ್ನೇ ಕೊಯ್ಯುವ ಕೆಲಸ ಮಾಡುತ್ತಿದ್ದಾರೆ. ಹಾಲು ಕೊಡುವ ಹಸುವಿನ ಕೆಚ್ಚಲು ಕೊಯ್ಯಲು ಹೊರಟಿದ್ದಾರೆ. ದೇಶದ ಜನರ ಹೃದಯದಲ್ಲಿ 'ಗುಜರಾತ್ ಮಾದರಿ' ಎಂಬ ಕನಸನ್ನು ಬಿತ್ತಿ ನರೇಂದ್ರ ಮೋದಿ ಅವರು ಕೇಂದ್ರದ ಗದ್ದುಗೆ ಏರಿದವರು. ಆದರೆ, ಕೇಂದ್ರದ ಬಿಜೆಪಿ ಸರ್ಕಾರದ ಅವಧಿಯಲ್ಲಿ ಗರಿಷ್ಠ ಪ್ರಮಾಣದಲ್ಲಿ ಸಂಪನ್ಮೂಲ ಹರಿದು ಹೋಗಿದ್ದು ಪ್ರಧಾನಿ ಅವರ ತವರು ರಾಜ್ಯಕ್ಕೆ' ಎಂಬುದನ್ನು ಸಿದ್ದರಾಮಯ್ಯ ಅವರು ಅಂಕಿ ಅಂಶಗಳ ಸಮೇತ ವಿವರಿಸಿ ಜನರ ಮನಸ್ಸಿಗೆ ಮುಟ್ಟುವಂತೆ ಮಾಡಿದ್ದಾರೆ. ಈ ವಿಷಯದಲ್ಲಿ ಕೇರಳ ಹಾಗೂ ತಮಿಳುನಾಡು ಸರ್ಕಾರಗಳು ಹಿಂದೆ ಬಿದ್ದಿಲ್ಲ.

'ಕಾಂಗ್ರೆಸ್ ಸರ್ಕಾರವು ಪಂಚ ಗ್ಯಾರಂಟಿಗಳ ಅನುಷ್ಠಾನಕ್ಕಾಗಿ ರಾಜ್ಯದ ಸಂಪನ್ಮೂಲ ಬರಿದು ಮಾಡುತ್ತಿದೆ. ಉದ್ಯೋಗ ಸೃಷ್ಟಿಯಂತಹ ಉಪಕ್ರಮಗಳನ್ನು ಕೈಗೆತ್ತಿಕೊಳ್ಳಲು ರಾಜ್ಯ ಸರ್ಕಾರದ ಬಳಿ ದುಡ್ಡೇ ಇಲ್ಲ. ತಮ್ಮ ಲೋಪಗಳನ್ನೆಲ್ಲ ಮರೆಮಾಚಿ ಲೋಕಸಭಾ ಚುನಾವಣೆಯ ಹೊತ್ತಿನಲ್ಲಿ ಜನರ ಗಮನ ಬೇರೆಡೆಗೆ ಸೆಳೆಯಲು ಕಾಂಗ್ರೆಸ್ ಪಕ್ಷವು ಕೇಂದ್ರ ಸರ್ಕಾರದ ಮೇಲೆ ಸುಳ್ಳು ಆರೋಪ ಮಾಡುತ್ತಿದೆ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಪದೇ ಪದೇ ತಿರುಗೇಟು ಕೊಡುತ್ತಲೇ ಇದ್ದಾರೆ. ಅನುದಾನ ಹಂಚಿಕೆ ತಾರತಮ್ಯದ ಬಗ್ಗೆ ಬಿ.ಎಸ್.ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ಪತ್ರ ಬರೆದಿದ್ದರು ಎಂಬುದನ್ನು ಕಾಂಗ್ರೆಸ್ ನಾಯಕರು ಆಗಾಗ ಹೇಳುತ್ತಾ ತಮ್ಮ ಚಳವಳಿ ರಾಜಕೀಯ ಪ್ರೇರಿತ ಅಲ್ಲ ಎಂಬುದನ್ನು ಬಿಂಬಿಸಲು ಪ್ರಯತ್ನಿಸುತ್ತಿದ್ದಾರೆ.

ಬೆಲೆ ಏರಿಕೆಯಿಂದ ಸಂಕಷ್ಟಕ್ಕೆ ಸಿಲುಕಿರುವ ಬಡವರು ಹಾಗೂ ಮಧ್ಯಮ ವರ್ಗದವರಿಗೆ ನೆರವು ನೀಡುವ ಗ್ಯಾರಂಟಿ ಯೋಜನೆಗೆ ಕೇಂದ್ರ ಅವಮಾನ ಮಾಡುತ್ತಿದೆ ಎಂದು ಮತ್ತೊಂದು ಬಗೆಯ ಪ್ರತಿಪಾದನೆಯನ್ನೂ ಕಾಂಗ್ರೆಸ್ ಆರಂಭಿಸಿದೆ. ಅದರ ಬೆನ್ನಲ್ಲೇ, ಕೇಂದ್ರದ ಬಿಜೆಪಿ ಸರ್ಕಾರವು 'ಮೋದಿ ಗ್ಯಾರಂಟಿ'ಯನ್ನು ಮುನ್ನೆಲೆಗೆ ತಂದಿದೆ. ಅನುದಾನ ಹಂಚಿಕೆ ತಾರತಮ್ಯವನ್ನೇ ಮತವನ್ನಾಗಿ ಪರಿವರ್ತಿಸುವ ಕಸರತ್ತಿನಲ್ಲಿ ಬಿಜೆಪಿಯೇತರ ಪಕ್ಷಗಳು ತೊಡಗಿವೆ. 'ಹಿಂದಿ ಸೀಮೆಯ ಪಕ್ಷ' ಎಂಬ ತನ್ನ ಹಣೆಪಟ್ಟಿ ಅಳಿಸಿ ಹಾಕಿ ದಕ್ಷಿಣದ ರಾಜ್ಯಗಳಲ್ಲಿ ಗರಿಷ್ಠ ಸ್ಥಾನ ಗಳಿಸುವ ಬಿಜೆಪಿಯ ಕನಸಿಗೆ ತಡೆ ಒಡ್ಡಲು ತೆರಿಗೆ ಚಳವಳಿ ಅನುಕೂಲವಾಗಲಿದೆ ಎಂದು ವಿಪಕ್ಷಗಳು ಭಾವಿಸಿವೆ. 'ತೆರಿಗೆ ಜಗಳ'ವು ಚುನಾವಣಾ ಕಣದ ಕಾವನ್ನು ಇನ್ನಷ್ಟು ಹೆಚ್ಚಿಸುವುದಂತೂ ನಿಜ.

ರಾಜ್ಯಗಳಿಗೆ ತೆರಿಗೆ ಪಾಲು

ತೆರಿಗೆ ಪಾಲು ಹಂಚಿಕೆ (15ನೇ ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ) (ಮಾನದಂಡ ಶೇಕಡವಾರು)

15	ಜನಸಂಖ್ಯೆ
15	ವಿಸ್ತೀರ್ಣ
45	ವರಮಾನ ಅಂತರ
10	ಅರಣ್ಯ ಪ್ರದೇಶ
2.5	ತೆರಿಗೆ ಮತ್ತು ಹಣಕಾಸು ಪರಿಸ್ಥಿತಿ
12.5	ಜನಸಂಖ್ಯಾ ಕಾರ್ಯಕ್ಷಮತೆ



ಮಂದಿರದ ಅಲೆ ತಗ್ಗಿಸಲು ತೆರಿಗೆ ತಂತ್ರ

ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಮುಗಿದು ಕೆಲವೇ ದಿನಗಳು ಆಗಿತ್ತಷ್ಟೆ. ರಾಮಮಂದಿರದ ಕನಸು ಸಾಕಾರಗೊಂಡಿದ್ದರಿಂದ ಈ ಸಲ 400 ಸ್ಥಾನಗಳು 'ಗ್ಯಾರಂಟಿ' ಎಂದು ಬಿಜೆಪಿ ನಾಯಕರು ಸಂಭ್ರಮದಲ್ಲಿ ತೇಲುತ್ತಿದ್ದ ಕಾಲವದು.

ದಕ್ಷಿಣದಲ್ಲೂ ಕೇಸರಿ ಸುನಾಮಿಗೆ ಪ್ರಾದೇಶಿಕ ಪಕ್ಷಗಳು ಹಾಗೂ ಕಾಂಗ್ರೆಸ್ ಕೊಚ್ಚಿಕೊಂಡು ಹೋಗಲಿವೆ ಎಂದು ಕಮಲ ಪಾಳಯದ ನಾಯಕರು ಬೀಗುತ್ತಿದ್ದರು. ಆ ಸಮಯದಲ್ಲೇ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ನನ್ನ ತೆರಿಗೆ ನನ್ನ ಹಕ್ಕು' ಹೆಸರಿನಲ್ಲಿ 'ದೆಹಲಿಗೆ ನಡೆ' ಹೋರಾಟ ಮಾಡುವುದಾಗಿ ಪ್ರಕಟಿಸಿದರು. ಅದನ್ನು ಬಿಜೆಪಿಯ ರಾಷ್ಟ್ರೀಯ ನಾಯಕರು ಗಂಭೀರವಾಗಿ ಪರಿಗಣಿಸಿರಲಿಲ್ಲ. ಆದರೆ, ಸಿದ್ದರಾಮಯ್ಯ ಅವರು ತಮ್ಮ ಇಡೀ ಸಂಪುಟವನ್ನು ದೆಹಲಿಗೆ ಕರೆದುಕೊಂಡು ಬಂದು ಹೋರಾಟ ಮಾಡಿದಾಗ ಕೇಂದ್ರ ಸರ್ಕಾರಕ್ಕೆ ಬಿಸಿ ತಟ್ಟಿತು.

ಮಮತಾ ಕುರಿತ ಹೇಳಿಕೆ: ಬಿಜೆಪಿ ಅಭ್ಯರ್ಥಿ ವಿರುದ್ಧ ಆಕ್ರೋಶ

ಕೋಲ್ಕತ್ತ (ಪಿಟಿಐ): ಮಾಜಿ ನ್ಯಾಯಮೂರ್ತಿ ಹಾಗೂ ಬಿಜೆಪಿ ಅಭ್ಯರ್ಥಿ ಅಭಿಜಿತ್ ಗಂಗೋಪಾಧ್ಯಾಯ ಅವರು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಕುರಿತು ವಿಡಿಯೊವೊಂದರಲ್ಲಿ ವಿವಾದಿತ ಹೇಳಿಕೆ ನೀಡಿದ್ದಾರೆ ಎಂಬ ಆರೋಪ ಕೇಳಿಬಂದಿದ್ದು, ಇದಕ್ಕೆ ಟಿಎಂಸಿ ಮುಖಂಡರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.


ಅಭಿಜಿತ್

'ಮಮತಾ ಬ್ಯಾನರ್ಜಿ ಅವರ ಸಾವಿನ ಗಂಟೆ ಈಗಾಗಲೇ ಮೊಳಗಲು ಆರಂಭವಾಗಿದೆ' ಎಂದು ಅಭಿಜಿತ್ ಅವರು ವರದಿಗಾರರೊಬ್ಬರಿಗೆ ಹೇಳುತ್ತಿರುವುದು ವಿಡಿಯೊದಲ್ಲಿ ದಾಖಲಾಗಿದೆ.

ಇದಕ್ಕೆ ಪ್ರತಿಕ್ರಿಯಿಸಿರುವ ತೃಣಮೂಲ ಕಾಂಗ್ರೆಸ್, 'ಅಭಿಜಿತ್ ಅವರು ಮಮತಾ ಅವರ ಸಾವನ್ನು ಬಯಸುತ್ತಿದ್ದಾರೆ' ಎಂದು ಹೇಳಿದೆ. 'ಟಿಎಂಸಿಯ ರಾಜಕೀಯ ಸಾವು' ಎಂಬರ್ಥದಲ್ಲಿ ಅಭಿಜಿತ್ ಅವರು ಹೇಳಿಕೆ ನೀಡಿದ್ದಾರೆ ಎಂದು ಬಿಜೆಪಿ ಪ್ರತಿಕ್ರಿಯಿಸಿದೆ.

'ತಮ್ಮ ಮಾತು ಎಷ್ಟು ಕೆಟ್ಟದಾಗಿದೆ ಎಂಬುದನ್ನು ಬಿಜೆಪಿ ಅಭ್ಯರ್ಥಿ ಅಭಿಜಿತ್ ಅವರು ತೋರಿಸಿಕೊಟ್ಟಿದ್ದಾರೆ' ಎಂದು ಟಿಎಂಸಿ ನಾಯಕಿ ಶಶಿ ಪಂಜಾ ಆಕ್ರೋಶ ವ್ಯಕ್ತಪಡಿಸಿದರು.

ಅಭಿಜಿತ್ ಅವರು ಕಲ್ಕತ್ತ ಹೈಕೋರ್ಟ್‌ನ ನ್ಯಾಯಮೂರ್ತಿ ಹುದ್ದೆಗೆ ಮಾರ್ಚ್ 5ರಂದು ರಾಜೀನಾಮೆ ನೀಡಿದ್ದರಲ್ಲದೆ, ಬಳಿಕ ಬಿಜೆಪಿಗೆ ಸೇರ್ಪಡೆಗೊಂಡಿದ್ದರು.

ಘೋಷ್ ವಿರುದ್ಧ ಎಫ್‌ಐಆರ್

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ವಿರುದ್ಧ ಅವಹೇಳನಕಾರಿ ಹೇಳಿಕೆಗಳನ್ನು ನೀಡಿದ್ದ ಬಿಜೆಪಿಯ ಹಿರಿಯ ನಾಯಕ ದಿಲೀಪ್ ಘೋಷ್ ವಿರುದ್ಧ ದುರ್ಗಾಪುರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ.

ಈ ಸಂಬಂಧ ವಕೀಲರು ಮತ್ತು ಇನ್ನೊಬ್ಬ ವ್ಯಕ್ತಿ ದುರ್ಗಾಪುರ ನ್ಯಾಯಾಲಯದಲ್ಲಿ ದೂರು ನೀಡಿದ ಆಧಾರದ ಮೇಲೆ ಎಫ್‌ಐಆರ್ ದಾಖಲಿಸಲಾಗಿದೆ.

ಆಯೋಗದಿಂದ ನೋಟಿಸ್: ಈ ಸಂಬಂಧ ಟಿಎಂಸಿ ನೀಡಿದ ದೂರಿನ ಮೇರೆಗೆ ಚುನಾವಣಾ ಆಯೋಗವು ಘೋಷ್ ಅವರಿಗೆ ಶೋಕಾಸ್ ನೋಟಿಸ್ ಜಾರಿಮಾಡಿದ್ದು, ಇದೇ 29ರೊಳಗೆ ಪ್ರತಿಕ್ರಿಯಿಸುವಂತೆ ಸೂಚಿಸಿದೆ.

'ದೀದಿ ಗೋವಕ್ಕೆ ಹೋದಾಗ ಗೋವಾದ ಮಗಳು, ತ್ರಿಪುರಕ್ಕೆ ಹೋದಾಗ ತ್ರಿಪುರಾ ಮಗಳು ಎಂದು ಹೇಳುತ್ತಾರೆ; ನಿಮ್ಮ ತಂದೆ ಯಾರು ಎಂಬುದನ್ನು ನಿರ್ಧರಿಸಿ, ಇದು ಸರಿಯಲ್ಲ' ಎಂದು ಘೋಷ್ ಹೇಳಿದ್ದಾಗಿ ಆಯೋಗ ನೋಟಿಸ್‌ನಲ್ಲಿ ಉಲ್ಲೇಖಿಸಿದೆ. ಇದು ಮೇಲ್ನೋಟಕ್ಕೆ ಮಾದರಿ ನೀತಿ ಸಂಹಿತೆಯ ಉಲ್ಲಂಘನೆಯಾಗಿದೆ ಎಂದು ಆಯೋಗ ಹೇಳಿದೆ.

ಬರ್ಧಮಾನ್– ದುರ್ಗಾಪುರ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿರುವ ಘೋಷ್ ಅವರ ಹೇಳಿಕೆಗಳು 'ಅಸಂಸದೀಯ' ಮತ್ತು ಪಕ್ಷದ ಸಂಸ್ಕೃತಿಗೆ ವಿರುದ್ಧವಾಗಿದೆ ಎಂದು ಬಿಜೆಪಿಯೂ ಟೀಕಿಸಿದೆ.

ಕಾಂಗ್ರೆಸ್ 8ನೇ ಪಟ್ಟಿ ಪ್ರಕಟ: 14 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಘೋಷಣೆ

ಸುಪ್ರಿಯಾ ಶ್ರೀನೇತ್ ಕೈತಪ್ಪಿದ ಟಿಕೆಟ್

ನವದೆಹಲಿ (ಪಿಟಿಐ): ಲೋಕಸಭೆ ಚುನಾವಣೆಗಾಗಿ ಕಾಂಗ್ರೆಸ್ ಪಕ್ಷ ಗುರುವಾರ ತನ್ನ ಅಭ್ಯರ್ಥಿಗಳ ಎಂಟನೇ ಪಟ್ಟಿ ಪ್ರಕಟಿಸಿದ್ದು, 14 ಕ್ಷೇತ್ರಗಳಿಗೆ ಹುರಿಯಾಳುಗಳನ್ನು ಘೋಷಿಸಿದೆ.

ಮಧ್ಯಪ್ರದೇಶದ ಗುನಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ, ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ವಿರುದ್ಧ ರಾವ್ ಯಾದವೇಂದ್ರ ಸಿಂಗ್ ಅವರನ್ನು ಕಣಕ್ಕಿಳಿಸಿದೆ. ಮಧ್ಯಪ್ರದೇಶದ ವಿದಿಶಾ ಕ್ಷೇತ್ರಕ್ಕೆ ಪ್ರತಾಪ್ ಭಾನು ಶರ್ಮಾ ಅವರ ಹೆಸರು ಪ್ರಕಟಿಸಿದೆ. ಬಿಜೆಪಿಯು ಇಲ್ಲಿ ಮಾಜಿ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರನ್ನು ಅಖಾಡಕ್ಕೆ ಇಳಿಸಿದೆ.

ಉತ್ತರ ಪ್ರದೇಶದಲ್ಲಿ ಗಾಜಿಯಾಬಾದ್ (ಡಾಲಿ ಶರ್ಮಾ), ಸೀತಾಪುರ (ನಕುಲ್ ದುಬೆ), ಬುಲಂದ್‌ಶಹರ್ (ಶಿವರಾಂ ವಾಲ್ಮೀಕಿ) ಮತ್ತು ಮಹಾರಾಜಾಗಂಜ್ (ವೀರೇಂದ್ರ ಚೌಧರಿ) ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರು ಪ್ರಕಟಿಸಿದೆ.

- ಅಮೇಠಿ ಮತ್ತು ರಾಯಬರೇಲಿ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಘೋಷಣೆ ಇನ್ನೂ ಬಾಕಿ
- ಇದುವರೆಗೆ ಒಟ್ಟು 208 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಿದ ಕಾಂಗ್ರೆಸ್
- ಇನ್ನುಳಿದ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಲು ಮಾರ್ಚ್ 31 ರಂದು ಕಾಂಗ್ರೆಸ್ ಸಿಇಸಿ ಸಭೆ
- ಭಾನುವಾರದ ಸಭೆಯಲ್ಲಿ ದೆಹಲಿ ಮತ್ತು ಮಹಾರಾಷ್ಟ್ರದ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸುವ ಸಾಧ್ಯತೆ

ಕಾಂಗ್ರೆಸ್‌ನ ಸಾಮಾಜಿಕ ಮಾಧ್ಯಮ ಮುಖ್ಯಸ್ಥೆ ಸುಪ್ರಿಯಾ ಶ್ರೀನೇತ್ ಅವರು ಮಹಾರಾಜಾಗಂಜ್ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದರು. ಆದರೆ ಅವರ ಬದಲು ಚೌಧರಿಗೆ ಅವಕಾಶ ನೀಡಿದೆ. ಸುಪ್ರಿಯಾ ಅವರು 2019ರ ಚುನಾವಣೆಯಲ್ಲಿ ಇದೇ ಕ್ಷೇತ್ರದಿಂದ ಸ್ಪರ್ಧಿಸಿ ಸೋತಿದ್ದರು. ಹಿಮಾಚಲ ಪ್ರದೇಶದ ಮಂಡಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕಂಗನಾ ರನೌತ್ ಕುರಿತು ಸುಪ್ರಿಯಾ ನೀಡಿದ್ದ ಹೇಳಿಕೆ ಈಚೆಗೆ ವಿವಾದಕ್ಕೆ ಕಾರಣವಾಗಿತ್ತು. ತೆಲಂಗಾಣದ ನಾಲ್ಕು, ಮಧ್ಯಪ್ರದೇಶ ಮತ್ತು ಜಾರ್ಖಂಡ್‌ನ ತಲಾ ಮೂರು ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಾಯಕಿ ಸೋನಿಯಾ ಗಾಂಧಿ, ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಸೇರಿದಂತೆ ಪಕ್ಷದ ಪ್ರಮುಖ ನಾಯಕರು ಗುರುವಾರ ನಡೆದ ಕೇಂದ್ರ ಚುನಾವಣಾ ಸಮಿತಿ ಸಭೆಯಲ್ಲಿ (ಸಿಇಸಿ) ಪಾಲ್ಗೊಂಡರು.

ಪುಷ್ಪ ನಮನ
ತಿರುವನಂತಪುರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಶಶಿ ತರೂರ್, ಎಲ್‌ಡಿಎಫ್ ಅಭ್ಯರ್ಥಿ ಪನ್ಯನ್ ರವೀಂದ್ರನ್ ಹಾಗೂ ಬಿಜೆಪಿ ಅಭ್ಯರ್ಥಿ ರಾಜೀವ್ ಚಂದ್ರಶೇಖರ್ ಅವರು, ರಾಜಕಾರಣಿ ಸ್ವದೇಶಾಭಿಮಾನಿ ರಾಮಕೃಷ್ಣ ಪಿಳ್ಳೆ ಅವರ ತಿರುವನಂತಪುರದಲ್ಲಿರುವ ಸ್ಮಾರಕಕ್ಕೆ ಗುರುವಾರ ಪುಷ್ಪನಮನ ಸಲ್ಲಿಸಿದರು –ಪಿಟಿಐ ಚಿತ್ರ

ವರುಣ್ ಭಾವುಕ ಪತ್ರ

ಲಖನೌ (ಪಿಟಿಐ): ಬಿಜೆಪಿ ಟಿಕೆಟ್ ವಂಚಿತರಾಗಿರುವ ಪಿಲಿಭಿತ್ ಕ್ಷೇತ್ರದ ಸಂಸದ ವರುಣ್ ಗಾಂಧಿ ಅವರು ತಮ್ಮ ಕ್ಷೇತ್ರದ ಜನರಿಗೆ ಭಾವುಕ ಪತ್ರ ಬರೆದಿದ್ದಾರೆ.

'ಪಿಲಿಭಿತ್ ಕ್ಷೇತ್ರವು ನೀಡಿದ ಆದರ್ಶಗಳು ಸಂಸದನಾಗಿ ಮಾತ್ರವಲ್ಲದೆ ಒಬ್ಬ ವ್ಯಕ್ತಿಯಾಗಿಯೂ ನನ್ನ ಬೆಳವಣಿಗೆಗೆ ಸಹಕಾರಿಯಾಗಿದೆ. ನಿಮ್ಮ ಪ್ರತಿನಿಧಿಯಾಗುವ ಅವಕಾಶ ಲಭಿಸಿದ್ದು ನನ್ನ ಜೀವನದ ಬಲುದೊಡ್ಡ ಗೌರವ. ನಿಮ್ಮ ಹಿತಾಸಕ್ತಿಗಾಗಿ ಪ್ರತಿ ಬಾರಿಯೂ ಧ್ವನಿ ಎತ್ತಿದ್ದೇನೆ. ಸಂಸದನಾಗಿಯಲ್ಲದಿದ್ದರೂ, ಈ ಕ್ಷೇತ್ರದ ಮಗನಾಗಿ ನಿಮ್ಮ ಸೇವೆಗೆ ಸದಾ ಸಿದ್ಧ' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಬಿಜೆಪಿಯು ಪಿಲಿಭಿತ್ ಕ್ಷೇತ್ರದಿಂದ ವರುಣ್ ಬದಲು ಉತ್ತರ ಪ್ರದೇಶದ ಸಚಿವ ಜಿತಿನ್ ಪ್ರಸಾದ್ ಅವರನ್ನು ಕಣಕ್ಕಿಳಿಸಿದೆ.

ಕೆಲವೆಡೆ ಸಿಪಿಎಂ– 'ಇಂಡಿಯಾ' ಪೈಪೋಟಿ

ತನ್ನ ಅಭ್ಯರ್ಥಿ ಕಣಕ್ಕಿಳಿಸದ ಕ್ಷೇತ್ರಗಳಲ್ಲಿ ಮೈತ್ರಿಕೂಟಕ್ಕೆ ಎಡಪಕ್ಷ ಬೆಂಬಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆಯಲ್ಲಿ ಸಿಪಿಎಂ, ಕೆಲವು ರಾಜ್ಯಗಳಲ್ಲಿ ಕಾಂಗ್ರೆಸ್ ಮತ್ತು 'ಇಂಡಿಯಾ' ಮೈತ್ರಿಕೂಟದ ಅಭ್ಯರ್ಥಿಗಳ ವಿರುದ್ಧ ಹಣಾಹಣಿ ನಡೆಸಲಿದೆ. ಆದರೆ, ತಾನು ಅಭ್ಯರ್ಥಿಗಳನ್ನು ಕಣಕ್ಕಿಳಿಸದ ಕಡೆಗಳಲ್ಲಿ ಮೈತ್ರಿಕೂಟವನ್ನು ಬೆಂಬಲಿಸಲಿದೆ.

ಪಶ್ಚಿಮ ಬಂಗಾಳದ 17 ಸ್ಥಾನಗಳು ಸೇರಿದಂತೆ ಒಟ್ಟು 44 ಕ್ಷೇತ್ರಗಳಿಗೆ ಸಿಪಿಎಂ, ಅಭ್ಯರ್ಥಿಗಳನ್ನು ಘೋಷಿಸಿದೆ. ಬಂಗಾಳದಲ್ಲಿ ಎಡಪಕ್ಷವು ಕಾಂಗ್ರೆಸ್ ಜತೆ ಸೀಟು ಹಂಚಿಕೆ ಹೊಂದಾಣಿಕೆ ಮಾಡಿದೆ. ಕೇರಳದಲ್ಲಿ 15 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಿದ್ದು, ಅಲ್ಲಿ ಕಾಂಗ್ರೆಸ್ ವಿರುದ್ಧ ಪೈಪೋಟಿ ನಡೆಸಲಿದೆ.

ಕೇರಳದಲ್ಲಿ ಬಿಜೆಪಿಯು ಪ್ರಬಲ ಎದುರಾಳಿಯಲ್ಲ ಎಂಬ ಕಾರಣದಿಂದ ಕಾಂಗ್ರೆಸ್ ಜತೆ ಸೀಟು ಹಂಚಿಕೆ ಹೊಂದಾಣಿಕೆ ಮಾಡಿಕೊಂಡಿಲ್ಲ ಎಂದು ಸಿಪಿಎಂ ಮುಖಂಡರು ಹೇಳಿಕೊಂಡಿದ್ದಾರೆ. ಆದರೆ ಬಿಹಾರ, ತ್ರಿಪುರಾ ಮತ್ತು ತಮಿಳುನಾಡಿನಲ್ಲಿ ಕಾಂಗ್ರೆಸ್ ಹಾಗೂ 'ಇಂಡಿಯಾ' ಕೂಟದಲ್ಲಿರುವ ಇತರ ಪಕ್ಷಗಳ ಜತೆ ಹೊಂದಾಣಿಕೆ ಮಾಡಿಕೊಂಡಿದೆ.

ಸಿಪಿಎಂ, ಬಿಹಾರದ ಖಗಡಿಯಾ ಕ್ಷೇತ್ರದಿಂದ ಸಂಜಯ್ ಕುಮಾರ್ ಅವರನ್ನು ಕಣಕ್ಕಿಳಿಸಿದೆ. ಇಲ್ಲಿ ಆರ್‌ಜೆಡಿ ಮತ್ತು ಕಾಂಗ್ರೆಸ್ ಪಕ್ಷಗಳು ಸಂಜಯ್ ಅವರನ್ನು ಬೆಂಬಲಿಸಲಿವೆ. ರಾಜಸ್ಥಾನದ ಸೀಕರ್ ಕ್ಷೇತ್ರಕ್ಕೆ ಹಿರಿಯ ಮುಖಂಡ ಅಮ್ರಾ ರಾಮ್ ಹೆಸರು ಘೋಷಿಸಿದೆ. ಪಕ್ಷವು ಇಲ್ಲಿ ಕಾಂಗ್ರೆಸ್ ಜತೆ ಹೊಂದಾಣಿಕೆ ಮಾಡಿಕೊಂಡಿದೆ.

ತ್ರಿಪುರಾ ಪೂರ್ವದಲ್ಲಿ ಕಣಕ್ಕಿಳಿಸಿರುವ ರಾಜೇಂದ್ರ ರೆಯಾಂಗ್ ಅವರಿಗೆ ಕಾಂಗ್ರೆಸ್ ಬೆಂಬಲ ಘೋಷಿಸಿದೆ. ಡಿಎಂಕೆಯು ತಮಿಳುನಾಡಿನಲ್ಲಿ ಎರಡು ಸೀಟುಗಳನ್ನು ಎಡಪಕ್ಷಗಳಿಗೆ ಬಿಟ್ಟುಕೊಟ್ಟಿದೆ.

ಸಿಪಿಎಂ ತನ್ನ ಮೂವರು ಹಾಲಿ ಸಂಸದರಲ್ಲಿ ಇಬ್ಬರಿಗೆ ಮತ್ತೆ ಅವಕಾಶ ನೀಡಿದೆ. ಕೇರಳದ ಆಲಪ್ಪುಳದಿಂದ ಎ.ಎಂ.ಆರಿಫ್ ಖಾನ್ ಮತ್ತು ತಮಿಳುನಾಡಿನ ಮದುರೈನಿಂದ ಸು.ವೆಂಕಟೇಶನ್ ಅವರನ್ನೇ ಕಣಕ್ಕಿಳಿಸಿದೆ. ಆದರೆ ಕೊಯಮತ್ತೂರು ಸಂಸದ ಪಿ.ಆರ್.ನಟರಾಜನ್ ಅವರಿಗೆ ಟಿಕೆಟ್ ತಪ್ಪಿದೆ. ಏಕೆಂದರೆ, ಕೊಯಮತ್ತೂರು ಕ್ಷೇತ್ರದಲ್ಲಿ ಡಿಎಂಕೆ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದು, ದಿಂಡಿಗಲ್ ಕ್ಷೇತ್ರವನ್ನು ಸಿಪಿಎಂಗೆ ಬಿಟ್ಟುಕೊಟ್ಟಿದೆ. ದಿಂಡಿಗಲ್ ಕ್ಷೇತ್ರಕ್ಕೆ ಆರ್.ಸಚ್ಚಿದಾನಂದನ್ ಅವರ ಹೆಸರು ಪ್ರಕಟಿಸಿದೆ.

ಕರ್ನಾಟಕದಲ್ಲಿ ಚಿಕ್ಕಬಳ್ಳಾಪುರ (ಎಂ.ಪಿ. ಮುನಿವೆಂಕಟಪ್ಪ ಅಭ್ಯರ್ಥಿ) ಹೊರತುಪಡಿಸಿ, ಇತರ 27 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವುದಾಗಿ ಪಕ್ಷದ ಪಾಲಿಟ್ ಬ್ಯೂರೊ ಸದಸ್ಯ ಎಂ.ಎ.ಬೇಬಿ ಈಚೆಗೆ ಹೇಳಿದ್ದರು.

ಆಂಧ್ರ ಪ್ರದೇಶದ ಅರಕು ಮತ್ತು ತೆಲಂಗಾಣದ ಭುವನಗಿರಿ ಕ್ಷೇತ್ರಗಳಿಗೂ ಅಭ್ಯರ್ಥಿಗಳನ್ನು ಪ್ರಕಟಿಸಿದ್ದು, ಈ ಎರಡು ಕಡೆ ಕಾಂಗ್ರೆಸ್ ಜತೆ ಹೊಂದಾಣಿಕೆ ಮಾಡಿಕೊಳ್ಳುವ ವಿಶ್ವಾಸವನ್ನು ಸಿಪಿಎಂ ಹೊಂದಿದೆ.

ಶಿವಸೇನಾ ಸೇರಿದ ಗೋವಿಂದ

ಮುಂಬೈ (ಪಿಟಿಐ): ಬಾಲಿವುಡ್ ನಟ ಗೋವಿಂದ ಅವರು ರಾಜಕೀಯ 'ಪುನರಾಗಮನ' ಮಾಡಿದ್ದು, ಗುರುವಾರ ಶಿವಸೇನಾ ಸೇರಿದರು.

ಮುಂಬೈನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಸಮ್ಮುಖದಲ್ಲಿ ಅವರು ಪಕ್ಷವನ್ನು ಸೇರಿಕೊಂಡರು. ಆದರೆ, ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಬಗ್ಗೆ 60 ವರ್ಷದ ಗೋವಿಂದ ಯಾವುದೇ ಗುಟ್ಟು ಬಿಟ್ಟುಕೊಟ್ಟಿಲ್ಲ.

ಗೋವಿಂದ ಅವರು 2004ರಲ್ಲಿ ಮುಂಬೈ ಉತ್ತರ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್‌ನಲ್ಲಿ ಸ್ಪರ್ಧಿಸಿ ಬಿಜೆಪಿಯ ರಾಮ ನಾಯ್ಕ್ ಅವರನ್ನು ಮಣಿಸಿದ್ದರು. 2009ರ ಬಳಿಕ ರಾಜಕೀಯದಿಂದ ದೂರವುಳಿದಿದ್ದರು.

'ಮತ್ತೆ ರಾಜಕೀಯಕ್ಕೆ ಬರುತ್ತೇನೆ ಎಂದು ಯೋಚಿಸಿಯೇ ಇರಲಿಲ್ಲ. 14 ವರ್ಷಗಳ ವನವಾಸದ ಬಳಿಕ ಇದೀಗ ರಾಜಕೀಯ ಪುನರಾಗಮನ ಮಾಡಿದ್ದೇನೆ' ಎಂದು ಗೋವಿಂದ ಹೇಳಿದರು. ಗೋವಿಂದ ಅವರು ಪಕ್ಷವನ್ನು ಸೇರಿರುವುದಕ್ಕೂ, ಲೋಕಸಭಾ ಚುನಾವಣೆಗೂ ಸಂಬಂಧವಿಲ್ಲ ಎಂದು ಶಿಂದೆ ಹೇಳಿದರು. ಮುಂಬೈ ಉತ್ತರ ಕ್ಷೇತ್ರದಿಂದ ಗೋವಿಂದ ಅವರನ್ನು ಕಣಕ್ಕಿಳಿಸಲಾಗುವುದೇ ಎಂಬ ಪ್ರಶ್ನೆಗೆ, 'ಚುನಾವಣೆಗೆ ಟಿಕೆಟ್ ಪಡೆಯಬೇಕೆಂಬ ಉದ್ದೇಶದೊಂದಿಗೆ ಅವರು ಪಕ್ಷವನ್ನು ಸೇರಿಲ್ಲ' ಎಂದು ಉತ್ತರಿಸಿದರು.

ಚುಟುಕು

2ನೇ ಹಂತದ ಮತದಾನಕ್ಕೆ ಅಧಿಸೂಚನೆ

ನವದೆಹಲಿ: ಲೋಕಸಭಾ ಚುನಾವಣೆಯ ಎರಡನೇ ಹಂತದ ಮತದಾನಕ್ಕಾಗಿ ಚುನಾವಣಾ ಆಯೋಗವು ಗುರುವಾರ ಅಧಿಸೂಚನೆ ಹೊರಡಿಸಿದೆ.

ಏಪ್ರಿಲ್ 26ರಂದು 12 ರಾಜ್ಯಗಳ ಒಟ್ಟು 88 ಕ್ಷೇತ್ರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಎರಡನೇ ಹಂತದ ಮತದಾನ ನಡೆಯಲಿದೆ.

ಕರ್ನಾಟಕದ 14 ಲೋಕಸಭಾ ಕ್ಷೇತ್ರಗಳು ಸೇರಿದಂತೆ ಅಸ್ಸಾಂ, ಬಿಹಾರ, ಛತ್ತೀಸಗಢ, ಕೇರಳ, ಮಧ್ಯಪ್ರದೇಶ, ಮಹಾರಾಷ್ಟ್ರ, ರಾಜಸ್ಥಾನ, ತ್ರಿಪುರಾ, ಉತ್ತರಪ್ರದೇಶ, ಪಶ್ಚಿಮ ಬಂಗಾಳ, ಜಮ್ಮು ಮತ್ತು ಕಾಶ್ಮೀರದಲ್ಲಿ ಮತದಾನ ಹಮ್ಮಿಕೊಳ್ಳಲಾಗಿದೆ.

ಔಟರ್ ಮಣಿಪುರ ಲೋಕಸಭಾ ಕ್ಷೇತ್ರಕ್ಕೆ ಎರಡು ಹಂತಗಳಲ್ಲಿ ಮತದಾನ ನಡೆಯಲಿದ್ದು, ಏಪ್ರಿಲ್ 19 ರಂದು 15 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಹಾಗೂ 26ರಂದು 13 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಮತದಾನ ನಡೆಯಲಿದೆ. ಮಣಿಪುರದಲ್ಲಿ ಈಚೆಗೆ ಹಿಂಸಾಚಾರ ನಡೆದ ಕಾರಣ ಈ ಲೋಕಸಭಾ ಕ್ಷೇತ್ರಕ್ಕೆ ಎರಡು ಹಂತಗಳಲ್ಲಿ ಮತದಾನ ನಡೆಸಲು ಚುನಾವಣಾ ಆಯೋಗವು ನಿರ್ಧರಿಸಿತ್ತು. ಅಧಿಸೂಚನೆ ಹೊರಡಿಸಿದ ಬಳಿಕ ಆಯೋಗವು ಈ ಕ್ಷೇತ್ರಗಳ ಅಭ್ಯರ್ಥಿಗಳಿಂದ ನಾಮಪತ್ರ ಸ್ವೀಕರಿಸಲು ಪ್ರಕ್ರಿಯೆ ಆರಂಭಿಸಿದೆ.

ಜಿಗಿ–ನೆಗೆದಾಟ

ಸಾವಿತ್ರಿ ಜಿಂದಾಲ್ ಬಿಜೆಪಿಗೆ

ಚಂಡೀಗಢ (ಪಿಟಿಐ): ಹರಿಯಾಣದ ಮಾಜಿ ಸಚಿವೆ ಸಾವಿತ್ರಿ ಜಿಂದಾಲ್ ಅವರು ಕಾಂಗ್ರೆಸ್ ತೊರೆದು, ಗುರುವಾರ ಬಿಜೆಪಿಗೆ ಸೇರ್ಪಡೆಗೊಂಡರು. ಸಾವಿತ್ರಿ ಅವರ ಮಗ, ಉದ್ಯಮಿ ನವೀನ್ ಜಿಂದಾಲ್ ಅವರು ಈಚೆಗೆ ಬಿಜೆಪಿಗೆ ಸೇರಿದ್ದರು.

ಹಿಸಾರ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ನಾಯಬ್ ಸಿಂಗ್ ಸೈನಿ, ಮಾಜಿ ಮುಖ್ಯಮಂತ್ರಿ ಮನೋಹರ್ ಲಾಲ್ ಖಟ್ಟರ್ ಅವರ ಸಮ್ಮುಖದಲ್ಲಿ 84 ವರ್ಷದ ಸಾವಿತ್ರಿ, ಬಿಜೆಪಿಗೆ ಸೇರ್ಪಡೆಗೊಂಡರು.

ಭರ್ತೃಹರಿ ಬಿಜೆಪಿಗೆ (ನವದೆಹಲಿ ವರದಿ): ಬಿಜು ಜನತಾ ದಳದ (ಬಿಜೆಡಿ) ಹಿರಿಯ ಸಂಸದ ಮತ್ತು ಪಕ್ಷದ ಸಂಸ್ಥಾಪಕರಲ್ಲಿ ಒಬ್ಬರಾದ ಭರ್ತೃಹರಿ ಮಹತಾಬ್ ಅವರು ಗುರುವಾರ ಬಿಜೆಪಿಗೆ ಸೇರ್ಪಡೆಗೊಂಡರು. ಭರ್ತೃಹರಿ ಅವರು ಈಚೆಗೆ ಬಿಜೆಡಿ ತೊರೆದಿದ್ದರು. ಭರ್ತೃಹರಿ ಅವರ ಜತೆ ಬಿಜೆಡಿಯ ಮಾಜಿ ಸಂಸದ ಸಿದ್ಧಾಂತ್ ಮಹಾಪಾತ್ರ, ಸಾಹಿತಿ ದಮಯಂತಿ ಬೆಸರಾ ಕೂಡ ಬಿಜೆಪಿಗೆ ಸೇರ್ಪಡೆಗೊಂಡರು.

ಎಂಥಾ ಮಾತು!

ದೇಶದ ಒಟ್ಟು ನಿರುದ್ಯೋಗಿಗಳಲ್ಲಿ ಶೇ 83ರಷ್ಟು ಯುವಕರೇ ಏಕೆ ಇದ್ದಾರೆ? ವಾರ್ಷಿಕ 2 ಕೋಟಿ ಉದ್ಯೋಗ ನೀಡುವ ವಿಚಾರ ಏನಾಯಿತು? ದೇಶದಲ್ಲಿ 30 ಲಕ್ಷ ಸರ್ಕಾರಿ ಹುದ್ದೆಗಳು ಏಕೆ ಖಾಲಿ ಇವೆ? ಪ್ರತೀ ಪರೀಕ್ಷೆಗಳ ಪ್ರಶ್ನೆಪತ್ರಿಕೆಗಳು ಸೋರಿಕೆ ಯಾಗುತ್ತಿರುವುದು ಏಕೆ? ಉದ್ಯಮಿಗಳ ₹16 ಲಕ್ಷ ಕೋಟಿ ಸಾಲವನ್ನು ಮನ್ನಾ ಮಾಡಲಾಗಿದೆ. ಆದರೆ ಸಾಲದ ಹೊರೆಯಿಂದ ರೈತರು ಏಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ? ದಲಿತರು, ಹಿಂದುಳಿದ ವರ್ಗದವರಿಗೆ ಎಲ್ಲಾ ಕ್ಷೇತ್ರಗಳಲ್ಲಿ ಸೂಕ್ತ ಪ್ರಾತಿನಿಧ್ಯ ಏಕಿಲ್ಲ? ಹಣದುಬ್ಬರ ಏಕೆ ಉತ್ತುಂಗದಲ್ಲಿದೆ ಮತ್ತು ಕುಟುಂಬ ನಿರ್ವಹಣೆ ಏಕೆ ಕಷ್ಟಕರವಾಗಿದೆ?

ಪ್ರಿಯಾಂಕಾ ಗಾಂಧಿ ವಾದ್ರಾ, ಕಾಂಗ್ರೆಸ್ ನಾಯಕಿ

ಪ್ರಧಾನಿ ನರೇಂದ್ರ ಮೋದಿ ಅವರು 'ಅಬ್‌ಕಿ ಬಾರ್ 400 ಪಾರ್' (ಈ ಬಾರಿ 400ಕ್ಕೂ ಅಧಿಕ ಸ್ಥಾನಗಳು) ಎಂಬ ಘೋಷಣೆಯನ್ನು ಮೊಳಗಿಸಿದ್ದಾರೆ. ಸಂವಿಧಾನದ ವಿಧಿ 370ರ ಅಡಿ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ಅವರ ನಾಯಕತ್ವದಲ್ಲಿ ರದ್ದುಪಡಿಸಲಾಗಿದೆ. ಮೋದಿ ಅವರು ಮೂರನೇ ಬಾರಿ ಪ್ರಧಾನಿಯಾಗಲು ಪ್ರತಿ ಮತಗಟ್ಟೆಗಳಲ್ಲಿ ಕಳೆದ ಚುನಾವಣೆಯಲ್ಲಿ ಬಿಜೆಪಿಗೆ ಸಿಕ್ಕಿದ್ದ ಮತಗಳಿಗಿಂತ 370 ಮತಗಳು ಹೆಚ್ಚುವರಿಯಾಗಿ ಸಿಗಲು ನಾವು ಕೆಲಸ ಮಾಡಬೇಕು

ಜ್ಯೋತಿರಾದಿತ್ಯ ಸಿಂಧಿಯಾ, ಕೇಂದ್ರ ಸಚಿವ

ಕ್ಷೇತ್ರ ಮಹಾತ್ಮೆ

ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಮತ್ತೆ ರಾಷ್ಟ್ರ ರಾಜಕಾರಣಕ್ಕೆ ಮರಳಲು ಸನ್ನದ್ಧರಾಗಿದ್ದು, ಇದಕ್ಕಾಗಿ ವಿದಿಶಾ ಲೋಕಸಭಾ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಚೌಹಾಣ್ ಅವರ ವಿರುದ್ಧ ಕಾಂಗ್ರೆಸ್ ಕೂಡ ಪ್ರಬಲ ಅಭ್ಯರ್ಥಿಯಾದ ಪ್ರತಾಪ್ ಭಾನು ಶರ್ಮಾ ಅವರನ್ನು ಸ್ಪರ್ಧೆಗಿಳಿಸಿದೆ. ಹಲವು ವರ್ಷಗಳಿಂದ ಚುನಾವಣಾ ರಾಜಕೀಯದಿಂದ ದೂರವುಳಿದಿದ್ದ ಪ್ರತಾಪ್ ಅವರು ಅಖಾಡಕ್ಕಿಳಿದಿರುವುದು ಸ್ಪರ್ಧೆಯನ್ನು ರಂಗೇರಿಸಿದೆ. 1980 ಮತ್ತು 1984ರಲ್ಲಿ ಈ ಕ್ಷೇತ್ರದಿಂದ ಪ್ರತಾಪ್ ಅವರು ಲೋಕಸಭೆಗೆ ಆಯ್ಕೆಯಾಗಿದ್ದರು. ಇವರು ಸದ್ಯ ಪಕ್ಷದ ಮಧ್ಯಪ್ರದೇಶ ರಾಜ್ಯ ಘಟಕ ಉಪಾಧ್ಯಕ್ಷರಾಗಿದ್ದಾರೆ. ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಆಪ್ತರಾಗಿ ಗುರುತಿಸಿಕೊಂಡಿದ್ದ ಪ್ರತಾಪ್, ಈ ಕ್ಷೇತ್ರದ ಪ್ರಭಾವಿ ನಾಯಕರಲ್ಲೊಬ್ಬರು. ಹಲವು ವರ್ಷಗಳಿಂದ ಬಿಜೆಪಿಯ ಭದ್ರಕೋಟೆಯಾಗಿರುವ ವಿದಿಶಾವನ್ನು ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ, ವಿದೇಶಾಂಗ ವ್ಯವಹಾರಗಳ ಮಾಜಿ ಸಚಿವೆ ಸುಷ್ಮಾ ಸ್ವರಾಜ್ ಅವರೂ ಪ್ರತಿನಿಧಿಸಿದ್ದರು. ಈ ಕಾರಣಕ್ಕಾಗಿಯೇ ಇದು ಬಿಜೆಪಿಯ ಗೆಲುವಿನ ಕ್ಷೇತ್ರ ಎಂದೇ ಬಿಂಬಿತವಾಗಿದೆ. ಚೌಹಾಣ್ ಅವರು ಕೂಡ ಇಲ್ಲಿಂದ ನಾಲ್ಕು ಬಾರಿ ಸಂಸದರಾಗಿ ಆಯ್ಕೆಯಾಗಿದ್ದರು. ಕಳೆದ ಚುನಾವಣೆಯಲ್ಲಿ ಬಿಜೆಪಿಯ ರಮಾಕಾಂತ್ ಭಾರ್ಗವ ಅವರು ಕಾಂಗ್ರೆಸ್‌ನ ಶೈಲೇಂದ್ರ ಪಟೇಲ್ ವಿರುದ್ಧ ಭಾರಿ ಅಂತರದಿಂದ ಗೆದ್ದಿದ್ದರು.

ಮುಖಾಮುಖಿ

ಬೀಕಾನೆರ್ (ರಾಜಸ್ಥಾನ)



ಅರ್ಜುನ್ ರಾಮ್ ಮೇಘವಾಲ್ (ಬಿಜೆಪಿ)

ರಾಜಸ್ಥಾನದ ಬೀಕಾನೆರ್ ಲೋಕಸಭಾ ಕ್ಷೇತ್ರವು 2004 ರಿಂದಲೂ ಬಿಜೆಪಿಯ ಹಿಡಿತದಲ್ಲಿದೆ. ಪರಿಶಿಷ್ಟ ಜಾತಿಯ ಮೀಸಲು ಕ್ಷೇತ್ರವಾದ ಇಲ್ಲಿಂದ ಈ ಬಾರಿಯೂ ಕಮಲ ಪಕ್ಷವು ಕೇಂದ್ರ ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರನ್ನೇ ಕಣಕ್ಕಿಳಿಸಿದೆ. ಕಳೆದ ಚುನಾವಣೆಯಲ್ಲಿ ಇವರು 6,57,743 ಮತಗಳನ್ನು ಪಡೆದು ಪ್ರತಿಸ್ಪರ್ಧಿ ಕಾಂಗ್ರೆಸ್‌ನ ಮದನ್ ಗೋಪಾಲ್ ಮೇಘವಾಲ್ ಅವರನ್ನು ಮಣಿಸಿದ್ದರು. ಈ ಕ್ಷೇತ್ರದಿಂದ ಮೂರು ಬಾರಿ ಗೆದ್ದು ಸಂಸತ್ ಪ್ರವೇಶಿಸಿರುವ ಅರ್ಜುನ್ ರಾಮ್ ಅವರು ಸ್ಥಳೀಯವಾಗಿಯೂ ಸಾಕಷ್ಟು ಪ್ರಭಾವವಿರುವ ರಾಜಕಾರಣಿ. 70 ವರ್ಷದ ಅವರು ಪ್ರಧಾನಿ ನರೇಂದ್ರ ಮೋದಿ ಅವರ ಅತ್ಯಂತ ಆಪ್ತರಲ್ಲಿ ಒಬ್ಬರಾಗಿದ್ದಾರೆ. ಆರ್‌ಎಸ್‌ಎಸ್ ಹಿನ್ನೆಲೆಯ ಇವರು ಬಿಜೆಪಿಯ ಶಿಸ್ತಿನ ಸಿಪಾಯಿ ಎಂದೇ ಗುರುತಿಸಿಕೊಂಡಿದ್ದಾರೆ.

v/s

ಗೋವಿಂದ ರಾಮ್ ಮೇಘವಾಲ್ (ಕಾಂಗ್ರೆಸ್)

ಬೀಕಾನೆರ್ ಕ್ಷೇತ್ರದಲ್ಲಿ ಬಿಜೆಪಿಯ ಪ್ರಬಲ ಅಭ್ಯರ್ಥಿ ವಿರುದ್ಧ ಸೆಣಸಲು ಕಾಂಗ್ರೆಸ್, ಗೋವಿಂದ ರಾಮ್ ಮೇಘವಾಲ್ ಅವರನ್ನು ಅಖಾಡಕ್ಕಿಳಿಸಿದೆ. ರಾಜ್ಯ ಸಚಿವರಾಗಿ ಅನುಭವವಿರುವ ಗೋವಿಂದ ರಾಮ್ ಅವರು ಕೂಡ ಈ ಕ್ಷೇತ್ರದ ಮತದಾರರಿಗೆ ಚಿರಪರಿಚಿತರು.

ಈ ಬಾರಿಯಾದರೂ ಬಿಜೆಪಿ ಅಭ್ಯರ್ಥಿಯ ಗೆಲುವಿನ ಓಟಕ್ಕೆ ಕಡಿವಾಣ ಹಾಕಬೇಕೆಂದು ಕಾಂಗ್ರೆಸ್, 62 ವರ್ಷದ ಅವರನ್ನು ಅಭ್ಯರ್ಥಿಯನ್ನಾಗಿಸಿದೆ. 2009ರಲ್ಲಿ ಇದೇ ಕ್ಷೇತ್ರದಿಂದ ಬಿಎಸ್‌ಪಿ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ ಅವರು, ಅರ್ಜುನ್ ರಾಮ್ ವಿರುದ್ಧ ಪರಾಭವಗೊಂಡಿದ್ದರು. ಅನಂತರ ಬಿಎಸ್‌ಪಿ ತೊರೆದು ಕಾಂಗ್ರೆಸ್‌ಗೆ ಸೇರ್ಪಡೆಗೊಂಡಿದ್ದರು. ಪಕ್ಷದ ರಾಜಸ್ಥಾನ ಘಟಕದ ಉಪಾಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು. ಗೋವಿಂದ ರಾಮ್ ಅವರನ್ನು ಕಣಕ್ಕಿಳಿಸಿರುವುದರಿಂದ ಈ ಕ್ಷೇತ್ರವು ನೇರ ಹಣಾಹಣಿಗೆ ಸಾಕ್ಷಿಯಾಗಲಿದೆ ಎಂದು ವಿಶ್ಲೇಷಿಸಲಾಗಿದೆ.

ಮುಂಬೈ ಧಾರಣೆ

ಶೇಂಗಾ

28-3-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1510 (1510)
ಒಂದು ವಾರದ ಡೆಲಿವರಿ	1505 (1505)
ಸೋಯಾ ಕಚ್ಚಾ	910 (915)
ಪಾಮ್ ವಾರದ ಡೆಲಿವರಿ	928 (932)
ಸೂರ್ಯಕಾಂತಿ ಎಣ್ಣೆ ಕಚ್ಚಾ	880 (895)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹67,100 (66,500)

ಬೆಳ್ಳಿ ಕೆ.ಜಿ ₹74,200 (73,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,123
ಇಂದಿನ ಅಂತ್ಯ	22,326
	▲203
ದಿನದ ಗರಿಷ್ಠ	22,516

ವಿನಿಮಯ ದರ

$ ಡಾಲರ್	83.39
£ ಪೌಂಡ್	105.25
€ ಯೂರೊ	89.88
¥ ಯೆನ್ (100ಕ್ಕೆ)	55

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹440
12 ಕ್ಕೆ	₹60
ಮೈಸೂರು	
100ಕ್ಕೆ	₹440

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1500 (1500)
ಸೋಯಾ (ರಿಫೈನ್ಡ್)	₹950 (960)
ಸೂರ್ಯಕಾಂತಿ (ರಿಫೈನ್ಡ್)	₹945 (957)
ವಾಮೋಲಿನ್	₹930 (934)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹312-444
ದ್ವಿತಳಿ (ಬಿ.ವಿ)	₹341-585

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹7500-11000
ಬೆಂಗಳೂರು	₹10800-11200
ಕೆ. ಆರ್.ಪೇಟೆ	₹9100-9100
ತಿಪಟೂರು	₹8000-9001

ಅದಾನಿ ಸಮೂಹದ ತಾಮ್ರ ಘಟಕ ಕಾರ್ಯಾರಂಭ

ನವದೆಹಲಿ (ಪಿಟಿಐ): ಅದಾನಿ ಸಮೂಹದ ಒಡೆತನಕ್ಕೆ ಸೇರಿದ ವಿಶ್ವದ ಅತಿದೊಡ್ಡ ತಾಮ್ರ ಉತ್ಪಾದನಾ ಘಟಕದ ಮೊದಲ ಹಂತವು ಗುಜರಾತ್‌ನ ಮುಂದ್ರದಲ್ಲಿ ಗುರುವಾರ ಕಾರ್ಯಾರಂಭ ಮಾಡಿದೆ.

ಇದರಿಂದ ತಾಮ್ರದ ಆಮದಿಗಾಗಿ ವಿದೇಶಿ ಅವಲಂಬನೆ ತಗ್ಗಲಿದ್ದು, ಇಂಧನ ವಲಯದ ಪರಿವರ್ತನೆಗೆ ಮತ್ತಷ್ಟು ಉತ್ತೇಜನ ಸಿಗಲಿದೆ ಎಂದು ಹೇಳಲಾಗಿದೆ. ಅದಾನಿ ಎಂಟರ್‌ಪ್ರೈಸಸ್‌ನ ಅಂಗಸಂಸ್ಥೆಯಾದ ಕಚ್ ಕಾಪರ್ ಲಿಮಿಟೆಡ್ ಈ ಘಟಕದ ಉಸ್ತುವಾರಿ ಹೊತ್ತಿದೆ. ಮೊದಲ ಹಂತಕ್ಕೆ ಸುಮಾರು ₹10 ಸಾವಿರ ಕೋಟಿ ಹೂಡಿಕೆ ಮಾಡಿದ್ದು, ವಾರ್ಷಿಕ 5 ಲಕ್ಷ ಟನ್‌ನಷ್ಟು ಸಂಸ್ಕರಿತ ತಾಮ್ರವನ್ನು ಉತ್ಪಾದಿಸುವ ಗುರಿ ಹೊಂದಲಾಗಿದೆ ಎಂದು ಕಂಪನಿ ತಿಳಿಸಿದೆ.

2029ರ ವೇಳೆಗೆ ಎರಡನೇ ಹಂತವು ಪೂರ್ಣಗೊಳ್ಳಲಿದ್ದು, ಉತ್ಪಾದನಾ ಸಾಮರ್ಥ್ಯವನ್ನು ಒಂದು ದಶಲಕ್ಷ ಟನ್‌ಗೆ ವಿಸ್ತರಿಸುವ ಗುರಿ ಹೊಂದಲಾಗಿದೆ. ಈ ಘಟಕದಿಂದ ನೇರವಾಗಿ ಎರಡು ಸಾವಿರ ಹಾಗೂ ಪರೋಕ್ಷವಾಗಿ ಐದು ಸಾವಿರ ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದು ಹೇಳಿದೆ. ಪಳೆಯುಳಿಕೆ ಇಂಧನಗಳ ಪರಿವರ್ತನೆಯಲ್ಲಿ ತಾಮ್ರದ ಪಾತ್ರ ನಿರ್ಣಾಯಕವಾಗಿದೆ. ಎಲೆಕ್ಟ್ರಿಕ್ ವಾಹನಗಳು, ಚಾರ್ಜಿಂಗ್ ಸ್ಟೇಷನ್, ಸೌರ, ಪವನ ವಿದ್ಯುತ್ ಉತ್ಪತ್ತಿ ಮತ್ತು ಬ್ಯಾಟರಿ ತಯಾರಿಕೆಯಲ್ಲಿ ಈ ಲೋಹದ ಅಗತ್ಯ ಹೆಚ್ಚಿದೆ.

ಹೂಡಿಕೆದಾರರಿಗೆ ಶುಕ್ರದೆಸೆ ತಂದ 2023–24ನೇ ಆರ್ಥಿಕ ವರ್ಷ ● ಸೆನ್ಸೆಕ್ಸ್ ಶೇ 24.85ರಷ್ಟು ಏರಿಕೆ

₹128 ಲಕ್ಷ ಕೋಟಿ ಸಂಪತ್ತು ಗಳಿಕೆ

ನವದೆಹಲಿ (ಪಿಟಿಐ): 2023–24ನೇ ಆರ್ಥಿಕ ವರ್ಷವು ಹೂಡಿಕೆದಾರರಿಗೆ ಶುಕ್ರದೆಸೆ ತಂದಿದ್ದು, ಅವರ ಸಂಪತ್ತು ₹128.77 ಲಕ್ಷ ಕೋಟಿಯಷ್ಟು ವೃದ್ಧಿಸಿದೆ.

2022–23ನೇ ಹಣಕಾಸು ವರ್ಷದಲ್ಲಿ ಭಾರತೀಯ ಷೇರುಪೇಟೆಗಳ ಹೊಳಪು ಮಂದವಾಗಿತ್ತು. ಹೂಡಿಕೆದಾರರಿಗೆ ನಿರೀಕ್ಷಿತಮಟ್ಟದಲ್ಲಿ ಆದಾಯ ಲಭಿಸಿರಲಿಲ್ಲ.

‘ಆದರೆ, ಈ ಹಣಕಾಸು ವರ್ಷವು ಆದಾಯದ ಏರಿಕೆಯ ಜೊತೆಗೆ ದೇಶದ ಆರ್ಥಿಕ ಬೆಳವಣಿಗೆಗೂ ಕೊಡುಗೆ ನೀಡಿದೆ. ಹೂಡಿಕೆಯ ಒಳಹರಿವು ಹೆಚ್ಚಿದ್ದು ಕಾರ್ಪೊರೇಟ್ ವಲಯದ ಆದಾಯ ಹೆಚ್ಚಳವೂ ಆಶಾದಾಯಕ ವಾಗಿದೆ’ ಎಂದು ಮಾರುಕಟ್ಟೆ ವಿಶ್ಲೇಷಕರು ಹೇಳಿದ್ದಾರೆ.

2023–24ರ ಹಣಕಾಸು ವರ್ಷದಲ್ಲಿ ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 14,659 ಅಂಶ (ಶೇ 24.85) ಏರಿಕೆ ಕಂಡಿದೆ. ಮಾರ್ಚ್ 7ರಂದು 74,245 ಅಂಶಗಳಿಗೆ ಮುಟ್ಟುವ ಮೂಲಕ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ತಲುಪಿತ್ತು.

‘ಜಾಗತಿಕ ಆರ್ಥಿಕ ಹಿಂಜರಿಕೆ ಆತಂಕ, ಹಣದುಬ್ಬರ ಮತ್ತು ಬಡ್ಡಿದರ ಏರಿಕೆಯ ನಡುವೆಯೂ ಷೇರುಪೇಟೆಗಳು ಚೇತರಿಕೆ ಕಂಡಿವೆ. ಜಾಗತಿಕ ಬಿಕ್ಕಟ್ಟಿನಿಂದಾಗಿ ಕೆಲವೊಮ್ಮೆ ಹಿನ್ನಡೆ ಅನುಭವಿಸಿದರೂ ಮತ್ತೆ ದೃಢತೆ ಸಾಧಿಸಿವೆ’ ಎಂದು ಸ್ವಸ್ತಿಕ್ ಇನ್‌ವೆಸ್ಟ್‌ಮಂಟ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಸುನಿಲ್ ನ್ಯಾತಿ ಹೇಳಿದ್ದಾರೆ.

ಬಿಎಸ್‌ಇಯಲ್ಲಿ ನೋಂದಾಯಿತ ಕಂಪನಿಗಳ ಒಟ್ಟು ಮಾರುಕಟ್ಟೆ ಬಂಡವಾಳವು (ಎಂ–ಕ್ಯಾಪ್) ₹1.28 ಲಕ್ಷ ಕೋಟಿಯಿಂದ ₹3.86 ಲಕ್ಷ ಕೋಟಿಗೆ ಹೆಚ್ಚಳವಾಗಿದೆ.

ಮಾರ್ಚ್ 20ರಂದು ಈ ಕಂಪನಿಗಳ ಒಟ್ಟು ಎಂ–ಕ್ಯಾಪ್ ₹394 ಲಕ್ಷ ಕೋಟಿಗೆ ಮುಟ್ಟಿತ್ತು. ರಿಲಯನ್ಸ್ ಇಂಡಸ್ಟ್ರೀಸ್ ದೇಶೀಯವಾಗಿ ಅತ್ಯಂತ ಮೌಲ್ಯಯುತ ಕಂಪನಿ ಎಂಬ ಹೆಗ್ಗಳಿಕೆ ಪಾತ್ರವಾಗಿದೆ.

2022–23ರಲ್ಲಿ ಬಿಎಸ್‌ಇ ಗುಚ್ಛದಲ್ಲಿರುವ ಕಂಪನಿಗಳ ಒಟ್ಟು ಎಂ–ಕ್ಯಾಪ್ ₹5.86 ಲಕ್ಷ ಕೋಟಿಯಿಂದ ₹2.58 ಲಕ್ಷ ಕೋಟಿಗೆ ಇಳಿಕೆಯಾಗಿತ್ತು. ಆ ವರ್ಷ ಸೆನ್ಸೆಕ್ಸ್ 423 ಅಂಶಗಳಷ್ಟೇ (ಶೇ 0.72) ಏರಿಕೆ ಕಂಡಿತ್ತು.

ಕಂಪನಿಗಳ ಎಂ–ಕ್ಯಾಪ್ (₹ ಲಕ್ಷ ಕೋಟಿಗಳಲ್ಲಿ)

ರಿಲಯನ್ಸ್ ಇಂಡಸ್ಟ್ರೀಸ್	20,14,010
ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್	14,05,102
ಎಚ್‌ಡಿಎಫ್‌ಸಿ ಬ್ಯಾಂಕ್	11,00,184
ಐಸಿಐಸಿಐ ಬ್ಯಾಂಕ್	7,69,472
ಭಾರ್ತಿ ಏರ್‌ಟೆಲ್	6,99,081

ಕೊನೆಯ ದಿನವೂ ಗೂಳಿ ಓಟ ಅಬಾಧಿತ

ಮುಂಬೈ (ಪಿಟಿಐ): ಇಂಧನ, ಆಟೊ ಮತ್ತು ಬ್ಯಾಂಕಿಂಗ್ ಷೇರುಗಳ ಖರೀದಿ ಹೆಚ್ಚಳದಿಂದ ಷೇರುಪೇಟೆಯಲ್ಲಿ 2023–24ನೇ ಹಣಕಾಸು ವರ್ಷದ ಕೊನೆಯ ವಹಿವಾಟಿನ ದಿನವಾದ ಗುರುವಾರವೂ ಗೂಳಿ ಓಟಕ್ಕೆ ಉತ್ತೇಜನ ಸಿಕ್ಕಿತು.

ಸೆನ್ಸೆಕ್ಸ್ 655 ಅಂಶ (ಶೇ 0.90ರಷ್ಟು) ಏರಿಕೆ ಕಂಡು 73,651 ಅಂಶಗಳಲ್ಲಿ ವಹಿವಾಟನ್ನು ಅಂತ್ಯಗೊಳಿಸಿತು. ದಿನದ ವಹಿವಾಟಿನಲ್ಲಿ 1,194 ಅಂಶ ಏರಿಕೆಯಾಗಿ 74,190 ಅಂಶಗಳಿಗೆ ತಲುಪಿತ್ತು.

ನಿಫ್ಟಿ 203 ಅಂಶ (ಶೇ 0.92) ಏರಿಕೆ ಕಂಡು, 22,326 ಅಂಶಗಳಲ್ಲಿ ಸ್ಥಿರಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿರುವ ಬಜಾಜ್ ಫಿನ್‌ಸರ್ವ್ ಹಾಗೂ ಬಜಾಜ್ ಫೈನಾನ್ಸ್ ಷೇರಿನ ಮೌಲ್ಯ ಕ್ರಮವಾಗಿ ಶೇ 4ರಷ್ಟು ಹಾಗೂ ಶೇ 3ರಷ್ಟು ಜಿಗಿತ ಕಂಡಿದೆ.

ಬಜಾಜ್ ಹೌಸಿಂಗ್ ಫೈನಾನ್ಸ್ ಆರಂಭಿಕ ಸಾರ್ವಜನಿಕ ಕೊಡುಗೆಗೆ (ಐಪಿಒ) ಮುಂದಾಗಿದೆ ಎಂಬ ಸುದ್ದಿಯ ಬೆನ್ನಲ್ಲೇ ಈ ಎರಡು ಕಂಪನಿಗಳ ಷೇರಿನ ಮೌಲ್ಯ ಏರಿಕೆಯಾಗಿದೆ.

ನೆಸ್ಲೆ, ಎಸ್‌ಬಿಐ, ಪವರ್ ಗ್ರಿಡ್, ಟಾಟಾ ಸ್ಟೀಲ್, ಲಾರ್ಸನ್ ಆ್ಯಂಡ್ ಟೂಬ್ರೊ, ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯ ಷೇರಿನ ಮೌಲ್ಯ ಗಳಿಕೆ ಕಂಡಿವೆ. ಟೆಕ್ ಮಹೀಂದ್ರ, ಏಕ್ಸಿಸ್ ಬ್ಯಾಂಕ್ ಹಾಗೂ ರಿಲಯನ್ಸ್ ಇಂಡಸ್ಟ್ರೀಸ್ ಷೇರುಗಳು ಕುಸಿದಿವೆ. ಶಾಂಘೈ ಮತ್ತು ಹಾಂಗ್‌ಕಾಂಗ್ ಮಾರುಕಟ್ಟೆಯಲ್ಲಿ ಸಕಾರಾತ್ಮಕ ವಹಿವಾಟು ನಡೆದರೆ, ಟೋಕಿಯೊ ಮತ್ತು ಸಿಯೋಲ್ ಮಾರುಕಟ್ಟೆ ಇಳಿಕೆಯಲ್ಲಿ ವಹಿವಾಟನ್ನು ಮುಗಿಸಿವೆ.

ಶುಕ್ರವಾರ ‘ಗುಡ್ ಫ್ರೈಡೆ’ ಇರುವುದರಿಂದ ಷೇರುಪೇಟೆಗೆ ರಜೆ ಇರಲಿದೆ.

ಚಿನ್ನದ ದರ ₹350, ಬೆಳ್ಳಿ ₹200 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಚಿನ್ನ ಮತ್ತು ಬೆಳ್ಳಿ ದರ ಏರಿಕೆ ಆಗಿದೆ.

ಚಿನ್ನದ ದರವು 10 ಗ್ರಾಂಗೆ ₹350 ಏರಿಕೆಯಾಗಿ, ₹67,350ರಂತೆ ಮಾರಾಟವಾಯಿತು. ಬೆಳ್ಳಿ ಧಾರಣೆಯು ಪ್ರತಿ ಕೆ.ಜಿಗೆ ₹200 ಹೆಚ್ಚಳವಾಗಿದೆ. ಸದ್ಯ ಒಂದು ಕೆ.ಜಿಗೆ ₹77,450 ದರ ಇದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಒಂದು ಔನ್ಸ್‌ಗೆ (28.34 ಗ್ರಾಂ) ಕ್ರಮವಾಗಿ 2,194 ಡಾಲರ್ ಮತ್ತು 24.55 ಡಾಲರ್‌ನಂತೆ ಮಾರಾಟವಾಗಿವೆ.

ಸಂಕ್ಷಿಪ್ತ ಸುದ್ದಿ

ಟೊಯೊಟ ವಾಹನ ಬೆಲೆ ಹೆಚ್ಚಳ

ನವದೆಹಲಿ (ಪಿಟಿಐ): ದೇಶದ ಪ್ರಮುಖ ವಾಹನ ತಯಾರಿಕಾ ಕಂಪನಿಯಾದ ಟೊಯೊಟ ಕಿರ್ಲೋಸ್ಕರ್ ಮೋಟರ್ (ಟಿಕೆಎಂ) ತನ್ನ ಆಯ್ದ ಶ್ರೇಣಿಯ ಕಾರುಗಳ ಬೆಲೆಯನ್ನು ಶೇ 1ರಷ್ಟು ಹೆಚ್ಚಿಸಲು ನಿರ್ಧರಿಸಿದೆ.

ಏಪ್ರಿಲ್ 1ರಿಂದ ಈ ಬೆಲೆ ಹೆಚ್ಚಳ ಜಾರಿಗೆ ಬರಲಿದೆ.

‘ತಯಾರಿಕಾ ವೆಚ್ಚದ ಏರಿಕೆ ಹಾಗೂ ಕಾರ್ಯಾಚರಣೆಯ ಖರ್ಚನ್ನು ಸರಿದೂಗಿಸಲು ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಕಂಪನಿಯು ಗುರುವಾರ ತಿಳಿಸಿದೆ.

ಟೊಯೊಟದ ಹ್ಯಾಚ್‌ಬ್ಯಾಕ್ ಕಾರು ‘ಗ್ಲಾನ್ಜಾ’ದ ಎಕ್ಸ್‌ ಷೋರೂಂ ಬೆಲೆಯು ₹6.86 ಲಕ್ಷ ಇದ್ದರೆ, ಎಸ್‌ಯುವಿ ಫಾರ್ಚುನರ್ ಕಾರಿನ ಎಕ್ಸ್‌ ಷೋರೂಂ ಬೆಲೆಯು ₹51.44 ಲಕ್ಷ ಇದೆ.

ಸೊನಾಟಾ ಫೈನಾನ್ಸ್ ಖರೀದಿಸಿದ ಕೋಟಕ್ ಬ್ಯಾಂಕ್

ನವದೆಹಲಿ (ಪಿಟಿಐ): ಸೊನಾಟಾ ಫೈನಾನ್ಸ್ ಪ್ರೈವೆಟ್ ಲಿಮಿಟೆಡ್ ಅನ್ನು ಕೋಟಕ್ ಮಹೀಂದ್ರ ಬ್ಯಾಂಕ್, ಒಟ್ಟು ₹537 ಕೋಟಿಗೆ ಖರೀದಿಸಿದೆ.

ಬ್ಯಾಂಕೇತರ ಹಣಕಾಸು ಕಂಪನಿಯಾದ ಸೊನಾಟಾ, ದೇಶದ 10 ರಾಜ್ಯಗಳಲ್ಲಿ ಒಟ್ಟು 549 ಶಾಖೆಗಳನ್ನು ಹೊಂದಿದೆ. ಕಳೆದ ವರ್ಷದ ಡಿಸೆಂಬರ್ ಅಂತ್ಯಕ್ಕೆ ಕಂಪನಿಯು ನಿರ್ವಹಿಸುವ ಸಂಪತ್ತಿನ ಮೊತ್ತವು (ಎಯುಎಂ) ₹2,620 ಕೋಟಿ ಇದೆ.

‘ಸೊನಾಟಾ ಕಂಪನಿಯ ಸ್ವಾಧೀನ ಪ್ರಕ್ರಿಯೆಯು ಪೂರ್ಣಗೊಂಡಿದೆ’ ಎಂದು ಕೋಟಕ್ ಬ್ಯಾಂಕ್, ಷೇರುಪೇಟೆಗೆ ತಿಳಿಸಿದೆ.

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹178.50
ಆರ್‌ಎಸ್‌ಎಸ್-5	₹171.50
ರಬ್ ಲಾಟ್	₹161.50

(ಪ್ರತಿ ಕೆ.ಜಿಗೆ)

‘ಏಪ್ರಿಲ್ 1ರಂದು ₹2 ಸಾವಿರ ನೋಟು ವಿನಿಮಯವಿಲ್ಲ’

ಮುಂಬೈ (ಪಿಟಿಐ): ಏಪ್ರಿಲ್ 1ರಂದು ಬ್ಯಾಂಕ್‌ಗಳು ವಾರ್ಷಿಕ ಲೆಕ್ಕಗಳನ್ನು ಪೂರ್ಣಗೊಳಿಸುತ್ತವೆ. ಅಂದು ಬ್ಯಾಂಕ್‌ಗಳಿಗೆ ಸಾರ್ವಜನಿಕರಿಗೆ ರಜೆ ಇರುತ್ತದೆ. ಹಾಗಾಗಿ, ಅಂದು ಮಾತ್ರ ₹2,000 ಮುಖಬೆಲೆಯ ನೋಟುಗಳ ವಿನಿಮಯ ಇರುವುದಿಲ್ಲ. ಏಪ್ರಿಲ್ 2ರಿಂದ ಎಂದಿನಂತೆ ವಿನಿಮಯ ಕಾರ್ಯಾಚರಣೆ ಮುಂದುವರಿಯಲಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಗುರುವಾರ ತಿಳಿಸಿದೆ.

ಫೆಬ್ರುವರಿ 29ರ ಅಂತ್ಯಕ್ಕೆ ₹2 ಸಾವಿರ ಮುಖಬೆಲೆಯ ಶೇ97.62ರಷ್ಟು ನೋಟುಗಳು ಬ್ಯಾಂಕ್‌ಗಳಿಗೆ ಮರಳಿದ್ದರೆ, ₹8,470 ಕೋಟಿ ಮೌಲ್ಯದ ನೋಟುಗಳು ಇನ್ನೂ ಜನರ ಬಳಿ ಇವೆ ಎಂದು ತಿಳಿಸಿದೆ.

ಬ್ಯಾಂಕ್‌ಗಳಲ್ಲಿ ಠೇವಣಿ ಇಡಲು ಹಾಗೂ ಬೇರೆ ಮುಖಬೆಲೆಯ ನೋಟುಗಳೊಂದಿಗೆ ಬದಲಾಯಿಸಿ ಕೊಳ್ಳುವುದಕ್ಕೆ 19 ಪ್ರಾದೇಶಿಕ ಕಚೇರಿಗಳಲ್ಲಿ ಅವಕಾಶ ಕಲ್ಪಿಸಲಾಗಿದೆ. ಅಂಚೆ ಮೂಲಕವೂ ಈ ಕಚೇರಿಗಳಿಗೆ ನೋಟುಗಳನ್ನು ಕಳುಹಿಸಿ ಬದಲಾಯಿಸಿಕೊಳ್ಳಲು ಅವಕಾಶವಿದೆ ಎಂದು ಆರ್‌ಬಿಐ ತಿಳಿಸಿದೆ.

ಅದಾನಿ ಕಂಪನಿಯ ಷೇರು ಖರೀದಿಸಿದ ಮುಕೇಶ್ ಅಂಬಾನಿ

ನವದೆಹಲಿ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್‌ನ ಮುಖ್ಯಸ್ಥ ಮುಕೇಶ್ ಅಂಬಾನಿ ಅವರು, ಉದ್ಯಮಿ ಗೌತಮ್ ಅದಾನಿ ಸಮೂಹಕ್ಕೆ ಸೇರಿದ ಮಧ್ಯಪ್ರದೇಶದ ಮಹಾನ್ ಎನರ್ಜಿ ಲಿಮಿಟೆಡ್‌ನಲ್ಲಿ ಶೇ 26ರಷ್ಟು ಷೇರುಗಳನ್ನು ಖರೀದಿಸಿದ್ದಾರೆ.

ಆ ಮೂಲಕ ಉದ್ಯಮ ವಲಯದ ಪ್ರತಿಸ್ಪರ್ಧಿಗಳಾದ ಈ ಇಬ್ಬರು ಇಂಧನ ಕ್ಷೇತ್ರದಲ್ಲಿ ಒಟ್ಟಾಗಿ ಕೆಲಸ ಮಾಡಲಿದ್ದಾರೆ. ಮಹಾನ್ ಎನರ್ಜಿಯು ಅದಾನಿ ಪವರ್ ಲಿಮಿಟೆಡ್‌ನ ಅಂಗಸಂಸ್ಥೆಯಾಗಿದೆ.

₹10 ಮುಖಬೆಲೆಯ ₹50 ಕೋಟಿ ಮೌಲ್ಯದ ಐದು ಕೋಟಿ ಷೇರುಗಳನ್ನು ರಿಲಯನ್ಸ್ ಇಂಡಸ್ಟ್ರೀಸ್ ಖರೀದಿಸಿದೆ. 500 ಮೆಗಾವಾಟ್ ವಿದ್ಯುತ್ ಬಳಕೆಗೆ ಸಂಬಂಧಿಸಿದಂತೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಎರಡೂ ಕಂಪನಿಗಳು ಪ್ರತ್ಯೇಕವಾಗಿ ಷೇರುಪೇಟೆಗೆ ತಿಳಿಸಿವೆ.

ತೇಜಸ್ ಎಂಕೆ1ಎ ಲಘು ಯುದ್ಧ ವಿಮಾನ ಹಾರಾಟ ಯಶಸ್ವಿ

ಬೆಂಗಳೂರು (ಪಿಟಿಐ): ತೇಜಸ್ ಎಂಕೆ1ಎ ಸರಣಿಯ ಮೊದಲ ಲಘು ಯುದ್ಧ ವಿಮಾನವು (ಎಲ್‌ಎ5033) ಇಲ್ಲಿನ ಎಚ್‌ಎಎಲ್ ವಾಯುನೆಲೆಯಲ್ಲಿ ಗುರುವಾರ ತನ್ನ ಚೊಚ್ಚಲ ಹಾರಾಟವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿತು.

ಸರ್ಕಾರಿ ಸ್ವಾಮ್ಯದ ಹಿಂದೂಸ್ತಾನ್ ಏರೊನಾಟಿಕ್ಸ್ ಲಿಮಿಟೆಡ್‌ನಿಂದ ದೇಶೀಯವಾಗಿ ಅಭಿವೃದ್ಧಿಪಡಿಸಿರುವ ಈ ವಿಮಾನವು, 18 ನಿಮಿಷಗಳ ಕಾಲ ಆಕಾಶದಲ್ಲಿ ಹಾರಾಟ ನಡೆಸಿತು. ಚೀಫ್ ಟೆಸ್ಟ್ ಪೈಲಟ್ ಗ್ರೂಪ್ ಕ್ಯಾಪ್ಟನ್ ಕೆ.ಕೆ. ವೇಣುಗೋಪಾಲ್ (ನಿವೃತ್ತ) ವಿಮಾನದ ನಿಯಂತ್ರಣ ಕಾರ್ಯಾಚರಣೆಯನ್ನು ನಡೆಸಿದರು.

‘2021ರ ಫೆಬ್ರುವರಿಯಲ್ಲಿ ಲಘು ಯುದ್ಧ ವಿಮಾನ ತಯಾರಿಕೆ ಸಂಬಂಧ ಎಚ್‌ಎಎಲ್ ಮತ್ತು ರಕ್ಷಣಾ ಸಚಿವಾಲಯದ ನಡುವೆ ಗುತ್ತಿಗೆ ಒಪ್ಪಂದಕ್ಕೆ ಅಂಕಿತ ಹಾಕಲಾಗಿತ್ತು. ಇದಕ್ಕೆ ಅನುಗುಣವಾಗಿಯೇ ಜಾಗತಿಕ ಸವಾಲುಗಳ ನಡುವೆ ವಿಮಾನಗಳ ತಯಾರಿಕಾ ವಿನ್ಯಾಸ ಮತ್ತು ಅಭಿವೃದ್ಧಿಯಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸಲಾಗಿದೆ’ ಎಂದು ಎಚ್‌ಎಎಲ್‌ನ ಮುಖ್ಯ ವ್ಯವಸ್ಥಾಪಕ ನಿರ್ದೇಶಕ ಸಿ.ಬಿ. ಅನಂತಕೃಷ್ಣನ್ ಹೇಳಿದ್ದಾರೆ.

‘ಭಾರತೀಯ ವಾಯುಪಡೆಗೆ ತೇಜಸ್ ಎಂಕೆ1ಎ ಸರಣಿಯ ವಿಮಾನಗಳನ್ನು ಪ್ರದರ್ಶಿಸುವುದನ್ನು ಇಡೀ ರಾಷ್ಟ್ರವೇ ಎದುರು ನೋಡುತ್ತಿದೆ. ಶೀಘ್ರವೇ, ಮತ್ತಷ್ಟು ವಿಮಾನಗಳನ್ನು ವಾಯುಪಡೆಗೆ ಸೇರ್ಪಡೆಗೊಳ್ಳಲಿವೆ. ಎಚ್‌ಎಎಲ್‌ನ ಈ ಸಾಧನೆಯ ಹಿಂದೆ ರಕ್ಷಣಾ ಸಚಿವಾಲಯ, ಐಎಎಫ್, ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಹಾಗೂ ಖಾಸಗಿ ಸಂಸ್ಥೆಗಳ ಕೊಡುಗೆ ದೊಡ್ಡದಿದೆ. ಅವುಗಳ ಸೇವೆಗೆ ಆಭಾರಿಯಾಗಿದ್ದೇವೆ’ ಎಂದು ಹೇಳಿದ್ದಾರೆ.

ಈ ಲಘು ಯುದ್ಧ ವಿಮಾನವು ಸುಧಾರಿತ ಎಲೆಕ್ಟ್ರಾನಿಕ್ ರಾಡಾರ್, ಯುದ್ಧ ಸಂವಹನ ವ್ಯವಸ್ಥೆ ಹಾಗೂ ಸುಧಾರಿತ ನಿರ್ವಹಣಾ ವ್ಯವಸ್ಥೆಯನ್ನು ಒಳಗೊಂಡಿದೆ. ಸರ್ವ ಋತುವಿನಲ್ಲೂ ಬಳಸಬಹುದಾದ ಹಾಗೂ ಬಹುವಿಧದ ಕಾರ್ಯಕ್ಷಮತೆ ಹೊಂದಿರುವ 4.5 ತಲೆಮಾರಿನ ವಿಮಾನ ಇದಾಗಿದೆ ಎಂದು ವಿವರಿಸಿದ್ದಾರೆ.

ತೇಜಸ್ ಎಂಕೆ1ಎ ಸರಣಿಯ ಲಘು ಯುದ್ಧ ವಿಮಾನ –ಪಿಟಿಐ ಚಿತ್ರ

ಮಾರುಕಟ್ಟೆ ಧಾರಣೆ

ಅಡಿಕೆ (ಬಿಯಟ್ಟಳ)		
ಕೋಕ	18000-28500	
ಹೊಸದು	28500-36500	
ಚಿತ್ರದುರ್ಗ		
ಆಪಿ	47229-47669	
ಚಿಟ್ಟೆ	33619-34079	
ಕೆಂಪುಗೋಟು	28400-28800	
ರಾಶಿ	46739-47189	
ಪುತ್ತೂರು		
ಕೋಕ	11000-26000	
ಹೊಸದು	26500-36500	
ಸಿದ್ದಾಪುರ		
ಬಿಳೆಗೋಟು	25899-28899	
ಚಾಲಿ	35299-36255	
ಕೋಕ	24599-29000	
ಬಿಳೆಗೋಟು	32899-35849	
ಕೆಂಪುಗೋಟು	28989-31800	
ರಾಶಿ	43099-46099	
ತಟ್ಟಿಬೆಟ್ಟೆ	38099-41100	
ಶಿರಸಿ		
ಚಿಟ್ಟೆ	34899-43861	
ಬಿಳೆಗೋಟು	21899-29689	
ಚಾಲಿ	31018-35691	
ಕೆಂಪುಗೋಟು	22169-33899	
ರಾಶಿ	42289-47301	
ಯಲ್ಲಾಪುರ		
ಅಪಿ	55133-68699	
ಬಿಳೆಗೋಟು	18899-32399	
ಚಾಲಿ	35777-38319	
ಕೋಕ	14899-30899	
ಹೊಸಚಾಲಿ	32419-35299	
ಕೆಂಪುಗೋಟು	26899-34699	
ರಾಶಿ	43560-53629	
ತಟ್ಟಿಬೆಟ್ಟೆ	36050-43289	

ಐಐಎಂಬಿ: ₹32.5 ಲಕ್ಷ ವೇತನದ ಉದ್ಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನ ‘ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ (ಐಐಎಂಬಿ) 516 ವಿದ್ಯಾರ್ಥಿಗಳು ಜಾಗತಿಕ ಕಂಪನಿಗಳಿಂದ ವಾರ್ಷಿಕ ತಲಾ ₹32.5 ಲಕ್ಷ ಮೊತ್ತದ ಪ್ಯಾಕೇಜ್ ಒಳಗೊಂಡ ಉದ್ಯೋಗ ಆಹ್ವಾನ ಪಡೆದಿದ್ದಾರೆ.

163 ಸಂಸ್ಥೆಗಳಿಂದ ಉದ್ಯೋಗ ಆದೇಶಗಳು ಬಂದಿವೆ. ಇನ್ಫೊಸಿಸ್ ಕನ್ಸಲ್ಟಿಂಗ್, ಸ್ಟ್ರಾಟಜಿ ಆ್ಯಂಡ್ ಮಿಡಲ್ ಈಸ್ಟ್, ಜಿಂದಾಲ್ ಸ್ಟೀಲ್, ಟ್ರಾನ್ಸ್ ಫಾರ್ಮೇಷನ್‌ಎಕ್ಸ್, ಐವೈ ಪಾರ್ಥೆನಾನ್ ಸಿಂಗಪುರ, ಜೆಪಿ ಮೋರ್ಗನ್ ಚೇಸ್ ಲಂಡನ್, ಹೆಲ್ತ್ ಸಿಟಿ ಕೇಮನ್ ಐಲ್ಯಾಂಡ್, ಫಸ್ಟ್ ರಿಟೇಲಿಂಗ್, ಜಪಾನ್, ಲ್ಯಾಂಡ್‌ಮಾರ್ಕ್ ಗ್ರೂಪ್, ಮಿಡಲ್ ಈಸ್ಟ್ ಕಂಪನಿಗಳಲ್ಲಿ 29 ವಿದ್ಯಾರ್ಥಿಗಳು ಉದ್ಯೋಗ ಪಡೆದಿದ್ದಾರೆ ಎಂದು ಐಐಎಂಬಿ ಕೆರಿಯರ್ ಡೆವಲಪ್‌ಮೆಂಟ್ ಸರ್ವಿಸಸ್ ಅಧ್ಯಕ್ಷ ಗಣೇಶ್ ಎನ್. ಪ್ರಭು ತಿಳಿಸಿದ್ದಾರೆ.

ಬಾಲ್ಟಿಮೋರ್ ದುರಂತ: ಅಧಿಕಾರಿಗಳೊಂದಿಗೆ ಸಂಪರ್ಕ

ನವದೆಹಲಿ (ಪಿಟಿಐ): ‘ಇಲ್ಲಿಗೆ ಅಮೆರಿಕದ ಬಾಲ್ಟಿಮೋರ್‌ನಲ್ಲಿ ಸೇತುವೆಗೆ ಡಿಕ್ಕಿ ಹೊಡೆದ ‘ಡಾಲಿ’ ಹಡಗಿನ ಸರಕು ಸಾಗಣೆ ಹಡಗಿನಲ್ಲಿದ್ದ 20 ಭಾರತೀಯ ಸಿಬ್ಬಂದಿ ಮತ್ತು ಸ್ಥಳೀಯ ಅಧಿಕಾರಿಗಳ ಜತೆಗೆ ಭಾರತೀಯ ರಾಯಭಾರ ಕಚೇರಿಯು ನಿಕಟ ಸಂಪರ್ಕದಲ್ಲಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಬಾಲ್ಟಿಮೋರ್‌ನ ಪಟಾಪ್ಸ್ಕೊ ನದಿಯ ಮೇಲಿನ 2.6 ಕಿ.ಮೀ ಉದ್ದದ ‘ಫ್ರಾನ್ಸಿಸ್ ಸ್ಕಾಟ್ ಕೀ’ ನಾಲ್ಕು ಲೇನ್ ಸೇತುವೆಗೆ ಮಂಗಳವಾರ ಮುಂಜಾನೆ ‘ಡಾಲಿ’ ಹಡಗು ಡಿಕ್ಕಿ ಹೊಡೆದಿತ್ತು. ಇದರ ಪರಿಣಾಮ ಸೇತುವೆ ಕುಸಿದಿತ್ತು. ‘ನಮ್ಮ ಮಾಹಿತಿ ಪ್ರಕಾರ ಹಡಗಿನ 21 ಸಿಬ್ಬಂದಿ ಪೈಕಿ 20 ಮಂದಿ ಭಾರತೀಯರು. ಅವರೆಲ್ಲರೂ ಆರೋಗ್ಯವಾಗಿದ್ದಾರೆ. ಒಬ್ಬರಿಗೆ ಗಾಯವಾಗಿದ್ದು, ಅವರು ಚೇತರಿಸಿಕೊಂಡಿದ್ದಾರೆ’ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ.

‘ಜೈಶಂಕರ್ ಭೇಟಿ: ಭಾರತ, ಮಲೇಷ್ಯಾ ಬಾಂಧವ್ಯ ದೃಢ’

ಕ್ವಾಲಾಲಂಪುರ (ಪಿಟಿಐ): ‘ಭಾರತ -ಮಲೇಷ್ಯಾ ನಡುವೆ ದ್ವಿಪಕ್ಷೀಯ ಬಾಂಧವ್ಯ ಬಲಪಡಿಸಲು ಈಚೆಗೆ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅ ದೇಶದ ಉನ್ನತ ನಾಯಕರ ಜೊತೆಗೆ ಈಚೆಗೆ ನಡೆಸಿದ ಚರ್ಚೆ ನೆರವಾಗಿದೆ’ ಎಂದು ವಿದೇಶಾಂಗ ಸಚಿವಾಲಯ ಹೇಳಿದೆ.

ಎಸ್.ಜೈಶಂಕರ್

ಜೈಶಂಕರ್ ಅವರು ಸಿಂಗಪುರ, ಫಿಲಿಪ್ಪೀನ್ಸ್, ಮಲೇಷ್ಯಾಗೆ ಇತ್ತೀಚೆಗೆ ಪ್ರವಾಸ ಕೈಗೊಂಡಿದ್ದರು. ಇದರ ಭಾಗವಾಗಿ ಮಾರ್ಚ್ 27ರಂದ ಎರಡು ದಿನ ಕ್ವಾಲಾಲಂಪುರಕ್ಕೆ ಭೇಟಿ ನೀಡಿದ್ದರು. ಮಲೇಷ್ಯಾ ಪ್ರಧಾನಿ ಅನ್ವರ್ ಬಿನ್ ಇಬ್ರಾಹಿಂ, ಇತರ ನಾಯಕರೊಂದಿಗೆ ಚರ್ಚಿಸಿದ್ದರು. ವಿದೇಶಾಂಗ ಸಚಿವಾಲಯ ಈ ಸಂಬಂಧ ಹೇಳಿಕೆ ನೀಡಿದೆ. ‘ಭಾರತದ ಐಟಿ ಶಾಖೆಯನ್ನು ಮಲೇಷ್ಯಾದಲ್ಲಿ ಆರಂಭಿಸಲು ಅಗತ್ಯ ಸಹಕಾರ ನೀಡುವ ಭರವಸೆಯನ್ನು ಭೇಟಿಯ ಸಂದರ್ಭದಲ್ಲಿ ಅನ್ವರ್ ಅವರು ನೀಡಿದ್ದಾರೆ’ ಎಂದೂ ಉಲ್ಲೇಖಿಸಿದೆ.

‘ಮಲೇಷ್ಯಾದಲ್ಲಿ ಅಕ್ಕಿ ಕೊರತೆಯಿದ್ದಾಗ ಭಾರತ ದಿಂದ ಹೆಚ್ಚಿನ ಪ್ರಮಾಣದಲ್ಲಿ ಅಕ್ಕಿ ಆಮದಿಗೆ ಪ್ರಧಾನಿ ನರೇಂದ್ರ ಮೋದಿ ಸಹಕರಿಸಿದ್ದರು. ಜನರ ಅನುಕೂಲಕ್ಕಾಗಿ ಉಭಯ ದೇಶಗಳ ಬಾಂಧವ್ಯ ಇನ್ನಷ್ಟು ದೃಢವಾಗಲಿ’ ಎಂದು ಮಲೇಷ್ಯಾ ಪ್ರಧಾನಿ ಆಶಿಸಿದರು ಎಂದು ತಿಳಿಸಿದೆ.

ಮಲೇಷ್ಯಾದ ಪ್ರಧಾನಿ ಅವರಲ್ಲದೆ ವಿದೇಶಾಂಗ ಸಚಿವ ಮೊಹಮ್ಮದ್ ಬಿನ್ ಹಾಜಿ ಹಸನ್ ಹಾಗೂ ಸಚಿವ ಗೋಬಿಂದ್ ಸಿಂಗ್ ದೇವ್ ಅವರನ್ನೂ ಜೈಶಂಕರ್ ಭೇಟಿಯಾಗಿದ್ದರು.

ಶ್ರೀಲಂಕಾಗೆ ಎಲ್ಲ ರೀತಿಯ ಬೆಂಬಲ: ಚೀನಾ ಭರವಸೆ

ಕೊಲಂಬೊ (ಪಿಟಿಐ): ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಪ್ರಗತಿಗಾಗಿ ದ್ವೀಪರಾಷ್ಟ್ರ ಶ್ರೀಲಂಕಾದ ಪ್ರಯತ್ನಗಳಿಗಾಗಿ ಪ್ರಧಾನಿ ದಿನೇಶ್ ಗುಣವರ್ಧನ ಅವರಿಗೆ ನಿರಂತರ ಬೆಂಬಲ ನೀಡುವುದಾಗಿ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಭರವಸೆ ನೀಡಿದ್ದಾರೆ. ಅಲ್ಲದೇ ಶ್ರೀಲಂಕಾದ ಪ್ರಾದೇಶಿಕ ಸಮಗ್ರತೆ, ಸ್ವಾತಂತ್ರ್ಯ ಹಾಗೂ ಸಾರ್ವಭೌಮತ್ವವನ್ನು ಕಾಪಾಡಲು ಚೀನಾ ನಿಲ್ಲುತ್ತದೆ ಎಂದು ತಿಳಿಸಿದ್ದಾರೆ.

ಬೀಜಿಂಗ್‌ನ ಗ್ರೇಟ್ ಹಾಲ್‌ನಲ್ಲಿ ಬುಧವಾರ ಷಿ ಜಿನ್‌ಪಿಂಗ್ ಮತ್ತು ಗುಣವರ್ಧನ ನಡುವೆ ನಡೆದ ಸಭೆಯಲ್ಲಿ ಚೀನಾ ಮತ್ತು ಶ್ರೀಲಂಕಾ ಸ್ನೇಹ, ಶಾಂತಿ, ಪರಸ್ಪರ ಗೌರವ ಮತ್ತು ದೇಶದ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡದ ಅಂತರ ರಾಷ್ಟ್ರೀಯ ವ್ಯವಹಾರಗಳ ಪಂಚತತ್ವಗಳ ಅಡಿಯಲ್ಲಿ ಕಾರ್ಯನಿರ್ವಹಿಸಲು ಸಮ್ಮತಿಸಿವೆ ಎಂದು ಪ್ರಧಾನಮಂತ್ರಿಗಳ ಕಚೇರಿ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

ಪರಸ್ಪರ ಭೇಟಿಯಾಗಿ ಮಾತುಕತೆ ನಡೆಸಿದ ಶ್ರೀಲಂಕಾ ಪ್ರಧಾನಿ ದಿನೇಶ್ ಗುಣವರ್ಧನ ಹಾಗೂ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ –ಎಎಫ್‌ಪಿ ಚಿತ್ರ

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com or Scan QR code to access booking form

ಚಿರಶಾಂತಿ

ಶ್ರೀ ಗುರುರಾಜ್ ರಾವ್. ಪಿ.ಕೆ.
ಜನನ: 28.02.1950 ಮರಣ: 01–03–2024

ಶ್ರೀಯುತರು ಅನೇಕ ಸಿನಿಮಾ ಹಾಗೂ ದೂರದರ್ಶನ ಕಾರ್ಯಕ್ರಮಗಳಿಗೆ ಸಂಗೀತ ನೀಡಿರುತ್ತಾರೆ... ಇವರ ವೈಕುಂಠ ಸಮಾರಾಧನೆ 01.03.2024ರ ಶುಕ್ರವಾರದಂದು ನಿವಾಸದಲ್ಲಿ ನಡೆಯಲಿದೆ.

ಇಂತಿ ದುಃಖತಪ್ತ ಕುಟುಂಬವರ್ಗದವರು ಮತ್ತು ಸ್ನೇಹಿತರು.

4ನೇ ವರ್ಷದ ಪುಣ್ಯ ಸ್ಮರಣೆ

ಹೆಚ್.ಎಂ. ಸುಮಿತ್ರಮ್ಮ

ನಿಮ್ಮ ನೆನಪು ಸದಾ ಸ್ಮರಣೆಯ... ಮಕ್ಕಳು, ಕುಟುಂಬವರ್ಗ ಮತ್ತು ಸ್ನೇಹಿತರು

29ನೇ ವರ್ಷದ ಪುಣ್ಯತಿಥಿ



ಶ್ರೀಮತಿ ಎಂ.ಸರೋಜಮ್ಮ

(ದಿವಂಗತ ಶ್ರೀ ಎನ್. ಸೋಮಣ್ಣ ಮಾಂಬಳ್ಳಿ ಇವರ ಪತ್ನಿ)

ನಾವು ಪ್ರತಿದಿನ ಮೌನವಾಗಿ ನಿಮ್ಮನ್ನು ನೆನಪಿಸಿಕೊಳ್ಳುತ್ತೇವೆ. ನೀವು ತೋರಿಸಿಕೊಟ್ಟ ಆದರ್ಶಗಳನ್ನು ಪಾಲಿಸಲು ನಮ್ಮನ್ನು ನಾವು ಸಮರ್ಪಿಸಿಕೊಳ್ಳುತ್ತೇವೆ.

ಸದಾ ನಿಮ್ಮ ನೆನಪಿನಲ್ಲಿರುವ ಕುಟುಂಬ ವರ್ಗದವರು

ಪ್ರಜಾವಾಣಿ — ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಬಳಸಲು ಸುಲಭ ವೆಬ್‌ಸೈಟ್ ಅಭಿವೃದ್ಧಿಪಡಿಸಿದ್ದೇವೆ. www.homepages.deccanherald.com ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಿಂದಲೇ ಕುಳಿತು ಪುಸ್ತಕ ಬರೆಯುವ, ಫಾರಂ ತುಂಬುವ ಮೂಲಕ, ತಿಂಗಳಿಗೆ 18,000-20,000.ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8050064327, 8050064328.

WORK FROM Home: ಮನೆಯಲ್ಲಿ ಕುಳಿತು 10,000–20,000 ದುಡಿಯಬಹುದು. ವಯೋಮಿತಿ ಇರುವುದಿಲ್ಲ. ಮೊದಲು ಬರುವವರಿಗೆ ಆದ್ಯತೆ. 8861041526, 9945791526

General

ತಕ್ಷಣ ಬೇಕಾಗಿದ್ದಾರೆ. ಟಯೋಟಾ,TVS, ಬ್ರಿಟಾನಿಯಾ, ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC, PUC,Degree, ITIನವರು, 18,000/- 60,000/- (ವಿದ್ಯಾರ್ಹತೆಯಿದ್ದವರಿಗೂ) ವಸತಿಯುಂಟು. 9353185367

Hotel

ಹೋಟೆಲ್ ಸಿಬ್ಬಂದಿ ಬೇಕಾಗಿದ್ದಾರೆ: ಚಿಕ್ಕಮಗಳೂರಿನ ಪ್ರಖ್ಯಾತ ರೆಸಾರ್ಟ್‌ಗೆ Front Office (Female), Housekeeping Staff (Male), Commis 2/3, Kitchen Helpers, Stewards with experience in Hotel Industry. ಆಸಕ್ತರು skrecruit2022@gmail.com. ಸಂಪರ್ಕಿಸಲು: 8861668354

ವೈಯಕ್ತಿಕ

Change of Name

ಹೆಸರು ಬದಲಾವಣೆ

ಭವಿಷ್ಯ

Astrology

★ಓಂಶ್ರೀ ಆಂಜನೇಯ★ ನಿಮ್ಮ ಯಾವುದೇ ಧೀರ್ಘಕಾಲದ ಎಲ್ಲಾ ಸಮಸ್ಯೆಗಳಿಗೆ ಸ್ತ್ರೀವಶೀಕರಣ ಸಂಬಂಧಿತ ಸಮಸ್ಯೆಗಳಿಗೆ 3 ದಿನಗಳಲ್ಲಿ ಪರಿಹಾರ. ಶ್ರೀ.ದೇವನಾರಾಯಣ್. 9845005009

ಪ್ರವಾಸ

Travel

ಸೌತ್ ಆಫ್ರಿಕಾ 8 ದಿನಗಳು, 8 ದಿನಗಳ ನೇಪಾಳ ಮತ್ತುನಾಥ ಭೂತಾನ್ 8 ದಿನಗಳು, 6 ದಿನಗಳ ಬಾಲಿ, 7/11 ದಿನಗಳ ಸಿಂಗಾಪುರ್ ಮಲೇಷಿಯಾ ಥೈಲ್ಯಾಂಡ್, 4 ದಿನಗಳ ಲಕ್ಷದೀಪ (ಕ್ರೂಸ್), ಆಸ್ಟ್ರೇಲಿಯಾ ನ್ಯೂಜಿಲ್ಯಾಂಡ್ 18 ದಿನಗಳು. ಭಟ್ ಟ್ರಾವೆಲ್ಸ್, 9844166555, 7975132507

19.4.2024, 1.5.2024 ಅಯೋಧ್ಯಾ,ಕಾಶಿ,ಗಯಾ, ಪ್ರಯಾಗ್‌ರಾಜ್, 9.5.2024ದೆಹಲಿ,ಹರಿದ್ವಾರ, ಆಗ್ರಾ,ಪ್ರಯಾಗ್‌ರಾಜ್, ಅಯೋಧ್ಯಾ,ಕಾಶಿ, ಗಯಾ9.6.2024 ಯಮುನೋತ್ರಿ,ಗಂಗೋತ್ರಿ,ಕೇದಾರನಾಥ್, ಬದ್ರಿನಾಥ್27.6.2024 ಅಮರನಾಥ್,ಅಮೃತಸರ್, ವೈಷ್ಣೋದೇವಿ,ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

6 ದಿನಗಳ ಬಾಲಿ. 8 ದಿನಗಳ ಮುಕ್ತಿನಾಥ ನೇಪಾಳ ವಿಶೇಷ. 6 ದಿನಗಳ ಥೈಲ್ಯಾಂಡ್ ಸಿಂಗಾಪುರ್ ಮಲೇಷಿಯಾ. 11 ದಿನಗಳ ವಿಯೆಟ್ನಾಂ ಮತ್ತು ಕಾಂಬೋಡಿಯ. 10 ದಿನಗಳ ಸೌತ್‌ಆಫ್ರಿಕಾ. ಆರ್ಚ್ ಟ್ರಾವೆಲ್ ಅಂಡ್ ಟೂರ್ಸ್. ಬಸವನಗುಡಿ ಬೆಂಗಳೂರು.04. 9880079588 9800080793

13.04.2024 6ದಿನಗಳು A/Cಟ್ರೈನಲ್ಲಿ ಅಯೋಧ್ಯೆ, ಕಾಶಿ,ಗಯಾ, ಪ್ರಯಾಗರಾಜ್ (ಕೆಲವೇ ಸೀಟುಗಳಿವೆ) 12.07.2024 13/17ದಿನಗಳು ಅಮರನಾಥ್, ವೈಷ್ಣೋದೇವಿ, ಕಾಶ್ಮೀರ, ಅಮೃತಸರ್, ಆಗ್ರ,ದೆಹಲಿ ಶ್ರೀನಗ.28000/ಏಪ್ರಿಲ್, ಮೇನಲ್ಲಿ ಹಡಗು/ವಿಮಾನದಲ್ಲಿ ಅಂಡಮಾನ್ ಪ್ರವಾಸಗಳು. Royal Package ‘ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್’. 9739847429/ 9845560219

14 ದಿನಗಳ ಚಾರ್ಧಾಮ್ ಪ್ರವಾಸ 11.05.24. 14ದಿನಗಳ ಅಯೋಧ್ಯೆ,ಕಾಶಿ ನೇಪಾಳ ಪ್ರವಾಸ 21.05.24. 14ದಿನಗಳ ಅಮರನಾಥ ಪ್ರವಾಸ 23.06.24. Twite Holidays. ಸಂಪರ್ಕಿಸಿ: 9611801143, 8088559962.

15.04.2024 23.06.2024 ಅಯೋಧ್ಯಾ ಕಾಶಿ,ಬದ್ರಿನಾಥ ಅಲಹಾಬಾದ್ 28.04.2024 28.06.2024 11.07.2024 ಕಾಶ್ಮೀರ್ ಗುಲ್ಮಾರ್ಗ್ ವೈಷ್ಣೋದೇವಿ ವಾಘಬಾರ್ಡರ್ ಅಮರನಾಥ್. 11.05.2024 24.05.2024 08.06.2024 ಚಾರ್ಧಾಮ್ ಸವಿತ ಪ್ರವಾಸ. ಸಂಪರ್ಕಿಸಿ. ಏಷ್ಯನ್ ಟ್ರಾವಲ್ ಏಜೆನ್ಸಿ ಕೆಂಪಾಪುರ ಬೆಂಗಳೂರು. 26574131 8431888138 7204173686

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾಗಿವೆ. ಆದರೆ, ಅವುಗಳಲ್ಲಿ ಪ್ರಕಟವಾಗುವ ಮಾಹಿತಿಗೆ ಪತ್ರಿಕೆ ಹೊಣೆಯಲ್ಲ. ಜಾಹೀರಾತುದಾರರ ಜೊತೆ ವ್ಯವಹರಿಸುವ ಮುನ್ನ ಓದುಗರು ಎಚ್ಚರಿಕೆ ವಹಿಸಬೇಕು.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

ಶಿಕ್ಷಣ

ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ

www.dhclassifieds.com ಬುಕ್ ಮಾಡಿ

*Conditions apply

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9845114560 | +91 9900428036

ಆರ್‌ಸಿಬಿ–ಕೋಲ್ಕತ್ತ ನೈಟ್ ರೈಡರ್ಸ್ ಮುಖಾಮುಖಿ ಇಂದು; ಲಯದಲ್ಲಿರುವ ವಿರಾಟ್, ದಿನೇಶ್

ಬೆಂಗಳೂರು ಬೌಲರ್‌ಗಳಿಗೆ ಕಠಿಣ ಸವಾಲು

• ಗಿರೀಶ ದೊಡ್ಡಮನಿ

ಬೆಂಗಳೂರು: ಉದ್ಯಾನನಗರಿಯ ಕ್ರಿಕೆಟ್ ಪ್ರೇಮಿಗಳ ನೆಚ್ಚಿನ ತಾರೆ ವಿರಾಟ್ ಕೊಹ್ಲಿ ಲಯಕ್ಕೆ ಮರಳಿದ್ದಾರೆ. ಅವರ ಆಟದಿಂದಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಮೂರು ದಿನಗಳ ಹಿಂದೆ ತನ್ನ ಅಭಿಮಾನಿಗಳಿಗೆ ಗೆಲುವಿನ ಕಾಣಿಕೆಯನ್ನೂ ನೀಡಿತ್ತು.

ಇದರಿಂದಾಗಿ ಹುರುಪುಗೊಂಡಿರುವ ಆರ್‌ಸಿಬಿ ಪ್ರೇಮಿಗಳು ಶುಕ್ರವಾರ ನಡೆಯಲಿರುವ ಕೋಲ್ಕತ್ತ ನೈಟ್ ರೈಡರ್ಸ್ ಎದುರಿನ ಪಂದ್ಯವನ್ನು ವೀಕ್ಷಿಸಲು ಕಾತುರದಿಂದ ಕಾಯುತ್ತಿದ್ದಾರೆ. 'ಗುಡ್ ಫ್ರೈಡೇ'ಯ ರಜಾದಿನದಂದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯವು ಬೆಂಗಳೂರು ಬೌಲರ್‌ಗಳಿಗೆ ಸತ್ವಪರೀಕ್ಷೆಯಾಗಲಿದೆ. ಕೋಲ್ಕತ್ತ ತಂಡದ ಎಂಟು ಬ್ಯಾಟರ್‌ಗಳನ್ನು ಕಟ್ಟಿಹಾಕುವ ಸವಾಲು ಅವರ ಮುಂದಿದೆ.

ಕೋಲ್ಕತ್ತ ತಂಡವು ಇತ್ತೀಚೆಗೆ ತನ್ನ ಮೊದಲ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಎದುರು ಜಯಿಸಿತ್ತು. ಅದರಲ್ಲಿ ಆರಂಭಿಕ ಬ್ಯಾಟರ್ ಫಿಲ್ ಸಾಲ್ಟ್ ಮತ್ತು ಎಂಟನೇ ಕ್ರಮಾಂಕದ ಬ್ಯಾಟರ್ ಆ್ಯಂಡ್ರೆ ರಸೆಲ್ ಅರ್ಧಶತಕಗಳನ್ನು ದಾಖಲಿಸಿದ್ದರು. ಅದರಲ್ಲೂ ರಸೆಲ್ ಅವರು 25 ಎಸೆತಗಳಲ್ಲಿ ಅಜೇಯ 64 ರನ್ ಗಳಿಸಿದ್ದರು. ಏಳು ಸಿಕ್ಸರ್ ಸಿಡಿಸಿದ್ದರು. ಅಗ್ರ ಹಾಗೂ ಮಧ್ಯಮ ಕ್ರಮಾಂಕದ ನಾಲ್ವರು ಪ್ರಮುಖ ಬ್ಯಾಟರ್‌ಗಳು ಒಂದಂಕಿ ಗಳಿಸಿ ಔಟಾದ ಸಂದರ್ಭದಲ್ಲಿ ರಸೆಲ್ ಆಟದಿಂದಾಗಿ ತಂಡವು 200 ರನ್‌ಗಳ ಮೊತ್ತ ದಾಟಲು ಸಾಧ್ಯವಾಗಿತ್ತು.

ರಸೆಲ್ ಬೌಲಿಂಗ್‌ನಲ್ಲಿಯೂ ಮಿಂಚಿ ಎರಡು ವಿಕೆಟ್ ಗಳಿಸಿದ್ದರು. ತಂಡದ ಜಯದ ರೂವಾರಿಯಾಗಿದ್ದರು. ರಿಂಕು ಸಿಂಗ್ ಮತ್ತು ರಮಣದೀಪ್ ಸಿಂಗ್ ಅವರೂ ಉತ್ತಮ ಲಯದಲ್ಲಿದ್ದಾರೆ. ಅದರೊಂದಿಗೆ ಕೋಲ್ಕತ್ತ ನಾಯಕ ಶ್ರೇಯಸ್ ಅಯ್ಯರ್ ಹಾಗೂ ವೆಂಕಟೇಶ್ ಅಯ್ಯರ್ ಅವರು ಲಯಕ್ಕೆ ಮರಳಿದರೆ ಬೌಲರ್‌ಗಳಿಗೆ ಮತ್ತಷ್ಟು ಸಂಕಷ್ಟ ಎದುರಾಗುವುದು ಖಚಿತ.

ಮೊದಲ ಪಂದ್ಯದಲ್ಲಿ ಚೆನ್ನೈ ಎದುರು ಬೆಂಗಳೂರು ತಂಡ ಸೋತಿತ್ತು. ತನ್ನ ತವರಿನಲ್ಲಿ ನಡೆದಿದ್ದ ಎರಡನೇ ಪಂದ್ಯದಲ್ಲಿ ವಿರಾಟ್, ದಿನೇಶ್ ಕಾರ್ತಿಕ್ ಹಾಗೂ ಮಹಿಪಾಲ್ ಲೊಮ್ರೊರ್ ಅವರ ಅಮೋಘ ಬ್ಯಾಟಿಂಗ್‌ನಿಂದಾಗಿ ಆರ್‌ಸಿಬಿ ಜಯಿಸಿತ್ತು. ಆದರೆ ಆ ಪಂದ್ಯದಲ್ಲಿ ಆರಂಭಿಕ ಹಂತದಲ್ಲಿ ಭರವಸೆದಾಯಕ ಬೌಲಿಂಗ್ ಮಾಡಿದ್ದ ಆರ್‌ಸಿಬಿ ಬೌಲರ್‌ಗಳು ಅಂತಿಮ ಹಂತದ (ಡೆತ್ ಓವರ್) ಹೆಚ್ಚು ರನ್ ಕೊಟ್ಟಿದ್ದರು. ಮೊಹಮ್ಮದ್ ಸಿರಾಜ್ ಹಾಗೂ ಯಶ್ ದಯಾಳ್ ಮಾತ್ರ ಸ್ವಲ್ಪ ಬಿಗಿ ದಾಳಿ ನಡೆಸಿದ್ದರು. ಗ್ಲೆನ್ ಮ್ಯಾಕ್ಸ್‌ವೆಲ್ ಎರಡು ವಿಕೆಟ್ ಗಳಿಸಿದ್ದರು. ಆದರೆ ಹೆಚ್ಚು ರನ್ ಕೊಟ್ಟಿದ್ದರು.

ಅಲ್ಜರಿ ಜೋಸೆಫ್ ಮತ್ತು ಮಯಂಕ್ ದಾಗರ್ ಅವರು ಪ್ರತಿ ಓವರ್‌ಗೆ 10ಕ್ಕಿಂತ ಹೆಚ್ಚಿನ ಸರಾಸರಿಯಲ್ಲಿ ರನ್ ಕೊಟ್ಟು ದುಬಾರಿಯಾಗಿದ್ದರು. ಇದರಿಂದಾಗಿ ಬೌಲಿಂಗ್ ವಿಭಾಗದಲ್ಲಿ ಕೆಲವು ಬದಲಾವಣೆಗಳೊಂದಿಗೆ ಆರ್‌ಸಿಬಿ ಕಣಕ್ಕಿಳಿಯುವ ಸಾಧ್ಯತೆ ಇದೆ. ಸ್ಥಳೀಯ ಹುಡುಗ ವೈಶಾಖ ವಿಜಯಕುಮಾರ್ ಅವರಿಗೆ ಅವಕಾಶ ಸಿಗಬಹುದು. ಹೋದ ವರ್ಷದ ಐಪಿಎಲ್‌ನಲ್ಲಿ ಅವರು ಚೇತೋಹಾರಿ ಪ್ರದರ್ಶನ ನೀಡಿದ್ದರು. ರಣಜಿ ಟ್ರೋಫಿ ಟೂರ್ನಿಯಲ್ಲಿ ಆಲ್‌ರೌಂಡ್ ಆಟವಾಡಿದ್ದರು. ಆದರೆ ತಂಡದಲ್ಲಿರುವ ಕರ್ನಾಟಕದ ಇನ್ನೊಬ್ಬ ಆಲ್‌ರೌಂಡರ್ ಮನೋಜ್ ಬಾಂಢಗೆ ಪದಾರ್ಪಣೆಯ ಅವಕಾಶ ಸಿಗುವುದು ಖಚಿತವಿಲ್ಲ. ಜೋಸೆಫ್ ಬದಲಿಗೆ ಅನುಭವಿ ಬೌಲರ್ ಲಾಕಿ ಫರ್ಗ್ಯುಸನ್ ಅಥವಾ ಆಕಾಶ್ ದೀಪ್ ಅವರಲ್ಲಿ ಒಬ್ಬರಿಗೆ ಸ್ಥಾನ ಸಿಗುವ ಸಾಧ್ಯತೆ ಹೆಚ್ಚಿದೆ.

ಬಲಾಬಲ

ಪಂದ್ಯಗಳು 32
ಆರ್‌ಸಿಬಿ ಜಯ 14
ಕೆಕೆಆರ್ ಜಯ 18

ಗರಿಷ್ಠ ಮೊತ್ತ
ಆರ್‌ಸಿಬಿ 213
ಕೆಕೆಆರ್ 222

ಫಾಫ್ ಡು ಪ್ಲೆಸಿಸ್ ಅಭ್ಯಾಸದ ವೇಳೆ ಪ್ರಜಾವಾಣಿ ಚಿತ್ರ ಕಿಶೋರ್ ಕುಮಾರ್ ಬೋಳಾರ್

ಪಂದ್ಯ ಆರಂಭ ರಾತ್ರಿ 7.30

ಲೈವ್ ಸ್ಟಾರ್ ಸ್ಪೋರ್ಟ್ಸ್, ಜಿಯೊ ಸಿನಿಮಾ ಆ್ಯಪ್

ಆರ್‌ಸಿಬಿ ಆಟಗಾರ ದಿನೇಶ್ ಕಾರ್ತಿಕ್ ಅಭ್ಯಾಸದ ವೇಳೆ

ಪಿಚ್ ಹೇಗಿದೆ?

ಬೆಂಗಳೂರು ಕ್ರೀಡಾಂಗಣದ ಪಿಚ್ ಬ್ಯಾಟರ್‌ಗಳ ಸ್ನೇಹಿಯಾಗಿದೆ. ಉಭಯ ತಂಡಗಳಲ್ಲಿಯೂ ಬಿರುಸಿನ ಹೊಡೆತಗಳನ್ನು ಆಡುವ ಬ್ಯಾಟರ್‌ಗಳಿದ್ದಾರೆ. ಇದರಿಂದಾಗಿ ಯಥೇಚ್ಛವಾಗಿ ರನ್‌ಗಳು ಹರಿಯುವ ಸಾಧ್ಯತೆ ಇದೆ. ದುಬಾರಿ ಟಿಕೆಟ್ ಪಡೆದು ಬರುವ ಪ್ರೇಕ್ಷಕರಿಗೆ ರನ್ ಹೊಳೆಯಲ್ಲಿ ಈಜಾಡುವ ಅವಕಾಶ ಸಿಗುವ ನಿರೀಕ್ಷೆ ಇದೆ.

ಆ್ಯಂಡ್ರೆ ರಸೆಲ್ ತಾಲೀಮು ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ.

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ಚೆನ್ನೈ ಸೂಪರ್ ಕಿಂಗ್ಸ್	2	2	0	4	1.979
ರಾಜಸ್ಥಾನ ರಾಯಲ್ಸ್	2	2	0	4	0.800
ಸನ್‌ರೈಸರ್ಸ್ ಹೈದರಾಬಾದ್	2	1	1	2	0.675
ಕೋಲ್ಕತ್ತ ನೈಟ್ ರೈಡರ್ಸ್	1	1	0	2	0.200
ಪಂಜಾಬ್ ಕಿಂಗ್ಸ್	2	1	1	2	0.025
ರಾಯಲ್ ಚಾಲೆಂಜರ್ಸ್ ಬೆಂಗಳೂರು	2	1	1	2	-0.180
ಗುಜರಾತ್ ಟೈಟನ್ಸ್	2	1	1	2	-1.425
ಡೆಲ್ಲಿ ಕ್ಯಾಪಿಟಲ್ಸ್	2	0	2	0	-0.528
ಮುಂಬೈ ಇಂಡಿಯನ್ಸ್	2	0	2	0	-0.925
ಲಖನೌ ಸೂಪರ್ ಜೈಂಟ್ಸ್	1	0	1	0	-1.000

ಆರೆಂಜ್ ಕ್ಯಾಪ್: ಹೆನ್ರಿಕ್ ಕ್ಲಾಸೆನ್, ಎಸ್‌ಆರ್‌ಎಚ್ (143 ರನ್)

ಪರ್ಪಲ್ ಕ್ಯಾಪ್: ಮುಸ್ತಫಿಜುರ್ ರೆಹಮಾನ್, ಸಿಎಸ್‌ಕೆ (6 ವಿಕೆಟ್)

ರಾಯಲ್ಸ್‌ಗೆ ಎರಡನೇ ಜಯ

ಡೆಲ್ಲಿಗೆ ಮತ್ತೆ ನಿರಾಸೆ; ರಿಯಾನ್ ಪರಾಗ್ ಮಿಂಚಿನ ಬ್ಯಾಟಿಂಗ್

ಜೈಪುರ (ಪಿಟಿಐ): ಅಸ್ಸಾಂ ಹುಡುಗ ರಿಯಾನ್ ಪರಾಗ್ ಅವರ ದಿಟ್ಟ ಆಟವು ವ್ಯರ್ಥವಾಗದಂತೆ ರಾಜಸ್ಥಾನ ರಾಯಲ್ಸ್ ತಂಡದ ಬೌಲರ್‌ಗಳು ನೋಡಿಕೊಂಡರು. ಇದರಿಂದಾಗಿ ಗುರುವಾರ ರಾತ್ರಿ ನಡೆದ ಪಂದ್ಯದಲ್ಲಿ ರಾಯಲ್ಸ್ ತಂಡವು ಡೆಲ್ಲಿ ಕ್ಯಾಪಿಟಲ್ಸ್ ಎದುರು ಜಯಿಸಿತು.

ಸವಾಯಿ ಮಾನಸಿಂಗ್ ಕ್ರೀಡಾಂಗಣದಲ್ಲಿ ನಡೆದ ಹಣಾಹಣಿಯಲ್ಲಿ ರಾಜಸ್ಥಾನ ರಾಯಲ್ಸ್ 12 ರನ್‌ಗಳಿಂದ ಜಯಿಸಿತು. ಇದರೊಂದಿಗೆ ಟೂರ್ನಿಯಲ್ಲಿ ಸತತ ಪಂದ್ಯ ಗೆದ್ದಿತು. ರಿಷಭ್ ಪಂತ್ ನಾಯಕತ್ವದ ಡೆಲ್ಲಿ ಎರಡನೇ ಸೋಲನುಭವಿಸಿತು.

ಟಾಸ್ ಗೆದ್ದ ಡೆಲ್ಲಿ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ರಿಯಾನ್ (ಅಜೇಯ 84; 45ಎ, 4X7, 6X6) ಅವರ ದಿಟ್ಟ ಬ್ಯಾಟಿಂಗ್‌ನಿಂದಾಗಿ ಆತಿಥೇಯ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 185 ರನ್ ಗಳಿಸಿತು. ರಿಯಾನ್, ಇನಿಂಗ್ಸ್‌ನ ಕೊನೆಯ ಓವರ್‌ನಲ್ಲಿ ಅವರು 25 ರನ್‌ಗಳನ್ನು ಸೂರೆ ಮಾಡಿದರು. ಅದರಲ್ಲಿ ಮೂರು ಬೌಂಡರಿ ಮತ್ತು ಒಂದು ಸಿಕ್ಸರ್ ಸೇರಿದ್ದವು. ರಾಯಲ್ಸ್ ತಂಡವು 36 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದ ಸಂದರ್ಭದಲ್ಲಿ ರಿಯಾನ್ ಪರಾಗ್ ಮಿಂಚಿದರು. ಎರಡು ಜೊತೆಯಾಟಗಳಲ್ಲಿ ಭಾಗಿಯಾದರು. ರಿಯಾನ್ ಅವರು ಆರ್. ಅಶ್ವಿನ್ (29 ರನ್) ಅವರೊಂದಿಗೆ 54 ಹಾಗೂ ಧ್ರುವ ಜುರೇಲ್ (20 ರನ್) ಅವರೊಂದಿಗೆ 52 ರನ್ ಗಳಿಸಿದರು.

ಗುರಿ ಬೆನ್ನಟ್ಟಿದ ಡೆಲ್ಲಿ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 173 ರನ್ ಗಳಿಸಲಷ್ಟೇ ಶಕ್ತವಾಯಿತು. ರಾಜಸ್ಥಾನ ತಂಡದ ವೇಗಿ ನಾಂದ್ರೆ ಬರ್ಗರ್ (29ಕ್ಕೆ2), ಸ್ಪಿನ್ನರ್ ಯುಜುವೇಂದ್ರ ಚಾಹಲ್ (19ಕ್ಕೆ2) ಮತ್ತು ಆವೇಶ್ ಖಾನ್ (29ಕ್ಕೆ1) ಉತ್ತಮ ಬೌಲಿಂಗ್ ಮಾಡಿ ಡೆಲ್ಲಿ ತಂಡವನ್ನು ತಡೆದರು. ಇನಿಂಗ್ಸ್‌ನ ಕೊನೆಯ ಓವರ್‌ನಲ್ಲಿ ಡೆಲ್ಲಿ ತಂಡಕ್ಕೆ ಗೆಲ್ಲಲು 16 ರನ್‌ಗಳ ಅಗತ್ಯವಿತ್ತು. ಕ್ರೀಸ್‌ನಲ್ಲಿ ಟ್ರಿಸ್ಟನ್ ಸ್ಟಬ್ಸ್ (ಔಟಾಗದೆ 44) ಇದ್ದರು. ಆವೇಶ್ ಖಾನ್ ಅವರು ಈ ಓವರ್‌ನಲ್ಲಿ ಕೇವಲ ನಾಲ್ಕು ರನ್ ಮಾತ್ರ ಕೊಟ್ಟರು.

ಡೆಲ್ಲಿ ತಂಡಕ್ಕೆ ಡೇವಿಡ್ ವಾರ್ನರ್ (49; 34ಎ, 4X5, 6X3) ಹಾಗೂ ಮಿಚೆಲ್ ಮಾರ್ಷ್ (23; 12ಎ, 4X5) ಮೊದಲ ವಿಕೆಟ್ ಜೊತೆಯಾಟದಲ್ಲಿ 3 ಓವರ್‌ಗಳಲ್ಲಿ 30 ರನ್ ಸೇರಿಸಿದರು. ರಿಕಿ ಭುಯಿ ಖಾತೆ ತೆರೆಯಲಿಲ್ಲ. ನಾಯಕ ರಿಷಭ್ (28; 26ಎ, 4X2, 6X1) ಲಯಕ್ಕೆ ಮರಳುವ ಪ್ರಯತ್ನ ಮಾಡಿದರು. ಯುಜುವೇಂದ್ರ ಚಾಹಲ್ ಬೌಲಿಂಗ್‌ನಲ್ಲಿ ಔಟಾದರು. ಕೊನೆಯಲ್ಲಿ ಅಕ್ಷರ್ ಪಟೇಲ್ (ಔಟಾಗದೆ 19) ಕೂಡ ತಂಡವನ್ನು ಗುರಿಮುಟ್ಟಿಸುವ ಪ್ರಯತ್ನ ಮಾಡಿದರೂ ಯಶಸ್ವಿಯಾಗಲಿಲ್ಲ.

ರಿಯಾನ್ ಪರಾಗ್ ಬ್ಯಾಟಿಂಗ್ ವೈಭವ –ಎಎಫ್‌ಪಿ ಚಿತ್ರ

ಸಂಕ್ಷಿಪ್ತ ಸ್ಕೋರು: ರಾಜಸ್ಥಾನ ರಾಯಲ್ಸ್: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 185 (ರಿಯಾನ್ ಪರಾಗ್ ಔಟಾಗದೆ 84, ಅಶ್ವಿನ್ 29, ಧ್ರುವ ಜುರೇಲ್ 20, ಹೆಟ್ಮೆಯರ್ ಔಟಾಗದೆ 14, ಖಲೀಲ್ ಅಹಮದ್ 24ಕ್ಕೆ1)

ಡೆಲ್ಲಿ ಕ್ಯಾಪಿಟಲ್ಸ್: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 173 (ಡೇವಿಡ್ ವಾರ್ನರ್ 49, ಮಿಚೆಲ್ ಮಾರ್ಷ್ 23, ರಿಷಭ್ ಪಂತ್ 28, ಟ್ರಿಸ್ಟನ್ ಸ್ಟಬ್ಸ್ ಔಟಾಗದೆ 44, ಅಕ್ಷರ್ ಪಟೇಲ್ ಔಟಾಗದೆ 15, ನಾಂದ್ರೆ ಬರ್ಗರ್ 29ಕ್ಕೆ2, ಯುಜುವೇಂದ್ರ ಚಾಹಲ್ 19ಕ್ಕೆ2, ಆವೇಶ್ ಖಾನ್ 29ಕ್ಕೆ1)

ಫಲಿತಾಂಶ: ರಾಜಸ್ಥಾನ ರಾಯಲ್ಸ್ 12 ರನ್‌ಗಳ ಜಯ.
ಪಂದ್ಯಶ್ರೇಷ್ಠ: ರಿಯಾನ್ ಪರಾಗ್

ಕೆಲವು ಪಂದ್ಯಗಳಿಗೆ ಸೂರ್ಯ ಅಲಭ್ಯ

ನವದೆಹಲಿ (ಪಿಟಿಐ): ಶಸ್ತ್ರಚಿಕಿತ್ಸೆಗೆ ಒಳಗಾಗಿ ಚೇತರಿಸಿಕೊಳ್ಳುತ್ತಿರುವ ಸೂರ್ಯಕುಮಾರ್ ಯಾದವ್ ಅವರು ಐಪಿಎಲ್ ಟೂರ್ನಿಯ ಇನ್ನೂ ಕೆಲವು ಪಂದ್ಯಗಳಿಗೆ ಅಲಭ್ಯವಾಗಿದ್ದಾರೆ. ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ (ಎನ್‌ಸಿಎ)ಯು ಅವರ ಆರೋಗ್ಯದ ಮೇಲೆ ನಿಗಾ ಇರಿಸಿದೆ.

ಐಪಿಎಲ್‌ನಲ್ಲಿ ಮುಂಬೈ ಇಂಡಿಯನ್ಸ್ ತಂಡವನ್ನು ಪ್ರತಿನಿಧಿಸುತ್ತಿರುವ ಸೂರ್ಯಕುಮಾರ್ ಅವರು ಈಚೆಗೆ ಹರ್ನಿಯಾ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆ. ಹಾರ್ದಿಕ್ ಪಾಂಡ್ಯ ನಾಯಕತ್ವದ ಮುಂಬೈ ತಂಡವು ಈ ಆವೃತ್ತಿಯಲ್ಲಿ ಆಡಿರುವ ಎರಡೂ ಪಂದ್ಯಗಳಲ್ಲಿ ಸೋತಿದೆ.

'ಸೂರ್ಯಕುಮಾರ್ ಚೇತರಿಸಿಕೊಳ್ಳುತ್ತಿದ್ದಾರೆ. ಶೀಘ್ರದಲ್ಲೇ ಅವರು ಮುಂಬೈ ಇಂಡಿಯನ್ಸ್ ತಂಡದ ಪರ ಆಡಲಿದ್ದಾರೆ. ಈಗಾಗಲೇ ಎರಡು ಪಂದ್ಯಗಳನ್ನು ತಪ್ಪಿಸಿಕೊಂಡಿದ್ದ ಅವರು, ಇನ್ನೂ ಕೆಲವು ಪಂದ್ಯಗಳಿಗೆ ಅಲಭ್ಯರಾಗಲಿದ್ದಾರೆ' ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಟಿ20 ವಿಶ್ವಕಪ್ ಟೂರ್ನಿಯಲ್ಲಿ ಸೂರ್ಯಕುಮಾರ್ ದೊಡ್ಡ ಜವಾಬ್ದಾರಿ ನಿಭಾಯಿಸಬೇಕಾಗಿದೆ. ಹೀಗಾಗಿ, ಅವರ ಫಿಟ್‌ನೆಸ್‌ಗೆ ಬಿಸಿಸಿಐ ಆದ್ಯತೆ ನೀಡುತ್ತದೆ. ಅವರು ಖಂಡಿತವಾಗಿಯೂ ಮುಂಬೈ ಪರ ಆಡಲಿದ್ದಾರೆ. ಆದರೆ, ಯಾವುದೇ ಧಾವಂತ ಇಲ್ಲ' ಎಂದು ಮೂಲಗಳು ತಿಳಿಸಿವೆ.

33 ವರ್ಷದ ಸೂರ್ಯಕುಮಾರ್ 60 ಟಿ20 ಅಂತರರಾಷ್ಟ್ರೀಯ ಪಂದ್ಯಗಳನ್ನು ಆಡಿದ್ದು, ನಾಲ್ಕು ಶತಕ ಸೇರಿ 2,141 ರನ್ ಗಳಿಸಿದ್ದಾರೆ. ಈ ಮಾದರಿಯಲ್ಲಿ ಅವರ ಸ್ಟ್ರೈಕ್ ರೇಟ್ 171.55 ಹೊಂದಿದ್ದಾರೆ.

'ಪಟ್ಟಭದ್ರ' ಗುಂಪಿನ ವಿರುದ್ಧ 600ಕ್ಕೂ ಹೆಚ್ಚು ವಕೀಲರಿಂದ ಸಿಜೆಐ ಚಂದ್ರಚೂಡ್ ಅವರಿಗೆ ಪತ್ರ

ನ್ಯಾಯಾಂಗಕ್ಕೆ ಅಗೌರವ ತರುವ ಯತ್ನ

ನವದೆಹಲಿ (ಪಿಟಿಐ): ನ್ಯಾಯಾಂಗದ ಮೇಲೆ ಒತ್ತಡ ತರಲು ಮತ್ತು ನ್ಯಾಯಾಲಯಗಳ ಮೇಲಿನ ಗೌರವಕ್ಕೆ ಕುತ್ತು ತರಲು 'ಪಟ್ಟಭದ್ರ ಹಿತಾಸಕ್ತಿಗಳ ಗುಂಪೊಂದು' ಯತ್ನಿಸುತ್ತಿದೆ ಎಂದು ಆರೋಪಿಸಿ 600ಕ್ಕೂ ಹೆಚ್ಚು ಮಂದಿ ವಕೀಲರು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ಅವರಿಗೆ ಪತ್ರ ಬರೆದಿದ್ದಾರೆ.

ಹಿರಿಯ ವಕೀಲ ಹರೀಶ್ ಸಾಳ್ವೆ, ವಕೀಲರ ಪರಿಷತ್ತಿನ ಅಧ್ಯಕ್ಷ ಮನನ್ ಕುಮಾರ್ ಮಿಶ್ರಾ, ಹಿರಿಯ ವಕೀಲ ಉದಯ ಹೊಳ್ಳ ಸೇರಿದಂತೆ ಹಲವರು ಇದಕ್ಕೆ ಸಹಿ ಮಾಡಿದ್ದಾರೆ. ರಾಜಕಾರಣಿಗಳಿಗೆ ಸಂಬಂಧಿಸಿದ ಭ್ರಷ್ಟಾಚಾರ ಪ್ರಕರಣಗಳಲ್ಲಿ ಈ ರೀತಿ ಮಾಡಲು ಯತ್ನಿಸಲಾಗುತ್ತಿದೆ ಎಂದು ಅವರು ಪತ್ರದಲ್ಲಿ ಹೇಳಿದ್ದಾರೆ.

'ಈ ತಂತ್ರವು ನಮ್ಮ ನ್ಯಾಯಾಲಯಗಳಿಗೆ ಹಾಗೂ ನಮ್ಮ ಪ್ರಜಾತಾಂತ್ರಿಕ ವ್ಯವಸ್ಥೆಗೆ ಧಕ್ಕೆ ಉಂಟುಮಾಡುತ್ತಿದೆ' ಎಂದು ಮಾರ್ಚ್ 26ರಂದು ಬರೆದಿರುವ ಪತ್ರದಲ್ಲಿ ಹೇಳಲಾಗಿದೆ. 'ಈಗಿನ ಕಷ್ಟ ಕಾಲದಲ್ಲಿ' ಸಿಜೆಐ ಚಂದ್ರಚೂಡ್ ಅವರ ನಾಯಕತ್ವವು ಬಹಳ ಮಹತ್ವದ್ದು; ಇದು ಘನತೆಯಿಂದ ಮೌನವಾಗಿರಬೇಕಾದ ಹೊತ್ತಲ್ಲ ಎಂದು ಅವರು ಪತ್ರದಲ್ಲಿ ಹೇಳಿದ್ದಾರೆ.

ವಕೀಲರ ವರ್ಗವೊಂದು ಹಗಲು ಹೊತ್ತಿನಲ್ಲಿ ರಾಜಕಾರಣಿಗಳನ್ನು ಸಮರ್ಥಿಸಿಕೊಳ್ಳುವ ಕೆಲಸ ಮಾಡುತ್ತಿರುತ್ತದೆ, ರಾತ್ರಿ ಹೊತ್ತಿನಲ್ಲಿ ಮಾಧ್ಯಮಗಳ ಮೂಲಕ ನ್ಯಾಯಮೂರ್ತಿಗಳ ಮೇಲೆ ಪ್ರಭಾವ ಬೀರಲು ಯತ್ನಿಸುತ್ತಿದೆ ಎಂದು ಪತ್ರದಲ್ಲಿ ಆರೋಪಿಸಲಾಗಿದೆ. ವಕೀಲರ ಯಾವ ವರ್ಗವು ಹೀಗೆ ಮಾಡುತ್ತಿದೆ ಎಂಬುದನ್ನು ಪತ್ರದಲ್ಲಿ ಉಲ್ಲೇಖಿಸಿಲ್ಲ.

ಹಿಂದೆಲ್ಲ ಬಹಳ ಚೆನ್ನಾಗಿತ್ತು, ನ್ಯಾಯಾಲಯಗಳ ಪಾಲಿನ ಸುವರ್ಣಯುಗವೊಂದು ಇತ್ತು ಎನ್ನುವ ಈ ಗುಂಪು, ಈಗ ಕೋರ್ಟ್‌ಗಳಲ್ಲಿ ನಡೆಯುತ್ತಿರುವುದು ಹಿಂದಿನಂತೆ ಇಲ್ಲ ಎಂಬ ಸುಳ್ಳು ಸಂಕಥನವೊಂದನ್ನು ಸೃಷ್ಟಿಸುತ್ತಿದೆ ಎಂದು ಪತ್ರವು ಹೇಳಿದೆ. ಈ ಗುಂಪಿನ ಹೇಳಿಕೆಗಳು ರಾಜಕೀಯ ಲಾಭಕ್ಕಾಗಿ ನ್ಯಾಯಾಲಯಗಳ ಮೇಲೆ ಪ್ರಭಾವ ಬೀರುವ ಹಾಗೂ ಅವುಗಳಿಗೆ ಮುಜುಗರ ಉಂಟುಮಾಡುವ ಗುರಿ ಹೊಂದಿವೆ ಎಂದು ಕೂಡ ಪತ್ರದಲ್ಲಿ ಹೇಳಲಾಗಿದೆ.

'ರಾಜಕೀಯ ಪ್ರಕರಣಗಳಲ್ಲಿ, ಅದರಲ್ಲೂ ಮುಖ್ಯವಾಗಿ ರಾಜಕಾರಣಿಗಳು ಭ್ರಷ್ಟಾಚಾರದ ಆರೋಪ ಹೊತ್ತಿರುವ ಪ್ರಕರಣಗಳಲ್ಲಿ, ಒತ್ತಡ ತರುವ ಇವರ ತಂತ್ರಗಾರಿಕೆಯು ಬಹಳ ಸ್ಪಷ್ಟವಾಗಿ ಗೋಚರಿಸುತ್ತಿದೆ. ಇಂತಹ ತಂತ್ರಗಾರಿಕೆಯು ನಮ್ಮ ನ್ಯಾಯಾಲಯಗಳಿಗೆ ಧಕ್ಕೆ ಉಂಟುಮಾಡುತ್ತಿದೆ ಹಾಗೂ ನಮ್ಮ ಪ್ರಜಾತಾಂತ್ರಿಕ ವ್ಯವಸ್ಥೆಗೆ ಅಪಾಯ ಸೃಷ್ಟಿಸುತ್ತಿದೆ' ಎಂದು ವಿವರಿಸಿದ್ದಾರೆ.

'ನಮ್ಮ ನ್ಯಾಯಾಲಯಗಳನ್ನು ಕಾನೂನಿನ ಅನ್ವಯ ಆಡಳಿತ ನಡೆಯುತ್ತಿಲ್ಲದ ದೇಶಗಳಿಗೆ ಹೋಲಿಸುವ ಮಟ್ಟಕ್ಕೆ ಇವರು ಇಳಿದಿದ್ದಾರೆ, ನಮ್ಮ ನ್ಯಾಯಾಂಗದ ಸಂಸ್ಥೆಗಳು ನ್ಯಾಯ ಸಮ್ಮತವಲ್ಲದ ರೀತಿಯಲ್ಲಿ ನಡೆದುಕೊಳ್ಳುತ್ತಿವೆ ಎಂದು ಆರೋಪಿಸುತ್ತಿದ್ದಾರೆ. ಇವು ಟೀಕೆಗಳಷ್ಟೇ ಅಲ್ಲ. ಸಾರ್ವಜನಿಕರು ದೇಶದ ನ್ಯಾಯಾಂಗದ ಮೇಲೆ ಇರಿಸಿರುವ ವಿಶ್ವಾಸವನ್ನು ಹಾಳುವ ಮಾಡುವ ಉದ್ದೇಶದ ನೇರ ದಾಳಿಗಳು ಇವು' ಎಂದು ಪತ್ರದಲ್ಲಿ ಆರೋಪಿಸಲಾಗಿದೆ. ಇವರು 'ನಾವು ಹೇಳಿದ್ದೇ ಸತ್ಯ' ಎಂಬ ಧೋರಣೆಯನ್ನು ಬೆಳೆಸಿಕೊಂಡಿದ್ದಾರೆ. ತಮಗೆ ಸರಿಕಂಡ ತೀರ್ಪುಗಳನ್ನು ಹೊಗಳುತ್ತಾರೆ, ತಾವು ಒಪ್ಪದ ತೀರ್ಪುಗಳನ್ನು ನಿಂದಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಲಾಗಿದೆ.

'ಕೆಲವರು ತಮಗೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆ ನಡೆಸುವ ನ್ಯಾಯಮೂರ್ತಿ ಯಾರಿರಬೇಕು ಎಂಬ ವಿಚಾರವಾಗಿ ಪ್ರಭಾವ ಬೀರುವ ಯತ್ನ ನಡೆಸಿದ್ದಾರೆ, ಆ ಪ್ರಕರಣದಲ್ಲಿ ನಿರ್ದಿಷ್ಟ ರೀತಿಯಲ್ಲಿ ಆದೇಶ ಪಡೆದುಕೊಳ್ಳಲು ನ್ಯಾಯಮೂರ್ತಿಗಳ ಮೇಲೆ ಒತ್ತಡ ತರಲು ಸಾಮಾಜಿಕ ಜಾಲತಾಣಗಳ ಮೂಲಕ ಸುಳ್ಳುಗಳನ್ನು ಹರಡುವ ಕೆಲಸ ಮಾಡುತ್ತಿದ್ದಾರೆ' ಎಂದು ಪತ್ರದಲ್ಲಿ ಹೇಳಲಾಗಿದೆ.

ಸುಪ್ರೀಂ ಕೋರ್ಟ್ ಗಟ್ಟಿಯಾಗಿ ನಿಲ್ಲಬೇಕು, ಇಂತಹ ದಾಳಿಗಳಿಂದ ನ್ಯಾಯಾಲಯಗಳನ್ನು ರಕ್ಷಿಸಲು ಕ್ರಮ ಕೈಗೊಳ್ಳಬೇಕು ಎಂದು ಪತ್ರ ಬರೆದಿರುವವರು ಕೋರಿದ್ದಾರೆ.

'ಹಳಸಿದ ರಾಜಕೀಯ ಕಾರ್ಯಸೂಚಿ'

'ಪಟ್ಟಭದ್ರ ಹಿತಾಸಕ್ತಿಗಳ ಗುಂಪೊಂದು ಹುರುಳಿಲ್ಲದ ತರ್ಕ ಹಾಗೂ ಹಳಸಿಹೋಗಿರುವ ರಾಜಕೀಯ ಕಾರ್ಯಸೂಚಿಯನ್ನು ಆಧಾರವಾಗಿ ಇರಿಸಿಕೊಂಡು ನ್ಯಾಯಾಂಗದ ಮೇಲೆ ಒತ್ತಡ ತರಲು, ನ್ಯಾಯಾಂಗದ ಪ್ರಕ್ರಿಯೆಯ ಮೇಲೆ ಪ್ರಭಾವ ಬೀರಲು ಹಾಗೂ ನಮ್ಮ ನ್ಯಾಯಾಲಯಗಳಿಗೆ ಕೆಟ್ಟ ಹೆಸರು ತರಲು ನಡೆಸಿರುವ ಯತ್ನದ ಬಗ್ಗೆ ತೀವ್ರ ಕಳವಳವನ್ನು ವ್ಯಕ್ತಪಡಿಸಿ ನಾವು ಈ ಪತ್ರವನ್ನು ಬರೆಯುತ್ತಿದ್ದೇವೆ' ಎಂದು ಪತ್ರದಲ್ಲಿ ಹೇಳಲಾಗಿದೆ.

ಆದೀಶ್ ಅಗರ್ವಾಲ್, ಚೇತನ್ ಮಿತ್ತಲ್, ಪಿಂಕಿ ಆನಂದ್, ಹಿತೇಶ್ ಜೈನ್, ಉಜ್ವಲಾ ಪವಾರ್ ಮತ್ತು ಸ್ವರೂಪಮಾ ಚತುರ್ವೇದಿ ಅವರು ಈ ಪತ್ರಕ್ಕೆ ಸಹಿ ಮಾಡಿರುವ ಕೆಲವು ಪ್ರಮುಖರು. ಈ ಪತ್ರದಲ್ಲಿ ಯಾವುದೇ ನಿರ್ದಿಷ್ಟ ಪ್ರಕರಣವನ್ನು ಉಲ್ಲೇಖಿಸಿಲ್ಲ. ವಿರೋಧ ಪಕ್ಷಗಳ ಪ್ರಮುಖರು ಆರೋಪಿಗಳಾಗಿರುವ ಹಲವು ಪ್ರಕರಣಗಳು ಕೋರ್ಟ್‌ಗಳಲ್ಲಿ ವಿಚಾರಣೆಯ ಹಂತದಲ್ಲಿ ಇರುವ ಸಂದರ್ಭದಲ್ಲಿ ಈ ಪತ್ರ ಬರೆಯಲಾಗಿದೆ.

ಬೆದರಿಕೆ ಕಾಂಗ್ರೆಸ್ ಸಂಸ್ಕೃತಿ: ಮೋದಿ

ನವದೆಹಲಿ (ಪಿಟಿಐ): ಬೇರೊಬ್ಬರನ್ನು ಬೆದರಿಸುವ ಕೆಲಸ ಮಾಡುವುದು 'ಹಿಂದಿನಿಂದಲೂ ಬಂದಿರುವ ಕಾಂಗ್ರೆಸ್ ಸಂಸ್ಕೃತಿ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಹೇಳಿದ್ದಾರೆ.

600ಕ್ಕೂ ಹೆಚ್ಚು ವಕೀಲರು ಸಿಜೆಐ ಅವರನ್ನು ಉದ್ದೇಶಿಸಿ ಬರೆದ ಪತ್ರಕ್ಕೆ ಪ್ರತಿಕ್ರಿಯೆಯಾಗಿ ಮೋದಿ ಅವರು ಹೀಗೆ ಹೇಳಿದ್ದಾರೆ. ವಕೀಲರ ಪತ್ರವನ್ನು ಪ್ರಕಟಿಸಿರುವ 'ಎಕ್ಸ್' ಪೋಸ್ಟ್ ಒಂದನ್ನು ಟ್ಯಾಗ್ ಮಾಡಿ ಮೋದಿ ಅವರು ಹೀಗೆ ಹೇಳಿದ್ದಾರೆ.

'ಐದು ದಶಕಗಳ ಹಿಂದೆಯೇ ಕಾಂಗ್ರೆಸ್ಸಿನವರು ಸಹಮತದ ನ್ಯಾಯಾಂಗದ ಅಗತ್ಯ ಇದೆ ಎಂದು ಹೇಳಿದ್ದರು. ಅವರಿಗೆ ತಮ್ಮ ಸ್ವಾರ್ಥಕ್ಕೆ ಇತರರಿಂದ ಸಹಮತ ಬೇಕು. ಆದರೆ ರಾಷ್ಟ್ರದ ಹಿತಾಸಕ್ತಿಯ ವಿಚಾರವಾಗಿ ಅವರು ಯಾವುದೇ ಬದ್ಧತೆ ತೋರಲು ಹಿಂಜರಿಯುತ್ತಾರೆ' ಎಂದು ಮೋದಿ ಅವರು ಎಕ್ಸ್ ವೇದಿಕೆಯಲ್ಲಿ ಬರೆದಿದ್ದಾರೆ.

'140 ಕೋಟಿ ಭಾರತೀಯರು ಅವರನ್ನು (ಕಾಂಗ್ರೆಸ್) ತಿರಸ್ಕರಿಸುತ್ತಿರುವುದರ ಹಿಂದೆ ಆಶ್ಚರ್ಯಕ್ಕೆ ಕಾರಣವಾಗುವ ಸಂಗತಿಗಳು ಯಾವುವೂ ಇಲ್ಲ' ಎಂದು ಕೂಡ ಅವರು ಬರೆದಿದ್ದಾರೆ.

ಸಾಧನೆ ತಿಳಿಸಿ: ಕಾಂಗ್ರೆಸ್ ಆಗ್ರಹ

'ಮಹಿಳೆ, ಮಕ್ಕಳ ಸಮಸ್ಯೆಗಳ ಬಗ್ಗೆ ಸಚಿವೆ ಇರಾನಿ ಮೌನ'

ನವದೆಹಲಿ(ಪಿಟಿಐ): ಮಹಿಳೆ ಮತ್ತು ಮಕ್ಕಳಿಗೆ ಸಂಬಂಧಿಸಿದ ಸಮಸ್ಯೆಗಳ ಕುರಿತು ಕೇಂದ್ರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಸ್ಮೃತಿ ಇರಾನಿ ಮೌನ ತಾಳಿದ್ದಾರೆ ಎಂದು ಟೀಕಿಸಿರುವ ಕಾಂಗ್ರೆಸ್, ತಮ್ಮ ಸಚಿವಾಲಯದ 10 ವರ್ಷಗಳ ಸಾಧನೆ ಕುರಿತ ವಿವರಗಳನ್ನು ಜನರ ಮುಂದಿಡುವಂತೆ ಗುರುವಾರ ಒತ್ತಾಯಿಸಿದೆ.

ಪಕ್ಷದ ಕೇಂದ್ರ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅಖಿಲ ಭಾರತ ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ಅಲ್ಕಾ ಲಾಂಬಾ, 'ಮಹಿಳೆ ಮತ್ತು ಮಕ್ಕಳಿಗೆ ಸಂಬಂಧಿಸಿ ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಇತ್ತೀಚೆಗೆ ಕೇಳಿದ್ದ ಹಲವಾರು ಪ್ರಶ್ನೆಗಳಿಗೆ ಇರಾನಿ ಅವರು ಉತ್ತರ ನೀಡಿಯೇ ಇಲ್ಲ' ಎಂದು ಟೀಕಿಸಿದರು.

'ಸಚಿವೆ ಸ್ಮೃತಿ ಇರಾನಿ ಅವರು ಪತ್ರಿಕಾಗೋಷ್ಠಿ ನಡೆಸಿ, ತಮ್ಮ ಸಚಿವಾಲಯದ ಸಾಧನೆಗಳ ವರದಿ ಬಿಡುಗಡೆ ಮಾಡುತ್ತಾರೆ ಎಂದು ನಿರೀಕ್ಷಿಸಿದ್ದೆವು. ಅವರು ಉತ್ತರಿಸುವ ಗೋಜಿಗೆ ಹೋಗಿಲ್ಲ. ಹೀಗಾಗಿ, ಈ ಎಲ್ಲ ವೈಫಲ್ಯಗಳಿಗೆ ಇರಾನಿ ಅವರನ್ನೇ ಉತ್ತರದಾಯಿಯನ್ನಾಗಿ ಮಾಡಲು ನಿರ್ಧರಿಸಿದ್ದೇವೆ' ಎಂದು ಹೇಳಿದರು.

ಸಚಿವೆ ಸ್ಮೃತಿ ಇರಾನಿ ಅವರು ಸುದ್ದಿಗೋಷ್ಠಿ ನಡೆಸಿ ಸಾಧನೆಗಳನ್ನು ವಿವರಿಸಬೇಕು. ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಉತ್ತರ ನೀಡುವುದಲ್ಲ
ಅಲ್ಕಾ ಲಾಂಬಾ, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ

'ಕೋವಿಡ್–19 ಪಿಡುಗಿನ ವೇಳೆ ಮೃತಪಟ್ಟ ಅಂಗನವಾಡಿ ಕಾರ್ಯಕರ್ತೆಯರ ಕುರಿತ ದತ್ತಾಂಶ ಇಲ್ಲ ಎಂಬುದಾಗಿ ಸಂಸತ್‌ನಲ್ಲಿ ಇರಾನಿ ಉತ್ತರಿಸಿದ್ದರು. ಇಲ್ಲಿ ಕೂಡ ಭ್ರಷ್ಟಾಚಾರದ ದುರ್ನಾತ ಬಡಿಯುತ್ತಿದೆ' ಎಂದು ಟೀಕಿಸಿದ ಅವರು, 'ಈಗಲಾದರೂ, ಅವರು ತಮ್ಮ ಸಚಿವಾಲಯದ 10 ವರ್ಷಗಳ ಸಾಧನೆಗಳನ್ನು ಜನರಿಗೆ ತಿಳಿಸುತ್ತಾರೆ ಎಂಬ ಆಶಯ ವ್ಯಕ್ತಪಡಿಸುತ್ತೇನೆ' ಎಂದು ಹೇಳಿದರು.

ಗಡಿ: ಭಾರತ– ಚೀನಾ ಮಾತುಕತೆ

ನವದೆಹಲಿ (ಪಿಟಿಐ): ಪೂರ್ವ ಲಡಾಖ್ ಗಡಿ ವಿಚಾರಕ್ಕೆ ಸಂಬಂಧಿಸಿದಂತೆ ಭಾರತ ಮತ್ತು ಚೀನಾ ರಾಜತಾಂತ್ರಿಕರ ನಡುವೆ ಮತ್ತೊಂದು ಸುತ್ತಿನ ಮಾತುಕತೆ ನಡೆದಿದ್ದು, ಉಭಯ ದೇಶಗಳು ರಾಜತಾಂತ್ರಿಕ ಮತ್ತು ಸೇನಾ ಕಾರ್ಯವಿಧಾನಗಳ ಮೂಲಕ ನಿಯಮಿತ ಸಂಪರ್ಕ ಕಾಯ್ದುಕೊಳ್ಳಲು ಸಮ್ಮತಿಸಿವೆ.

ಭಾರತ ಮತ್ತು ಚೀನಾ ನಡುವಿನ ಗಡಿ ವ್ಯವಹಾರ (ಡಬ್ಲ್ಯುಎಂಸಿಸಿ) ಸಮಾಲೋಚನೆ ಮತ್ತು ಸಮನ್ವಯ ಸಾಧಿಸುವ ಉದ್ದೇಶದಿಂದ ಬೀಜಿಂಗ್‌ನಲ್ಲಿ ಬುಧವಾರ 29ನೇ ಸುತ್ತಿನ ಉನ್ನತ ಮಟ್ಟದ ಸಭೆ ನಡೆಯಿತು.

'ಗಡಿಯಲ್ಲಿ ಸೇನಾ ವಾಪಸಾತಿ, ವಾಸ್ತವ ನಿಯಂತ್ರಣ ರೇಖೆ (ಎಲ್‌ಎಸಿ) ಉದ್ದಕ್ಕೂ ಇರುವ ಸಮಸ್ಯೆಗಳ ಪರಿಹಾರಕ್ಕೆ ಸಂಬಂಧಿಸಿದಂತೆ ಎರಡೂ ಕಡೆಯಿಂದ ಅಭಿಪ್ರಾಯಗಳು ವಿನಿಮಯವಾದವು' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಗುರುವಾರ ತಿಳಿಸಿದೆ.

ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಜಂಟಿ ಕಾರ್ಯದರ್ಶಿ (ಪೂರ್ವ ಏಷ್ಯಾ) ಅವರು ಭಾರತೀಯ ನಿಯೋಗದ ನೇತೃತ್ವ ವಹಿಸಿದ್ದರು. ಚೀನಾದ ವಿದೇಶಾಂಗ ಸಚಿವಾಲಯದ ಗಡಿ ಮತ್ತು ಸಾಗರ ವಿಭಾಗದ ಮಹಾ ನಿರ್ದೇಶಕರು ಚೀನಾ ನಿಯೋಗವನ್ನು ಮುನ್ನಡೆಸಿದರು ಎಂದು ಪ್ರಕಟಣೆ ತಿಳಿಸಿದೆ.

'ಎರಡೂ ಕಡೆಯವರು ರಾಜತಾಂತ್ರಿಕ ಮತ್ತು ಸೇನಾ ಕಾರ್ಯವಿಧಾನಗಳ ಮೂಲಕ ಮಾತುಕತೆ ಮುಂದುವರಿಸಲು ಮತ್ತು ಅಸ್ತಿತ್ವದಲ್ಲಿರುವ ದ್ವಿಪಕ್ಷೀಯ ಒಪ್ಪಂದಗಳು ಮತ್ತು ಶಿಷ್ಟಾಚಾರಗಳಿಗೆ ಅನುಗುಣವಾಗಿ ಗಡಿ ಪ್ರದೇಶದಲ್ಲಿ ಶಾಂತಿ ಮತ್ತು ನೆಮ್ಮದಿಯನ್ನು ಎತ್ತಿಹಿಡಿಯುವ ಅಗತ್ಯದ ಬಗ್ಗೆ ಸಮ್ಮತಿಸಿದರು' ಎಂದು ಅದು ಹೇಳಿದೆ.

'ಚಾಲ್ತಿಯಲ್ಲಿರುವ ಒಪ್ಪಂದಗಳು ಮತ್ತು ಮಾರ್ಗದರ್ಶಿ ತತ್ವಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಉಭಯ ದೇಶಗಳು ಒಪ್ಪಿಕೊಂಡಿದ್ದೇವೆ. ಗಡಿ ಪ್ರದೇಶದಲ್ಲಿ ಶಾಂತಿ ನೆಲೆಸಲು ಸಹಮತ ವ್ಯಕ್ತಪಡಿಸಲಾಗಿದೆ' ಎಂದು ಚೀನಾ ವಿದೇಶಾಂಗ ಸಚಿವಾಲಯದ ಪ್ರಕಟಣೆ ತಿಳಿಸಿದೆ. ಎರಡೂ ದೇಶಗಳ ವಿದೇಶಾಂಗ ವ್ಯವಹಾರ, ರಕ್ಷಣೆ, ವಲಸೆ ಮತ್ತು ಇತರ ಇಲಾಖೆಗಳ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಬಾಲಾಜಿ ಅರ್ಜಿ: ಇ.ಡಿಗೆ ನೋಟಿಸ್

ಚೆನ್ನೈ(ಪಿಟಿಐ): ತಮ್ಮ ವಿರುದ್ಧದ ಪ್ರಕರಣದಲ್ಲಿ ಮತ್ತೆ ವಾದ ಮಂಡನೆಗೆ ಅವಕಾಶ ನೀಡುವಂತೆ ಕೋರಿ ಡಿಎಂಕೆ ಸಚಿವ ವಿ. ಸೆಂಥಿಲ್ ಬಾಲಾಜಿ ಸಲ್ಲಿಸಿರುವ ಹೊಸ ಅರ್ಜಿಗೆ ಸಂಬಂಧಿಸಿ ಇಲ್ಲಿನ ಸೆಷನ್ಸ್ ಕೋರ್ಟ್, ಜಾರಿ ನಿರ್ದೇಶನಾಲಯಕ್ಕೆ (ಇ.ಡಿ.) ಗುರುವಾರ ನೋಟಿಸ್ ಜಾರಿ ಮಾಡಿದೆ.

ಹಣದ ಅಕ್ರಮ ವರ್ಗಾವಣೆ ಪ್ರಕರಣವೊಂದರಲ್ಲಿ ಬಾಲಾಜಿ ಅವರನ್ನು ಜಾರಿ ನಿರ್ದೇಶನಾಲಯ ಕಳೆದ ವರ್ಷ ಜೂನ್‌ನಲ್ಲಿ ಬಂಧಿಸಿತ್ತು. ಪ್ರಕರಣ ರದ್ದು ಕೋರಿ ಬಾಲಾಜಿ ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿ, ಬಾಲಾಜಿ ಪರ ವಾದ ಮಂಡನೆಯನ್ನು ಕೋರ್ಟ್ ಮುಕ್ತಾಯಗೊಳಿಸಿತ್ತು.

ಬಾಲಾಜಿ ಅವರ ಅರ್ಜಿ ವಿಚಾರಣೆ ನಡೆಸಿದ 3ನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಡಿ.ವಿ.ಆನಂದ್, ಇ.ಡಿಗೆ ನೋಟಿಸ್ ಜಾರಿ ಮಾಡಿ ವಿಚಾರಣೆಯನ್ನು ಏಪ್ರಿಲ್ 4ಕ್ಕೆ ಮುಂದೂಡಿದರು.

ಸೆಂಥಿಲ್ ಬಾಲಾಜಿ

ತಮ್ಮ ವಿರುದ್ಧದ ಪ್ರಕರಣ ರದ್ದು ಮಾಡುವಂತೆ ಕೋರಿ ಸಚಿವ ಸೆಂಥಿಲ್ ಬಾಲಾಜಿ ಸಲ್ಲಿಸಿದ್ದ ಮೂಲ ಅರ್ಜಿ ವಿಚಾರಣೆ ಪೂರ್ಣಗೊಳಿಸಿದ್ದ ಪ್ರಧಾನ ಸೆಷನ್ಸ್ ನ್ಯಾಯಾಧೀಶ ಎಸ್. ಅಲ್ಲಿ ಅವರು, ಮಾ.22ರಂದು ಆದೇಶವನ್ನು ಕಾಯ್ದಿರಿಸಿದ್ದರು. ಈ ನಡುವೆ, ಬಾಲಾಜಿ ಅವರು ಹೊಸದಾಗಿ ಈ ಅರ್ಜಿ ಸಲ್ಲಿಸಿದ್ದಾರೆ.

'ಈ ಹಿಂದೆ ಸೂಚನೆ ನೀಡಿದ್ದರೂ ಬ್ಯಾಂಕ್ ಅಧಿಕಾರಿಗಳು ಮೂಲ ಚಲನ್‌ಗಳನ್ನು ಹಾಜರುಪಡಿಸದ ಕಾರಣ, ಸಮರ್ಥವಾದ ಮಂಡನೆ ಸಾಧ್ಯವಾಗುತ್ತಿಲ್ಲ. ಹೀಗಾಗಿ, ಮತ್ತೆ ವಾದ ಮಂಡನೆಗೆ ಅವಕಾಶ ನೀಡಬೇಕು. ಇಲ್ಲದೇ ಹೋದರೆ ನನಗೆ ಸರಿಪಡಿಸಲಾಗದ ಹಾನಿ ಮತ್ತು ಸಮಸ್ಯೆಯಾಗಲಿದೆ' ಎಂದು ಅವರು ಅರ್ಜಿಯಲ್ಲಿ ವಿವರಿಸಿದ್ದಾರೆ.

'ಸಿಎಎ ಬಗ್ಗೆ ರಾಹುಲ್ ಮೌನ'

ತಿರುವನಂತಪುರ (ಪಿಟಿಐ): 'ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಕುರಿತಂತೆ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಮೌನ ವಹಿಸಿದ್ದಾರೆ' ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ದೂರಿದ್ದಾರೆ.

'ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರವು ಸಿಎಎ ಜಾರಿಗೆ ನಿರ್ಧಾರ ತೆಗೆದುಕೊಂಡರೂ, ವಯನಾಡ್ ಸಂಸದರು ತಮ್ಮ ನೇತೃತ್ವದಲ್ಲಿ ನಡೆದ ಭಾರತ್ ಜೋಡೊ ನ್ಯಾಯ ಯಾತ್ರೆಯ ಸಂದರ್ಭ ಅದರ ಬಗ್ಗೆ ಒಂದೇ ಒಂದು ಪದವನ್ನು ಮಾತನಾಡಲಿಲ್ಲ' ಎಂದು ಸಿಪಿಎಂ ಆಯೋಜಿಸಿದ್ದ ಸಿಎಎ ವಿರೋಧಿ ರ್‍ಯಾಲಿಯಲ್ಲಿ ವಿಜಯನ್ ಅವರು ವಾಗ್ದಾಳಿ ನಡೆಸಿದರು.

'ಯಾತ್ರೆಯ ವೇಳೆಯಲ್ಲೂ ಸಿಎಎ ಬಗ್ಗೆ ಮಾತನಾಡದ ರಾಹುಲ್, ನಂತರವೂ ಈ ಕುರಿತಂತೆ ಏನೊಂದೂ ಹೇಳುತ್ತಿಲ್ಲ' ಎಂದು ಕೂಡ ವಿಜಯನ್ ಆರೋಪಿಸಿದ್ದಾರೆ.

ಪ್ರಭಾಕರ್‌ಗೆ ಚೌಧರಿ ಪ್ರಶಂಸೆ

ಕೋಲ್ಕತ್ತ (ಪಿಟಿಐ): ಚುನಾವಣಾ ಬಾಂಡ್ ಬಗ್ಗೆ ಅರ್ಥಶಾಸ್ತ್ರಜ್ಞ ಪರಕಾಲ ಪ್ರಭಾಕರ್ ಅವರು ವ್ಯಕ್ತಪಡಿಸಿರುವ ಅನಿಸಿಕೆಗೆ ಪಶ್ಚಿಮ ಬಂಗಾಳ ಕಾಂಗ್ರೆಸ್ ಅಧ್ಯಕ್ಷ ಅಧೀರ್ ರಂಜನ್ ಚೌಧರಿ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಪ್ರಭಾಕರ್ ಅವರು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಪತಿ. 'ಚುನಾವಣಾ ಬಾಂಡ್ ಯೋಜನೆಯು ಹಣದ ಸುಲಿಗೆಗೆ ಇದ್ದ ವ್ಯವಸ್ಥಿತ ಮಾರ್ಗವಾಗಿತ್ತು' ಎಂದು ಚೌಧರಿ ಟೀಕಿಸಿದ್ದಾರೆ. 'ಪ್ರಭಾಕರ್ ಅವರು ಸತ್ಯ ಹೇಳಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಧನ್ಯವಾದ ಅರ್ಪಿಸುತ್ತೇನೆ' ಎಂದು ಚೌಧರಿ ಸುದ್ದಿಗಾರರ ಬಳಿ ಹೇಳಿದ್ದಾರೆ.

'ಚುನಾವಣಾ ಬಾಂಡ್ ಯೋಜನೆಯು ಭಾರತದ ಅತಿದೊಡ್ಡ ಹಗರಣ ಮಾತ್ರವೇ ಅಲ್ಲ, ಅದು ಇಡೀ ಜಗತ್ತಿನ ಅತಿದೊಡ್ಡ ಹಗರಣ' ಎಂದು ಪ್ರಭಾಕರ್ ಅವರು ಟಿ.ವಿ. ಸುದ್ದಿ ವಾಹಿನಿಯೊಂದಕ್ಕೆ ಹೇಳಿದ್ದರು. 'ರಾಹುಲ್ ಗಾಂಧಿ ಮತ್ತು ಕಾಂಗ್ರೆಸ್ಸಿನ ನಾವೆಲ್ಲ ಈ ಮಾತನ್ನು ಬಹುಕಾಲದಿಂದಲೂ ಹೇಳುತ್ತ ಬಂದಿದ್ದೇವೆ... ಇದು ಜನರನ್ನು ಲೂಟಿ ಮಾಡಲು ಇರುವ ವ್ಯವಸ್ಥಿತ ಮಾರ್ಗ ಎಂಬುದನ್ನು ಅರ್ಥ ಮಾಡಿಕೊಂಡಿದ್ದೆವು' ಎಂದು ಚೌಧರಿ ಹೇಳಿದ್ದಾರೆ.



ಅಧೀರ್ ರಂಜನ್ ಚೌಧರಿ

ಹಣ ಇಲ್ಲದಿರುವ ಕಾರಣಕ್ಕೆ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸದೆ ಇರಲು ನಿರ್ಮಲಾ ಅವರು ತೀರ್ಮಾನಿಸಿದ್ದರ ಬಗ್ಗೆ ಪ್ರತಿಕ್ರಿಯಿಸಿದ ಚೌಧರಿ, 'ನಿರ್ಮಲಾ ಅವರು ಸಂದರ್ಭದ ಬಲಿಪಶು' ಎಂದು ಹೇಳಿದ್ದಾರೆ.

'ದಕ್ಷಿಣ ಭಾರತದಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸಲು ಬಹಳ ಹಣ ಬೇಕಾಗಬಹುದು. ಹಾಗಾಗಿಯೇ ನಿರ್ಮಲಾ ಅವರು ಚುನಾವಣೆಗೆ ಸ್ಪರ್ಧಿಸದೆ ಇರುವ ತೀರ್ಮಾನ ಕೈಗೊಂಡಿರಬಹುದು' ಎಂದು ಚೌಧರಿ ಅವರು ಹೇಳಿದರು.

ಶಾಂತಿಪಾಲಕರ ರಕ್ಷಣೆಗೆ ಕ್ರಮ

ವಿಶ್ವಸಂಸ್ಥೆ (ಪಿಟಿಐ): ವಿಶ್ವಸಂಸ್ಥೆಯ ಶಾಂತಿಪಾಲಕರ ವಿರುದ್ಧ ನಡೆಯುವ ಅಪರಾಧಗಳನ್ನು ದಾಖಲಿಸಲು ಹಾಗೂ ಅಪರಾಧಿಗಳನ್ನು ಹೊಣೆಗಾರರನ್ನಾಗಿಸುವ ಕುರಿತು ಮೇಲ್ವಿಚಾರಣೆ ನಡೆಸಲು ಭಾರತವು ಹೊಸ ದತ್ತಾಂಶ ವ್ಯವಸ್ಥೆಯನ್ನು ಪ್ರಾರಂಭಿಸಿದೆ ಎಂದು ವಿಶ್ವಸಂಸ್ಥೆಯ ಭಾರತದ ಪ್ರತಿನಿಧಿ ರುಚಿರಾ ಕಾಂಬೋಜ್ ಗುರುವಾರ ತಿಳಿಸಿದ್ದಾರೆ.

ಮಂಗಳವಾರ ಭಾರತದ ನೇತೃತ್ವದಲ್ಲಿ ನಡೆದ 'ಗ್ರೂಪ್ ಆಫ್ ಫ್ರೆಂಡ್ಸ್' ಉನ್ನತ ಮಟ್ಟದ ಸಭೆಯಲ್ಲಿ ರುಚಿರಾ ಹೊಸ ದತ್ತಾಂಶ ವ್ಯವಸ್ಥೆಯನ್ನು ಅನಾವರಣಗೊಳಿಸಿದರು. ಇದು ಹೆಮ್ಮೆಯ ಸಂಗತಿಯಾಗಿದೆ ಎಂದು ಅವರು 'ಎಕ್ಸ್' ಖಾತೆಯಲ್ಲಿ ತಿಳಿಸಿದ್ದಾರೆ.

ಶಾಂತಿಪಾಲಕರ ವಿರುದ್ಧ ದುರುದ್ದೇಶಪೂರಿತ ಪ್ರಕರಣಗಳು ದಾಖಲಾಗಿದ್ದರೆ, ಮೇಲ್ವಿಚಾರಣೆ ಮಾಡಲು ಮತ್ತು ಪರಿಹರಿಸಲು ಸಚಿವಾಲಯ, ರಾಯಭಾರ ಕಚೇರಿ ಮತ್ತು ಸದಸ್ಯ ರಾಷ್ಟ್ರಗಳಿಗೆ ಅಧಿಕಾರ ನೀಡುತ್ತದೆ ಎಂದು ವಿಶ್ವಸಂಸ್ಥೆಗೆ ಭಾರತದ ಪತ್ರಿಕಾ ಪ್ರಕಟಣೆ ತಿಳಿಸಿದೆ.

ಭೋಜಶಾಲಾ: ಮುಂದುವರಿದ ಸಮೀಕ್ಷೆ

ಧರ್ (ಪಿಟಿಐ): ಮಧ್ಯ ಪ್ರದೇಶದ ವಿವಾದಿತ ಭೋಜಶಾಲಾ/ಕಮಲ ಮೌಲಾ ಮಸೀದಿ ಸಂಕೀರ್ಣದಲ್ಲಿ ಸಮೀಕ್ಷೆ ಮುಂದುವರೆದಿದೆ.

ಮಧ್ಯಪ್ರದೇಶದ ಹೈಕೋರ್ಟ್ ಆದೇಶದ ಮೇರೆಗೆ ಪೊಲೀಸರು ಮತ್ತು ಹಿರಿಯ ಅಧಿಕಾರಿಗಳ ಉಪಸ್ಥಿತಿಯಲ್ಲಿ ಮಧ್ಯಪ್ರದೇಶದ ಧರ್ ಜಿಲ್ಲೆಯಲ್ಲಿರುವ ವಿವಾದಿತ ಸ್ಥಳದಲ್ಲಿ ಎಎಸ್‌ಐ ಸಮೀಕ್ಷೆ ನಡೆಸುತ್ತಿದೆ. ಸಮೀಕ್ಷೆಯ ಭಾಗವಾಗಿ ಗುರುವಾರ ಮಸೀದಿಯ ಸಂಕೀರ್ಣದ ಹಿಂದೆ 5ರಿಂದ 6 ಅಡಿಗಳಷ್ಟು ಆಳದ ಕಂದಕಗಳನ್ನು ಅಗೆಯಲಾಗಿದೆ.

ವಿವಾದಿತ ಸ್ಥಳದಲ್ಲಿ ವೈಜ್ಞಾನಿಕ ಸಮೀಕ್ಷೆ ನಡೆಸಿ, ವರದಿ ನೀಡುವಂತೆ ಎಎಸ್‌ಐಗೆ ಹೈಕೋರ್ಟ್ ಆದೇಶಿಸಿದೆ.

ಮ್ಯಾಡ್ರಿಡ್ ಸ್ಪೇನ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿ

ಕ್ವಾರ್ಟರ್ ಫೈನಲ್‌ಗೆ ಸಿಂಧು

ಭಾರತದ ಪಿ.ವಿ. ಸಿಂಧು

ಮ್ಯಾಡ್ರಿಡ್ (ಪಿಟಿಐ): ಭಾರತದ ಪಿ.ವಿ. ಸಿಂಧು ಅವರು ಇಲ್ಲಿ ನಡೆಯುತ್ತಿರುವ ಮ್ಯಾಡ್ರಿಡ್ ಸ್ಪೇನ್ ಮಾಸ್ಟರ್ಸ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ ಕ್ವಾರ್ಟರ್ ಫೈನಲ್‌ಗೆ ಮುನ್ನಡೆದರು.

ಗುರುವಾರ ನಡೆದ 16ರ ಘಟ್ಟದ ಪಂದ್ಯದಲ್ಲಿ ಸಿಂಧು 21-14, 21-12ರಿಂದ ಚೀನಾ ತೈಪೆಯ ಹುವಾಂಗ್ ಯು-ಹ್ಸುನ್ ವಿರುದ್ಧ ನೇರ ಗೇಮ್‌ಗಳಿಂದ ಜಯ ಸಾಧಿಸಿದರು.

ಕಳೆದ ಆವೃತ್ತಿಯಲ್ಲಿ ರನ್ನರ್ ಅಪ್ ಸ್ಥಾನ ಪಡೆದಿದ್ದ 28 ವರ್ಷದ ಸಿಂಧು ಮುಂದಿನ ಸುತ್ತಿನಲ್ಲಿ ಆರನೇ ಶ್ರೇಯಾಂಕದ ಸುಪಾನಿಡಾ ಕಟೆಥಾಂಗ್ (ಥಾಯ್ಲೆಂಡ್) ಮತ್ತು ನಟ್ಸುಕಿ ನಿಡೈರಾ (ಜಪಾನ್) ನಡುವಿನ ಪಂದ್ಯದ ವಿಜೇತರನ್ನು ಎದುರಿಸುವರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ 11ನೇ ಸ್ಥಾನದಲ್ಲಿರುವ ಸಿಂಧು ಕೇವಲ 36 ನಿಮಿಷದಲ್ಲಿ ಕ್ವಾಲಿಫೈಯರ್ ಆಟಗಾರ್ತಿ ಹುವಾಂಗ್ ಅವರನ್ನು ಮಣಿಸಿದರು. ನಿಖರ ಆಟ ಮತ್ತು ಆಕರ್ಷಕ ಸ್ಮ್ಯಾಷ್ ಮೂಲಕ ಆರಂಭದಿಂದಲೇ ಮೇಲುಗೈ ಸಾಧಿಸಿದ್ದ ಸಿಂಧು, ಯಾವ ಹಂತದಲ್ಲೂ ಪ್ರತಿಸ್ಪರ್ಧಿಗೆ ಮುನ್ನಡೆ ಸಾಧಿಸಲು ಅವಕಾಶ ನೀಡಲಿಲ್ಲ.

ಆಲ್ ಇಂಗ್ಲೆಂಡ್ ಚಾಂಪಿಯನ್‌ಷಿಪ್ಮತ್ತು ಸ್ವಿಸ್ ಓಪನ್‌ನಲ್ಲಿ ಪ್ರಶಸ್ತಿ ಗೆದ್ದ ಅಗ್ರಶ್ರೇಯಾಂಕದ ಕ್ಯಾರೊಲಿನಾ ಮರಿನ್ (ಸ್ಪೇನ್) ಈ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ. ಹೀಗಾಗಿ, ಪ್ರಶಸ್ತಿಯ ಬರ ಎದುರಿಸುತ್ತಿರುವ ಮಾಜಿ ವಿಶ್ವ ಚಾಂಪಿಯನ್ ಸಿಂಧು ಅವರಿಗೆ ಇಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಳ್ಳುವ ಅವಕಾಶ ಹೆಚ್ಚಿದೆ. ಸಿಂಧು ಕೊನೆಯ ಬಾರಿ 2022ರ ಸಿಂಗಪುರ ಓಪನ್ ಸೂಪರ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದಿದ್ದರು.

ಕಳೆದ ವಾರ ಸ್ವಿಸ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದ ಭಾರತದ ಕಿದಂಬಿ ಶ್ರೀಕಾಂತ್ ಮೊದಲ ಸುತ್ತನಲ್ಲೇ ನಿರಾಸೆ ಅನುಭವಿಸಿದರು.

ಪುರುಷರ ಸಿಂಗಲ್ಸ್‌ನ ಪಂದ್ಯದಲ್ಲಿ ಅವರು 18–21, 15–21ರಿಂದ ಜಪಾನ್‌ನ ಕೂ ಟಕಹಶಿ ಅವರಿಗೆ ಮಣಿದರು.

ಪುರುಷರ ಡಬಲ್ಸ್‌ನಲ್ಲಿ ಧ್ರುವ ಕಪಿಲಾ ಮತ್ತು ಅರ್ಜುನಾ ಎಂ.ಆರ್. ಜೋಡಿಯು ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

16ರ ಘಟ್ಟದ ಪಂದ್ಯದಲ್ಲಿ ಭಾರತದ ಆಟಗಾರರು 21–17, 21–19ರಿಂದ ಸ್ಕಾಟ್ಲೆಂಡ್‌ನ ಮ್ಯಾಥ್ಯೂ ಗ್ರಿಮ್ಲಿ ಮತ್ತು ಕ್ರಿಸ್ಟೋಫರ್ ಗ್ರಿಮ್ಲಿ ಜೋಡಿಯನ್ನು ಹಿಮ್ಮೆಟ್ಟಿಸಿದರು.

‘ಕೋಚ್ ಕಾರ್ಯಶೈಲಿಗೆ ವಿದೇಶಿ ಆಟಗಾರರು ಬೇಸರ’

ದಕ್ಷಿಣ ಆಫ್ರಿಕಾ–ನಮೀಬಿಯಾದ ಮಾಜಿ ಆಲ್ ರೌಂಡರ್ ಡೇವಿಡ್ ವಿಸಾ

ಕೆಕೆಆರ್ ತಂಡದ ಮುಖ್ಯ ಕೋಚ್ ಚಂದ್ರಕಾಂತ್ ಪಂಡಿತ್ ಹಾಗೂ ಫಿಲ್ ಸಾಲ್ಟ್ ಮಾತುಕತೆ. –ಪ್ರಜಾವಾಣಿ ಚಿತ್ರ ಕಿಶೋರ್ ಕುಮಾರ್ ಬೋಳಾರ್

ನವದೆಹಲಿ (ಪಿಟಿಐ): ಐಪಿಎಲ್‌ನ ಹಿಂದಿನ ಆವೃತ್ತಿಯಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಮುಖ್ಯ ಕೋಚ್ ಚಂದ್ರಕಾಂತ್ ಪಂಡಿತ್ ಅವರ ಕಠಿಣ ಕಾರ್ಯ ಶೈಲಿಯಿಂದ ಹಲವಾರು ವಿದೇಶಿ ಕ್ರಿಕೆಟಿಗರು ನಿರಾಸೆಗೊಂಡಿದ್ದಾರೆ ಎಂದು ದಕ್ಷಿಣ ಆಫ್ರಿಕಾ ಮತ್ತು ನಮೀಬಿಯಾದ ಮಾಜಿ ಆಲ್ ರೌಂಡರ್ ಡೇವಿಡ್ ವಿಸಾ ಹೇಳಿದ್ದಾರೆ.

2023 ರಲ್ಲಿ ಕೆಕೆಆರ್ ಪರ ಮೂರು ಐಪಿಎಲ್ ಪಂದ್ಯಗಳನ್ನು ಆಡಿದ 38 ವರ್ಷದ ಆಲ್‌ರೌಂಡರ್, ವಿದೇಶಿ ಕ್ರಿಕೆಟಿಗರು ಹೇಗೆ ವರ್ತಿಸಬೇಕು ಅಥವಾ ಏನು ಧರಿಸಬೇಕು ಎಂಬುದರ ಕುರಿತು ಕೋಚ್ ಅವರ ಬೋಧನೆಯಿಂದ ಸಂತೋಷವಾಗಿರಲಿಲ್ಲ ಎಂದರು.

‘ಅವರು (ಪಂಡಿತ್) ಭಾರತದಲ್ಲಿ ಉಗ್ರಗಾಮಿ ಧೋರಣೆ ತರಬೇತುದಾರ ಎಂದು ಕರೆಯಲ್ಪಡುತ್ತಾರೆ. ಅವರು ತುಂಬಾ ಕಟ್ಟುನಿಟ್ಟು ಮತ್ತು ಶಿಸ್ತಿನ ವ್ಯಕ್ತಿ. ಕೆಲವೊಮ್ಮೆ ಫ್ರ್ಯಾಂಚೈಸಿ ಕ್ರಿಕೆಟ್‌ನಲ್ಲಿ ವಿದೇಶಿ ಆಟಗಾರರನ್ನು ಹೊಂದಿರುವಾಗ, ಅವರು ಹೇಗೆ ವರ್ತಿಸಬೇಕು, ಅವರು ಏನು ಧರಿಸಬೇಕು ಮತ್ತು ಇಡೀ ಸಮಯ ಏನು ಮಾಡಬೇಕು ಎಂಬುದನ್ನು ಯಾರೂ ಬಂದು ಹೇಳುವ ಅಗತ್ಯವಿಲ್ಲ. ಆದ್ದರಿಂದ, ಅದು ಕಠಿಣವಾಗಿತ್ತು’ ಎಂದು ವಿಸಾ ಇತ್ತೀಚೆಗೆ ಪಾಡ್‌ಕಾಸ್ಟ್‌ನಲ್ಲಿ ಹೇಳಿದರು.

ನ್ಯೂಜಿಲೆಂಡ್‌ನ ಬ್ರೆಂಡನ್ ಮೆಕ್ಕಲಂ 2022ರಲ್ಲಿ ಕೋಚ್ ಹುದ್ದೆಯಿಂದ ಕೆಳಗಿಳಿದ ಬಳಿಕ ಪಂಡಿತ್ ಕೆಕೆಆರ್ ಮುಖ್ಯ ಕೋಚ್ ಆಗಿ ಅಧಿಕಾರ ವಹಿಸಿಕೊಂಡಿದ್ದರು. ಐದು ಟೆಸ್ಟ್ ಪಂದ್ಯಗಳನ್ನು ಆಡಿದ ಕೋಚ್, 2018 ಮತ್ತು 2019ರಲ್ಲಿ ಸತತ ರಣಜಿ ಟ್ರೋಫಿ ಪ್ರಶಸ್ತಿಗಳಿಗೆ ವಿದರ್ಭ ತಂಡಕ್ಕೆ ತರಬೇತುದಾರರಾಗಿದ್ದರು. ನಂತರ ಅವರು 2022 ರಲ್ಲಿ ಮಧ್ಯಪ್ರದೇಶವನ್ನು ಚೊಚ್ಚಲ ರಣಜಿ ಪ್ರಶಸ್ತಿಗೆ ಮುನ್ನಡೆಸಿದರು.

2022ರ ಟಿ20 ವಿಶ್ವಕಪ್ ಆಡಿದ ನಮೀಬಿಯಾ ತಂಡದ ಭಾಗವಾಗಿದ್ದ ವಿಸಾ, ‘ಪಂಡಿತ್ ಅವರ ಕೋಚಿಂಗ್ ಶೈಲಿಯ ಬಗ್ಗೆ ಆಟಗಾರರು ಅಸಮಾಧಾನ ಹೊಂದಿರುವುದನ್ನು ನೋಡಿದ್ದೇನೆ. ಎರಡು ಬಾರಿಯ ಚಾಂಪಿಯನ್ ಕೆಕೆಆರ್, ಕಳೆದ ವರ್ಷ ನಿರಾಶಾದಾಯಕ ಪ್ರದರ್ಶನದೊಂದಿಗೆ ಏಳನೇ ಸ್ಥಾನ ಪಡೆದಿತ್ತು ಮತ್ತು ತನ್ನ ಪ್ರತಿಭೆ ಪ್ರದರ್ಶಿಸಲು ಹೆಚ್ಚಿನ ಅವಕಾಶಗಳು ಸಿಗದ ಕಾರಣ ನಿರಾಸೆಗೊಂಡಿದ್ದೇನೆ’ ಎಂದು ಬೇಸರ ವ್ಯಕ್ತಪಡಿಸಿದರು.

ಪಂಡಿತ್ ಪರ ರಸೆಲ್ ಬ್ಯಾಟಿಂಗ್

ಬೆಂಗಳೂರು: ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಮುಖ್ಯ ಕೋಚ್ ಚಂದ್ರಕಾಂತ್ ಪಂಡಿತ್ 'ಉಗ್ರಗಾಮಿ ಧೋರಣೆ’ಯಿಂದ ಫ್ರ್ಯಾಂಚೈಸಿಯಲ್ಲಿರುವ ವಿದೇಶಿ ಆಟಗಾರರು ಬೇಸತ್ತಿದ್ದಾರೆ ಎಂದು ಕ್ರಿಕೆಟಿಗ ಡೇವಿಡ್ ವಿಸಾ ಮಾಡಿರುವ ಆರೋಪವನ್ನು ಆ್ಯಂಡ್ರೆ ರಸೆಲ್ ಅಲ್ಲಗಳೆದಿದ್ದಾರೆ.

ಕೆಕೆಆರ್ ತಂಡದ ಮಾಜಿ ಆಟಗಾರ ಡೇವಿಡ್ ಅವರು ಸದ್ಯ ನಮಿಬಿಯಾ ಲೀಗ್‌ನಲ್ಲಿದ್ದಾರೆ.

ಗುರುವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಭ್ಯಾಸ ನಡೆಸಿದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರಸೆಲ್, ‘ಹೋದ ವರ್ಷದಿಂದಲೂ ಅವರೊಂದಿಗೆ (ಪಂಡಿತ್) ಕಾರ್ಯನಿರ್ವಹಿಸುತ್ತಿದ್ದೇವೆ. ಯಾರಾದರೂ ಹೊಸ ಕೋಚ್ ಜೊತೆಗೆ ಕಾರ್ಯನಿರ್ವಹಿಸುವಾಗ ಒಂದು ವಿಚಾರ ಸ್ಪಷ್ಟವಾಗಿರಬೇಕು. ಅವರ ನಿಯಮ ಮತ್ತು ಕೆಲವು ಪದ್ಧತಿಗಳಿಗೆ ನಾವೂ ಹೊಂದಿಕೊಳ್ಳಬೇಕು. ನಾವೆಲ್ಲರೂ ವೃತ್ತಿಪರರು. ಸುಮ್ಮನೆ ದೂರುತ್ತ ಕೂರುವುದಲ್ಲ’ ಎಂದು ಅವರು ಹೇಳಿದರು

‘ಈ ಫ್ರ್ಯಾಂಚೈಸಿಗೆ ಉತ್ತಮವಾಗಿರುವುದನ್ನು ಕೊಡುವುದು ನನ್ನ ಗುರಿ. ಅವರೂ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ನಾವೂ ಲಯಕ್ಕೆ ಮರಳುತ್ತಿದ್ದೇವೆ’ ಎಂದು ತಿಳಿಸಿದರು.

ಡೈಮಂಡ್ ಲೀಗ್: ಮೇ 10ರಿಂದ ದೋಹಾ ಲೆಗ್

ಋತು ಆರಂಭಕ್ಕೆ ಚೋಪ್ರಾ ಸಿದ್ಧತೆ

ನೀರಜ್ ಚೋಪ್ರಾ

ನವದೆಹಲಿ (ಪಿಟಿಐ): ಒಲಿಂಪಿಕ್ ಮತ್ತು ವಿಶ್ವ ಚಾಂಪಿಯನ್ ಜಾವೆಲಿನ್ ಥ್ರೋಪಟು ನೀರಜ್ ಚೋಪ್ರಾ ಅವರು ಮೇ 10ರಂದು ಆರಂಭವಾಗುವ ಡೈಮಂಡ್ ಲೀಗ್ ಸರಣಿಯ ದೋಹಾ ಲೆಗ್‌ನಲ್ಲಿ ಹೊಸ ಋತು ಆರಂಭಿಸುವ ಸಿದ್ಧತೆಯಲ್ಲಿದ್ದಾರೆ.

ಚೀನಾದ ಹಾಂಗ್‌ಝೌನಲ್ಲಿ ನಡೆದ ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನದ ಪದಕದೊಂದಿಗೆ ತನ್ನ ಹಿಂದಿನ ಋತುವನ್ನು ಮುಗಿಸಿದ್ದ 26 ವರ್ಷದ ಚೋಪ್ರಾ, ಜುಲೈ- ಆಗಸ್ಟ್‌ನಲ್ಲಿ ನಡೆಯುವ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಚಿನ್ನವನ್ನು ಉಳಿಸಿಕೊಳ್ಳುವತ್ತ ಚಿತ್ತ ನೆಟ್ಟಿದ್ದಾರೆ.

2023ರ ಬುಡಾಪೆಸ್ಟ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಐದನೇ ಸ್ಥಾನ ಪಡೆದಿದ್ದ ಭಾರತದ ಮತ್ತೊಬ್ಬ ಜಾವೆಲಿನ್ ಥ್ರೋ ಅಥ್ಲೀಟ್ ಕಿಶೋರ್ ಜೇನಾ ಅವರು ಕತಾರ್ ರಾಜಧಾನಿಯಲ್ಲಿ ನಡೆಯುವ ಡೈಮಂಡ್ ಲೀಗ್‌ಗೆ ಪದಾರ್ಪಣೆ ಮಾಡಲಿದ್ದಾರೆ. ಅವರು ಏಷ್ಯನ್ ಗೇಮ್ಸ್‌ನಲ್ಲಿ 87.54 ಮೀ ವೈಯಕ್ತಿಕ ಶ್ರೇಷ್ಠ ಸಾಧನೆಯೊಂದಿಗೆ ಬೆಳ್ಳಿ ಪದಕ ಗೆದ್ದಿದ್ದರು.

ಡೈಮಂಡ್ ಲೀಗ್‌ನಲ್ಲಿ ಚೋಪ್ರಾ, ಜೇನಾ ಅವರು ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಗೆದ್ದ ಜೆಕ್ ಗಣರಾಜ್ಯದ ಜೇಕಬ್ ವಡ್ಲೇಚಾ ಮತ್ತು ಮಾಜಿ ವಿಶ್ವ ಚಾಂಪಿಯನ್ ಗ್ರೆನೆಡಾದ ಆ್ಯಂಡರ್ಸನ್ ಪೀಟರ್ಸ್ ಅವರಂತಹ ಪ್ರತಿಸ್ಪರ್ಧಿಗಳನ್ನು ಎದುರಿಸಲಿದ್ದಾರೆ.

‘ಈ ವರ್ಷ ಒಲಿಂಪಿಕ್ಸ್ ಪ್ರಶಸ್ತಿಯನ್ನು ಉಳಿಸಿಕೊಳ್ಳುವುದು ಪ್ರಮುಖ ಗುರಿಯಾಗಿದೆ. ಅದರ ಜತೆಗೆ 90 ಮೀ ಗಡಿಯನ್ನು ದಾಟುವ ಪ್ರಯತ್ನವೂ ಮುಂದುವರಿಯಲಿದೆ. ಈ ವರ್ಷ ಋತುವನ್ನು ಉತ್ತಮವಾಗಿ ಆರಂಭಿಸಲು ದೋಹಾ ಲೆಗ್ ಉತ್ತಮ ವೇದಿಕೆಯಾಗಿದೆ’ ಎಂದು 89.94 ಮೀ ವೈಯಕ್ತಿಕ ಸಾಧನೆ ಹೊಂದಿರುವ ಚೋಪ್ರಾ ಹೇಳಿದ್ದಾರೆ.

‘ಕಳೆದ ವರ್ಷ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆಲ್ಲುವುದು ನನ್ನ ಕನಸಾಗಿತ್ತು. ಅದು ನನಸಾಗಿದೆ. ಅದರಲ್ಲೂ ಫೈನಲ್‌ನಲ್ಲಿ ಭಾರತದ ಮೂವರು ಸ್ಪರ್ಧಿಗಳು ಪಾಲ್ಗೊಂಡಿದ್ದು ದೇಶಕ್ಕೆ ಹೆಮ್ಮೆಯ ವಿಚಾರ’ ಎಂದರು.

2024ರ ಡೈಮಂಡ್ ಲೀಗ್ ಸರಣಿಯಲ್ಲಿ ದೋಹಾ ಲೆಗ್ ಮೂರನೇ ಕೂಟವಾಗಿದ್ದು, ವಿಶ್ವದ ನಾಲ್ಕು ಖಂಡಗಳಲ್ಲಿ 15 ಲೆಗ್‌ಗಳು ನಡೆಯಲಿವೆ. ಏ.20ರಂದು ಶಿಯಾಮೆನ್ ಲೆಗ್‌ನಿಂದ ಆರಂಭವಾಗಿ ಬ್ರಸೆಲ್ಸ್‌ನಲ್ಲಿ (ಸೆ.13-14) ನಡೆಯುವ ಫೈನಲ್‌ನೊಂದಿಗೆ ಮುಕ್ತಾಯಗೊಳ್ಳುತ್ತದೆ. ಶಿಯಾಮೆನ್ ಮತ್ತು ಶಾಂಘೈನಲ್ಲಿ ನಡೆಯುವ ಮೊದಲೆರಡು ಲೆಗ್‌ನಲ್ಲಿ ಪುರುಷರ ಜಾವಲೆನ್ ಥ್ರೋ ಸ್ಪರ್ಧೆ ಇರುವುದಿಲ್ಲ.

ಐಪಿಎಲ್ : ವೀಕ್ಷಣೆಯಲ್ಲಿ ಹೊಸ ದಾಖಲೆ

ಮುಂಬೈ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್)ನ 17ನೇ ಆವೃತ್ತಿಯ ಉದ್ಘಾಟನಾ ಪಂದ್ಯವನ್ನು ಟಿ.ವಿ.ಯಲ್ಲಿ 16.8 ಕೋಟಿ ಜನರು ವೀಕ್ಷಿಸಿದ್ದಾರೆ ಎಂದು ಡಿಸ್ನಿ ಸ್ಟಾರ್ ಸ್ಪೋರ್ಟ್ಸ್ ತಿಳಿಸಿದೆ.

ಮಾರ್ಚ್ 22ರಂದು ನಡೆದ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ನಡುವಿನ ಪಂದ್ಯದಲ್ಲಿ ಆತಿಥೇಯ ಚೆನ್ನೈ ತಂಡವು 6 ವಿಕೆಟ್‌ಗಳಿಂದ ಜಯ ಗಳಿಸಿತ್ತು. ಚೆಪಾಕ್ ಮೈದಾನದಲ್ಲಿ ನಡೆದ ಈ ಪಂದ್ಯವು ಟಿ.ವಿ ವೀಕ್ಷಣೆ ಲೆಕ್ಕದಲ್ಲೂ ಹೊಸ ದಾಖಲೆ ನಿರ್ಮಿಸಿದೆ.

ಆರಂಭಿಕ ಪಂದ್ಯವು 1,276 ಕೋಟಿ ನಿಮಿಷ ವೀಕ್ಷಣಾ ಸಮಯ ದಾಖಲಾಗಿದೆ. ಯಾವುದೇ ಐಪಿಎಲ್ ಋತುವಿನ ಮೊದಲ ದಿನದಂದು ದಾಖಲಾದ ಅತಿ ಹೆಚ್ಚು ವೀಕ್ಷಣೆ ಇದಾಗಿದೆ. ಅಲ್ಲದೆ, ಈ ಪಂದ್ಯವನ್ನು ಟಿವಿ ಮೂಲಕ ಡಿಸ್ನಿ ಸ್ಟಾರ್ ನೆಟ್‌ವರ್ಕ್‌ನಲ್ಲಿ 6.1 ಕೋಟಿ ಮಂದಿ ನೇರಪ್ರಸಾರವನ್ನು ವೀಕ್ಷಿಸಿದ್ದಾರೆ ಎಂದು ಸಂಸ್ಥೆಯು ಪ್ರಕಟಣೆ ತಿಳಿಸಿದೆ. 2023ರಲ್ಲಿ ಆ ರಂಭಿಕ ದಿನವು 870 ಕೋಟಿ ನಿಮಿಷ ವೀಕ್ಷಣಾ ಸಮಯ ದಾಖಲಾಗಿತ್ತು.

ಹಿಂದಿನ ಆವೃತ್ತಿಗೆ ಹೋಲಿಸಿದರೆ ಈ ಬಾರಿ ಟಿವಿ ವೀಕ್ಷಕರ ಸಂಖ್ಯೆ ಶೇ 16ರಷ್ಟು ಹೆಚ್ಚಾಗಿದೆ ಎಂದು ಸಂಸ್ಥೆ ಹೇಳಿಕೊಂಡಿದೆ.

ಡಿಜಿಟಲ್ ಪ್ರಸಾರ ಹಕ್ಕು ಪಡೆದಿರುವ ಜಿಯೊ ಸಿನಿಮಾ ಮೊದಲ ದಿನ 11.3 ಕೋಟಿ ವೀಕ್ಷಕರನ್ನು ಸೆಳೆದಿದೆ. ಉದ್ಘಾಟನಾ ಪಂದ್ಯವು 660 ಕೋಟಿ ವೀಕ್ಷಣೆ ನಿಮಿಷಗಳು ದಾಖಲಾಗಿವೆ.

ಹನುಮವಿಹಾರಿಗೆ ಶೋಕಾಸ್ ನೋಟಿಸ್

ಹನುಮವಿಹಾರಿ

ಬೆಂಗಳೂರು (ಪಿಟಿಐ): ಬ್ಯಾಟರ್ ಹನುಮವಿಹಾರಿ ಅವರಿಗೆ ಆಂಧ್ರ ಕ್ರಿಕೆಟ್ ಸಂಸ್ಥೆಯು (ಎಸಿಎ) ಶೋಕಾಸ್ ನೋಟಿಸ್ ನೀಡಿದೆ.

ಹೋದ ತಿಂಗಳು ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿ ಸಂದರ್ಭದಲ್ಲಿ ಹನುಮವಿಹಾರಿ ತಮ್ಮನ್ನು ತಂಡದ ನಾಯಕತ್ವದಿಂದ ಕೆಳಗಿಳಿಸಿದ್ದನ್ನು ಟೀಕಿಸಿದ್ದರು.

ಇದರಿಂದ ಅಸಮಾಧಾನಗೊಂಡಿದ್ದ ಎಸಿಎ ಪದಾಧಿಕಾರಿಗಳೂ ಕೆಲವು ದಿನಗಳ ಹಿಂದೆ ನಡೆದ ಅಪೆಕ್ಸ್ ಕೌನ್ಸಿಲ್ ಸಭೆಯಲ್ಲಿ ಚರ್ಚೆ ನಡೆಸಿದ್ದರು.

‘ಹನುಮವಿಹಾರಿಗೆ ನೋಟಿಸ್ ಜಾರಿ ಮಾಡಲಾಗಿದೆ. ಅವರಿಂದ ಪ್ರತಿಕ್ರಿಯೆ ನಿರೀಕ್ಷಿಸುತ್ತಿದ್ದೇವೆ’ ಎಂದು ಎಸಿಎ ಮೂಲಗಳು ತಿಳಿಸಿವೆ.

‘ಅವರು ಈ ರೀತಿ ಹೇಳಿಕೆ ನೀಡಲು ಕಾರಣಗಳೇನು ಎಂಬುದನ್ನು ತಿಳಿಯುವುದಷ್ಟೇ ನಮ್ಮ ಉದ್ದೇಶ. ನಾವು ವಿಹಾರಿ ಅವರು ಕ್ರಿಕೆಟ್‌ಗೆ ನೀಡಿರುವ ಕಾಣಿಕೆಯನ್ನು ಗೌರವಿಸುತ್ತೇವೆ. ರಾಜ್ಯದ ಕ್ರಿಕೆಟ್ ಬೆಳವಣಿಗೆಯಲ್ಲಿ ಅವರ ಪಾತ್ರ ಮಹತ್ವದ್ದಾಗಿದೆ. ದೇಶಿ ಕ್ರಿಕೆಟ್‌ನಲ್ಲಿ ಆಂಧ್ರ ತಂಡವು ಪ್ರಗತಿ ಸಾಧಿಸುತ್ತಿದೆ’ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ರಣಜಿ ಟ್ರೋಫಿ ಟೂರ್ನಿಯ ಮೊದಲ ಪಂದ್ಯದಲ್ಲಿ ಹನುಮ ಅವರು ನಾಯಕರಾಗಿದ್ದರು. ಆದರೆ ಎರಡನೇ ಪಂದ್ಯದಲ್ಲಿ ಅವರನ್ನು ನಾಯಕತ್ವದಿಂದ ಕೆಳಗಿಳಿಸಲಾಗಿತ್ತು. ಆಗ ಹನುಮ ಅವರೇ ತಮ್ಮ ವೈಯಕ್ತಿಕ ಕಾರಣಗಳಿಗಾಗಿ ನಾಯಕತ್ವವನ್ನು ಬಿಟ್ಟುಕೊಡುತ್ತಿರುವುದಾಗಿ ಹೇಳಿದ್ದರು. ಟೂರ್ನಿ ಮುಗಿದ ನಂತರ ಅವರು ಇನ್ಸ್ಟಾಗ್ರಾಮ್‌ನಲ್ಲಿ, ‘ನಾನು ಆಂಧ್ರ ತಂಡದಲ್ಲಿ ಮುಂದೆಂದೂ ಆಡುವುದಿಲ್ಲ. ಇಲ್ಲಿ ನನ್ನ ಆತ್ಮಗೌರವಕ್ಕೆ ಧಕ್ಕೆ ಆಗಿದೆ’ ಎಂದು ಭಾವನಾತ್ಮಕವಾಗಿ ಪೋಸ್ಟ್ ಹಾಕಿದ್ದರು.

ಪ್ರಭಾವಿ ರಾಜಕಾರಣಿಯೊಬ್ಬರ ಮಗ ತಂಡದಲ್ಲಿ 17ನೇ ಆಟಗಾರನಾಗಿದ್ದ. ಪಂದ್ಯದ ಸಂದರ್ಭದಲ್ಲಿ ಆತನಿಗೆ ಹನುಮವಿಹಾರಿ ಜೋರು ಮಾಡಿದ್ದರು. ಇದರಿಂದಾಗಿ ಆಟಗಾರನ ತಂದೆಯು ಎಸಿಎ ಮೇಲೆ ಪ್ರಭಾವ ಬೀರಿ ತಮ್ಮನ್ನು ನಾಯಕತ್ವದಿಂದ ಇಳಿಸುವಲ್ಲಿ ಸಫಲರಾಗಿದ್ದಾರೆ ಎಂದೂ ಆರೋಪಿಸಿದ್ದರು.

ಇದಕ್ಕೆ ಪ್ರತಿಕ್ರಿಯಿಸಿದ್ದ ತಂಡದ 17ನೇ ಆಟಗಾರ ಕೆ.ಎನ್. ಪೃಥ್ವಿರಾಜ್, ‘ವೈಯಕ್ತಿಕ ನಿಂದನೆ ಮತ್ತು ಅವಾಚ್ಯ ಪದಗಳನ್ನು ಸಹಿಸುವುದಿಲ್ಲ. ನಿಜವಾಗಿ ನಡೆದಿರುವುದು ಏನೆಂದು ತಂಡದಲ್ಲಿರುವ ಎಲ್ಲರಿಗೂ ಗೊತ್ತಿದೆ’ ಎಂದು ತಮ್ಮ ಇನ್ಸ್ಟಾಗ್ರಾಮ್‌ನಲ್ಲಿ ಬರೆದಿದ್ದರು.

ಹನುಮವಿಹಾರಿ ಅವರು 16 ಟೆಸ್ಟ್‌ಗಳಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದಾರೆ.

ಐಸಿಸಿ ಅಂಪೈರ್‌ಗಳ ಎಲಿಟ್ ಪ್ಯಾನೆಲ್

ನಿತಿನ್ ಮೆನನ್, ಶರ್ಫುದ್ದೌಲಾಗೆ ಸ್ಥಾನ

ನಿತಿನ್ ಮೆನನ್

ಶ್ರೀನಾಥ್

ಶರ್ಫುದ್ದೌಲಾ ಇಬ್ನೆ ಶಾಹಿದ್

ದುಬೈ (ಪಿಟಿಐ): ಭಾರತದ ನಿತಿನ್ ಮೆನನ್ ಅವರು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಅಂಪೈರ್‌ಗಳ ಎಲಿಟ್ ಪ್ಯಾನೆಲ್‌ನಲ್ಲಿ ಐದನೇ ಬಾರಿ ಸ್ಥಾನ ಗಳಿಸಿದ್ದಾರೆ. ಬಾಂಗ್ಲಾದೇಶದ ಬಾಂಗ್ಲಾದೇಶದ ಶರ್ಫುದ್ದೌಲಾ ಇಬ್ನೆ ಶಹೀದ್ ಈ ಬಾರಿ ಸ್ಥಾನ ಪಡೆದಿದ್ದಾರೆ. ಈ ಗೌರವಕ್ಕೆ ಪಾತ್ರರಾದ ಬಾಂಗ್ಲಾದ ಮೊದಲ ಅಂಪೈರ್ ಅವರಾಗಿದ್ದಾರೆ.

ಇಂದೋರ್‌ನ ಮೆನನ್ 12 ಸದಸ್ಯರ ಪ್ಯಾನಲ್‌ನಲ್ಲಿರುವ ಏಕೈಕ ಭಾರತೀಯನಾಗಿದ್ದಾರೆ. 40 ವರ್ಷದ ಮೆನನ್ ಅವರು ಎಸ್.ರವಿ ಮತ್ತು ಎಸ್. ವೆಂಕಟರಾಘವನ್ ನಂತರ ಸ್ಥಾನ ಪಡೆದಿರುವ ಭಾರತದ ಅಂಪೈರ್ ಆಗಿದ್ದಾರೆ.

ಮೆನನ್ ಅವರು ಈತನಕ ಒಟ್ಟಾರೆ 122 ಪಂದ್ಯಗಳಿಗೆ (23 ಟೆಸ್ಟ್, 58 ಏಕದಿನ ಮತ್ತು 41 ಟಿ20) ಆನ್ ಫೀಲ್ಡ್ ಅಂಪೈರ್ ಆಗಿ ಕರ್ತವ್ಯ ನಿರ್ವಹಿಸಿದ್ದಾರೆ.

ಜೂನ್‌ನಲ್ಲಿ ಅಮೆರಿಕ- ವೆಸ್ಟ್‌ಇಂಡೀಸ್‌ನಲ್ಲಿ ನಡೆಯುವ ಟಿ20 ವಿಶ್ವಕಪ್‌ನಲ್ಲಿ ವೆಂಕಟರಾಘವನ್ (125 ಪಂದ್ಯ) ಅವರ ದಾಖಲೆಯನ್ನು ಮೀರಿಸುವ ನಿರೀಕ್ಷೆಯಿದೆ.

ದಕ್ಷಿಣ ಆಫ್ರಿಕಾದ ಅಂಪೈರ್ ಮರಾಯಸ್ ಎರಾಸ್ಮಸ್ ಅವರು ನಿವೃತ್ತಿ ಘೋಷಿಸಿರುವುದರಿಂದ ಅವರ ಸ್ಥಾನಕ್ಕೆ ಶರ್ಫುದ್ದೌಲಾ ಅವಕಾಶ ಪಡೆದಿದ್ದಾರೆ. ಅವರು 2006ರಿಂದ ಅಂತರರಾಷ್ಟ್ರೀಯ ಪ್ಯಾನೆಲ್‌ನಲ್ಲಿದ್ದಾರೆ. ಅವರು 10 ಟೆಸ್ಟ್, 63 ಏಕದಿನ ಮತ್ತು 44 ಟಿ20 ಪಂದ್ಯಗಳಲ್ಲಿ ಆನ್ ಫೀಲ್ಡ್ ಅಂಪೈರ್ ಆಗಿ ಕರ್ತವ್ಯ ನಿರ್ವಹಿಸಿದ್ದಾರೆ.

ಈ ಮಧ್ಯೆ ಐಸಿಸಿ ಮ್ಯಾಚ್ ರೆಫರಿ ಎಲಿಟ್ ಪ್ಯಾನೆಲ್‌ನ ಸದಸ್ಯರ ಸಂಖ್ಯೆಯನ್ನು ಏಳರಿಂದ ಆರಕ್ಕೆ ಇಳಿಸಲಾಗಿದೆ. ಕ್ರಿಸ್ ಬ್ರಾಡ್ ಅವರನ್ನು ಕೈಬಿಡಲಾಗಿದೆ. ಆದರೆ, ಭಾರತದ ಜಾವಗಲ್ ಶ್ರೀನಾಥ್ ಅವರು ಈ ಪ್ಯಾನಲ್‌ನಲ್ಲಿ ಮುಂದುವರಿದಿದ್ದಾರೆ.

2003ರಿಂದ ಪ್ಯಾನೆಲ್‌ನಲ್ಲಿರುವ ಬ್ರಾಡ್ 123 ಟೆಸ್ಟ್, 361 ಏಕದಿನ ಮತ್ತು 135 ಟಿ20 ಮತ್ತು 15 ಮಹಿಳಾ ಟಿ20 ಪಂದ್ಯಗಳಿಗೆ ರೆಫರಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಪುನಾರಚನಾ ಪ್ರಕ್ರಿಯೆಯ ಭಾಗವಾಗಿ ಬ್ರಾಡ್ ಅವರನ್ನು ಕೈಬಿಡಲಾಗಿದೆ ಎಂದು ಐಸಿಸಿಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮ್ಯಾಚ್ ರೆಫರಿಗಳ ಎಲಿಟ್ ಪ್ಯಾನೆಲ್: ಜಾವಗಲ್ ಶ್ರೀನಾಥ್ (ಭಾರತ), ಡೇವಿಡ್ ಬೂನ್ (ಆಸ್ಟ್ರೇಲಿಯಾ), ಜೆಫ್ ಕ್ರೋವ್ (ನ್ಯೂಜಿಲೆಂಡ್), ರಂಜನ್ ಮದುಗಲೆ (ಶ್ರೀಲಂಕಾ), ಆ್ಯಂಡ್ರ್ಯೂ ಪೈಕ್ರಾಫ್ಟ್ (ಜಿಂಬಾಬ್ವೆ), ರಿಚಿ ರಿಚರ್ಡ್‌ಸನ್ (ವೆಸ್ಟ್ ಇಂಡೀಸ್).

ಅಂಪೈರ್‌ಗಳ ಎಲಿಟ್ ಪ್ಯಾನೆಲ್: ಕುಮಾರ ಧರ್ಮಸೇನಾ (ಶ್ರೀಲಂಕಾ), ಕ್ರಿಸ್ಟೋಫರ್ ಗಫಾನಿ (ನ್ಯೂಜಿಲೆಂಡ್), ಮೈಕಲ್ ಗಾಫ್ (ಇಂಗ್ಲೆಂಡ್), ಆಡ್ರಿಯನ್ ಹೋಲ್ಡ್‌ಸ್ಟಾಕ್ (ದಕ್ಷಿಣ ಆಫ್ರಿಕಾ), ರಿಚರ್ಡ್ ಇಲಿಂಗ್‌ವರ್ತ್ (ಇಂಗ್ಲೆಂಡ್), ರಿಚರ್ಡ್ ಕೆಟಲ್‌ಬರೋ (ಇಂಗ್ಲೆಂಡ್), ನಿತಿನ್ ಮೆನನ್ (ಭಾರತ), ಎಹಸಾನ್ ರಝಾ (ಪಾಕಿಸ್ತಾನ), ಪಾಲ್ ರೀಫೆಲ್ (ಆಸ್ಟ್ರೇಲಿಯಾ), ಶರ್ಫುದ್ದೌಲಾ ಇಬ್ನೆ ಶಹೀದ್ (ಬಾಂಗ್ಲಾದೇಶ), ರಾಡ್ನಿ ಟಕರ್ (ಆಸ್ಟ್ರೇಲಿಯಾ), ಜೋಯಲ್ ವಿಲ್ಸನ್ (ವೆಸ್ಟ್ ಇಂಡೀಸ್).